UNIVERSAL LIBRARY

OU_202126

UNIVERSAL LIBRARY

ಕರ್ಣಾಟಕ ಕಾವ್ಯಕಲಾನಿಧಿ, ಕೋಶಸಂಖ್ಯೆ— ೩೬.

ಆಸ್ಥಾನಕವಿ

ಚಿಕ್ಕುಪಾಧ್ಯಾಯ

ವಿರಚಿತವಪ್ಪ

ಗದ್ಯರೂಪವಾದ

# ಶ್ರೀ ವಿಷ್ಣುಪುರಾಣ ಪ್ರಬಂಧದಲ್ಲಿ

# ಚತುರ್ಥಾಂಶಂ

ಎಂ. ಎ. ರಾಮಾನುಜಯ್ಯಂಗಾರ್ಯ

ಅಸಿಸ್ಟೆಂಟ್ ಮಾಸ್ಟರ್, ಮಹಾರಾಣೀಕಾಲೇಜ್, ಮೈಸೂರು

ಇವರಿಂದ ಪರಿಶೋಧಿಸಲ್ಪಟ್ಟು

ಮೈಸೂರು

ಜಿ. ಟಿ. ಎ. ಮುದ್ರಾಶಾಲೆಯಲ್ಲಿ ಮುದ್ರಿತವಾಯಿತು

1911

ಕ್ರಯ ೧೨ ಆಣೆ.]

Registered according to Act XXV of 1867.

# ಚತುರ್ಥಾಂಶದ ಪ್ರವೇಶ

ಈ ನಾಲ್ಕನೆಯ ಅಂಶವನ್ನು ಎರಡು ಮಾತೃಕೆಗಳ ಸಹಾಯದಿಂದ ಮುದ್ರಿಸಿದೆನು. ಆ ಮಾತೃಕೆಗಳೆರಡೂ ಬಹಳ ಅಶುದ್ಧವಾಗಿಯೂ, ಮಧ್ಯ ಮಧ್ಯದಲ್ಲಿ ಗ್ರಂಥಪಾತವುಳ್ಳವಾಗಿಯೂ, ಅನೇಕ ಕಡೆ ಗ್ರಂಥಕರ್ತನಾದ ಚಿಕುಪಾಧ್ಯಾಯನ ಲೇಖನವಲ್ಲವೆಂಬ ಸಂದೇಹವನ್ನು ಹುಟ್ಟಿಸುವುವಾಗಿ ಇದ್ದುವು. ಈ ಮಾತೃಕೆಗಳನ್ನು ಸಂಸ್ಕೃತದ ತೆಲುಗುಲಿಪಿಯಲ್ಲಿಯೂ ಮುದ್ರಿತವಾಗಿರುವ ಮೂಲಗ್ರಂಥದೊಡನೆ ಆಮೂಲಾಗ್ರವಾಗಿ ಹೋಲಿಸಿ, ಗ್ರಂಥ ಪಾತವಾಗಿದ್ದ ಕಡೆಯಲ್ಲಿ ಸೇರಿಸಬೇಕಾಗಿದ್ದುದನ್ನು ಸೇರಿಸಿ, ಪಾಠಕರ ತಿಳುವಳಿಕೆಗಾಗಿ ಆ ಸೇರಿಸಲ್ಪಟ್ಟ ಭಾಗವನ್ನು ಆವರಣ ಚಿಹ್ನೆಯಲ್ಲಿ ಗರ್ಭೀಕರಿಸಿಯೂ, ಆ ಸಂಸ್ಕೃತ ಮಾತೃಕೆಗೂ ಈ ಕನ್ನಡದ ಮಾತೃಕೆಗಳಿಗೂ ಇರುವ ಭೇದಗಳನ್ನು ಪಾಠಾಂತರವಾಗಿ ತೋರಿಸಿಯೂ, ಈ ಕನ್ನಡ ಮಾತೃಕೆಗಳಲ್ಲಿ ಕೆಲವು ಕೆಲವು ಕಡೆಗಳಲ್ಲಿ ಪರಾಶರ ಮಹರ್ಷಿಗಳು ಅನುವಾದ ಮಾಡಿರುವ ಶ್ಲೋಕಗಳನ್ನು ಅನುವಾದ ಮಾಡಿಯೂ ಮುದ್ರಿಸಿರುತ್ತೇನೆ. ಮತ್ತು ಟೀಕೆಯು ಅತ್ಯಾವಶ್ಯಕವೆಂದು ತೋರಿದ ಭಾಗಕ್ಕೆ ಟೀಕೆಯನ್ನು ಬರೆದಿರುತ್ತೇನೆ. ಸಂಸ್ಕೃತ ಮೂಲಮಾತೃಕೆಯಲ್ಲಿ ತಪ್ಪು ಬಿದ್ದಿರುವಹಾಗೆ ತೋರಿದ ಭಾಗವನ್ನೂ ಸೂಚಿಸಿದ್ದೇನೆ. ರಾಜರುಗಳ ನಾಮಗಳಲ್ಲಿ ಬಹಳ ಭೇದವಿದ್ದಿತು, ಅವುಗಳನ್ನೂ ತೋರಿಸಿದ್ದೇನೆ.

ಈ ಚತುರ್ಥಾಂಶವು ವಂಶಾನುಚರಿತವಾದುದರಿಂದ ಅವಶ್ಯಾನುಪಠನೀಯವಾದುದಾಗಿದೆ ಎಂದು ಹೇಳಬೇಕಾದ ವಿಷಯವಾಗಿಲ್ಲ. ಮುಖ್ಯವಾಗಿ ಪರಾಶರ ಮಹರ್ಷಿಗಳಿಂದಲೇ ಅನುವಾದ ಮಾಡಲ್ಪಟ್ಟ ಭಾಗಗಳ ಪ್ರಾಮುಖ್ಯತೆಯನ್ನು ನಾವು ಹೇಳಬೇಕಾಗಿಲ್ಲ; ಅತ್ಯಾದರಣೀಯವಾಗಿಯೇ ಇರುವುವು. ಕವಿಚರಿತ್ರೆಯು ಪಂಚಮಾಂಶದಲ್ಲಿ ವಿವೃತವಾಗಿದೆ.

ಪ್ರವರ್ತಕ.

# ಅಧ್ಯಾಯೋಕ್ತ ಮುಖ್ಯ ವಿಷಯಗಳು.

---


| | | | ಪುಟಸಂಖ್ಯೆ |
|---|---|---|---|
| ಅಧ್ಯಾಯ ೧— | ... | ... | ೧— ೮ |
| ಮರುತ್ತನ ಕಥೆ | ... | ... | ೩ |
| ರೈವತರಾಯನ ಕಥೆ | ... | ... | ೪— ೮ |
| ಅಧ್ಯಾಯ ೨— | ... | ... | ೮—೨೧ |
| ಶಶಾದ | ... | ... | ೯ |
| ಕಕುತ್ಸ್ಥ | ... | ... | ೧೦ |
| ದುಂಧುಮಾರ | ... | ... | ೧೧ |
| ಮಾಂಧಾತ | ... | ... | ೧೧—೧೩ |
| ಸೌಭರಿ | ... | ... | ೧೩—೨೧ |
| ಅಧ್ಯಾಯ ೩— | ... | ... | ೨೧—೨೫ |
| ಪುರುಕುತ್ಸ | ... | ... | ೨೨—೨೩ |
| ತ್ರಿಶಂಕು | ... | ... | ೨೩ |
| ಸಗರ | ... | ... | ೨೪ |
| ಮ್ಲೇಚ್ಛರ ಉತ್ಪತ್ತಿ | ... | ... | ೨೪—೨೫ |
| ಅಧ್ಯಾಯ ೪— | ... | ... | ೨೫—೩೪ |
| ಅಸಮಂಜ | ... | ... | ೨೬ |
| ಅಂಶುಮಂತ | ... | ... | ೨೭ |
| ಭಗೀರಥ | ... | ... | ೨೮ |
| ಕಲ್ಮಾಷಪಾದ ಅಥವಾ ಸುದಾಸ | | ... | ೨೯—೩೦ |
| ಅಶ್ಮಕ ಅಥವಾ ನಾರೀಕವಚ | | ... | ೩೧ |
| ಖಟ್ವಾಂಗ | ... | ... | ೩೧ |
| ರಾಮಸ್ವಾಮಿ | | | ೩೨—೩೩ |

# ಅಧ್ಯಾಯೋಕ್ತ ಮುಖ್ಯ ವಿಷಯಗಳು.


| | | | ಪುಟಸಂಖ್ಯೆ |
|---|---|---|---|
| ಅಧ್ಯಾಯ ೧— | ... | ... | ೧— ೮ |
| ಮರುತ್ತನ ಕಥೆ | ... | ... | ೩ |
| ರೈವತರಾಜನ ಕಥೆ | ... | ... | ೪— ೮ |
| ಅಧ್ಯಾಯ ೨— | ... | ... | ೮—೨೧ |
| ಶಶಾದ | ... | ... | ೯ |
| ಕಕುತ್ಸ್ಥ | ... | ... | ೧೦ |
| ದುಂಧುಮಾರ | ... | ... | ೧೧ |
| ಮಾಂಧಾತ | ... | ... | ೧೧—೧೩ |
| ಸೌಭರಿ | ... | ... | ೧೩—೨೧ |
| ಅಧ್ಯಾಯ ೩— | ... | ... | ೨೧—೨೫ |
| ಪುರುಕುತ್ಸ | ... | ... | ೨೨—೨೩ |
| ತ್ರಿಶಂಕು | ... | ... | ೨೩ |
| ಸಗರ | ... | ... | ೨೪ |
| ಮ್ಲೇಚ್ಛರ ಉತ್ಪತ್ತಿ | ... | ... | ೨೪—೨೫ |
| ಅಧ್ಯಾಯ ೪— | ... | ... | ೨೫—೩೪ |
| ಅಸಮಂಜ | ... | ... | ೨೬ |
| ಅಂಶುಮಂತ | ... | ... | ೨೭ |
| ಭಗೀರಥ | ... | ... | ೨೮ |
| ಕಲ್ಮಾಷಪಾದ ಅಥವಾ ಸುದಾಸ | | ... | ೨೯—೩೦ |
| ಅಶ್ಮಕ ಅಥವಾ ನಾರೀಕವಚ | | ... | ೩೧ |
| ಖಟ್ವಾಂಗ | ... | ... | ೩೧ |
| ರಾಮಸ್ವಾಮಿ | ... | ... | ೩೨—೩೩ |
| ಹಿರಣ್ಯನಾಭ | ... | ... | ೩೪ |
| ಮರುಚಕ್ರವರ್ತಿ | ... | ... | ೩೪ |

| | | | ಪುಟಸಂಖ್ಯೆ |
|---|---|---|---|
| ಅಧ್ಯಾಯ ೫— | ... | ... | ೩೪—೩೭ |
| ವಿದೇಹ ಅಥವಾ ನಿಮಿ | ... | ... | ೩೪—೩೬ |
| ಜನಕ | ... | ... | ೩೬ |
| ಸೀರಧ್ವಜ | ... | ... | ೩೭ |
| ಅಧ್ಯಾಯ ೬— | ... | ... | ೩೮—೪೫ |
| ಚಂದ್ರವಂಶೋತ್ಪತ್ತಿ ಕ್ರಮ | | ... | ೩೮ |
| ಬುಧ ಜನ್ಮ | ... | ... | ೩೯—೪೦ |
| ಪುರೂರವಸ್ಸು | ... | ... | ೪೧—೪೫ |
| ಅಧ್ಯಾಯ ೭— | ... | ... | ೪೬—೪೮ |
| ಜಹ್ನು | ... | ... | ೪೬ |
| ಜಮದಗ್ನಿ ವಿಶ್ವಾಮಿತ್ರರ ಜನನ | | ... | ೪೬—೪೮ |
| ಅಧ್ಯಾಯ ೮— | ... | ... | ೪೮—೫೦ |
| ಧನ್ವಂತರಿ | ... | ... | ೪೯ |
| ಅಳರ್ಕ | ... | ... | ೪೯ |
| ಅಧ್ಯಾಯ ೯— | ... | ... | ೫೦—೫೨ |
| ರಜಿರಾಯ | ... | ... | ೫೦—೫೧ |
| ರಜಿಪುತ್ರರು | ... | ... | ೫೧ |
| ಅಧ್ಯಾಯ ೧೦— | ... | ... | ೫೨—೫೪ |
| ಯಯಾತಿ | ... | ... | ೫೨—೫೪ |
| ಅಧ್ಯಾಯ ೧೧— | ... | ... | ೫೫—೫೬ |
| ಯದುವಂಶಪ್ರಶಂಸೆ | ... | ... | ೫೫ |
| ಕಾರ್ತವೀರ್ಯ ಅಥವಾ ಅರ್ಜುನ | | ... | ೫೫—೫೬ |
| ಅಧ್ಯಾಯ ೧೨— | ... | ... | ೫೭—೬೦ |
| ಜ್ಯಾಮಘ | ... | ... | ೫೮—೫೯ |

| | ಪುಟಸಂಖ್ಯೆ |
|---|---|
| ಅಧ್ಯಾಯ ೧೩— ... ... | ೬೦—೭೩ |
| ದೇವಾಪೃಥ ಮತ್ತು ಬಭ್ರು ... | ೬೦ |
| ಸತ್ರಾಜಿತನು, ಶ್ಯಮಂತಕೋಪಾಖ್ಯಾನ ... | ೬೧—೭೨ |
| ಅಧ್ಯಾಯ ೧೪— ... ... | ೭೪—೭೭ |
| ವಸುದೇವನಿಗೆ ಆನಕದುಂದುಭಿಯೆಂಬ ಹೆಸರು ಬರಲು ಕಾರಣ | ೭೬ |
| ಪಾಂಡವರು, ದಂತವಕ್ರ ಶಿಶುಪಾಲ ಇವರ ಜನನ | ೭೬ |
| ಅಧ್ಯಾಯ ೧೫— ... ... | ೭೭—೮೧ |
| ಹಿರಣ್ಯಕಶಿಪು ರಾವಣನಾಗಿದ್ದಾಗ ಪರಮಾತ್ಮನಿಂದ ಸಂಹರಿಸಲ್ಪಟ್ಟರೂ ಸಾಯುಜ್ಯವನ್ನು ಪಡೆಯದೆ, ಶಿಶುಪಾಲನಾಗಿದ್ದಾಗ ಸಂಹರಿಸಲ್ಪಟ್ಟು ಸಾಯುಜ್ಯಹೊಂದಲು ಕಾರಣ | ೭೭—೭೯ |
| ಸಂಕರ್ಷಣ ಕೃಷ್ಣರುಗಳ ಅವತಾರ ... | ೮೦ |
| ಕೃಷ್ಣಸಂತತಿ ... ... | ೮೦ |
| ಯಾದವಕುಲ ವೃದ್ಧಿಕಾರಣ ... ... | ೮೧ |
| ಅಧ್ಯಾಯ ೧೬— ... ... | ೮೨ |
| ಅಧ್ಯಾಯ ೧೭— ... ... | ೮೨ |
| ಅಧ್ಯಾಯ ೧೮— ... ... | ೮೩—೮೪ |
| ಅಧ್ಯಾಯ ೧೯— ... ... | ೮೪—೯೨ |
| ಭರತನ ಜನ್ಮ, ದುಷ್ಯಂತ, ಶಕುಂತಲೆ ... | ೮೫—೮೬ |
| ಭರದ್ವಾಜ ... ... | ೮೬—೮೭ |
| ಕೃತ ... ... | ೮೯ |
| ಕಾಣ್ವಾಯನರು ... ... | ೮೮ |
| ಮೌದ್ಗಲ್ಯರು ... ... | ೯೦ |
| ಕೃಪ, ಕೃಪಿ, ಜರಾಸಂಧ ಇವರುಗಳ ಜನನ ... | ೯೦—೯೧ |
| ಅಧ್ಯಾಯ ೨೦— ... ... | ೯೨—೯೭ |
| ಶಂತನು ... ... | ೯೩—೯೪ |
| ಧೃತರಾಷ್ಟ್ರ ಪಾಂಡು ವಿದುರರ ಜನನ ... | ೯೫ |
| ಪಾಂಡವರ ಜನನ ... ... | ೯೬ |
| ಪರೀಕ್ಷದ್ರಾಜ ... ... | ೯೭ |

| | | | ಪುಟಸಂಖ್ಯೆ |
|---|---|---|---|
| ಅಧ್ಯಾಯ ೨೧, ೨೨, ೨೩— | | | ೯೩—೧೦೧ |
| ಭವಿಷ್ಯದ್ರಾಜರುಗಳು | ... | ... | |
| ಅಧ್ಯಾಯ ೨೪— | ... | ... | ೧೦೨—೧೧೯ |
| ಕಲಿಯುಗಾಂತ್ಯದ ವರ್ಣನೆ | ... | ... | ೧೦೯ |
| ಕಲ್ಕ್ಯವತಾರ | ... | ... | ೧೧೦ |
| ಪೃಥಿವೀಗೀತೆ | ... | ... | ೧೧೪—೧೧೬ |
| ಮಮತ್ವನಿರಾಸ | ... | ... | ೧೧೭—೧೧೮ |

# ಚಿಕುಪಾಧ್ಯಾಯವಿರಚಿತ

## ಶ್ರೀ ವಿಷ್ಣುಪುರಾಣದಲ್ಲಿ

## ಚತುರ್ಥಾಂಶ

ಶ್ಲೋ॥ ಯಸ್ಮಾದಿದಂ ಜಗದಜಾಯತ ಯತ್ರತಿಷ್ಠತ್ಯಂತೇ ಸಮಸ್ತಮಿದಮಸ್ತಮುಪೈತಿ ಯತ್ರ । ತಸ್ಮೈ ಸಮಸ್ತದಸದಾದಿವಿಕಲ್ಪಶೂನ್ಯ ಚೈತನ್ಯಮಾತ್ರ ವಪುಷೇ ಪುರುಷೋತ್ತಮಾಯ ॥

ಈ ಪುರಾಣರತ್ನವೆನಿಸಿಕೊಂಬ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ ಪರಾಶರರಿಂದ ಮೈತ್ರೇಯರಂ ಕುಱಿತು ಬ್ರಹ್ಮಲಕ್ಷಣಪ್ರಕಾರವಾದ ಜಗಜ್ಜನ್ಮಾದಿಕಾರಣತ್ವವು ಪ್ರತಿಪಾದಿಸಲ್ಪಟ್ಟಿತು. ದ್ವಿತೀಯಾಂಶದಲ್ಲಿ ಶ್ರುತಿ—"ಸೋಽಕಾಮಯತ ಬಹುಸ್ಯಾಂ ಪ್ರಜಾಯೇಯ" ಎಂಬ ಶ್ರುತ್ಯನುಸಾರದಿಂ ಸಂಕಲ್ಪಮಾತ್ರದಿಂ ಸೃಷ್ಟವಾದ ಸದಸದಾತ್ಮಕವಾದ ಪ್ರಪಂಚಸಂನಿವೇಶವು ನಿತ್ಯವಾದ ಸರ್ಗಸ್ಥಿತಿಪ್ರಕಾರಭೇದವು ಯಥಾರ್ಥವಾಗಿ ಪ್ರತಿಪಾದಿಸಲ್ಪಟ್ಟಿತು. ಏತಾದೃಶವಾದ ಪ್ರಾಕೃತಪ್ರಪಂಚಕ್ಕೆ ಹೊಱಗಾದ ನಿತ್ಯವಿಭೂತಿಪ್ರಸಂಗವು ಧ್ರುವ ಪ್ರಹ್ಲಾದಸ್ತೋತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಿತು. ತೃತೀಯಾಂಶದಲ್ಲಿ ಪರಮಾತ್ಮನಲ್ಲಿ ಸ್ಥಿತಿಕರ್ತೃರೂಪಗಳಾದ ವ್ಯೂಹವಿಭವಾದಿ ಭೇದಂಗಳು ಪ್ರತಿಪಾದಿಸಲ್ಪಟ್ಟಿತು. ಆಪ್ರಸಂಗದಲ್ಲಿ ಅಂಡಾಂತರ್ವರ್ತಿಗಳಾದ ಪದಾರ್ಥಪ್ರಕಾರವು ಪ್ರತಿಪಾದಿಸಲ್ಪಟ್ಟಿತು. ಚತುರ್ಥಾಂಶದಲ್ಲಿ ಸೋಮಸೂರ್ಯಾನ್ವಯಭೂಪಾಲಪರಂಪರೆಯಂ ನಿರೂಪಿಸಲಿದ್ದಂಥ ಶ್ರೀಪರಾಶರರಂ ಕುಱಿತು ಮೈತ್ರೇಯರು ಪ್ರಶ್ನೆಯಂ ಮಾಡುತಲಿದ್ದಾರು.

ಕೇಳಿಂ ಪರಾಶರರೇ! ಅಂಡಾಂತರ್ವರ್ತಿಗಳಾದ ಸತ್ಕರ್ಮನಿಷ್ಠರುಗಳಾದ ಮನುಷ್ಯರಿಂದ ಮಾಡತಕ್ಕ ನಿತ್ಯನೈಮಿತ್ತಿಕಾದಿ ಧರ್ಮಂಗಳು, ಬ್ರಹ್ಮಕ್ಷತ್ರಿಯ ವೈಶ್ಯ ಶೂದ್ರರುಗಳ ವರ್ಣಧರ್ಮಂಗಳು, ಬ್ರಹ್ಮಚಾರಿ ಗೃಹಸ್ಥ

ವಾನಪ್ರಸ್ಥ ಸನ್ಯಾಸಾಶ್ರಮಧರ್ಮಂಗಳು ಪೂರ್ವಾಂಶದಲ್ಲಿ ನಿರೂಪಿಸಲ್ಪಟ್ಟವು. ಇನ್ನು ಸೋಮಸೂರ್ಯವಂಶೋತ್ಪನ್ನರಾದ ಪುಣ್ಯಶ್ಲೋಕರಾದ ರಾಯರುಗಳ ವಂಶವಂ ಕೇಳಬೇಕೆಂದು ಅಪೇಕ್ಷಿಸುತಲಿದ್ದೇನೆ; ನಿರೂಪಿಸಬೇಕೆಂದು ಕೇಳುವಂಥ ಮೈತ್ರೇಯಂಗೆ ಶ್ರೀಪರಾಶರರು ನಿರೂಪಿಸುತಲಿದ್ದಾರು:-

ಕೇಳು ಮೈತ್ರೇಯನೆ! ಚತುರ್ಮುಖಬ್ರಹ್ಮನಾದಿಯಾಗಿ ನರಲೋಕಪಾಲರ ವಂಶವು ವೀರಧೀರಶೂರರಾಯರುಗಳಿಂದ ಅಲಂಕರಿಸಲ್ಪಟ್ಟಂಥದುದು. ಅಂತಹ ರಾಯರುಗಳಂ ದಿವಸದಿವಸದಲ್ಲಿ ಆವವನು ಸ್ಮರಿಸುತಲಿದ್ದಾನು ಅವನ ವಂಶಮಾವಗಂ ವಿಚ್ಛೇದಮಾಗದು. ಅದುಕಾರಣ ಈಮನುವಂಶದ ವೃತ್ತಾಂತವನು ಸಮಸ್ತ ಪಾಪಪರಿಹಾರಕ್ಕೋಸುಗ ಕೇಳತಕ್ಕುದು. ಎಲೈ ಮೈತ್ರೇಯ! ಷಡ್ಗುಣೈಶ್ವರ್ಯಸಂಪನ್ನನಾದ ಸರ್ವವ್ಯಾಪಕನಾದ ವಿಷ್ಣುವಿನ ಮೂರ್ತಿಭೇದವಾದ ಸ್ವರೂಪವನು ಅನುಸರಿಸುತಲಿದ್ದಂಥ ಋಗ್ಯಜುಸ್ಸಾಮಾದಿ ಸಕಲವೇದಾತ್ಮಕನಾದ ಹಿರಣ್ಯಗರ್ಭನೆಂದು ಪ್ರಸಿದ್ಧನಾದ ಬ್ರಹ್ಮದೇವನು ಬ್ರಹ್ಮಾಂಡದತ್ತಣಿಂದುದ್ಭವಿಸಿದನು. ಆಚತುರ್ಮುಖನ ಬಲದ ಅಂಗುಷ್ಠದಲ್ಲಿ ಜನಿಸಿದಂಥವನು ದಕ್ಷಪ್ರಜಾಪತಿ; ಆತಂಗೆ ಅದಿತಿ, ಅವಳಲ್ಲಿ ವಿವಸ್ವಾನ್, ಆತಂಗೆ ಮನು, ಮನುವಿನಲ್ಲಿ ಪುಟ್ಟಿದವರು ಇಕ್ಷ್ವಾಕು, ನೃಗ, ಧೃಷ್ಟ, ಶರ್ಯಾತಿ, ನರಿಷ್ಯಂತ, ನಾಭಾಗ, ದಿಷ್ಟ, ಕರೂಷ, ಪೃಷಧ್ರ ಎಂಬ [1](ಒಂಬತ್ತು)[1] ಮಂದಿ; ಆಮನುಚಕ್ರವರ್ತಿಯು ಮೈತ್ರಾವರುಣಾತ್ಮಕವಾದ ಇಷ್ಟಿಯಂ ಮಾಡಿದನು. ಆಯಾಗವಲ್ಲಿ ಹೋತೃವಿನ ಅಪಚಾರದಿಂದ ಇಳೆಯೆಂಬವಳಾದಳು. ಅವಳು ಮಿತ್ರಾವರುಣರ ಅನುಗ್ರಹದಿಂದ ಸುದ್ಯುಮ್ನನಂ ಪಡೆದಳು. ಆಸುದ್ಯುಮ್ನನು ಶಿವಕೋಪದಿಂ ಸ್ತ್ರೀಯಾಗಿ ಸೋಮಪುತ್ರನಾದ ಬುಧನ ಆಶ್ರಮದ ಸಮೀಪದಲ್ಲಿ ಸಂಚರಿಸುತಿದ್ದಳು. ಅವಳಲ್ಲಿ ಬುಧನಿಂದ ಪುರೂರವಸ್ಸು ಹುಟ್ಟಿದನು. ಆಮೇಲೆ ಸುದ್ಯುಮ್ನನು ಅನೇಕ ತೇಜಸ್ವಿಗಳಾದ ಪರಮರ್ಷಿಗಳಿಂದ ವೇದಮಂತ್ರಾರಾಧಿತನಾದ ಯಜ್ಞೇಶ್ವರನ ಅನುಗ್ರಹದಿಂದ ಪುರುಷತ್ವವಂ ಪಡೆದು ಉಜ್ವಲನೆಂದುಂ ಭಯನೆಂದುಂ ವಿನತನೆಂದುಂ ಮೂಱುಮಂದಿ ಮಕ್ಕಳಂ ಪಡೆದನು.

---

ಪಾಠಾಂತರ— 1. ಪ್ರಾಂಶು ಎಂದು ಒಂದು ಹೆಸರನ್ನು ಸೇರಿಸಿ ಹತ್ತು ಎಂದು ಪಾಠವಿದೆ.

ಅಪುಂಸ್ತ್ವವಮಂ ಪಡೆದ ಸುದ್ಯುಮ್ನನು ಸ್ತ್ರೀಪೂರ್ವಕನಾದ ಕಾರಣ ರಾಜ್ಯಾಧಿಪತ್ಯಮನೆಯ್ದಿತಿಲ್ಲ. ಆವೈವಸ್ವತಮನುವು ವಸಿಷ್ಠೋಕ್ತಪ್ರಕಾರದಿಂ ಪ್ರತಿಷ್ಠಾನಮೆಂಬ ಪಟ್ಟಣವಂ ಪುರೂರವಂಗೆ ಕೊಟ್ಟನು. ವೈವಸ್ವತ ಮನುಪುತ್ರನಾದ ಪೃಷಧ್ರನು ವಿಪ್ರಗೋವಧೆಗಳಂ ಮಾಡಿದುದಱಿಂದ ವಸಿಷ್ಠ ವಾಕ್ಯದಿಂ ಶೂದ್ರತ್ವಮನೆಯ್ದಿದಂ. ಕರೂಷನಿಂದ ಕಾರುಷಾಖ್ಯಕ್ಷತ್ರಿಯರ್ ಜನಿಸಿದರು. ದಿಷ್ಟಂಗೆ ನಾಭಾಗಂ ; ಅವಂಗೆ ಬಲಂಧನಂ ಪುಟ್ಟಿದ ಬಳಿಕ ನಾಭಾಗಂ ವೈಶ್ಯಜಾತಿಯೊಳ್ ಪ್ರವೃತ್ತನಾದಂ. ಆಬಲಂಧನಂಗೆ ವತ್ಸಪ್ರೀತಿ, ಅವಂಗೆ ಪ್ರಾಂಶು, ಅವಂಗೆ ಪ್ರಜಾಪತಿ, ಅವಂಗೆ ಖನಿಮಿತ್ರನವಂಗೆ ಚಾಕ್ಷುಷಂ, ಅವಂಗೆ [1]ವಿಶಂ, ಅವಂಗೆ ವಿವಿಂಶಕಂ[1], ಅವನಿಂ [2]ಖನಿನೇ[2]ತ್ರಂ, ಅವಂ ಗತಿವಿಭೂತಿ, ಅವಂಗೆ ಕರಂದನುಂ, ಅವಂಗೆ ಅವಿಕ್ಷಿತಿ, ಅವಂಗೆ ಮರುತ್ತ (ಚಕ್ರವರ್ತಿ). ಅವಂ ಬಹು ಯಜ್ಞಮಂ ಮಾಡಿ ಕೀರ್ತಿವಡೆದಂ. (ಆಮರುತ್ತನ ವಿಷಯವಾಗಿ ಈ ಎರಡು ಶ್ಲೋಕಗಳು ಗಾನಮಾಡಲ್ಪಡುತ್ತವೆ:—

ಶ್ಲೋ॥ "ಮರುತ್ತಸ್ಯ ಯಥಾ ಯಜ್ಞಃ ತಥಾ ಕಸ್ಯಾಭವದ್ಭುವಿ ।
ಸರ್ವಂ ಹಿರಣ್ಮಯಂ ಯಸ್ಯ ಯಜ್ಞವಸ್ತ್ವತಿಶೋಭನಂ ॥೧॥
ಅಮಾದ್ಯದಿಂದ್ರಃ ಸೋಮೇನ ದಕ್ಷಿಣಾಭಿರ್ದ್ವಿಜಾತಯಃ ।
ಮರುತಃ ಪರಿವೇಷ್ಟಾರಃ ಸದಸ್ಯಾಶ್ಚ ದಿವೌಕಸಃ" ॥೨॥

ಟೀಕು— ಮರುತ್ತನಂತೆ ಯಾರೂ ಯಜ್ಞವನ್ನು ಮಾಡಲಿಲ್ಲ; ಯಜ್ಞವಸ್ತುಗಳೆಲ್ಲವೂ ಸ್ವರ್ಣಮಯವಾಗಿಯೇ ಇದ್ದುವು; ಆ ಯಜ್ಞದಲ್ಲಿ ಸೋಮರಸ ಪಾನದಿಂದ ಇಂದ್ರನು ಮತ್ತನಾದನು ; ದಕ್ಷಿಣೆಗಳಿಂದ ಬ್ರಾಹ್ಮಣರು ತೃಪ್ತರಾದರು. ಆ ಯಜ್ಞದಲ್ಲಿ ಮರುತ್ತುಗಳೇ ಬಡಿಸುವವರಾದರು; ದೇವತೆಗಳೇ ಆರೋಗಣೆಗೆ ಕುಳಿತವರು.)

ಅವಂಗೆ ನರಿಷ್ಯಂತ, ಅವಂಗೆ ದಮಂ, ಅವಂಗೆ ರಾಜವರ್ಧನಂ, ಅವಂಗೆ ಸುವೃದ್ಧಿ, ಅವಂಗೆ ಕೇವಲಂ,ಅವಂಗೆ ಸುಧೃತಿ, ಅವಂಗೆ ನರಂ, ಅವಂಗೆ ಚಂದ್ರಂ, ಅವಂಗೆ ಕೇವಲಂ, ಅವಂಗೆ ಬಂಧುಮಂತಂ, ಅವಂಗೆ ವೇಗಮಂತಂ, ಅವಂಗೆ ಬುಧಂ, ಅವಂಗೆ ತೃಣಬಿಂದು, ಅವಂಗೆ ಪೆಣ್ಗಳು ಇಳಬಿಳೆಯೆಂಬವಳಾದಳು. ಆತೃಣಬಿಂದುವಿಂಗೆ ಅಪ್ಸರಸ್ತ್ರೀ ಅಲಂಬುಸೆ ಯೆಂಬವಳಲ್ಲಿ ಗಂಡುಮಗಂ ವಿಶಾಲನೆಂಬ ರಾಯಂ ಪುಟ್ಟಿದಂ. ಆವಿಶಾಲನೆಂಬ ರಾಯನು

---

ಪಾ – 1. ವಿವಿಶನವಂಗೆ ವಿಶಂ. 2. ಸ್ವನಿತ್ರ.

ವೈಶಾಲಿಯೆಂಬ ಪಟ್ಟಣವಂ ನಿರ್ಮಿಸಿದನು. ಆ ರಾಯಂಗೆ ಹೇಮಚಂದ್ರನೆಂಬ ಕುಮಾರಂ ಜನಿಸಿದಂ, ಆತಂಗೆ ಚಂದ್ರನೆಂಬ ಕುಮಾರಂ, ಚಂದ್ರಂಗೆ ಧೂಮ್ರಾಕ್ಷಂ, ಆತಂಗೆ ಸೃಂಜಯನೆಂಬ ರಾಯಂ, ಸೃಂಜಯನಿಂ ಸಹದೇವಂ, ಅವನಿಂ ಕೃಶಾಶ್ವಂ, ಅವನಿಂ [1](ಹತ್ತು ಅಶ್ವಮೇಧಯಾಗವ ಮಾಡಿದ) ಸೋಮದತ್ತಂ, ಆತನ ಕುಮಾರಂ ಜನಮೇಜಯಂ[1], ಜನಮೇಜಯನಿಂ ಸುಮತಿ. ಈರಾಯರುಗಳು ವಿಶಾಲನೆಂಬ ರಾಯನ ವೈಶಾಲೀಪಟ್ಟಣದಲ್ಲಿ [2]ಸಂಪ್ರದಾಯದವರು.[2] ಈ ಯರ್ಥದಲ್ಲಿ ಈಶ್ಲೋಕವು ಗಾನಮಾಡಲ್ಪಡುತಲಿದ್ದಿತು.

(ಶ್ಲೋ॥ ತೃಣಬಿಂದೋಃ ಪ್ರಸಾದೇನ ಸರ್ವೇ ವೈಶಾಲಿಕಾ ನೃಪಾಃ।
ದೀರ್ಘಾಯುಷೋ ಮಹಾತ್ಮಾನೋ ವೀರ್ಯವಂತೋತಿಧಾರ್ಮಿಕಾಃ॥)

ಈಶ್ಲೋಕದ ತಾತ್ಪರ್ಯವು ತೃಣಬಿಂದುರಾಯನ ಪ್ರಸಾದದಿಂ ಸಮಸ್ತವಾದ ವೈಶಾಲೀನಗರದ ರಾಯರುಗಳು ದೀರ್ಘಾಯುಸ್ಸನುಳ್ಳ ಮಹಾತ್ಮರು, ಪರಾಕ್ರಮಶಾಲಿಗಳು, ಧಾರ್ಮಿಕರು ಆಗಿದ್ದರು—ಎಂದು. ಶರ್ಯಾತಿ ರಾಯಂಗೆ ಸುಕನ್ಯಾ ಎಂಬ ಕನ್ಯೆಯಾದಳು. ಆಯಕ್ಕನನ್ನು ಚ್ಯವನನೆಂಬ ಮುನೀಶ್ವರನು ವಿವಾಹವ ಮಾಡಿಕೊಂಡನು. ಶರ್ಯಾತಿ ರಾಯಂಗೆ ಆನರ್ತನೆಂಬಾತಂ ಪುತ್ರನಾದಂ. ಆನರ್ತಂಗೆ ರೇವತರಾಯಂ; ಆನರ್ತದೇಶಾಧಿಪತಿಯಾಗಿ ಕುಶಸ್ಥಳಿಯೆಂಬ ಪಟ್ಟಣವಂ ಆಶ್ರಯಿಸಿದವನಾದನು. ರೇವತ ರಾಯಂಗೆ ರೈವತನೆಂಬ ಕುಮಾರನು. ರೈವತಂಗೆ ನೂಱುಮಂದಿ ಕುಮಾರರೊಳು ಜ್ಯೇಷ್ಠನು ಕಕುತ್ಮಿಯನೆಂಬಾತನಾದಂ. ಆರೈವತರಾಯನು ರೇವತಿಯೆಂಬ ಕನ್ನೆಗೆ ಪತಿಯಾಗತಕ್ಕವನಾರು ಎಂದು ಕೇಳಬೇಕು ಎಂಬುದಱಿಂದ ಬ್ರಹ್ಮದೇವರ ಬಳಿಗೆ ಸತ್ಯಲೋಕವನೆಯ್ದಿದನು. ಅಲ್ಲಿ ಹಾಹಾ ಹೂಹೂ ಎಂಬ ಗಂಧರ್ವರು ಅತಿತಾನವೆಂಬ ದಿವ್ಯಗಾಂಧರ್ವಗಾನವನು ಹಾಡುತಿರಲಾಗಿ ಅದನು ಕೇಳುತಿದ್ದಂಥವನಾದಂ. ಗಾನಶ್ರವಣದಿಂ ತದಾಸಕ್ತಚಿತ್ತನಾಗಿ ಅನೇಕಯುಗಪರಿವೃತ್ತಿಯಾದಲ್ಲಿಯೂ ಮು

---

ಪಾ—1. ಅವನಿಂ ಸೋಮದತ್ತಂ, ಅವನಿಂ ವರ್ಧನಂ, ವರ್ಧನನಿಂ ದಶಾಶ್ವಮೇಧಿಗಳಾದ ರಾಯರುಗಳ ಮಧ್ಯದಲ್ಲಿ ಅಜಹಾರನೆಂಬಾತಂ, ಆತನ ಕುಮಾರಂ ಜನಮೇಜಯಂ—ಎಂದು ಈ ಮಾತೃಕೆಯ ಪಾಠ.

ವಿವರಣ—2. ಸಂಪ್ರದಾಯದವರು = ಒಬ್ಬೊಬ್ಬರಾಗಿ ಆಳಿದವರು ಎಂದರ್ಥ.

ಹೂರ್ತವಾಗಿ ಕಂಡುಬಂದು ಗಾನಾವಸಾನದಲ್ಲಿ ಭಗವಂತನಾದ ಅಬ್ಜಯೋನಿಯಂ ನಮಸ್ಕರಿಸಿ ಕನ್ಯೆಗೆ ಯೋಗ್ಯನಾದ ವರನಂ ಕೇಳಿದವನಾದಂ. ಅದಕ್ಕೆ ರೈವತರಾಯನ ಕುಱಿತು ಬ್ರಹ್ಮದೇವನು—"ಕೇಳೈ ರಾಯನೇ, ನಿನಗೆ ಆರು ಸಮ್ಮತ? ಆತನ ಹೇಳು" ಎಂದು ಕೇಳಲು; ಮತ್ತು ಬ್ರಹ್ಮದೇವರಿಗೆ ನಮಸ್ಕಾರವಂ ಮಾಡಿ ತನಗೆ ಇಷ್ಟವಾದ ವರಂಗಳಂ ಹೇಳಿ, "ಸ್ವಾಮಿಗೆ ಇಷ್ಟವಾದ ವರನು ಯಾರು? ಆವಂಗೆ ಕನ್ಯೆಯನು ಕುಡಲಿ?" ಎಂದು ವಿಜ್ಞಾಪಿಸಿದನು. [1]ಸ್ವಲ್ಪವಾಗಿ ಬಗ್ಗಿಸಲ್ಪಟ್ಟ ಶಿರಸ್ಸನುಳ್ಳ[1] ರಾಯನಂ ನೋಡಿ ಬ್ರಹ್ಮದೇವನು ನಕ್ಕು ಬಂದು ಮಾತ ನುಡಿದಂಥವನಾದನು. "ಕೇಳು ರೈವತರಾಯನೇ! ನಿನಗೆ ಅಭಿಮತರಾದ ರಾಯರುಗಳ ಸಂತತಿಯು ಈ ಭೂತಳದಲ್ಲಿ ಅನೇಕವಾಗಿ ಅತಿಕ್ರಮಿಸಿ ಹೋದಂಥಾದುದಾಯಿತು. ನೀನು ನಮ್ಮ ಲೋಕದಲ್ಲಿ ಗಂಧರ್ವಗಾನವ ಕೇಳುವ ಸಮಯದಲ್ಲಿ ಕೃತತ್ರೇತಾದ್ವಾಪರಕಲಿಯುಗಂಗಳೆಂಬ ಅನೇಕಚತುರ್ಯುಗಗಳು ಅತಿಕ್ರಮಿಸಿ ಹೋದುವು. ಈಗ ಇಪ್ಪತ್ತೆಂಟನೆಯ ಮನ್ವಂತರವು ಭೂಲೋಕದಲ್ಲಿ ಸಂದಿತು. ಕಲಿಯುಗ ಸಮೀಪವಾಯಿತು. ಬೇಱೊಬ್ಬವರಂಗೆ [2]ಒಬ್ಬನಾಗಿ ಇದ್ದಂಥ[2] ನಿನ್ನಿಂದ ನಿನ್ನ ಮಗಳು ಕುಡತಕ್ಕುದು. ಕೇಳೈ ರಾಯನೇ! ನಿನ್ನ ಮಿತ್ರ ಮಂತ್ರಿ ಕಳತ್ರ ಬಂಧು ಬಲ ಕೋಶಾದಿಗಳೆಲ್ಲವು ಕಾಲದಿಂದ ಲೋಕಾಂತರವನೆಯ್ದಿದುವು." ಎಂದು ಬ್ರಹ್ಮದೇವನು ನುಡಿದಂಥವನಾದನು. ಅನಂತರದಲ್ಲಿ ಮತ್ತೂ ಹುಟ್ಟಲ್ಪಟ್ಟ ಭಯವನುಳ್ಳ ಆರೈವತರಾಯನು ಭಗವಂತನಾದ ಬ್ರಹ್ಮಂಗೆ ನಮಸ್ಕರಿಸಿ ಕೇಳಿದವನಾದಂ. "ಈಪ್ರಕಾರದಲ್ಲಿ ಆದಂಥ ದೆಸೆಯಲ್ಲಿ: ಈ ಕನ್ಯೆಯು ಆವವಂಗೆ ಕುಡತಕ್ಕುದು?" ಎಂದು ಕೇಳುತ ಇರಲಾಗಿ, ಅನಂತರದಲ್ಲಿ ಸ್ವಲ್ಪವಾಗಿ ನಮ್ರಶಿರಸ್ಕನಾಗಿ ಅಂಜಲಿಹಸ್ತವನುಳ್ಳವನಾದ ಸಮಸ್ತಲೋಕಪಿತಾಮಹನಾದ ಪದ್ಮಯೋನಿಯಾದ ಬ್ರಹ್ಮದೇವನು ನುಡಿದಂಥವನಾದನು. ಸರ್ವಾತ್ಮಕನಾಗಿ ಸಕಲ ಜಗತ್ಕಾರಣಭೂತನಾದ ಆವನಾನೊಬ್ಬ ಪರಮಾ

1. ಈಗ ಅಚ್ಚಾಗಿರುವ ಸಂಸ್ಕೃತ ಪ್ರತಿಯಲ್ಲಿ ಬ್ರಹ್ಮನಿಗೆ ವಿಶೇಷಣವಾಗಿದೆ.
2. ಒಬ್ಬನಾಗಿದ್ದಂಥ ನಿನ್ನಿಂದ=ನಿನ್ನ ಬಂಧುಗಳೆಲ್ಲರೂ ಗತಿಸಿ ಹೋದರು. ನೀನೊಬ್ಬನು ಮಾತ್ರ ಉಳಿದಿರುವೆ ಎಂದು ಅರ್ಥವಾಗುತ್ತದೆ.

ತ್ಮನ-ಶ್ರುತಿ|| 'ವಿಶ್ವತಶ್ಚಕ್ಷುರ್ವಿಶ್ವತೋಮುಖಃ' ಎಂಬ ಶ್ರುತ್ಯುಕ್ತ ಪ್ರಭಾವವನು, ಜ್ಞಾನಬಲೈಶ್ವರ್ಯಾದಿಗಳನು ಅಱಿಯೆವು ; ಆವ ಪರಮಾತ್ಮನ ಅಪ್ರಾಕೃತ ನಿತ್ಯವಿಭೂತಿಗೆ ಕಲಾಮುಹೂರ್ತ ಮೊದಲಾದ ಸ್ವರೂಪವುಳ್ಳ ಕಾಲವು ಪರಿಣಾಮ ಕಾರಣವಾಗದೆ ಇದ್ದೀತು ; †ಆವ ಪರಮಾತ್ಮಂಗೆ ಕರ್ಮಕೃತವಾದ ದೇವಾದಿ ನಾಮರೂಪ ಜನ್ಮನಾಶರಹಿತವು ಆಗಿ ಇದ್ದೀತೋ ; ಆವ ಪರಮಾತ್ಮನ ಅನುಗ್ರಹದಿಂದ ನಾನು ಸಕಲ ಭೂತವ್ರಾತಗಳ ಸೃಷ್ಟಿ ಕರ್ತೃವಾಗಿ, ಆವ ಪರಮಾತ್ಮನ ಕೋಪದಿಂದ ರುದ್ರನು ಸಂಹಾರ ಕರ್ತೃವಾದನು ; ಆವ ಪರಮಾಸದೇವನು ತಾನೇ ಸೃಷ್ಟಿಸಂಹರ್ತೃಗಳಾದ ನಮ್ಮ ಮಧ್ಯದಲ್ಲಿ ಸ್ಥಿತಿಕಾರಣನಾದ ವಿಷ್ಣುವಾಗಿ ಆದನು ; ಆವ ಪುರುಷನು ನನ್ನ ರೂಪವನ್ನಾಶ್ರಯಿಸಿದವನಾಗಿ ಜಗತ್ಸೃಷ್ಟಿಯಂ ಮಾಡುತಲಿದ್ದಾನು; ಆವ ಪರಮಾತ್ಮನು ವಿಷ್ಣುರೂಪಿಯಾಗಿ ಸ್ಥಿತಿ ಕರ್ತೃವಾಗಿ ಇರುತಲಿದ್ದಾನು ; ಆವ ಪರಮಾತ್ಮನು ರುದ್ರರೂಪದಿಂದ ಈ ಪ್ರಪಂಚವನು ಕಬಳಿಸುತಲಿದ್ದಾನು ; ಮತ್ತು (ಆವ ಪರಮಾತ್ಮನು ಅನಂತ ರೂಪದಿಂದ ಸಮಸ್ತ ಪ್ರಪಂಚವನ್ನು ಧರಿಸಿ ಇದ್ದಾನು ;) *.........ಆವ ಪರಮಾತ್ಮನೇ ಇಂದ್ರಾದಿ ರೂಪದಿಂ ಜಗತ್ತಂ ಪರಿಪಾಲಿಸುತಿದ್ದಾನು; ಚಂದ್ರಸೂರ್ಯರೂಪುಗಳಾಗಿ ಜಗತ್ತಿನ ಅಂಧಕಾರನಿವೃತ್ತಿಯಂ ಮಾಡುತಲಿದ್ದಾನು ; ಸಮಸ್ತವಾದ ಪ್ರಜೆಗಳ ಪಾಕಾದಿಗಳಿಗಾಗಿ ಅಗ್ನಿಸ್ವರೂಪವನಾಶ್ರಯಿಸಿದ್ದಾನು ; ಮತ್ತು ಆವ ನಿತ್ಯನಾದ ಪರಮಾತ್ಮನು ಭೂರೂಪವಾಗಿ ಸಮಸ್ತ ಲೋಕಂಗಳನು ಭರಿಸುತಲಿದ್ದಾನು ; ಮತ್ತು ವಾಯುರೂಪಿಯಾಗಿ ಚೇತನಾಚೇತನಗಳ .ಚಲನವ್ಯಾಪಾರವನು ಮಾಡುತಲಿದ್ದಾನು ; (ಜಲರೂಪಿಯಾಗಿಯೂ ಅನ್ನರೂಪಿಯಾಗಿಯೂ ಸಮಸ್ತ ಲೋಕಗಳಿಗೆ ತೃಪ್ತಿಮಾಡುತಲಿದ್ದಾನು ;) ಆಕಾಶರೂಪಿಯಾಗಿ ಜಗದ್ರಕ್ಷಣದಲ್ಲಿ ತತ್ಪರನಾಗಿ

---

ವಿಜ್ಞಾಪನೆ—†. ಈ ಭಾಗಗಳಲ್ಲಿರುವ ವಾಕ್ಯಗಳು ಈ ಮಾತೃಕೆಯಲ್ಲಿ ಬಹುವ್ಯಸ್ತಗಳಾಗಿದ್ದುವು ; ಅವನ್ನು ಕೈಯೆಲ್ಲಾದಮಟ್ಟಿಗೆ ಸಂಸ್ಕೃತ ಮೂಲಪ್ರತಿಯನ್ನು ಇಟ್ಟುಕೊಂಡು ಕ್ರಮಪಡಿಸಿರುತ್ತೇವೆ.

*ಆದುಕಾರಣ ಆ ಸಮಸ್ತ ಶರೀರಗಳು ಆತನ ಅಂಶಗಳು—ಎಂದು ಒಂದು ವಾಕ್ಯವಿದೆ. ಇದು ಸಂಸ್ಕೃತಪ್ರತಿಯನ್ನು ನೋಡಿದ್ದಲ್ಲಿ ಇಲ್ಲಿಗೆ ಅನುಚಿತವೆಂದು ತೋರುತ್ತದೆ.

ಸರ್ವಕ್ಕೂ ಅವಕಾಶವಂ ಕುಡುತಲಿದ್ದಾನು ; ಮತ್ತು ಆವ ಪರಮಾತ್ಮನು ಶ್ರುತಿ ‖ 'ತದೈಕ್ಷತ ಬಹುಸ್ಯಾಂ ಪ್ರಜಾಯೇಯ ‖' ಎಂದು ಸೃಷ್ಟಿಯಲ್ಲಿ ಸಂಕಲ್ಪಿಸಿದವನಾಗಿ ಜಗತ್ಸೃಷ್ಟಿಯ ಮಾಡುತುಂ ಇದ್ದಾನು ; ಆವ ಪರಮಾತ್ಮನು ರಕ್ಷಕನಾಗಿ ಜಗತ್ತಂ ಪ್ರತಿಪಾಲಿಸುತಿದ್ದಾನು ; ಆವ ಪರಮಾತ್ಮನು ಕಡೆಯಲ್ಲಿ ಸಂಹರ್ತೃರೂಪಿಯಾಗಿ ಸಂಹಾರವ ಮಾಡುತಲಿದ್ದಾನು ; ಮತ್ತಂ ಆವ ಪರಮಾತ್ಮನಾದ ವಿಷ್ಣುವೇ ವಿಶ್ವಾತ್ಮಕನಾಗಿ ಜ್ಞಾನಾನಂದಸ್ವರೂಪನಾದೊಡಂ ಚೇಚ ಜೇಚ ಮೂಱು ವಿಧವಾಗಿ ಇದ್ದಾನು ; ಮತ್ತು ಕೇಳು ರಾಯನೇ ! ಆವ ಪರಮಾತ್ಮನಲ್ಲಿ ಈ ಜಗತ್ತು ಇರುವುದೋ, ಆವವನು ಈಜಗತ್ತೋ, ಆವ ಆದಿಕಾರಣಭೂತನಾದ ಸ್ವಯಂಭುವು ಈಜಗತ್ತಿನಲ್ಲಿ ಐಚ್ಛಿಕವಾದ ಉತ್ಪತ್ತಿಯನುಳ್ಳವನಾಗಿ ಆಶ್ರಯಿಸಲ್ಪಟ್ಟಿದ್ದಾನು: ತಾದೃಶನಾಗಿ ಸರ್ವಭೂತಂಗಳಿಗೂ ಉತ್ಪತ್ತಿಸ್ಥಾನವಾದ ವಿಷ್ಣುವು ಈಗ ಭೂಮಿಯಲ್ಲಿ ಒಂದು ಅಂಶದಿಂದ ಅವತಾರವಂ ಮಾಡಿಯಿರುತಲಿದ್ದಾನು. ಕೇಳು ರಾಯನೇ ! ನಿನ್ನ ರಮಣೀಯವಾದ ಕುಶಸ್ಥಲಿಯೆಂಬ ಪಟ್ಟಣವು ಬಹುಕಾಲವಾದಕಾರಣ ಈಗ ದ್ವಾರಕಾನಗರವೆಂಬ ಹೆಸರನುಳ್ಳದಾಯಿತು. ಆಪಟ್ಟಣದಲ್ಲಿ ವಿಷ್ಣ್ವಂಶನಾದ ಬಲಭದ್ರರಾಮನು ಇರುತಲಿದ್ದಾನು. ಎಲೈ ರಾಯನೇ ! ನಿನ್ನ ಕುಮಾರ್ತಿಯನು ಆತನಿಗೋಸುಗ ಕುಡು. ಆತನೆಂತಹವನೆಂಬೆಯೊ ? ಮಾಯಾಮನುಜಾವತಾರನು. ಆತಂಗೆ ಸ್ತ್ರೀಯಾಗಿ ಕುಡು. ಆಬಲರಾಮನು ಉತ್ತಮನಾದ ವರನು. ಈನಿನ್ನ ಕುಮಾರ್ತಿಯು ಸ್ತ್ರೀರತ್ನವು. ಇಬ್ಬರಿಗೂ ಸಮಾನ ಸಂಬಂಧವು ಇದೆ. "

ಈಪ್ರಕಾರದಲ್ಲಿ ಬ್ರಹ್ಮದೇವನಿಂದ ನುಡಿಯಲ್ಪಟ್ಟ ರೈವತರಾಯನು ಸತ್ಯಲೋಕದಿಂದ ಭೂಲೋಕವನೆಯ್ದಿದವನಾಗಿ ಅಲ್ಪತೇಜಸ್ಸನುಳ್ಳವರಾಗಿ ಸ್ವಲ್ಪವಾದ ವಿವೇಕವೀರ್ಯಗಳನುಳ್ಳವರಾಗಿ ಹ್ರಸ್ವಾಕಾರರಾದ ಪುರುಷರಂ ನೋಡಿದವನಾಗಿ, ಆಕುಶಸ್ಥಲಿಯುಂ ಪ್ರವೇಶಮಾಡಿ ಬಲರಾಮನಂ ನೋಡಿ, ಆತಂಗನುರೂಪೆಯಾದ ಈಕನ್ನೆಯುಂ ಕೊಟ್ಟವನಾದನು.

ಬಲಭದ್ರನೆಂತಹವನೆಂದರೆ– ನೇಗಿಲನೆ ಆಯುಧವಾಗಿಯುಳ್ಳವನು. ಸ್ಫಟಿಕಮಯವಾದ ಪರ್ವತಪ್ರಕಾರದ ವಕ್ಷಸ್ಥಳವನುಳ್ಳಾತನು. ಅಂತಹ

ಬಲರಾಮಂಗೋಸ್ಕರ ಸಮಾನವಿಲ್ಲದ ಬುದ್ಧಿಯನುಳ್ಳ ರೈವತರಾಯನು ಕನ್ಯೆಯಂ ಕುಡುತಲಿರಲಾಗಿ, ತನಗಿಂತಲೂ ಉನ್ನತವಾದ ಆಕಾರವನುಳ್ಳ ರೇವತಿಯನ್ನು ಬಲರಾಮನು ನೋಡಿ ತನ್ನ ನೇಗಿಲ ಕೊನೆಯಿಂದ ಆಯಕ್ಕನಂ ಬಗ್ಗಿಸುತಲಿರಲಾಗಿ, ಆಕ್ಷಣವಲ್ಲಿ ರೇವತಿಯು ಬೇರೊಬ್ಬಳೊ ಎಂಬ ಹಾಗೆ ಮಟ್ಟಾದ ಆಕಾರವನುಳ್ಳವಳಾದಳು. ಆರೈವತಭೂಪನ ಕುಮಾರ್ತಿಯಾದ ರೇವತಿಯನ್ನು ಸೀರಾಯುಧನಾದ ಬಲರಾಮನು ಅನಂತರದಲ್ಲಿ ವಿಧ್ಯುಕ್ತವಾಗಿ ವಿವಾಹವಂ ಮಾಡಿಕೊಂಡವನಾದಂ. ಆರಾಯನು ರೇವತಿಯಂ ಬಲರಾಮಂಗೆ ಕೊಟ್ಟು ತಾನು ಇಂದ್ರಿಯನಿಗ್ರಹವನುಳ್ಳವನಾದ ಕಾರಣ ತಪಸ್ಸಿಗೋಸ್ಕರ ಹಿಮವತ್ಪರ್ವತನೆಯ್ದಿದವನಾದನು.

ಎಂಬಲ್ಲಿಗೆ ಶ್ರೀ ಪರಾಶರರು ಮೈತ್ರೇಯಂಗೆ ನಿರೂಪಿಸಿದ ಶ್ರೀ ವಿಷ್ಣು ಪುರಾಣದಲ್ಲಿ ಚತುರ್ಥಾಂಶದೊಳು ಪ್ರಥಮಾಧ್ಯಾಯಂ ಸಂಪೂರ್ಣಂ.

---

## ಎರಡನೆಯ ಅಧ್ಯಾಯ.

ಕೇಳು ಮೈತ್ರೇಯ, [1]ಕಕುದ್ಮಿಕುಮಾರನಾದ[1] ರೈವತರಾಯನು ಎಷ್ಟು ಪರಿಯಂತ ಬ್ರಹ್ಮಲೋಕದಿಂ ಬಾರದೆ ಇದ್ದನು, ಆಸಮಯದಲ್ಲಿ ಪುಣ್ಯಜನರೆಂದು ಹೆಸರನುಳ್ಳ ರಾಕ್ಷಸರು ಆತನ ಪಟ್ಟಣವಾದ ಕುಶಸ್ಥಳಿಯನು ಆಕ್ರಮಿಸಿದವರಾದರು. ಆ ರೈವತನ ಒಡಹುಟ್ಟಿದವರು ನೂರು ಮಂದಿಯೂ ರಾಕ್ಷಸರ ಭಯದಿಂ ದಿಕ್ಕುದಿಕ್ಕುಗಳನೆಯ್ದಿದವರಾದರು. ಅವರ ವಂಶದ ಕ್ಷತ್ರಿಯರು ದಿಕ್ಕುಗಳನಾಶ್ರಯಿಸಿದವರಾದರು.

ಧೃಷ್ಟನೆಂಬಾತಂಗೆ—ಆತನ ಸಂತತಿ ಕ್ಷತ್ರಧರ್ಮವನುಳ್ಳುದಾಯಿತು.

ನಾಭಾಗನಿಗೆ ನಾಭಾಗನು, ಅವನ ಕುಮಾರನು ಅಂಬರೀಷ, ಅಂಬರೀಷರಾಯನ ಕುಮಾರಂ ವಿರೂಪನೆಂಬ ರಾಯನಾದಂ, ವಿರೂಪರಾಯನ ದೆಸೆಯಿಂ ಪೃಷದಶ್ವನು, ಆತಂಗೆ ರಥೀತರನೆಂಬಾತಂ.

---

ವಿವರಣ—1. ಅಚ್ಚಾಗಿ ಪ್ರಚಾರದಲ್ಲಿರುವ ಸಂಸ್ಕೃತ ಪ್ರತಿಯಲ್ಲಿ "ಕುಕುದ್ಮೀ" ಎಂದಿದೆ; ಇದಕ್ಕೆ—ಕುಕುದ್ಮಿಯೆಂಬ ಹೆಸರುಳ್ಳ ಎಂದು ಅರ್ಥವಾಗುತ್ತದೆ.

(ಇಲ್ಲಿ ಒಂದು ಶ್ಲೋಕವು ಹೇಳಲ್ಪಡುತ್ತದೆ :—

ಶ್ಲೋ॥ ಏತೇ ಕ್ಷತ್ರಪ್ರಸೂತಾವೈ ಪುನಶ್ಚಾಂಗಿರಸಾಸ್ಸ್ಮೃತಾಃ ।
ರಥೀತರಾಣಾಂ ಪ್ರವರಾಃ ಕ್ಷತ್ರೋಪೇತಾ ದ್ವಿಜಾತಯಃ ॥)

ಟೀಕು—ಇವರುಗಳು ಕ್ಷತ್ರಿಯವಂಶೋತ್ಪನ್ನರು; ಮತ್ತಂ ಇವರುಗಳು ಆಂಗಿರಸರೆನಿಸಿಕೊಂಬರು; ರಥೀತರರಾದ ರಾಯರುಗಳ ಮಧ್ಯದಲ್ಲಿ ಅತ್ಯಂತ ಶ್ರೇಷ್ಠರು, ಕ್ಷತ್ರಿಯಧರ್ಮದೊಡನೆ ಕೂಡಿದವರು—ಎಂದು—

ಮನುಚಕ್ರವರ್ತಿಯು ಸೀನಿನಿಂದ ನಾಸಿಕದಿಂದ ಹುಟ್ಟಿದಂಥವನು ಇಕ್ಷ್ವಾಕುಮಹಾರಾಯನು. ಆತಂಗೆ ಪುತ್ರಶತ. ಅವರಲ್ಲಿ ಪ್ರಧಾನರಾದವರು ವಿಕುಕ್ಷಿ ನಿಮಿ ದಂಡರು. ಇನ್ನು ಶಕುನಿ ಮೊದಲಾದವರು ಐವತ್ತು ಮಂದಿ ಕುಮಾರರು ಉತ್ತರದಿಕ್ಕನ್ನು ರಕ್ಷಿಸುವವರಾದರು. ಆ ಪುತ್ರರುಗಳಲ್ಲಿ ನಾಲ್ವತ್ತೆಂಟು ಮಂದಿ ದಕ್ಷಿಣದೇಶದ ಭೂಪಾಲರುಗಳು. ಆ ಇಕ್ಷ್ವಾಕುಮಹಾರಾಯನು ಅಷ್ಟಕಾಶ್ರಾದ್ಧಾರ್ಥವಾಗಿ ಶ್ರಾದ್ಧಾರ್ಹವಾದ ಮಾಂಸವನು ಕೊಂಡು ಬಾ—ಎಂದು ಆ ವಿಕುಕ್ಷಿಯೆಂಬ ಕುಮಾರನನು ಆಜ್ಞಾಪಿಸಿದವನಾದನು. ಆ ವಿಕುಕ್ಷಿ ತಂದೆಯ ಆಜ್ಞೆಯಿಂದ—"ಹಾಗೆಯೇ ಆಗಲಿ," ಎಂದು ವನವನೆಯ್ದಿ, ಅನೇಕ ಮೃಗಗಳ ಸಂಹರಿಸಿ ಬಳಲಿ, ಹಸಿವಿನಿಂದ ಕಂಗೆಟ್ಟು, ಒಂದು ಮೊಲನಂ ಭಕ್ಷಿಸಿ, ಆಶೇಷವಾದ ಮಾಂಸವನು ತಮ್ಮ ತಂದೆಗೆ ಕೊಟ್ಟವನಾದನು. ಇಕ್ಷ್ವಾಕುಮಹಾರಾಯನಿಂದ ಇಕ್ಷ್ವಾಕುಕುಲಗುರುವಾದ ವಸಿಷ್ಠನು ಆಮಾಂಸವನು ಪ್ರೋಕ್ಷಣಾರ್ಥವಾಗಿ ಪ್ರೇರಿಸಲ್ಪಟ್ಟಂಥವನಾಗಿ ಈಮಾತಂ ನುಡಿದನು. "ಅಪವಿತ್ರವಾದ ಈಮಾಂಸದಿಂದ ಸಾಕು ; ಅದೇನುಕಾರಣವೆಂದೊಡೆ—ಈದುರಾತ್ಮನಾದ ನಿನ್ನ ಪುತ್ರನಿಂದ ಶೇಷವಾದಂಥದು ; ಅವುದಾನೊಂದು ಕಾರಣವಾಗಿ ಶಶವು ಭಕ್ಷಿಸಲ್ಪಟ್ಟಿತು ; ಆಶೇಷವು ಕವ್ಯಕ್ಕೆ ನಿಷಿದ್ಧವಾದ ಕಾರಣ ಆಗದು." ಅನಂತರದಲ್ಲಿ ಈವಿಕುಕ್ಷಿಯು ತಂದೆಯಾದ ಇಕ್ಷ್ವಾಕುರಾಯನಿಂದ "ಶಶಾದನು ಎಂಬ ಹೆಸರುಳ್ಳವನಾಗು" ಎಂದು ಶಾಪಗ್ರಸ್ತನು ಆಗಿ, ರಾಜ್ಯದಿಂದ ಬಿಡಲ್ಪಟ್ಟನು. ತಂಗೆಯು ಲೋಕಾಂತರವನೆಯ್ದುತಿರಲಾಗಿ, ಆಶಶಾದನು ಈ ಸಮಸ್ತವಾದ ಭೂಮಿಯನು ಧರ್ಮದಲ್ಲಿ ಪರಿಪಾಲಿಸಿದವನಾದನು. ಆತಂಗೆ ಪುರಂಜಯನೆಂಬ ಕುಮಾರನಾದನು.

ಇನ್ನೊಂದು ಕಥಾಂತರವಂ ಕೇಳು. ಮೈತ್ರೇಯ! ಪೂರ್ವದ ತ್ರೇತಾಯುಗದಲ್ಲಿ ಅತ್ಯಂತಭಯಂಕರವಾದ ದೇವಾಸುರಯುದ್ಧವಾಯಿತು. ಆ ಯುದ್ಧದಲ್ಲಿ ಅತ್ಯಂತಬಲಿಷ್ಠರಾದ ರಾಕ್ಷಸರಿಂದ ದೇವತೆಗಳು ಅಪಜಯವನೆಯ್ದಿದವರಾದರು. ಆದುಕಾರಣ ಷಡ್ಗುಣೈಶ್ವರ್ಯಸಂಪನ್ನನಾದ ನಾರಾಯಣನ ಆರಾಧನೆಯಂ ಮಾಡಿದವರಾದರು. ಆ ಆರಾಧನೆಯಿಂದ ಪ್ರಸನ್ನನಾದ ಅನಾದಿನಿಧನನಾಗಿ ಸಕಲಜಗದ್ರಕ್ಷಣ ಪರಾಯಣನಾದ ನಾರಾಯಣನು ದೇವತೆಗಳಂ ಕುರಿತು ನುಡಿದವನಾದನು. "ಕೇಳಿರೈ, ದೇವತೆಗಳಿರಾ! ನೀವು ಯಾವ ಪ್ರಯೋಜನವಂ ಬಯಸಿದಿರಿ, ಅದನು ನಾನು ಅರಿತೆನು. ಅದು ನಿಮ್ಮಿಂದ ಕೇಳಲ್ಪಡಲಿ. ಪುರಂಜಯನೆಂಬ ಶಶಾದರಾಯನ ಕುಮಾರನು ಕ್ಷತ್ರಿಯಶ್ರೇಷ್ಠನು. ಆತನ ಶರೀರದಲ್ಲಿ ನಾನು ಬಂದಂಶದಿಂದ ಅವತರಿಸಿ ಆ ಸಮಸ್ತವಾದ ಅಸುರರನು ಸಂಹರಿಸುವೆನು. ಸಮಸ್ತವಾದ ದೇವತೆಗಳು ಅದುಕಾರಣ ನಿಮ್ಮಿಂದ ಅಸುರವಧಾರ್ಥವಾಗಿ ಉದ್ಯೋಗವು ಮಾಡಲ್ಪಡಲಿ!" ಎಂದು ತಮಗೆ ರಕ್ಷಕನಾದ ನಾರಾಯಣನಿಂದ ಹೇಳಲ್ಪಟ್ಟ ದೇವತೆಗಳು ಆ ಪುರಂಜಯನ ಸಮೀಪವನ್ನು ಕುರಿತು ಬಂದಂಥವರಾಗಿ ಆತನ ಕುರಿತು ಈ ಮಾತ ನುಡಿದವರಾದರು. "ಎಲೈ ಪುರಂಜಯಮಹಾರಾಯನೆ! ನಮ್ಮಿಂದ ಪ್ರಾರ್ಥಿಸಲ್ಪಟ್ಟ ನಿನ್ನಿಂದ ಶತ್ರುವಧೆಯನಪೇಕ್ಷಿಸಿದ ನಮಗೆ ಸಹಾಯವನು ಮಾಡಲಿಚ್ಛೈಸುತಲಿದ್ದೇವೆ. ಆ ಶೌರ್ಯವು ನಿನ್ನಿಂದ ನಮಗೆ ಮಾಡತಕ್ಕದು. ಸ್ನೇಹಭಂಗವು ಮಾಡತಕ್ಕದಲ್ಲ"ವೆಂದು ನುಡಿದಂಥ ದೇವತೆಗಳ ಕುರಿತು ಪುರಂಜಯನು ನುಡಿದಂಥವನಾದನು. "ಕೇಳಿರೈ, ದೇವತೆಗಳಿರಾ ಈ ಶತಕ್ರತುವಾದ ಇಂದ್ರನು ತ್ರೈಲೋಕ್ಯನಾಥನು. ಅಂತಹ ಇಂದ್ರನ ಸ್ಕಂಧವನಾಶ್ರಯಿಸಿದವನಾಗಿ ನಿಮ್ಮ ಶತ್ರುಗಳೊಡನೆ ಯುದ್ಧವಂ ಮಾಡುವೆನು. ಅದುಕಾರಣ ನಿಮಗೆ ಸಹಾಯನಾಗುವೆ"ನೆಂದು ಹೇಳಿದ ವಾಕ್ಯವಂ ಕೇಳಿ, ದೇವತೆಗಳಿಂದಲೂ ಇಂದ್ರನಿಂದಲೂ "ಹಾಗೆಯೇ ಆಗಲಿ" ಎಂದು, ಅಂಗೀಕರಿಸಲ್ಪಟ್ಟಿತು. ಅನಂತರದಲ್ಲಿ ವೃಷಭರೂಪಿಯಾದ ದೇವೇಂದ್ರನ ಹೆಕ್ಕತ್ತಿನ ಹಿಣಿಲನಾಶ್ರಯಿಸಿದವನಾಗಿ, ಅತ್ಯಂತ ರೂಪಸಮನ್ವಿತವಾಗಿ, ಷಡ್ಗುಣೈಶ್ವರ್ಯಸಂಪನ್ನನಾಗಿ, ಚರಾಚರಗುರುವಾದ ನಾರಾಯಣನ ತೇಜಸ್ಸಿನಿಂದ ಆವೇಶಿಸಲ್ಪಟ್ಟವನಾಗಿ, ದೇವಾಸುರಯುದ್ಧದಲ್ಲಿ ಸಮಸ್ತವಾದ

ಅಸುರರನು ನಿಗ್ರಹಿಸಿದವನಾದನು. ಆವುದಾನೊಂದು ಕಾರಣ ವೃಷಭನ ಕಕುತ್ಸ್ಥನವನು ಆಶ್ರಯಿಸಿದ ಪುರಂಜಯನೆಂಬ ರಾಜನಿಂದ ಅಸುರಬಲವು ಸಂಹರಿಸಲ್ಪಟ್ಟಿತೊ, ಅದುಕಾರಣ ಕಕುತ್ಸ್ಥನೆಂಬ ಹೆಸರನು ಪಡೆದವನಾದನು.

ಕಕುತ್ಸ್ಥನೆಂಬ ರಾಯನಿಗೆ [1]ಅನೇನಸೆಂಬ[1] ಪುತ್ರನು; ಅನೇನಸೆಂಬಾತನಿಂದ ಪೃಥು; ಪೃಥುವೆಂಬ ರಾಯನಿಗೆ ವಿಶ್ವಗಂಧನು; [2]ವಿಶ್ವಗಂಧ[2]ರಾಯಂಗೆ ಚಾಂದ್ರಯುವನಾಶ್ವನು; ಆಚಾಂದ್ರಯುವನಾಶ್ವಂಗೆ ಶಾಬಸ್ತನು. ಆವನಾನೊಬ್ಬ ಶಾಬಸ್ತನು ಶಾಬಸ್ತಿಯೆಂಬ ಪಟ್ಟಣವನಾಗುಮಾಡಿ ಪ್ರವೇಶಿಸಿದವನಾದನು, ಆಶಾಬಸ್ತನೆಂಬಾತಂಗೆ ಬೃಹದಶ್ವನು, ಆತಂಗೆ ಕುವಲಯಾಶ್ವನು; ಆವನಾನೊಬ್ಬ ಕುವಲಯಾಶ್ವನು ಉದಂಕನೆಂಬ ಮಹರ್ಷಿಗೆ ಅಪಕಾರಿಯಾದ ಧುಂಧುವೆಂಬ ರಾಕ್ಷಸನನು ವಿಷ್ಣುವಿನ ಆವೇಶಾವತಾರದಿಂದ ತನ್ನ [3]ಇಪ್ಪತ್ತೊಂದು ಸಾಸಿರ[3]ಮಂದಿ ಪುತ್ರರುಗಳಿಂದ ಸಹಿತವಾಗಿ ಸಂಹರಿಸಿದನು, ಆರಾಯನು ತಾನು ಧುಂಧುಮಾರನೆಂಬ ಪೆಸರಂ ಪಡೆದನು. ಆತನ ಸಮಸ್ತ ಕುಮಾರರು ಆಧುಂಧುವೆಂಬ ರಾಕ್ಷಸನ ಉಚ್ಛ್ವಾಸಾಗ್ನಿಯಿಂದ ನಾಶವನೆಯ್ದಿದರು. ಅವರಲ್ಲಿ ದೃಢಾಶ್ವನು, ಚಂದ್ರಾಶ್ವನು, ಕಪಿಲಾಶ್ವನು ಈ ಮೂಱುಮಂದಿ ಕುಮಾರರುಳಿದರು ದೃಢಾಶ್ವಂಗೆ ಹರ್ಯಶ್ವನು; ಹರ್ಯಶ್ವಂಗೆ ನಿಕುಂಭನು; ನಿಕುಂಭಂಗೆ [4]ಅಹಿಂತಾಶ್ವನು;[4] ಆತನ ದೆಸೆಯಿಂದ ಕೃಶಾಶ್ವನು, ಆತನಿಂದ ಪ್ರಸೇನಜಿತ್, ಪ್ರಸೇನಜಿತ್‌ರಾಯಂಗೆ ಯುವನಾಶ್ವನಾದನು. ಆತನು ಪುತ್ರರಿಲ್ಲವೆಂಬ ನಿರ್ವೇಗದಿಂದ ಮುನಿಗಳ ಆಶ್ರಮ ಮಂಡಲಗಳ ಆಶ್ರಯಿಸಿರುವುದಱಿಂದ ದಯಾಳುಗಳಾದ ಮುನಿಗಳಿಂದ ಇಷ್ಟಿಯುಂ ಮಾಡಲ್ಪಟ್ಟಿತು. ಆಪುತ್ರಕಾಮೇಷ್ಟಿಯಲ್ಲಿ ಮಧ್ಯರಾತ್ರಿಯಾಗುತಿರಲಾಗಿ; ಮಂತ್ರಪೂತವಾದ ಜಲಪೂರ್ಣವಾದ ಕಲಶವನು ವೇದೀಮಧ್ಯದಲ್ಲಿರಿಸಿ ಆಮುನಿಗಳು ನಿದ್ರಾಸಕ್ತರಾದರು. ಅವರು ಮಲಗುತಿರಲಾಗಿ ಆಭೂಪಾಲನು ದಾಹದಿಂದ ತಪಿಸಲ್ಪಟ್ಟಂಥವನಾಗಿ ಆಶ್ರಮವನ್ನು ಪ್ರವೇಶಿಸಿದನು. ಮಲಗಿರುವ ಋಷಿಗಳನು ಎಬ್ಬಿಸದೆ ಇದ್ದವನಾಗಿ ಅನೇಕ ಮಹಿಮೆಯುಳ್ಳ ಆಮಂತ್ರಪೂತಜಲವಂ ಪಾನಮಾಡಿದವನಾದನು. ಅನಂತರದಲ್ಲಿ ನಿದ್ದೆಯಿಂದ ಎದ್ದಂಥ ಋಷಿಗಳು ಕೇಳಿದವರಾದರು. "ಆವ ಪುರುಷ

---

ಪಾ—1—ಅಸೇನ. 2—ನಿಷ್ಠುರಾಶ್ವ. 3—ಇಪ್ಪತ್ತು. 4—ಅಮಿತಾಶ್ವ.

ನಿಂಗೆ ಈ ಮಂತ್ರಪೂತವಾದ ತೀರ್ಥವು ಪಾನಮಾಡಲ್ಪಟ್ಟಿತು? ಈ ಕಲಶೋದಕವನು ಯುವನಾಶ್ವರಾಯನ ಧರ್ಮಪತ್ನಿಯು ಪಾನವ ಮಾಡಿದಲ್ಲಿ ಮಹಾಬಲಪರಾಕ್ರಮವನುಳ್ಳ ಪುತ್ರನಂ ಪಡೆವಳು."—ಎಂದು ಹೇಳಿದುದಂ, ಆರಾಯಂ ಕೇಳಿ, "ಋಷಿಗಳಿರಾ! ಅರಿಯದೆ ಇದ್ದ ನನ್ನಿಂದ ಅದು ಪಾನವ ಮಾಡಲ್ಪಟ್ಟಿತು!" ಎಂದು ಹೇಳಿದವನಾದನು. ಗರ್ಭವು ಯುವನಾಶ್ವನ ಉದರದಲ್ಲಿ ಆಯಿತು. ದಿನಕ್ರಮದಿಂದ ಗರ್ಭ ಚಿಹ್ನದ ಪ್ರಕಾರದಲ್ಲಿ ವರ್ಧಿಸಿತು. ಪೂರ್ಣಗರ್ಭವಾದ ಕಾಲದಲ್ಲಿ ಆರಾಯನ [1]ದಕ್ಷಿಣ ಕುಕ್ಷಿಯನ್ನು ಭೇದಿಸಿಕೊಂಡು ಶಿಶುವು ಹೊರಟಂಥಾದುದಾಯಿತು. ಆ ದಕ್ಷಿಣ ಕುಕ್ಷಿಭೇದದಿಂದ ರಾಯನು ದೇಹವಂ ಬಿಡಲಿಲ್ಲ. "ಹುಟ್ಟಿದ ಶಿಶುವು ಇಷ್ಟಿಕರಸವಂ ಪಾನವ ಮಾಡಿತು" ಎಂದು ಋಷೀಶ್ವರರು ಹೇಳಿದರು.[1] ಅನಂತರದಲ್ಲಿ ದೇವಪತಿಯಾದ ದೇವೇಂದ್ರನು ಅಲ್ಲಿಗೆ ಬಂದು ಈಮಾತ ನುಡಿದನು. "ನನ್ನ ಅಂಗುಷ್ಠವನು ಈಸಣ್ಣವನು ಪಾನನ ಮಾಡಿರುವನಾದಕಾರಣ ಮಾಂಧಾತನೆಂಬ ಹೆಸರನುಳ್ಳವನಾದಾನು." ಅನಂತರದಲ್ಲಿ ದೇವೇಂದ್ರನು ಈಶಿಶುವಿನ ಮುಖದಲ್ಲಿ ಅಂಗುಷ್ಠವನಿರಿಸಲಾಗಿ, ಶಿಶು ಪಾನವ ಮಾಡುತಿರಲಾಗಿ, ಆಅಮೃತಸ್ರಾವಿಣಿಯಾದ ಅಂಗುಷ್ಠವನು ಆಸ್ವಾದಿಸಿ ಒಂದು ಹಗಲಿನಲ್ಲಿಯೆ ವರ್ಧಿಸಿದವನಾದನು. ಆಮಾಂಧಾತ ಚಕ್ರವರ್ತಿಯು ಸಪ್ತದ್ವೀಪಸಮೇತವಾದ ಭೂಮಿಯನು ಅನುಭವಿಸಿದನು.

(ಆತನ ವಿಷಯವಾಗಿ ಈ ಶ್ಲೋಕವು ಗಾನಮಾಡಲ್ಪಡುವುದು.

ಶ್ಲೋ ॥ "ಯಾವತ್ಸೂರ್ಯ ಉದೇತಿಸ್ಮ ಯಾವಚ್ಚ ಪ್ರತಿತಿಷ್ಠತಿ ।
ಸರ್ವಂ ತದ್ಯೌವನಾಶ್ವಸ್ಯ ಮಾಂಧಾತುಃ ಕ್ಷೇತ್ರಮುಚ್ಯತೇ ॥")

ಟೀಕು—ಸೂರ್ಯೋದಯಪ್ರದೇಶವೊದಲಾಗಿ ಸೂರ್ಯಪ್ರಭೆಯೆಷ್ಟುಱೊಳಗಾಗಿ ಇರುತಲಿದ್ದೀತು, ಆ ಸಮಸ್ತವಾದ ಭೂಮಂಡಲವು ಯುವನಾಶ್ವನ ಕುಮಾರನಾದ ಮಾಂಧಾತಚಕ್ರವರ್ತಿಯ ಭೂಮಿಯು—ಎಂದು

---

ಪಾ.—1—ಕುಕ್ಷಿಯನ್ನು ದಕ್ಷಿಣಾಂಗುಷ್ಟದಿಂದ ಭೇದಿಸಿಕೊಂಡು ಹೊರಟಿತು, ಆರಾಯನು ಸತ್ತನು. ಹುಟ್ಟಿದ ಶಿಶುವು ಏನ ಪಾನಮಾಡುವುದೆಂದು ಋಷೀಶ್ವರರು ಕೇಳಿದವರಾದರು—ಎಂದು ಪ್ರಚಾರದಲ್ಲಿರುವ ಸಂಸ್ಕೃತ ಪ್ರತಿಯ ಪ್ರಕಾರ ಇರಬೇಕು.

ಹೇಳಲ್ಪಟ್ಟಿತು. ಮಾಂಧಾತಚಕ್ರವರ್ತಿಯು ಶಶಿಬಿಂದುರಾಯನ ಮಗಳಾಗಿ ಇದ್ದಂಥ [1]ಇಂದುಮತಿಯಂ[1] ವಿವಾಹವಾದನು. ಪುರುಕುತ್ಸನು, ಅಂಬರೀಷನು, ಮುಚುಕುಂದನು ಈ ಮೂಱುಮಂದಿ ಕುಮಾರರನು ಆ [1]ಇಂದುಮತಿ[1]ಯಲ್ಲಿ ಪಡೆದವನಾದನು, ಮತ್ತು ಐವತ್ತುಮಂದಿ ಕನ್ನಿಕೆಯರನ್ನೂ [1]ಇಂದುಮತಿ[1]ಯಲ್ಲಿಯೇ ಪಡೆದವನಾದನು.

ಕೇಳು ಮೈತ್ರೇಯ! ಬಹ್ವೃಚನಾದ ಸೌಭರಿಯೆಂಬ ಮಹರ್ಷಿಯು ಉದಕದೊಳಗೆ ಇದ್ದು ಹನ್ನೆರಡುವರ್ಷ ತಪೋನಿಷ್ಠನಾಗಿ ಇದ್ದನು. ಆ ಉದಕದೊಳಗೆ [2]ಸೋಮದ[2]ವೆಂಬ ಮತ್ಸ್ಯವು ಅತಿಪ್ರಮಾಣವುಳ್ಳದಾಗಿ ಬಹುಪ್ರಜೆಗಳನುಳ್ಳದಾಗಿ ಮತ್ಸ್ಯಗಳಿಗೆಲ್ಲಾ ಅಧಿಪತಿಯಾಯಿತು. ಆ ಮತ್ಸ್ಯಾಧಿಪತಿಯು ಪುತ್ರಪೌತ್ರ, ಸುತೆಯರಾದ ಹೆಣ್ಣುಮಕ್ಕಳು, ಅವಱ ಮಕ್ಕಳು ಹಿಂದೂ ಮುಂದೂ ಉಭಯಪಾರ್ಶ್ವದಲ್ಲಿಯೂ ಪುಚ್ಛದ ಮೇಲೆಯೂ ಶಿರಸ್ಸಿನಮೇಲೆಯೂ ಸಂಚರಿಸುತ ಆಮತ್ಸ್ಯಾಧಿಪತಿಯೊಡನೆ ಅಹರ್ನಿಶವೂ ರಮಿಸುವುದಾಯಿತು. ಮತ್ತು ಆ ಮತ್ಸ್ಯಾಧಿಪತಿಯು ಆಪುತ್ರಪೌತ್ರದೌಹಿತ್ರಾದಿಗಳ ಸ್ಪರ್ಶಸುಖದಿಂದ ಹೆಚ್ಚುತ್ತಲಿದ್ದ ಆನಂದಪ್ರಕರ್ಷವನುಳ್ಳದಾಗಿ ಪ್ರತಿದಿನದಲ್ಲಿಯೂ ರಮಿಸುವುದಾಯಿತು. ಅನಂತರದಲ್ಲಿ ಅಂತರ್ಜಲದೊಳಿದ್ದಂಥ ಸೌಭರಿಋಷೀಶ್ವರನು ಏಕಾಗ್ರಚಿತ್ತವಾದ ಸಮಾಧಿಯಂ ಬಿಟ್ಟು ಪ್ರತಿದಿನದಲ್ಲಿಯೂ ಆಮತ್ಸ್ಯದ ಪುತ್ರಪೌತ್ರದೌಹಿತ್ರಾದಿಗಳನು ನೋಡಿ ಹೀಗೆ ಚಿಂತಿಸಿದನು :—"ಈಮತ್ಸ್ಯವು ಬಹು ಧನ್ಯವಾದುದು! ಈ ಪ್ರಕಾರವಾದ ಅಭಿಮತವಲ್ಲದ (ಮತ್ಸ್ಯಜನ್ಮ)ವನೆಯ್ದಿಯೂ, ಪುತ್ರಮಿತ್ರಕಳತ್ರದೌಹಿತ್ರಾದಿಗಳ ಕೂಡಿ ರಮಿಸುತಿದ್ದಂಥ ಈಮತ್ಸ್ಯಪತಿಯು (ನನ್ನಲ್ಲಿ) ಈರ್ಷ್ಯಾಪೇಕ್ಷೆಯಂ ಹುಟ್ಟಿಸುತ್ತಲಿದ್ದೀತು. ನಾವು ಹೀಗೆ ಪುತ್ರಾದಿಗಳಿಂದ ಸಹಿತವಾಗಿ ಎಂದು ರಮಿಸೇವು!" ಎಂದು ಅಂತರ್ಜಲದಿಂದ ಹೊಱಹೊಱಟು ನಿವೇಷ್ಟುಕಾಮನಾಗಿ, ಕನ್ಯಾರ್ಥಿಯಾಗಿ, ಮಾಂಧಾತಚಕ್ರವರ್ತಿಯಂ ಕುಱಿತು ಐದಿದವನಾದನು. ಮಾಂಧಾತನು ಋಷಿ ಬಂದನು ಎಂಬುದಂ ಕೇಳಿ ಇದಿರ್ವಂದು ಅರ್ಘ್ಯಾದಿಗಳಿಂ ಪೂಜಿಸಲು; ಕೃತಾಸನಪರಿ

---

ಪಾ—1—ಬಿಂದುಮತಿ; 2—ಸಂಮದ—ಇವೆರಡು ಸಂಸ್ಕೃತ ಮಾತೃಕೆಯ ಪ್ರಕಾರ.

ಗ್ರಹನಾಗಿ ಸೌಭರಿ ಋಷೀಶ್ವರನು ಈಮಾತ ನುಡಿದನು:—"ರಾಯರೊಳಗೆ ಚಕ್ರವರ್ತಿಯಾದ ಮಾಂಧಾತೃವೇ! ದೊರೆಯಾದ ನಿನ್ನಂ ನೋಡಲಿಚ್ಛೈಸಿದೆನು. ನಿನ್ನ ಕನ್ನಿಕೆಯನು ಕುಡು. ನನ್ನಲ್ಲಿ ಸ್ನೇಹವನು ಬಿಡಬೇಡ. ಕಾರ್ಯವಶದಿಂ ಬಂದ ಅತಿಥಿಗಳು ಕಕುತ್ಸ್ಥವಂಶದಲ್ಲಿ ವಿಮುಖರಾಗಿ ಹೋಗರು. ಅಷ್ಟುಮಾತ್ರವೆ ಅಲ್ಲ. ಈಭೂಮಿಯಲ್ಲಿ ಮಿಕ್ಕಾದ ರಾಯರುಗಳು ಅನೇಕರುಂಟು. ಅವರುಗಳೊಳು ಕುಮಾರತಿಯರುಂಟು. ಅತಿಥಿಗಳಿಗೆ ಬೇಡಿದುದ ಕೊಟ್ಟು ದೀಕ್ಷೆಯ ಮಾಡಲ್ಪಟ್ಟ ವ್ರತವನುಳ್ಳಂಥದು ನಿನ್ನ ಕುಲವು ಮಾತ್ರವೆ. ಕೇಳು ರಾಯನೆ! ನಿನಗೆ ಐವತ್ತುಮಂದಿ ಕನ್ನಿಕೆಯರು ಇರುತ್ತ ಇದ್ದಾರೆ; ಅವರುಗಳೊಳು ಒಬ್ಬ ಕನ್ನಿಕೆಯನು ಕುಡು. ನಾನು ಬೇಡಿಕೊಂಬುವುದು ಭಂಗವಾದೀತು, ಎಂಬ ಭಯವುಂಟಾದವನಾಗಿ ಇದ್ದೇನೆ."

ಎಂದು ಈಪ್ರಕಾರದಲ್ಲಿ ಹೇಳಿದ ಋಷಿವಾಕ್ಯವನ್ನು ಮಾಂಧಾತೃ ಚಕ್ರವರ್ತಿಯು ಕೇಳಿ, ಜರೆಯಿಂದ ಜರ್ಜರಿತವಾದ ದೇಹವನುಳ್ಳ ಋಷಿಯನ್ನು ನೋಡಿ ಶಾಪಭಯದಿಂದ ಪ್ರತ್ಯುತ್ತರವನು ಹೇಳಲಂಜಿ, ವಿನಯ ಸಹಿತನಾಗಿ ಒಂದು ಮಾತಂ ನುಡಿದನು. "ಎಲೈ ಭಗವಂತನೇ! ನಮ್ಮ ಕುಲಾಚಾರವನ್ನು ಕೇಳು, ನಮ್ಮ ಕುಮಾರ್ತಿಯರಿಂದ ಅಭಿಜನವಿದ್ಯಾವೃತ್ತ ಗುಣರೂಪಗಳನುಳ್ಳವರಾದವರು ಅಪೇಕ್ಷಿಸಲು ತಕ್ಕವರು. ಅವರೇ ನಮ್ಮ ಮಕ್ಕಳಾದ ಕನ್ನಿಕೆಯರಿಗೆ ವರನಾಗತಕ್ಕವರು. ಅದುಕಾರಣ ನಿಮ್ಮ ಯೋಚನೆಯು ನಮ್ಮ ಸಂಕಲ್ಪಕ್ಕೆ ಅಗೋಚರವಾದುದು. ಈಪ್ರಕಾರ ವಿರುತ್ತಿರಲಾಗಿ ನಿಮ್ಮ ಯಾಚನೆ ಹೇಗಾದೀತು? ಏನ ಮಾಡಲಿ? ಎಂದು ಚಿಂತಿಸುತಲಿದ್ದೇನೆ" ಎಂದು ಹೇಳಿದ ರಾಯನೊಡನೆ ಆಸೌಭರಿ ಋಷಿಯು ಆಲೋಚಿಸಿ ನುಡಿದನು—"ಕೇಳುರಾಯನೇ! ಹಾಗಾದ ಪಕ್ಷದಲ್ಲಿ ಇದೀಗ ಉಪಾಯವು; ವೃದ್ಧನಾದ ನಾನು ಸ್ತ್ರೀಯರಿಗೆ ಇಷ್ಟವಾದವನಲ್ಲ; ಕನ್ನಿಕೆಯರಾದವರಿಗೆ ಕೇಳುವುದೇನು? ಹಾಗೆಯೇ ಆಗಲಿ; ಅವರು ಒಪ್ಪುವಹಾಗೆ ಸ್ವಯಂವರವನು ಮಾಡಿಸು" ಎಂದು ಮಾಂಧಾತರಾಯನಂ ಕುರಿತು (ಹೇಳಿ) ಮತ್ತೂ ಬಂದಾನೊಂದು ಮಾತನಾಡಿದನು:—"ಕೇಳು ರಾಯನೇ! ನೀನು ಹೇಳಿದ ಪ್ರಕಾರದಲ್ಲಿ ಕನ್ನಿಕೆಯರ ಅಂತಃಪುರ

ಪ್ರವೇಶಕ್ಕೆ ನನ್ನ ಕೂಡಲಿಕ್ಕೆ ವರ್ಷವರನಾಜ್ಞಾಪಿಸಲ್ಪಡಲಿ. ಎತ್ತಾನುಂ ನಿನ್ನ ಕನ್ನಿಕೆಯರು ಎನ್ನನಪೇಕ್ಷಿಸಿದ ಪಕ್ಷದಲ್ಲಿ ದಾರಸಂಗ್ರಹವಂ ಮಾಡೇನು. ಅಲ್ಲದೊಡೀಯುಪರವಯಸ್ಸಿನಲ್ಲಿ ನನಗೆ ಬೇಡ ” ಎಂದು ಸುಮ್ಮನಾದನು.

ಅನಂತರ ಮುನಿಶಾಪಶಂಕಿತನಾದ ಮಾಂಧಾತರಾಯನಿಂದ ವರ್ಷವರನು ಮುನಿಯೊಡನೆ ನೇಮಿಸುತ್ತಿರಲಾಗಿ—ಆತನು ಕುಮಾರತಿಯರ ಅಂತಃಪುರವಂ ಪ್ರವೇಶಿಸುತಿರಲಾಗಿ ; ಸೌಭರಿಋಷೀಶ್ವರನು ಅಖಿಲಸಿದ್ಧ ಗಂಧರ್ವಮನುಷ್ಯರಿಂದಲೂ ಅತಿಶಯವಾದ ಮನೋಹರವಾದ ರೂಪವನ್ನು ಆಶ್ರಯಿಸಿದವನಾದನು. ಋಷಿ ಸಮೇತನಾಗಿ ವರ್ಷವರನು ಅಂತಃಪುರಪ್ರವೇಶಮಾಡಿ ಕನ್ನಿಕೆಯರಂ ಕುಱಿತು ಈಮಾತ ನುಡಿದವನಾದನು—“ ಕೇಳಿ ರಾಜಕುಮಾರ್ತಿಯರಿರಾ ! ಈಗ ನಿಮ್ಮ ತಂದೆಯು ಆಜ್ಞಾಪಿಸಿದನು. ಅದು ಕಾರಣ ನಾನು ಬಂದೆನು. ಅದೇನು ? ಎಂದು ಕೇಳುವಿರೊ, “ ಈಬ್ರಹ್ಮರ್ಷಿಯಾದ ಸೌಭರಿಯು ಕನ್ಯಾರ್ಥಿಯಾಗಿ ಬಂದನು. ಮುಂಚಿತವಾಗಿಯೇ ನಾನು (ಏನು) ಬೇಕಾದುದಂ ಮಾಡೇನು ಎಂದು ಪ್ರತಿಜ್ಞೆಯಂ ಮಾಡಿದೆನು. ಅಷ್ಟಱಮೇಲೆ ಯಾವ ಕನ್ನಿಕೆಯು ನಿಮ್ಮನ್ನು ಸ್ವತಂತ್ರದಲ್ಲಿ ವರಿಸಾಳು, ಆ ಕನ್ನಿಕೆಯಂ ನಿಮಗೆ ವಿವಾಹಮಾಡಿಕೊಟ್ಟೇನು” ಎಂದು ಹೇಳಿ, ನನ್ನ ಸಂಗಡ ಬ್ರಹ್ಮರ್ಷಿಯ ಕೂಡಲಿಕ್ಕೆ ಆಜ್ಞಾಪಿಸಿದನು.” ಎಂದು ಅಣ್ಣಗಳು ಅವರುಗಳ ಸಂಗಡ ನುಡಿಯುತ್ತಿರಲಾಗಿ ; ಆಕನ್ನೆಯರೆಲ್ಲರೂ ಕೇಳಿದವರಾಗಿ, ಮನ್ಮಥಾಕಾರನಾದ ಸೌಭರಿಯಂ ನೋಡಿ ಮೋಹವುಳ್ಳವರಾಗಿ,—ನಾಮುಂಚು, ತಾಮುಂಚು, ನನಗೆ ಪತಿಯೀತನು, ನಾನು ಮುಂಚಿತವಾಗಿ ವರಿಸಿದೆನು ಎಂಬ ಅಭಿಲಾಷೆಯಿಂದ ಎಲ್ಲರೂ ವರಿಸಿದವರಾದರು. ಅನಂತರದಲ್ಲಿ “ಈತಂಗೆ ನಾನು ಭಾರ್ಯೆಯು,” “ಈತನನು ನಾನು ವರಿಸಿದೆನು.” “ ಮನೆಗೆ ಬರುತಲೆ ನಾನೇ ವರಿಸಿದೆನು,” “ ಅದನು ನೀನು ಕೆಡಿಸಬೇಡ ” “ನಾನಿಂತು ನಿನ್ನಿಂದ ವರಿಸಲ್ಪಟ್ಟೆನು”—ಎಂಬ ಕೋಲಾಹಲಧ್ವನಿಯು ರಾಜಕುಮಾರ್ತಿಯರೊಳಾಯಿತು. ಯಾವಾಗ ಸಮಸ್ತರಾದ ಕನ್ನೆಯರಿಂದ ಅತ್ಯಂತಸ್ನೇಹದಿಂದ ಕೂಡಿ ಅನಿಂದಿತವಾದ ಕೀರ್ತಿಯನುಳ್ಳ (ಆ ಸೌಭರಿಯು ವರಿಸಲ್ಪಟ್ಟನೋ) ಆಸಮಯದಲ್ಲಿ ಆ ಅಧಿಕಾರಪುರುಷನು ಮಾಂಧಾತರಾಯನ ಹತ್ತಿರಕ್ಕೆ ಬಂದು ನಮಸ್ಕರಿಸಿ, ಈ ವರ್ತಮಾನವನೆಲ್ಲವಂ ನುಡಿದವನಾದನು. ಅವರುಗಳ ಪ್ರೀತ್ಯತಿಶಯವಂ ಕೇಳಿ ದೊರೆಯಾದ ಮಹಾರಾಜನು, “ ಇದೇನಿದೇನು ! ಹೀಗೆ ಸ್ನೇಹಾತಿಶಯವು ! ನನ್ನಿಂದ ಏನು

ಯೋಚಿಸಲ್ಪಟ್ಟಿತು ! " ಎಂದು ಈ ಪ್ರಕಾರದಲ್ಲಿ ವ್ಯಾಕುಲಚಿತ್ತನಾಗಿ, ಅಪೇಕ್ಷೆಯಿಲ್ಲದಿದ್ದರೂ ಹೇಗೋ ಸಮ್ಮತಿಪಟ್ಟನು. ಬಳಿಕ ಮಾಡಲ್ಪಟ್ಟ ವಿವಾಹವಿಶೇಷವುಳ್ಳವನಾಗಿ, ಕೃತಪ್ರಯೋಜನನಾದ ಮಹರ್ಷಿಯಾದ ಸೌಭರಿಯು ಸಕಲಸ್ತ್ರೀಸಮೇತನಾಗಿ ತನ್ನ ಆಶ್ರಮವನೆಯ್ದಿದವನಾದನು.

ಅನಂತರದಲ್ಲಿ ಅಶೇಷಶಿಲ್ಪನಿಪುಣನಾದ ವಿಶ್ವಕರ್ಮನಂ ಮತ್ತೊಬ್ಬ ದೇವನಂ ಹೇಗೋ ಹಾಗೆ ಆಹ್ವಯಿಸಿದವನಾಗಿ,-"ಕೇಳು ವಿಶ್ವಕರ್ಮನೆ ! ಈಸ್ತ್ರೀಯರುಗಳಿಗೆ ಪ್ರತ್ಯೇಕಪ್ರತ್ಯೇಕವಾಗಿ ವಿಕಸಿತವಾದ ಪದ್ಮಸಮೂಹಗಳನುಳ್ಳುದಾಗಿ ಅವ್ಯಕ್ತಮಧುರವಾಗಿ ದನಿಗೆಯ್ಯುತಲಿರುವ ರಾಜಹಂಸ ಕಾರಂಡವ ಮೊದಲಾದ ಪಕ್ಷಿಗಳಿಂ ರಮಣೀಯವಾದ ಜಲಾಶಯಗಳನುಳ್ಳುದಾಗಿ (ಮನೋಹರವಾದ ಉಪವನಗಳನುಳ್ಳುದಾಗಿ) ವಿಸ್ತಾರವಾದ ಬಳ್ಳಿತಾದ ಹಾಸಿಗೆ ಸಹಿತವಾದ ಪ್ರಾಸಾದಗಳಂ ಮಾಡು " ಎಂದು ನೇಮಿಸಿದವನಾದನು. ಪರಮರ್ಷಿಯಾದ ಸೌಭರಿಯು ನೇಮಿಸುತಿರಲಾಗಿ, (ಅಶೇಷಶಿಲ್ಪವಿಶೇಷಾಚಾರ್ಯನಾದ) ವಿಶ್ವಕರ್ಮನು ಹಾಗೆಯೇ ಮಾಡಿ ತೋರಿಸಿದವನಾದನು. ಅನಂತರದಲ್ಲಿ ಮತ್ತೂ ಆಜ್ಞಾಪಿಸಲ್ಪಟ್ಟಂಥವನಾಗಿ ಅವರವರ ಗೃಹಗಳಲ್ಲಿ ಅಕ್ಷಯವಾದ ನಿಧಿಗಳಂ ಮಾಡಿದವನಾದನು. ಅನಂತರದಲ್ಲಿ (ಆ ರಾಜಕುಮಾರಿಯರು) ಅವರವರ ಗೃಹಗಳಲ್ಲಿ ಭಕ್ಷ್ಯಭೋಜ್ಯಲೇಹ್ಯ ಚೋಷ್ಯಾದ್ಯುಪಭೋಗಗಳಿಂದ ಬಂದು ಹೋಗುತಲಿದ್ದ ಭೃತ್ಯವರ್ಗಗಳನ್ನು ಅಹರ್ನಿಶವು ತಮ್ಮತಮ್ಮ ಗೃಹಗಳಲ್ಲಿ ಭೋಜನ ಮಾಡಿಸಿದರು.

ಹೆಣ್ಣುಮಕ್ಕಳಲ್ಲಿ ಸ್ನೇಹವನುಳ್ಳ ಆ ಮಾಂಧಾತರಾಯನು ಬಂದು ಸಮಯದಲ್ಲಿ ಕುಮಾರಿಯರ ನೋಡಬೇಕೆಂಬ ಸ್ನೇಹದಿಂದ ಆಕರ್ಷಿಸಲ್ಪಟ್ಟಹೃದಯವುಳ್ಳವನಾಗಿ,—(ತನ್ನಮಕ್ಕಳು) ದುಃಖವುಳ್ಳವರಾಗಿದ್ದಾರೆಯೋ ಸುಖಿಗಳಾಗಿದ್ದಾರೆಯೋ ಎಂಬ ಆಲೋಚನೆಯಿಂದ ಆ ಋಷಿಯ ಆಶ್ರಮವನೆಯ್ದಿ, ಪ್ರಕಾಶಿಸುತಲಿರ್ದ ಕಿರಣಸಮೂಹಗಳಿಂದ ಅತ್ಯಂತ ಶ್ರೇಷ್ಠವಾಗಿ ಇದ್ದಂಥದುದಾಗಿ ಸ್ಫಟಿಕಮಯವಾದ ಉಪ್ಪರಿಗೆಗಳ ಸಮೂಹದಿಂದ ರಮಣೀಯವಾದ ಉಪವನಗಳಲ್ಲಿ ಸರಸ್ಸುಗಳನು ಕಂಡವನಾದನು. ಮಾಂಧಾತೃಚಕ್ರವರ್ತಿಯು ಒಬ್ಬ ಕುಮಾರಿಯ ಪ್ರಾಸಾದವಂ ಪ್ರವೇಶವಂ ಮಾಡಿ, ಆಮನೆಯಲ್ಲಿರುವ ಕುಮಾರಿಯನ್ನು ಕಂಡು ಆಲಿಂಗಿಸಿ ಕೃತಾಸನಪರಿಗ್ರಹನಾಗಿ ಪ್ರಾದುರ್ಭವಿಸಿದ ಆನಂದಾಶ್ರುದಳುಳ್ಳವನಾಗಿ ಈ

ಮಾತಂ ನುಡಿವವನಾದನು:-"ಕೇಳು ಸಣ್ಣವಳೆ! ನಿನಗೆ ಸುಖವೆ? ಸುಖವಿಲ್ಲವೆ ಹೇಗೆ? ಮಹರ್ಷಿಯಾದ ಸೌಭರಿಯು ಸ್ನೇಹವುಳ್ಳವನೋ ಏನು? ಸಕಲ ಸಮೃದ್ಧಿಯುಂಟೋ ಏನು? [1]ನಮ್ಮ ಮನೆಯ ವಾಸದಹಾಗೆ ಉಂಟೋ ಇಲ್ಲವೋ?[1]" ಎಂದು ಕೇಳುವಂಥ ತಂದೆಯಂ ಕುರಿತು ಕುಮಾರಿಯು ನುಡಿದವಳಾದಳು_"ಕೇಳು ತಂದೆಯೇ! ಈ ಆಶ್ರಮದಲ್ಲಿ ಅತ್ಯಂತ ರಮಣೀಯವಾದ ಪ್ರಾಸಾದವು, (ಅತಿ ಮನೋಜ್ಞವಾದ) ಉದ್ಯಾನವನವು, ಅದರಲ್ಲಿ ಅವ್ಯಕ್ತಮಧುರರವಗಳಾದ ರಾಜಹಂಸ ಕೋಕಿಲ ಮಯೂರ ಸಾರಸ ಕಾರಂಡವ ಮೊದಲಾದ ಪಕ್ಷಿಗಳನುಳ್ಳುದಾಗಿ ವಿಕಸಿತ ಪದ್ಮಗಳಿಗೆ ಆಕರಗಳಾದ ಜಲಾಶಯಂಗಳು, ಮನೋಹರಗಳಾಗಿ ಕ್ರೀಡಾಸ್ಪದಗಳಾಗಿ ಇದ್ದೀತು. ಅಷ್ಟುಮಾತ್ರವೇ ಅಲ್ಲ; ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯ ಲೇಪನ ಮೊದಲಾದ ಭೋಗವಸ್ತುಗಳಿಂದಲೂ ಮೃದುಲಗಳಾದ ಶಯನಾಸನಗಳಿಂದಲೂ ಸಕಲಸಂಪತ್ಸಮೃದ್ಧಿಗಳಿಂದಲೂ ಪರಿಪೂರ್ಣವಾದುದು ಈ ಮಹರ್ಷಿಯ ಗಾರ್ಹಸ್ಥ್ಯಧರ್ಮವು. [2]ಈ ಪ್ರಕಾರದೊಳಿದ್ದ ವಿಷಯದಲ್ಲಿ ಜನ್ಮಭೂಮಿಯು ಆವಳಿಂದ ಸ್ಮರಿಸಲ್ಪಟ್ಟೀತು?[2] ಈ ಮಹರ್ಷಿಯ ಅನುಗ್ರಹದಿಂದ ಬಂದಲ್ಲಿಯೂ ಕಡಮೆಯಿಲ್ಲದೆ ಸಮಸ್ತವೂ ಮಂಗಲಾಸ್ಪದವಾಗಿರುವುವು. [3]ಇಂತಹ ಭೋಗಸಮೃದ್ಧಿಯಲ್ಲಿ ನನಗೆ ದುಃಖಕ್ಕೆ ಕಾರಣವೇನಿದೆ? ಈ ಮಹರ್ಷಿಯು ನನ್ನ ಗೃಹದಿಂದ ಹೊರಡುವುದೇ ಇಲ್ಲ; ಎನ್ನ ಒಡಹುಟ್ಟಿದವರಾದ ಕಡಮೆಯವರ ವಿಷಯದಲ್ಲಿಯೂ ಏಕಪ್ರಕಾರವಾಗಿ

---

ಪಾ—1—ನಮ್ಮ ಮನೆಯ ವಾಸವು ನೆನಪಿಗೆ ಬರುವುದಿಲ್ಲವೆ?

2—ಹೀಗಿದ್ದರೂ ಆವಳಿಂದ ಜನ್ಮಭೂಮಿಯು ಸ್ಮರಿಸಲ್ಪಡದೆ ಇದ್ದೀತು?

3—ಇಂತಹ ಭೋಗಸಮೃದ್ಧಿಯಲ್ಲಿಯೂ ನನಗೊಂದು ದುಃಖಕ್ಕೆ ಕಾರಣವಿದೆ. ಈ ಮಹರ್ಷಿಯು ನನ್ನ ಗೃಹದಿಂದ ಹೊರಡುವುದೇ ಕಾಣೆ. ನನ್ನಲ್ಲಿ ಅತಿ ಪ್ರೇಮದಿಂದ ನನ್ನಲ್ಲಿಯೇ ಯಾವಾಗಲೂ ಇರುವನು; ನನ್ನ ಒಡಹುಟ್ಟಿದವರಲ್ಲಿ ಈ ರೀತಿಯಲ್ಲಿ ಇಲ್ಲ. ಆದ್ದರಿಂದ ಅವರು ದುಃಖಿಗಳಾಗಿರುವರು—

ಈ ಪ್ರಕಾರ 2 ರಿಂದ 4 ರ ವರೆಗೆ ಸಂಸ್ಕೃತ ಮಾತೃಕೆಯ ಪ್ರಕಾರ ಪರಿವರ್ತನವಿರಬೇಕು. ಆದ್ದರಿಂದ ಈ ಕನ್ನಡದ ಗದ್ಯಾನುವಾದಕ್ಕೆ ಮೂಲಪ್ರತಿಯಾದ ಸಂಸ್ಕೃತ ಮಾತೃಕೆಯು ಬೇರೊಂದಾಗಿರಬೇಕೆಂದು ತೋರುತ್ತದೆ. ಕನ್ನಡದ ಮಾತೃಕೆಯ ಪ್ರಕಾರ ರಾಜಕುಮಾರಿಯರಿಗೆ-ಸೌಭರಿಯು ಬೇರೆಬೇರೆ ಶರೀರ

ನಡೆಸಿಕೊಂಡು ಬರುವುದರಿಂದ ನಾವೆಲ್ಲರೂ ಅತ್ಯಂತ ಪ್ರೇಮದಿಂದ ಸುಖಿಗಳಾಗಿ ಇದ್ದೇವೆ" ಎಂದು ನುಡಿದ ಮಾತಂ ಕೇಳಿ,—ಎರಡನೆಯ ಪ್ರಾಸಾದವಂ ಪ್ರವೇಶಿಸಿ, ಅಲ್ಲಿಯ ಕುಮಾರತಿಯನಾಲಿಂಗಿಸಿ ಯೋಗಕ್ಷೇಮವಂ ಕೇಳುವಲ್ಲಿ ಆಯುಕ್ಕನು ಸಕಲ ಭೋಗಂಗಳನು ಅತಿಶಯವಾಗಿ ಹೇಳಿ "'ನನಗೆ ಮಾತ್ರವಲ್ಲ; ಸಮಸ್ತರಿಗೂ ಇದೇಪ್ರಕಾರ'ವೆಂದ' ಮಾತಂ ಕೇಳಿ,—ಮಿಕ್ಕ ಪ್ರಾಸಾದಂಗಳಂ ಪ್ರವೇಶಿಸಿ ಅವರವರ ಯೋಗಕ್ಷೇಮವಂ ಕೇಳಿದಲ್ಲಿ ಸಮಸ್ತರಾದ ಕುಮಾರ್ತಿಯರೂ ಅತಿಶಯ ಭೋಗಸಮೇತವಾಗಿರುವುದಂ ಕಂಡು ಅತಿವಿಸ್ಮಿತನಾಗಿ, (ಪರಿತೋಷ) ನಿರ್ಭರವಿವಶಹೃದಯನಾಗಿ, (ಏಕಾಂತದಲ್ಲಿ ಕುಳಿತಿದ್ದ) ಪರಮರ್ಷಿಯಾದ ಸೌಭರಿಯ ಸಮೀಪವನೆಯ್ದಿ, ಆತನಿಂದ ಪೂಜಿಸಲ್ಪಟ್ಟವನಾಗಿ, ಈ ಮಾತ ನುಡಿದನು:- "ಕೇಳು ಸೌಭರಿಮುನಿಯೇ! ಈ ನಿನ್ನ ತಪಸ್ಸಿದ್ಧಿಯು ಅತ್ಯಾಶ್ಚರ್ಯಕರವಾದುದು; ಈ ವಿಚಿತ್ರತರವಾದ ತಪಸ್ಸು ಎಲ್ಲಿಯೂ ಕಂಡುದಿಲ್ಲ; ನೀನು ಮಹಾಮಹಿಮೆಯುಳ್ಳವನು." ಎಂದು ಋಷಿಯಂ ಬಹುಸತ್ಕರಿಸಿ, ಆತನೊಡನೆ ಕೆಲವು ಕಾಲವಿರ್ದು, ಸಕಲಭೋಗಂಗಳಂ ಭುಜಿಸಿದವನಾಗಿ, ಆಮೇಲೆ ಆತನನುಜ್ಞೆಯಿಂ ತನ್ನ ಪಟ್ಟಣವಂ ಕುರಿತೈದಿದನು. ಈ ಪ್ರಕಾರದಲ್ಲಿ ಸಕಲ ಭೋಗಸಮೃದ್ಧಿಯಿಂದ ಕಾಲಾತಿಕ್ರಮವಂ ಮಾಡುವ ಮಹರ್ಷಿಗೆ ನೂರೈವತ್ತು ಮಂದಿ ಕುಮಾರರಾದರು.

ಕೇಳು ಮೈತ್ರೇಯ, ಈ ಪ್ರಕಾರದಲ್ಲಿ ಸೌಭರಿಋಷಿಯು ದಿನದಿನದಲ್ಲಿಯೂ ಅತಿಶಯವಾದ ಸ್ನೇಹಪ್ರವಾಹದಿಂ ಮೋಹಿಸಲ್ಪಟ್ಟ ಹೃದಯವುಳ್ಳವನಾಗಿ ಈ ಪ್ರಕಾರವಾಗಿ ಬಯಸುತಲಿದ್ದನು. "ಈ ನನ್ನ ಮಕ್ಕಳು ತೊದಲ್ನುಡಿಯಾಗಿ ಮಾತನಾಡಿಯಾರೆ? ಇವರು ಕಾಲುಗಳಿಂದ ನಡೆದಾಡುವುದಂ ಆವಾಗ ಕಂಡೇನು! ಇನ್ನೂ ಸಣ್ಣವರು ಯೌವನವುಳ್ಳವರಾಗಿ ಇರುವುದನು ಆವಾಗ ನೋಡೇನು! ಈ ಕುಮಾರರು ಕೃತವಿವಾಹರಾಗಿ

---

ಗಳನ್ನು ಪರಿಗ್ರಹಿಸಿ ಇತರರಲ್ಲಿಯೂ ಇರುತ್ತಿರುವ ಸಂಗತಿಯು ತಿಳಿದಿತ್ತೆಂದೂ, ಸಂಸ್ಕೃತ ಮಾತೃಕೆಯ ಪ್ರಕಾರ ಅದು ತಿಳಿದಿರಲಿಲ್ಲವೆಂಬದಾಗಿಯೂ ಬೇರೆಬೇರೆ ಅಭಿಪ್ರಾಯಗಳಾಗುತ್ತವೆ.

4—3 ನೆಯ ಪಾಠಾಂತರದ ಹಾಗೆಯೇ ಪರಿವರ್ತನವಿರಬೇಕು.

ಸ್ತ್ರೀಸಮೇತರಾಗಿರುವುದನು ಆವಾಗ ನೋಡೇನು! ಇವರುಗಳಿಗೆ ಪುತ್ರರಾಗಿ ಪೌತ್ರಪರಂಪರೆಗಳನು ಆವಾಗ ನೋಡೇನು! (ಈ ಪೌತ್ರರು ಪುತ್ರವಂತರಾಗುವುದನ್ನು ಆವಾಗ ನೋಡೇನು!)" ಎಂದು ಈ ಪ್ರಕಾರ ಪ್ರತಿದಿನದಲ್ಲಿಯೂ ಕಾಲಸಂಪತ್ತಿಯಿಂದ ಉತ್ತರೋತ್ತರ ಬಯಕೆಗೆ ಕಾರಣಂಗಳಾದ ಮನೋರಥ ಪರಂಪರೆಗಳನು ಐದಿ, (ಬಳಿಕ ಕೆಲವುಕಾಲ ಕಳೆದ ನಂತರ) ಋಷಿಯಾದ ಕಾರಣ (ತನ್ನ ಮನದಲ್ಲಿ) "ಅಕಟಕಟಾ! ಮೋಹಪ್ರವಾಹವು ಈಪ್ರಕಾರ ಅವಧಿಯಿಲ್ಲದುದು. ಹತ್ತುಸಾವಿರಲಕ್ಷ ವರ್ಷಕಾಲವಾದರೂ ಇದಕ್ಕೆ ಸಮಾಪ್ತಿಯಿಲ್ಲ; ಒಂದು ಪೂರ್ತಿಯಾಗುತಲೆ ಮತ್ತೊಂದು ಬಯಕೆ; ಅದು ಪೂರ್ತಿಯಾದಲ್ಲಿ ಮತ್ತೊಂದು, ಈ ಮನೋರಥಪರಂಪರೆಗಳಿಗೆ ಸಮಾಪ್ತಿಯಿಲ್ಲ, ನಾನು ಈ ಮಕ್ಕಳ ನೋಡಿ ಏನೇನ ಬಯಸಿದೆನೋ ಅಷ್ಟನ್ನೂ ಕಂಡೆನು; ಕಾಲ್ನಡೆಯು ನಡೆದರು ಪ್ರಾಯದವರಾದರು. ಅವರುಗಳಿಗೆ ಮಕ್ಕಳೂ ಆದರು; ಅದನ್ನೂ ನೋಡಿದೆನು. ಆ ಮಕ್ಕಳುಗಳಿಗೆ ಮಕ್ಕಳನು ಬಯಸುತ್ತಲಿದ್ದೆನು; ಆ ಪೌತ್ರರಿಗೆ ಪುತ್ರರಂ ಬಯಸುತಲಿದ್ದೆನು. ಆಮೇಲೆ ಮತ್ತೊಂದುಬಯಕೆ. ಅದು ಕೊನೆಗಂಡಮೇಲೆ ಮತ್ತೊಂದು ಮನೋರಥೋತ್ಪತ್ತಿ; ಅದಾಗುವುದೂ ಮತ್ತೊಂದು ಮನೋರಥವು; ಸಾಕು ಸಿದ್ಧೀತು? ಮರಣಪರ್ಯಂತವೂ ಮನೋರಥಂಗಳಿಗೆ ಕಡೆಯಿಲ್ಲ. ಹೀಗೆ ಇನ್ನಾವ ಪುರುಷಂಗೆ ಮನೋರಥಾಸಕ್ತಿಯೋ ಆಪುರುಷನು ಪರಮಾರ್ಥದಲ್ಲಿ ಸಂಗವುಳ್ಳವನಾಗಲರಿಯನು. (ನನ್ನ ಸಮಾಧಿಯು ಮತ್ಸ್ಯಸಂಗದಿಂದ ಕೂಡಲೆ) ನಷ್ಟವಾಯಿತು. ಈ ಪರಿಗ್ರಹವು ಸಂಗದೋಷಜನ್ಯವಾದುದು. ಆ ಪರಿಗ್ರಹದಿಂದ ಮಹತ್ತಾದ ವಿಪತ್ಪರಂಪರೆಯು ಹುಟ್ಟಿತು. ಈ ವ್ಯಾಕುಲವನೇನು ಹೇಳತಕ್ಕುದು? [1]ಒಂದು ಶರೀರದ ದೆಸೆಯಿಂದ ನೂರೈ ಮತ್ತು ಸಂಖ್ಯಾಕವಾದ ಕುಮಾರರು ಜನಿಸಿದರು. ಈ ರಾಜಕುಮಾರಿಯರ

ಪಾ—1—ಈ ರಾಜಕುಮಾರಿಯರ ಪರಿಗ್ರಹದಿಂದ ನೂರೈವತ್ತು ಮಕ್ಕಳು ಜನಿಸಿದರು. ಇದೊಂದು ದುಃಖ. ಆ ಮಕ್ಕಳ ಪತ್ನೀಪರಿಗ್ರಹದಿಂದ ಪುತ್ರಪೌತ್ರರು ಹುಟ್ಟಿ ಆ ದುಃಖವು ಅಭಿವೃದ್ಧವಾಯಿತು. ಆ ಮಕ್ಕಳಿಂದಲೂ ಆ ಮಕ್ಕಳ ಮಕ್ಕಳಿಂದಲೂ ಪರಿಗ್ರಹದ ಮೂಲಕವಾಗಿ ಆದುಃಖವು ಮತ್ತಷ್ಟು ಹೆಚ್ಚಿತು. ಆದ್ದರಿಂದ ಪರಿಗ್ರಹವು ದುಃಖಕ್ಕೆ ಕಾರಣವು—ಎಂಬದಾಗಿ ಸಂಸ್ಕೃತ ಮಾತೃಕೆಯ ಪ್ರಕಾರ ಈ ಭಾಗವಿರಬೇಕೆಂದು ತೋರುತ್ತದೆ.

ಪರಿಗ್ರಹದಿಂದ ಅವರಲ್ಲಿ ಜನಿಸಿದ ಅನೇಕರಾದ ಪುತ್ರಪೌತ್ರ ಪ್ರಪೌತ್ರರುಗಳಿಂದ ಬಹಳವಾಗಿ ವರ್ಧಿಸಲ್ಪಟ್ಟಿತು. ಈ ಮಕ್ಕಳಿಂದಲೂ, ಅವರ ಮಕ್ಕಳಿಂದಲೂ, ಆ ಮಕ್ಕಳ ಮಕ್ಕಳಿಂದಲೂ ಸಂಪೂರ್ಣವಾಯಿತು.[1] ಇವೆಲ್ಲವೂ ಪರಿಗ್ರಹದಿಂದುಂಟಾಯಿತು. ಆದ್ದರಿಂದ ಪರಿಗ್ರಹವು ಅತ್ಯಂತ ದುಃಖಕ್ಕೆ ಕಾರಣವಾದಂಥದು. ಇವರಲ್ಲಿ ತನಗುಂಟಾದ ಮಮತೆಯು ಪರಿಗ್ರಹನಿಮಿತ್ತವಾದಂಥದು. ಅನೇಕವಾದ ತಪಸ್ಸೆಲ್ಲವೂ ಈ ಜಲಜಂತುವಾದ ಮತ್ಸ್ಯದ ಸಮೃದ್ಧಿಯಿಂದ ಜೀರ್ಣವಾಯಿತು. ಈ ವ್ಯಾಮೋಹವು ತಪಸ್ಸಿಗೆ ವಿಘ್ನವಾಯಿತು. ಇವರ ದುಸ್ಸಂಗದಿಂದಲೇ ತಾನು ಮಕ್ಕಳ ಪರಂಪರೆಗಳಲ್ಲಿ ಮೋಹಿತನಾದೆನು. ಸಂಸಾರಸಂಗರಾಹಿತ್ಯವೆ ಯತಿಗಳಿಗೆ ಮೋಕ್ಷಮಾರ್ಗವು. ಸಂಗದಿಂದಲೇ ಸಮಸ್ತ ದೋಷಂಗಳು ಹುಟ್ಟುತಿದ್ದಾವು. ಆರೂಢಯೋಗವುಳ್ಳವನಾದೊಡಂ ಸಂಗದಿಂದ ಯೋಗಭ್ರಷ್ಟನಾಗಿ ಮತ್ತಂ ಸಂಸಾರದೊಳು ಬೀಳುತ್ತಲಿದ್ದಾನು. ಅಲ್ಪವಾದ ಯೋಗಸಿದ್ಧಿಯುಳ್ಳವನಂ ಕೇಳುವುದೇನು ? ಇನ್ನು ಈ ಸಂಸಾರಪರಿಗ್ರಹಗ್ರಾಹದಿಂದ ಗ್ರಹಿಸಲ್ಪಟ್ಟ ಬುದ್ಧಿಯನುಳ್ಳ ನಾನು ಈ ಪರಿಗ್ರಹವಂ ಬಿಟ್ಟು ಹೇಗೆ ತಪಸ್ಸಂ ಮಾಡಿದರೆ ಕ್ಷೀಣದೋಷನಾಗಿ ಮನುಷ್ಯನ ದುಃಖಗಳಿಂದ ಪೀಡಿಸಲ್ಪಡೆನು ; ಹಾಗೆ ಸಮಸ್ತ ಪ್ರಪಂಚಕ್ಕೂ ಸೃಷ್ಟಿನಿಯಾಮಕನಾಗಿ, ವಾಙ್ಮನಸಾತೀತನಾದ ಅಣುವಾದ ಜೀವಂಗೂ ಅಂತರ್ಯಾಮಿತ್ವದಿಂದ ಪರಮಾಣುವಾದ, ಅಷ್ಟುಮಾತ್ರವಲ್ಲ, ವಿರಾಡ್ರೂಪದಿಂದ ಅತಿಪ್ರಮಾಣವುಳ್ಳವನಾಗಿ, ಯುಗಭೇದಗಳಿಂ ಸಿತಾಸಿತರೂಪವುಳ್ಳವನಾಗಿ, ಅಥವಾ ಬದ್ಧಮುಕ್ತವ್ಯವಸ್ಥಾಪಕನಾಗಿಯಾದರೂ ಇರುವಂಥವನಾಗಿ, ಬ್ರಹ್ಮಾದಿಗಳಿಗೂ ನಿಯಾಮಕನಾಗಿ, ಸರ್ವವ್ಯಾಪಕನಾದ ವಿಷ್ಣುವನ್ನು ಆರಾಧನೆಯಂ ಮಾಡೇನು. ಮತ್ತು ಸಮಸ್ತ ಜ್ಞಾನಶಕ್ತ್ಯಾದಿ ಗುಣಪೂರ್ತಿಯುಳ್ಳವನಾಗಿ ಸರ್ವಶರೀರಕನಾಗಿ ಅವ್ಯಕ್ತವಾದ ಶರೀರವುಳ್ಳವನಾಗಿ ತ್ರಿವಿಧಪರಿಚ್ಛೇದರಹಿತನಾದ ಅನಂತನಲ್ಲಿ ನನ್ನ ಮನಸ್ಸು ಅಚಂಚಲವಾಗಿ ನಿಂತು ಅದರಿಂದ ನಿರಸ್ತದೋಷವುಳ್ಳವನಾಗಿ, ಮತ್ತೆ ಸಂಸಾರದಲ್ಲಿ ಜನನಾದಿಗಳಿಲ್ಲದವನಾದೇನು. ಇನ್ನು ಸಮಸ್ತ ಚಿದಚಿದ್ವಿಲಕ್ಷಣನಾಗಿ, ದೇಶಕಾಲವಸ್ತ್ವಪರಿಚ್ಛೇದ್ಯನಾಗಿ, ಆದಿಮಧ್ಯಾಂತರಹಿತನಾಗಿ, ಯಾವ ಪರಮಾತ್ಮನಿಂದ ಹೊರತಾಗಿ ಕಿಂಚಿತ್ತಾದರೂ ಇಲ್ಲ

ದವನಾಗಿ ಗುರುಗಳಿಗೂ ಗುರುವಾಗಿ ಇದ್ದಂಥವನಂ ಆಶ್ರಯುವಂ ಮಾಡಿ, ತಪ್ಪೋನಿಷ್ಟನಾದೇನು !" ಎಂದು. ಈ ಪ್ರಕಾರದಲ್ಲಿ ಸೌಭರಿಮುನೀಶ್ವರನು ಸಂಸಾರದಲ್ಲಿ ಹೇಯುಬುದ್ಧಿಯುಂ ಮಾಡಿ, ಸರ್ವಸಂಗಪರಿತ್ಯಾಗವಂ ಮಾಡಿ, ಪರಮಾತ್ಮನ ಆಶ್ರಯುವಂ ಮಾಡಿದನು. *

ಎಂಬಲ್ಲಿಗೆ ಶ್ರೀ ಪರಾಶರರು ಮೈತ್ರೇಯುಂಗೆ ನಿರೂಪಿಸಿದ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದೊಳು ದ್ವಿತೀಯಾಧ್ಯಾಯುಂ ಸಂಪೂರ್ಣಂ.

## ಮೂಱನೆಯು ಅಧ್ಯಾಯುಂ

ಕೇಳು ಮೈತ್ರೇಯು! ಈ ಪ್ರಕಾರದಲ್ಲಿ ಸೌಭರಿಯುು ತನ್ನ ಮನಸ್ಸಿನಲ್ಲಿ ತಾನೇ ದೃಢವಿಟ್ಟು ತನಗುಂಟಾದ ಪುತ್ರ, ಗೃಹ, ಆಸನ, ಶಯುನ, ಭೂಷಣ, ವಸ್ತ್ರಾದಿ ಸಮಸ್ತವಸ್ತುಗಳಂ ಬಿಟ್ಟು ಸಕಲ ಭಾರ್ಯಾಸಮೇತನಾಗಿ ವನಪ್ರವೇಶಂಗೆಯ್ದು ಆವನದೊಳು ವೈಖಾನಸಮಾರ್ಗವನನುಸರಿಸಿ ಪ್ರತಿದಿನದಲ್ಲಿಯೂ ಸಮಸ್ತ ಕ್ರಿಯಾಕಲಾಪಂಗಳಂ ಮಾಡುವುದಱಿಂದ ಕ್ಷಪಿತಸಮಸ್ತಪಾಪನಾಗಿ ಕ್ಷೀಣವಾದ ಪುತ್ರದಾರಾದಿ ಮನೋರಥವುಳ್ಳವನಾಗಿ ತನ್ನ ಆತ್ಮನಲ್ಲಿ ಅಗ್ನಿಸಮಾರೋಪಣವಂ ಮಾಡಿ ಕ್ರಿಯಾಕಲಾಪಂಗಳಂ ಸಾಕುಮಾಡಿ ಸನ್ಯಾಸಾಶ್ರಮವನಾಶ್ರಯಿಸಿದವನಾದನು. ಕೇಳು ಮೈತ್ರೇಯು! ಸಮಸ್ತ ಕರ್ಮಕಲಾಪಫಲಗಳಿಂದ ಉಂಟಾದ ಜನ್ಮಮರಣಾದಿಗಳನು ಭಗವದಾರಾಧನವೆಂದೇ ತಿಳಿದು ಆತನಲ್ಲಿ ಭರಸಮರ್ಪಣೆಯುಂ ಮಾಡಿ ಮಾನುಷಾನಂದಮಾದಿಯಾಗಿ ಚತುರ್ಮುಖಾನಂದಾದಿಗಳಿಗೂ ಶ್ರೇಷ್ಠವಾದ ಬ್ರಹ್ಮಾನಂದಾತ್ಮಕವಾದ ಅಚ್ಯುತಪದವನ್ನು ಐದಿದನು.

ಕೇಳು ಮೈತ್ರೇಯು ! ಈ ಕಥಾವೃತ್ತಾಂತವು ಮಾಂಧಾತೃಚಕ್ರವರ್ತಿಯು ಕುಮಾರ್ತಿಯುರ ಸಂಬಂಧ ಸೌಭರಿಋಷಿಗೆ ಪ್ರಾಪ್ತವಾದ

---

* ಈ ಗದ್ಯಾನುವಾದದ ಮೂಲಪ್ರತಿಯುಲ್ಲಿ ಇಲ್ಲಿಗೆ ಅಧ್ಯಾಯು ಪೂರ್ತಿಮಾಡಿದೆ. ಸಂಸ್ಕೃತ ಮಾತೃಕೆಯುಲ್ಲಿಯಾದರೊ ಮುಂದಣ ಅಧ್ಯಾಯುದ ೨೨ ನೇ ಪುಟದ ೨ ನೆಯು ಪಙ್ಕ್ತಿಯು ಕೊನೆಯುಲ್ಲಿ ಪೂರ್ತಿಯಾಗಿದೆ.

ವೃತ್ತಾಂತವು ನಿನಗೆ ಹೇಳಲ್ಪಟ್ಟಿತು. ಇನ್ನು ಆವ ಪುಣ್ಯಪುರುಷನು ಸೌಭರಿ ಚರಿತವನು ಸ್ಮರಿಸುತಲಿದ್ದಾನು, (ತಾನು ವಾಚಿಸುವನು) ವಾಚಿಸುತಲಿದ್ದಾನು; ಕೇಳುತಲಿದ್ದಾನು, (ಕೇಳಿಸುತಲಿದ್ದಾನು) ಧರಿಸುತಲಿದ್ದಾನು, ಬರೆದು ಬರೆಯಿಸುತಲಿದ್ದಾನು; (ಕಲಿತು ಕಲಿಸುತಲಿದ್ದಾನು, ಉಪದೇಶಿಸುತಲಿದ್ದಾನು) ಆತನಿಗೆ ಎಂಟು ಜನ್ಮ ಪರ್ಯಂತರದಲ್ಲಿ ವಿರಕ್ತಿಯಿಂದ ಅಧರ್ಮವಾಸನೆಯಿಲ್ಲದೆ ಸಮಸ್ತ ಹೇಯಗಳಲ್ಲಿಯೂ ಮಮತಾಬುದ್ಧಿಯಿಲ್ಲದೆ, ಉಪಶಾಂತನಾಗಿ ಮೋಕ್ಷಪದವನೆಯ್ದುವನು *

ಇನ್ನು ಮಾಂಧಾತೃವಿನ ವಂಶಪರಂಪರೆಯಂ ವಿಸ್ತರಿಸುವೆನು, ಕೇಳು. ಮಾಂಧಾತೃವಿನ ಪುತ್ರನು ಅಂಬರೀಷನು ಹಾರಾಯನು. ಆತನಿಂದ ಯುವನಾಶ್ವನು; ಯುವನಾಶ್ವನ ಕುಮಾರನು ಹರೀತನು. ಹರಿತನ ಕುಮಾರರಾದ (ಹಾರೀತರೇ) ಅಂಗಿರಸ್ಸುಗಳು.

ಕೇಳು ಮೈತ್ರೇಯ, ರಸಾತಲದಲ್ಲಿ ಮೌನೆಯರೆಂಬ ಆರು ಕೋಟಿಸಂಖ್ಯಾಕರಾದ ಗಂಧರ್ವರಾದರು. ರಸಾತಲವಾಸಿಗಳಾದ ಆರು ಕೋಟಿ ಗಂಧರ್ವರುಗಳಿಂದ ರಸಾತಲಾಧಿಪರಾದ ಸಮಸ್ತನಾಗಕುಲಗಳೂ ಅಪಹರಿಸಲ್ಪಟ್ಟ ಧನರತ್ನಾಧಿಪತ್ಯವುಳ್ಳವರಾಗಿ ಮಾಡಲ್ಪಟ್ಟರು. ಗಂಧರ್ವವೀರ್ಯಾವಧೂತರಾದ ಆ ನಾಗಕುಲಂಗಳಿಂದ ಚರಾಚರಗುರುವಾಗಿ ಷಡ್ಗುಣಪೂರ್ಣನಾದ ಕ್ಷೀರಾಬ್ಧಿಶಯನನಾದ ಪುಂಡರೀಕಾಕ್ಷನು ಅವರ ಸ್ತೋತ್ರಶ್ರವಣದಿಂದ ಯೋಗನಿದ್ರಾಂತದಲ್ಲಿ ತೆರೆಯಲ್ಪಟ್ಟ ಕಣ್ಣುಳ್ಳವನಾಗಿ ಎದ್ದು ಅವರುಗಳಿಂದ ನಮಸ್ಕರಿಸಲ್ಪಟ್ಟು ವಿಜ್ಞಾಪನವಂ ಮಾಡಲ್ಪಟ್ಟನು. "ಸ್ವಾಮೀ! ನಮಗೆ ಈ ಗಂಧರ್ವರದೆಸೆಯಿಂದ ಉಂಟಾದ ಭಯವನ್ನು ಉಪಶಮನವಂ ಮಾಡತಕ್ಕದು" ಎಂದು ಪ್ರಾರ್ಥನೆಯಂ ಮಾಡಲು; ಪುರಾಣಪುರುಷನಾದ ವಿಷ್ಣುವು ನಾಗಾಧಿಪರಂ ಕುರಿತು ಈ ಮಾತ ನುಡಿದನು:— "ನಾಗಾಧಿಪತಿಗಳಿರಾ! ಕುಮಾರನಾದ ಯುವನಾಶ್ವಕುಮಾರನು ಪುರುಕುತ್ಸನೆಂಬಾತನು. ಆತನ ಶರೀರವಂ ಪ್ರವೇಶಮಾಡಿ ಆ ದುಷ್ಟ ಗಂಧರ್ವರಂ ಉಪಶಮನಮಾಡುವೆನು" ಎಂಬ ಭಗವದ್ವಾಕ್ಯವಂ ಕೇಳಿ, ನಮಸ್ಕಾರವಂ ಮಾಡಿ, ನಾಗಲೋಕವನ್ನೈದಿ, ನಾಗಾಧಿಪತಿಗಳು ನರ್ಮದೆಯೆಂಬಾಯಕ್ಕನನ್ನು ಪುರುಕುತ್ಸನ ನಯನದಲ್ಲಿ ಪ್ರೇರಿಸಿದವರಾದರು. ಆನರ್ಮದೆಯು

ಪುರುಕುತ್ಸಮಹಾರಾಯನಂ ರಸಾತಲಪ್ರವೇಶವಂ ಮಾಡಿಸಿದುದರಿಂದ ಪುರುಕುತ್ಸರಾಯನು ಭಗವತ್ತೇಜಸ್ಸಿನಿಂದ ಆಪ್ಯಾಯಿತವಾದ ಪರಾಕ್ರಮವುಳ್ಳವನಾಗಿ ಸಕಲ ಗಂಧರ್ವರನು ಯುದ್ಧಮುಖದಲ್ಲಿ ಸಂಹರಿಸಿದವನಾಗಿ ತನ್ನ ಪಟ್ಟಣವಂ ಎಂದಿನಹಾಗೆ ಪ್ರವೇಶಮಾಡಿದನು. ಆಸಮಯದಲ್ಲಿ ಸಕಲ ಪನ್ನಗಪತಿಗಳು ನರ್ಮದೆಗೋಸ್ಕರ ವರಪ್ರದಾನವಂ ಮಾಡಿದರು. "ಕೇಳು ನರ್ಮದೆಯೇ! ಲೋಕದೊಳಾವನನು ಈ ಕಥಾವೃತ್ತಾಂತದೊಡನೆ ನಿನ್ನ ನಾಮವಂ ಸ್ಮರಣೆಮಾಡುತಲಿದ್ದಾನು, ಆತಂಗೆ ಸರ್ಪವಿಷಭಯವು ಆಗದೆ ಇರಲಿ ;

[ಶ್ಲೋ॥ ನರ್ಮದಾಯೈನಮಃ ಪ್ರಾತಃ ನರ್ಮದಾಯೈ ನಮೋ ನಿಶಿ ।
ನಮೋಸ್ತು ನರ್ಮದೇ ತುಭ್ಯಂ ತ್ರಾಹಿ ಮಾಂ ವಿಷಸರ್ಪತಃ ॥]

ಎಂಬ ಈ ಪೂರ್ವೋಕ್ತಶ್ಲೋಕವಂ ಪಠನಮಾಡಿದಲ್ಲಿ ಅಹೋರಾತ್ರದಲ್ಲಿಯೂ ಅಂಧಕಾರಪ್ರವೇಶದಲ್ಲಿಯೂ ಸರ್ಪಗಳಿಂದ ಕಚ್ಚಲ್ಪಡನು. ಭೋಜನಸಮಯದಲ್ಲಿ ಪಠನಮಾಡಿದಲ್ಲಿ ವಿಷಭಕ್ಷಣವು ಜೀರ್ಣವಾಗುತಲಿದ್ದೀತೆಂದು ಈಪ್ರಕಾರದಲ್ಲಿ ನರ್ಮದಾದೇವಿಗೆ ವರದಾನವಂ ಮಾಡಿ, ಪುರುಕುತ್ಸಮಹಾರಾಯನಿಗೂ ಒಂದು ವರವಂ ಕೊಟ್ಟರು. "ಕೇಳು ಪುರುಕುತ್ಸರಾಯನೆ! ನಿನ್ನಲ್ಲಿ ಸಂತಾನವಿಚ್ಛೇದವಿಲ್ಲದೆ ಇರಲಿ!" ಎಂದು ನರ್ಮದೆಯನಾತಂಗೆ ಸ್ತ್ರೀಯಾಗಿ ಮಾಡಿ ಉರಗಪತಿಗಳು ವರವಂಕೊಟ್ಟರು. ಆ ವರದಿಂ ನರ್ಮದೆಯಲ್ಲಿ ಪುರುಕುತ್ಸನಿಗೆ ತ್ರಸದಸ್ಯುವು ಜನಿಸಿದನು. ಆತಂಗೆ ಅನರಣ್ಯನು. ಅನರಣ್ಯನಂ ರಾವಣನು ದಿಗ್ವಿಜಯದಲ್ಲಿ ಕೊಂದನು. ಆತನಿಂದ ಪೃಷದಶ್ವನು, ಆತನಿಂದ ಹರ್ಯಶ್ವನು. ಆತನಿಂದ ಹಸ್ತನು. ಆತನಿಂದ ವಸುಮಂತನು, ಆತಂಗೆ ತ್ರಿಧನ್ವನು, ಆತನ ಪುತ್ರನು ತ್ರ್ಯಯಾರುಣಿಯು ಅವನಿಂದ ಸತ್ಯವ್ರತನು. ಆತನು ತ್ರಿಶಂಕುವೆಂಬ ಹೆಸರಂ ಪಡೆದನು. ಆತನು ಶಾಪದಿಂದ ಚಂಡಾಲತ್ವವಂ ಪಡೆದನು. ಆಚಂಡಾಲತ್ವಪರಿಹಾರಾರ್ಥವಾಗಿ ದ್ವಾದಶವರ್ಷಕ್ಷಾಮದಲ್ಲಿ ಗಂಗಾತೀರದಲ್ಲಿ ವಟವೃಕ್ಷದ ಕೆಳಗೆ ವಿಶ್ವಾಮಿತ್ರನ ಕುಟುಂಬರಕ್ಷಣಾರ್ಥವಾಗಿ ಮೃಗಮಾಂಸವಂ ಪ್ರತಿದಿನದಲ್ಲಿಯೂ ಸಂಪಾದಿಸಿಕೊಟ್ಟನಾದಕಾರಣ ಸಂತುಷ್ಟನಾದ ವಿಶ್ವಾಮಿತ್ರನಿಂದ ಸಶರೀರಸ್ವರ್ಗಾರೋಹಣ ಮಾಡಲ್ಪಟ್ಟನು. ತ್ರಿಶಂಕುವಿನಿಂದ

ಭೋಜ ಪಾರದ ಪಹ್ಲವಾದಿಗಳು ಕೊಲ್ಲಲ್ಪಡುವ ಸಮಯದಲ್ಲಿ-ಸಗರನ ಕುಲಗುರುವಾದ ವಸಿಷ್ಠಮುನಿಯು ಅವರೆಲ್ಲ ಮೊಱೆಹೊಕ್ಕು "ತ್ರಾಹಿ" ಎಂದುದಱಿಂದ, ಆವಸಿಷ್ಠನು ಇವರಂ ಜೀವನ್ಮೃತರಾಗಿ ಮಾಡಿ, ಸಗರನಂ ಕುಱಿತು "ವತ್ಸ ವತ್ಸ, ಈ ಜೀವನ್ಮೃತರಾಗಿ ನನ್ನ ಶರಣವಂ ಹೊಂದಿದ ಇವರುಗಳ ವಧೆಯುಂ ಮಾಡತಕ್ಕುದಲ್ಲ. ಇವರು ನನ್ನಿಂದಲೇ ನಿನ್ನ ಪ್ರತಿಜ್ಞಾಪರಿಪಾಲನೆಗೋಸ್ಕರ ದ್ವಿಜಸಂಗದಿಂದ ಪರಿತ್ಯಾಗವನು ನಿಜಧರ್ಮವಾದ ಕ್ಷಾತ್ರಧರ್ಮದ ಪರಿತ್ಯಾಗವನೂ ಸಹ ಮಾಡಿಸಲ್ಪಟ್ಟರು" ಎನ್ನಲಾಗಿ ; ಕೇಳು ಮೈತ್ರೇಯ ! ಆಸಗರನು ಗುರುವಾಕ್ಯವನಂಗೀಕರಿಸಿ ಅವರ ಪೂರ್ವವೇಷಗಳಂ ಬಿಡಿಸಿ ವೇಷಾಂತರವಂ ಮಾಡಿಸಿದನಾದಕಾರಣ-ಅವರಲ್ಲಿ ತಲೆಬೋಳಾಗಿ ಯವನರನು, ಅರ್ಧಬೋಳಾಗಿ ಶಕರನು, ಕೆದಱಿದ ತಲೆಯಾಗಿ ಪಾರದರನು,-ಗಡ್ಡಮೀಸೆಗಳ ತಿದ್ದದ ಹಾಗೆ ಪಹ್ಲವರನು, ಅಧ್ಯಯನ ಯಾಗ ಅಗ್ನಿಹೋತ್ರ ಸ್ವಾಹಾಸ್ವಧಾವಷಟ್ಕಾರವರ್ಜಿತರಾಗಿ ಮಿಕ್ಕವರನು ಮಾಡಿದನಾದಕಾರಣ, ಅವರೆಲ್ಲರೂ ಆತ್ಮಧರ್ಮಪರಿತ್ಯಾಗವಾದುದಱಿಂದ ಬ್ರಾಹ್ಮಣರಿಂದ ಪರಿತ್ಯಾಗವಂ ಮಾಡಲ್ಪಟ್ಟರು. ಎಲ್ಲರೂ ಮ್ಲೇಂಛತ್ವವನೆಯ್ದಿದರು. ಆಮೇಲೆ ಸಗರಚಕ್ರವರ್ತಿಯು ತನ್ನ ಸಂಸ್ಥಾನವನೆಯ್ದಿ ಅಮೋಘವಾದ ಛತ್ರವುಳ್ಳುದಱಿಂದ ಸಪ್ತದ್ವೀಪವತಿಯಾದ ಭೂಮಂಡಲವಂ ಚೆನ್ನಾಗಿ ಪರಿಪಾಲನೆಮಾಡಿದನು.

ಎಂಬ ಕಥಾವೃತ್ತಾಂತವಂ ಶ್ರೀ ಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ

ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಮೂಱನೆಯ ಅಧ್ಯಾಯಂ ಸಮಾಪ್ತಂ.

## ನಾಲ್ಕನೆಯ ಅಧ್ಯಾಯಂ.

ಕೇಳು ಮೈತ್ರೇಯ ! ಕಶ್ಯಪನ ಕುಮಾರ್ತಿ ಸುಮತಿಯೂ ವಿದರ್ಭರಾಯನ ಕುಮಾರ್ತಿ ಕೇಶಿನಿಯೆಂಬವಳೂ ಸಗರಚಕ್ರವರ್ತಿಗೆ ಪತ್ನಿಯರಾದರು. ಅವರಿಬ್ಬರಿಂದಲೂ ಸಂತಾನಾರ್ಥವಾಗಿ ಪೂರ್ವ ಋಷೀಶ್ವರನು

ಶುಶ್ರೂಷೆಮಾಡಲ್ಪಟ್ಟವನಾದ ಕಾರಣ ವರವಂ ಕೊಟ್ಟನು.—"ಕೇಳಿ, ಸ್ತ್ರೀಯರುಗಳಿರಾ ! ನೀವು ಮಾಡಿದ ಶುಶ್ರೂಷೆಯಿಂದ ಪ್ರಸನ್ನನಾದೆನು. ನಿಮ್ಮಿಬ್ಬರೊಳಗೊಬ್ಬಳು ವಂಶಕರನಾದ ಓರ್ವ ಪುತ್ರನಂ ಪಡೆದಾಳು. ಮತ್ತೊಬ್ಬಳು ಅಱುವತ್ತು ಸಾಸಿರ ಮಂದಿ ಪುತ್ರರಂ ಪಡೆದಾಳು ಒಬ್ಬ ಪುತ್ರನು ಆರಿಗೆ ಬೇಕೋ, ಅಱುವತ್ತು ಸಾಸಿರ ಪುತ್ರರು ಆರಿಗೆ ಬೇಕೋ ವರವಂ ಕೇಳಿ" ಎನ್ನಲಾಗಿ; ಸ್ವಲ್ಪ ಕಾಲದಲ್ಲಿಯೇ ವಿದರ್ಭರಾಯನ ಕುಮಾರ್ತಿಯಾದ ಕೇಶಿನಿಯು ಒಬ್ಬ ಪುತ್ರನಂ ಬೇಡಿದಳು. ಅದುಕಾರಣ ಅಸಮಂಜಸನನ್ನು ಪಡೆದಳು. ಇನ್ನು ಕಶ್ಯಪ ಕುಮಾರ್ತಿಯಾದ ಸುಮತಿಯು ಅಱುವತ್ತು ಸಾಸಿರ ಕುಮಾರರಂ ಪಡೆದಳು.

ಆ ಅಸಮಂಜಸಂಗೆ ಅಂಶುಮಂತನೆಂಬ ಕುಮಾರನು ಜನಿಸಿದನು. ಆ ಅಸಮಂಜಸನು ಬಾಲ್ಯಾವಸ್ಥೆಯಲ್ಲಿಯೇ (ದುಶ್ಚರಿತನಾದುದಱಿಂದ) ರಾಜ್ಯದಿಂದ ಹೊಱಡಿಸಲ್ಪಟ್ಟನು. ಮೊದಲು "ಇವನಱಿಯದ ಬಾಲಕನು, ಬುದ್ಧಿವಂತನಾದಾನು" ಎಂದು ಇದ್ದಲ್ಲಿ ಮತ್ತು ದುಶ್ಚೇಷ್ಟೆಯಂ ಮಾಡಿದನು. ಆದುದಱಿಂದ ತಂದೆಯು ಆತನನ್ನು ಬಿಟ್ಟನು. ಅಱುವತ್ತು ಸಾಸಿರ ಮಂದಿ ಪುತ್ರರೂ ಅಸಮಂಜಸನ ಕೃತ್ಯವನ್ನೇ ಅನುಸರಿಸಿದವರಾದರು. ಈ ಸಾಗರರಿಂದ ಕೆಡಿಸಲ್ಪಟ್ಟ ಯಜ್ಞಾದಿಷಟ್ಕರ್ಮಗಳನುಳ್ಳ ಜಗತ್ತನ್ನು ದೇವತೆಗಳು ನೋಡಿ ಸಕಲವಿದ್ಯಾಸ್ವರೂಪನಾಗಿ ಸಕಲದೋಷಗಳಿಂ ಸಂಸ್ಪೃಷ್ಟನಾಗದ ಪುರುಷೋತ್ತಮನ ಅಂಶಭೂತನಾದ ಕಪಿಲಮಹಾಮುನಿಗೆ ದಂಡವಿಕ್ಕಿ ಈ ಮಾತನ್ನಾಡಿದರು:—"ಭಗವಂತನೇ ! ಕೇಳು, ಈ ಸಗರಕುಮಾರರಿಂದ ಅಸಮಂಜಸನ ಚರಿತ್ರವು ಅನುಸರಿಸಲ್ಪಟ್ಟಿತು; ಇವರಿಂದ ಈ ಜಗತ್ತು ಹೇಗೆ ಆಗುವುದೋ ! ಆರ್ತಜನರಕ್ಷಣೆಗೋಸ್ಕರ ನಿಮ್ಮ ಶರೀರಪರಿಗ್ರಹವು" ಎಂದು ಹೇಳಲು; ಆಮಾತಂ ಕೇಳಿ ಭಗವಂತನಾದ ಕಪಿಲನು—ಅವರು ಸ್ವಲ್ಪಕಾಲಂಗಳಲ್ಲಿಯೇ ನಾಶವನ್ನೈದಿಯಾರು" ಎಂದು ನುಡಿದನು.

ಈಪ್ರಕಾರದೊಳಿರುವ ಕಾಲದಲ್ಲಿ ಸಗರಚಕ್ರವರ್ತಿಯು ಅಶ್ವಮೇಧಯಾಗವಂ ಮಾಡಬೇಕೆಂದು ಯತ್ನವಂ ಮಾಡಿ ಪುತ್ರರುಗಳಿಂದಲಾಶ್ರಯಿಸಲ್ಪಟ್ಟ ಅಶ್ವಗಳನ್ನು ಇಂದ್ರನು ಅಪಹರಿಸಿ ಬಿಲವಂ ಪ್ರವೇಶಮಾಡಿದನು.

ಅನಂತರದಲ್ಲಿ ಅಶ್ವವನ್ನು ಭೂತಲದಲ್ಲಿ ಕಾಣದೆ ಪಾತಾಳದಲ್ಲಿ ನೋಡಬೇಕೆಂಬುದರಿಂದ ಭೂಮಿಯಂ ಪ್ರತ್ಯೇಕ ಒಬ್ಬರೊಬ್ಬರು ಯೋಜನಪ್ರಮಾಣವನಗೆದು ಪಾತಾಳಪ್ರವೇಶವಂ ಮಾಡಿ, ಅಲ್ಲಿ (ಕುದುರೆಯನು ಅದರ ಸಮೀಪದಲ್ಲಿ) ಅವತಾರವಮಾಡಿರುವ ಕಪಿಲಋಷಿಯಂ ಕಂಡರು. (ಆ ಋಷಿಯು) ಹೇಗೆ ಇದ್ದಾನೆ ಎಂದರೆ-ಶರತ್ಕಾಲದ ಸೂರ್ಯನು ಯಾವಪ್ರಕಾರದಲ್ಲಿ ಪ್ರಜ್ವಲಿಸುವನೋ ಹಾಗೆ ತೇಜಸ್ಸುಗಳಿಂದ ದಶದಿಕ್ಕುಗಳನು ಪ್ರಕಾಶವಮಾಡುತ್ತಲಿದ್ದನು. ಆ ಮಹಾಮುನಿಯನ್ನು ಕಂಡು ಎತ್ತಲ್ಪಟ್ಟ ಆಯುಧವುಳ್ಳವರಾಗಿ— "ದುರಾತ್ಮನು, ಈತನೀಗ ನಮ್ಮ ಅಶ್ವಾಪಹಾರಿಯು, ಯಜ್ಞವಿಘ್ನಕರ್ತೃವು ಈತನು ಕೊಲ್ಲಲ್ಪಡಲಿ !" ಎಂದು ನುಡಿದರು. ಆ ಮಾತಂ ಕೇಳಿ ಕಪಿಲಋಷೀಶ್ವರನು ಕೊಂಚವಾಗಿ ಪರಿವರ್ತಿತವಿಲೋಚನದಿಂದಿರುವ ದೃಷ್ಟಿಯಲ್ಲಿ ಅವರಂ ನೋಡುವಲ್ಲಿ ಶರೀರಸಮುತ್ಥಿತವಾದ ಅಗ್ನಿಯಿಂದ ಅಶ್ವಾನುಸಾರಿಗಳಾದ ಪುತ್ರರೆಲ್ಲರು ದಗ್ಧರಾಗಿ ಹೋದರು. ಆ ಮೇಲೆ ಸಗರಚಕ್ರವರ್ತಿಯು ಆ ಸಂಘವು ಕಪಿಲನ ಕ್ರೋಧಾಗ್ನಿಯಿಂ ನಷ್ಟವಾದುದನರಿತು ಅಸಮಂಜಸನ ಪುತ್ರನಾದ ಅಂಶುಮಂತನಂ ಅಶ್ವಾನಯನಾರ್ಥವಾಗಿ ಕಳುಹಿಸಿದನು. ಆ ಅಂಶುಮಂತನು ಸಗರತನಯರ ಮಾರ್ಗಾನುಸಾರಿಯಾಗಿ ಕಪಿಲಋಷಿಯಂ ಕಂಡು ಭಕ್ತಿಸಮ್ರನಾಗಿ ವಿನಯಾನ್ವಿತನಾಗಿ ಇರುವುದಂ ನೋಡಿ (ಕಪಿಲಮಹರ್ಷಿಯು) ಕೇಳು ಅಂಶುಮಂತನೇ ! ಈ ನಿನ್ನ ಪಿತಾಮಹನಾದ ಸಗರಚಕ್ರವರ್ತಿಯ ಅಶ್ವಮಂ ಕೊಂಡು ಪೋಗು. ನನ್ನಿಂದ ವರವಂ ಕೇಳಿಕೋ ;ನಿನ್ನ ಪೌತ್ರನು ಆವರುಗಳಿಗೆ ಸ್ವರ್ಗಾರ್ಥವಾಗಿ ಗಂಗೆಯಂ ಪಾತಾಳಲೋಕಕ್ಕೆ ತಂದಾನು" ಎಂದು ಹೇಳಿದ ಮಾತಂ ಕೇಳಿ, ಅಂಶುಮಂತನು-"ಸ್ವಾಮೀ ! ಅಸ್ವರ್ಗರಾದ ನಮ್ಮ ಪಿತಾಮಹರಿಗೆ ಸ್ವರ್ಗವಾಗುವಂತೆ ವರವಂ ಕರುಣಿಸಿ" ಎಂದು ಹೇಳಿದಲ್ಲಿ, ಅಂಶುಮಂತನಂ ಕುರಿತು ಕಪಿಲಮುನಿಯು ಈ ಮಾತಂ ನುಡಿದನು—"ಬಾರೈಯ, ಅಂಶುಮಂತನೇ ! ನಾನು ಮೊದಲೆ ನಿನ್ನ ಸಂತತಿಯಲ್ಲಿ ನಿನ್ನ ಪೌತ್ರನು ಗಂಗೆಯನಿಳುಹಿ, ಅಪ್ಪುಣ್ಯೋದಕದ ದೆಸೆಯಿಂದ ಸ್ಪರ್ಶವಾದ ಅಸ್ಥಿಗಳನುಳ್ಳವರಾಗಿ (ನಿನ್ನ ಪಿತಾಮಹರು) ಸ್ವರ್ಗವನ್ನೈದುವಹಾಗೆ ಮಾಡುವನು, ಎಂದು ಹೇಳಿದೆನು. ಕೇಳು, ಅಂಶುಮಂತನೇ ! ಆ ಗಂಗೆಯ ಮಹಿಮೆಯೇನೆಂಬೆಯಾ ? ಪರಮಪುರುಷನಾದ ವಿಷ್ಣು

ವಿನ ಪಾದಾಂಗುಷ್ಠದಿಂದ ಉತ್ಪನ್ನೆಯಾದವಳು ; ಆಗಂಗೋದಕ ಸ್ಪರ್ಶಪ್ರಭಾವವು (ಹೀಗಿರುವುದು !) ಗಂಗೋದಕಪ್ರಭಾವವನ್ನು ಅರಿತವನಾಗಿ ಬುದ್ಧಿಪೂರ್ವಕವಾಗಿ ಸ್ನಾನಾದ್ಯುಪಭೋಗಂಗಳಂ (ಮಾಡಿದವನು ಉತ್ತಾರಕನಾಗುವುದು ಮಾತ್ರವಲ್ಲದೆ, ಪ್ರೇತಶರೀರವಾದ ಅಸ್ಥಿಚರ್ಮಾದಿಗಳಿಗೆ ಸ್ಪರ್ಶವಾದರೂ ಸ್ವರ್ಗಪ್ರಾಪಕವಹುದು. ಇಂಥ ಮಹಿಮೆಯುಳ್ಳದು ಗಂಗೆ" ಎಂದು ಕಪಿಲಮಹರ್ಷಿಯಿಂದ ನುಡಿಯಲ್ಪಟ್ಟವನಾಗಿ, ಅಂಶುಮಂತನು ನಮಸ್ಕರಿಸಿ, ಅಲ್ಲಿಂದ ಪಿತಾಮಹನಾದ ಸಗರಚಕ್ರವರ್ತಿಯ ಬಳಿಗೆಯ್ದಿ, ಅಶ್ವಸಹಿತನಾಗಿ ನಮಸ್ಕರಿಸಿದನಾದಕಾರಣ, ಸಂತುಷ್ಟನಾದ ಚಕ್ರವರ್ತಿಯು ಯಜ್ಞಪೂರ್ತಿಯಂ ಮಾಡಿದನು. ಆಮೇಲೆ ಅಂಶುಮಂತನಲ್ಲಿ ಪ್ರೀತಿಯಿಂದ ಅಭಿಮಾನಿಸಿದನು.

ಆ ಅಂಶುಮಂತಂಗೆ ದಿಳೀಪನೆಂಬ ಪುತ್ರನು, ಆದಿಳೀಪಂಗೆ ಭಗೀರಥನು. ಆ ಭಗೀರಥನು ಗಂಗಾವತರಣವಂ ಮಾಡಿ (ಗಂಗೆಗೆ) ತನ್ನ ಹೆಸರಿಂದ ಭಾಗೀರಥಿಯೆಂಬ ನಾಮವಂ ಮಾಡಿದನು. ಆಭಗೀರಥನಿಂದ ಸಹೋತ್ರನು, ಆತಂಗೆ ನಾಭಾಗನು, ನಾಭಾಗಂಗೆ ಅಂಬರೀಷನು. ಆತನ ಪುತ್ರನು ಸಿಂಧುದ್ವೀಪನು, ಆತನಿಂದ ಅಯುತಾಯು, ಆತನ ಪುತ್ರನು ನಳಂಗೆ ಸಹಾಯುಮಾಡಿದ ಋತುಪರ್ಣನು, ಅಕ್ಷವಿದ್ಯೆಯಂ ಬಲ್ಲವನು. ಋತುಪರ್ಣನ ಕುಮಾರನು ಸರ್ವಕಾಮನು, ಆತನಿಂದ ಸುದಾಸನು, ಆತನಿಂದ ಸೌದಾಸನೆಂದೂ ಮಿತ್ರಸಹನೆಂದೂ ನಾಮಧೇಯವುಳ್ಳವನು(ಆದನು.) ಆತನು ವನದಲ್ಲಿ ವ್ಯಾಘ್ರದ್ವಯವಂ ಕಂಡನು. ಆ ವನವು ಆ ವ್ಯಾಘ್ರದ್ವಯದಿಂದ ಅಪಗತಮೃಗವಾದುದನ್ನು ತಿಳಿದು ಅದರಲ್ಲಿ ಒಂದನ್ನು ಬಾಣದಿಂದ ಲೆಚ್ಚನು. ಆವ್ಯಾಘ್ರವು ಬೀಳುವಲ್ಲಿ ಅತಿಭಯಂಕರಾಕಾರವನುಳ್ಳದಾಗಿ ಕರಾಳವದನವನುಳ್ಳದಾಗಿ ರಾಕ್ಷಸಸ್ವರೂಪವನುಳ್ಳದಾಯಿತು. ಎರಡನೆಯುವ್ಯಾಘ್ರವು ಈರಾಯನ ನೋಡಿ—ಬಳ್ಳಿತಾಯಿತು, ನಿನಗೆ ನಾನು ಪ್ರತಿಕ್ರಿಯೆಯಂ ಮಾಡದಿರೆನೆಂದು ಪ್ರತಿಜ್ಞಾಪೂರ್ವಕವಾಗಿ ನುಡಿದು ತಾನು ಅಂತರ್ಧಾನವ ಪಡೆದುದಾಯಿತು.

ಕೆಲವು ಕಾಲದಮೇಲೆ ಈ ಸೌದಾಸನೆಂಬ ರಾಯನು ಯಜ್ಞಕರ್ಮವನಾರಂಭಿಸಿದನು. ಆಯಜ್ಞಕರ್ಮಪೂರ್ತಿಯಲ್ಲಿ ಗುರುವಾದ ವಸಿಷ್ಠನು

ನಿಷ್ಕ್ರಾಂತನಾಗುತ್ತಲಿರಲಾಗಿ ; ಷೋದಲಿಯೆಂಬ ರಾಕ್ಷಸನು ಆ ವಸಿಷ್ಠ ರೂಪವನಾಶ್ರಯಿಸಿ, "ಕೇಳು ರಾಯನೇ ! ಯಜ್ಞಪೂರ್ತಿಯಾದಮೇಲೆ ಮಾಂಸಸಹಿತವಾದ ಭೋಜನವಂ ನನಗೆ ಕುಡು. ಶೀಘ್ರದಲ್ಲಿ ಮಾಂಸವು ಸಂಸ್ಕರಿಸಲ್ಪಡಲಿ, ಕ್ಷಣದಲ್ಲಿ ಬಂದೇನು" ಎಂದು ಹೊರಟುಹೋಗಿ, ಮತ್ತೊಂದು ಅಡಿಗೆಯುವನ ರೂಪವನಾಶ್ರಯಿಸಿ, ರಾಜಾಜ್ಞೆಯಿಂದ ಮಾನುಷ ಮಾಂಸವಂ ಸಂಸ್ಕರಿಸಿ ಕೊಟ್ಟನು. ಈ ರಾಯನು ಸುವರ್ಣಪಾತ್ರೆಯೊಳಿದ್ದ ಮಾಂಸವಂ ತೆಗೆದುಕೊಂಡವನಾಗಿ ವಸಿಷ್ಠನ ಆಗಮನವಂ ನಿರೀಕ್ಷೆ ಮಾಡಿ, ವಸಿಷ್ಠನು ಬಂದಮೇಲೆ ಭೋಜನಾರ್ಥವಾಗಿ ಕೊಟ್ಟುದರಿಂದ, ಆ ವಸಿಷ್ಠನು—ಇದೇನು ! ಎಂದು ಆಲೋಚನೆಯಂ ಮಾಡಿ, "ಅಕಟಕಟ ! ಈ ದುರಾಚಾರವಂ ನೋಡು, ನನಗೆ ಈ ನಿಷಿದ್ಧ ಮಾಂಸವಂ ಕೊಟ್ಟನು. ಇದೇನು, ಆವ ದ್ರವ್ಯಜಾತವೋ" ಎಂದು ತಿಳಿಯಬೇಕೆಂದು ಧ್ಯಾನಪರನಾದನು. ತನಗೆ ಸ್ವರ್ಣಪಾತ್ರೆಯೊಳಿರಿಸಿದುದು ಮನುಷ್ಯಮಾಂಸವೆಂದರಿತು ಕ್ರೋಧಕಲುಷಿತನಾಗಿ ಕ್ರೂರಮನಸ್ಕನಾಗಿ ಆ ದೊರೆಯಲ್ಲಿ ಶಾಪವಂ ಕೊಟ್ಟನು. "ಕೇಳು ರಾಯನೇ ! ಆವ ಕಾರಣ ಈಅಭೋಜ್ಯವಾದ ಮಾನುಷಮಾಂಸವಂ ನಮ್ಮಂತಹ ತಪಸ್ವಿಗಳಿಗೆ ಯೋಗ್ಯವಲ್ಲವೆಂಬುದನರಿತಿದ್ದೂ ನಮಗೆ ನೀನು ಕೊಟ್ಟೆಯಾದುದರಿಂದ ಮಾನುಷಮಾಂಸದಲ್ಲಿಯೇ ಅಪೇಕ್ಷೆಯುಳ್ಳವನಾಗು" ಎಂದು ಶಾಪವಂ ಕುಡಲಾಗಿ; ಈ ಶಾಪವಂ ಕೇಳಿ, ಆ ಸೌದಾಸರಾಯನು, "ಸ್ವಾಮಿ ! ನೀವೇ ಮಾಂಸಾಶನವಂ ಮಾಡಬೇಕೆಂದಲ್ಲಿ ತಾನು ಮಾಡಿಸಿದೆನು, ಸ್ವತಂತ್ರದಲ್ಲಿ ಮಾಡಿಸಿದವನಲ್ಲ" ವೆಂದು ಹೇಳಿದಲ್ಲಿ-ಆಮೇಲೆ ವಸಿಷ್ಠನು ಜ್ಞಾನದೃಷ್ಟಿಯಿಂದ ನೋಡುತ್ತಿರಲಾಗಿ, "ಈತನಿಂದ ಬಂದುದಲ್ಲ. ಅಸುರಕೃತ್ಯವಿದೆಂದ"ರಿದು, ಅನುಗ್ರಹವಂ ಮಾಡಿ, "ಅತ್ಯಂತ ದೀರ್ಘಕಾಲಾನುಭವವಿಲ್ಲದೆ ಹನ್ನೆರಡುವರ್ಷ ಮಾತ್ರವಾಗಲಿ !" ಎಂದು ಆಜ್ಞಾಪಿಸಿದನು. ಹೀಗಿರಲಾಗಿ ಆರಾಯನು ವಸಿಷ್ಠನಿಗೆ ಶಾಪವಂ ಕುಡಬೇಕೆಂದು ಉದಕಾಂಜಲಿಯಾಗಿ ಇದ್ದನಾದಕಾರಣ, ಆಶಾಪಾರ್ಥವಾಗಿ ಹಿಡಿದ ಉದಕವನ್ನು ನೋಡಿ (ಪತ್ನಿಯಾದ ಮದಯಂತಿ ಬಂದು "ಪೂಜ್ಯನೇ, ಇವರು ನಮ್ಮ ಗುರುಗಳು, ಕುಲದೇವತೆಗೆ ಸಮಾನರಾದ ಆಚಾರ್ಯರನ್ನು ಶಪಿಸುವುದು (ನಮಗೆ) ಯುಕ್ತವಲ್ಲ" ಎಂದು

ಹೇಳಿದ ವಾಕ್ಯವನನುಮೋದಿಸಿ ಜಗದ್ರಕ್ಷಣಶೀಲನಾದ ಕಾರಣ ಸಸ್ಯಾಂಬುದರಕ್ಷಣಾರ್ಥವಾಗಿ) ಭೂವ್ಯೋಮಾಕಾಶಗಳಲ್ಲಿ (ಆ ಉದಕವ) ಬಿಡದೆ ತನ್ನ ಕಾಲಲ್ಲಿಯೇ ಬಿಟ್ಟುಕೊಂಡನು. ಆ ಸಮಯದಲ್ಲಿ ಆಕ್ರೋಧಕಲುಷಿತವಾದ ಉದಕದಿಂದ ಆತನ ಪಾದವು ದೋಷದುಷ್ಟವಾದುದು. ಅದಱಿಂದ ಅವನಿಗೆ ಕಲ್ಮಾಷಪಾದನೆಂಬ ನಾಮಧೇಯವುಂಟಾಯಿತು. ವಸಿಷ್ಠಶಾಪದಿಂದ ಭೋಜನಕಾಲದಲ್ಲಿ ರಾಕ್ಷಸಸ್ವಭಾವವಂ ಪಡೆದು ಅಡವಿಯಲ್ಲಿ ಸಂಚರಿಸುವವನಾಗಿ ಅನೇಕವಾಗಿ ಮನುಷ್ಯರಂ ಭಕ್ಷಿಸಿದನು. ಒಂದು ಸಮಯದಲ್ಲಿ ಒಬ್ಬ ಋಷಿಯು ತನ್ನ ಸ್ತ್ರೀಯು ಋತುಕಾಲವಾದುದಱಿಂದ ಸಂಗತನಾಗಿರುವ ಸಮಯದಲ್ಲಿ ಅವರಂ ಕಂಡನು. ಅವರು ಈಘೋರರೂಪನಂ ಕಂಡು ಕಂಗೆಟ್ಟು ಓಡಿಹೋಗುತ್ತಿರಲಾಗಿ, ಅವರಲ್ಲಿ ಆ ಬ್ರಾಹ್ಮಣನಂ ಗ್ರಹಿಸಿದವನಾದನು. ಅದಂ ಕಂಡು ಆ ಸ್ತ್ರೀಯು ಬಹುಪ್ರಕಾರವಾಗಿ ಶೋಕಿಸಿದವಳಾದಳು. "ಕೇಳ್ಮೆಯು, ಇಕ್ಷ್ವಾಕುಕುಲತಿಲಕನೇ ! ನೀನು ಮಿತ್ರಸಹನೆಂಬ ರಾಯನು, ರಾಕ್ಷಸನಲ್ಲ ; ಸ್ತ್ರೀಧರ್ಮಂಗಳಂ ಬಲ್ಲವನು. ನಾನು ಸ್ತ್ರೀ, ಬಾಲೆ, ಬಲ್ಲವಳಲ್ಲ, ಅದಱಿಂದ ನನ್ನ ಕಾರ್ಪಣ್ಯವಂ ನೋಡಿ ನನ್ನ ಪತಿಯಂ ಬಿಡು. ಕೊಲ್ಲತಕ್ಕವನಲ್ಲ" ಎಂದು ಈ ಪ್ರಕಾರದಲ್ಲಿ ಬಹುವಾಗಿ ಪ್ರಲಾಪಿಸುವ ಸ್ತ್ರೀಯನ್ನು ಸಡ್ಡೆಮಾಡದೆ, ಅರಣ್ಯದಲ್ಲಿ ವ್ಯಾಘ್ರವು ಪಶುವಂ ಯಾವ ಪ್ರಕಾರದಲ್ಲಿ ಭಕ್ಷಿಸುವುದೋ ಹಾಗೆ ಭಕ್ಷಿಸಿದನು. ಆಮೇಲೆ ಆ ಬಾಲೆ ಕೋಪದಿಂದ ರಾಯನಂ ಕುಱಿತು ಶಾಪವಂ ಕೊಟ್ಟಳು. "ಕೇಳು ರಾಯನೇ ! ಯಾವುದೊಂದು ಕಾರಣವಾಗಿ ನಾನು ಪತಿಯ ಸಂಗಸಮಯದಲ್ಲಿ ತೃಪ್ತಿಯಿಲ್ಲದೆ ಇರುವಲ್ಲಿ ನನ್ನ ಪತಿಯು ನಿನ್ನಿಂದ ಭಕ್ಷಿಸಲ್ಪಟ್ಟನೋ ಅದಱಿಂದ ನೀನು ಸ್ತ್ರೀಯರ ಅನುಭವದ ಕಡೆಯನೆಯಿದ್ದು ತೃಪ್ತಿಯನೊಂದದೆ ಮರಣಹೊಂದು" ಎಂದು ಶಪಿಸಿ, ಆಕೆಯು ಅಗ್ನಿಪ್ರವೇಶವಂ ಮಾಡಿದಳು. ಅನಂತರದಲ್ಲಿ ಹನ್ನೆರಡು ವರ್ಷವಾಗುತ್ತಲೆ ಬಿಡಲ್ಪಟ್ಟ ಶಾಪವುಳ್ಳವನಾದ ಸ್ತ್ರೀವಿಷಯಾಭಿಲಾಷಿಯಾದ ರಾಯನಂ ನೋಡಿ ಮದಯಂತಿಯು ಶಾಪವಂ ಸ್ಮರಿಸಿ ಆಗದು ಎಂದಲ್ಲಿ ಈತನು ಭೋಗವಂ ತ್ಯಜಿಸಿ ಇದ್ದವನಾಗಿ, ಆಮೇಲೆ ಸಂತಾನಾರ್ಥವಾಗಿ ವಸಿಷ್ಠರಂ ಯಾಚಿಸಿದನು. ಆತನಿಂದ ಗರ್ಭಾದಾನವಾಗಲಾಗಿ ಮಗುವು ಏಳುವರ್ಷ ಗರ್ಭದೊಳ್ ಇರು

ವುದಂ ಕಂಡು ಬಂದುಸಮಯದಲ್ಲಿ ಕಲ್ಲಿನಿಂದ ಗರ್ಭತಾಡನವಂ ಮಾಡಿದ
ಕಾರಣ ಪುತ್ರನು ಜನಿಸಿದನು. ಆ ಪುತ್ರನು ಅಶ್ಮಕನು ಎಂದು ಹೆಸರನುಳ್ಳವ
ನಾದನು. † ಆಕಾಲದಲ್ಲಿ ಜಮದಗ್ನಿಯ ಕುಮಾರನಾದ ಪರಶುರಾಮನಿಂದ
ಲೋಕವು ನಿಃಕ್ಷತ್ರವಾಗುತ್ತ ಬರಲಾಗಿ; ಈಶಿಶುವು ಸ್ತ್ರೀಯರುಗಳಿಂದ
ಕವಚಪ್ರಕಾರದಲ್ಲಿ ರಕ್ಷಿಸಲ್ಪಟ್ಟವನಾದಕಾರಣ ನಾರೀಕವಚನು ಎಂದು
ಹೆಸರುಳ್ಳವನಾದನು. ಆತನಿಂದ ಮೂಲಕನು † ಆತನಿಂದ ದಶರಥನು.
ಆತನಿಂದ ಇಲಬಿಲನು, ಆತನಿಂದ ವಿಶ್ವಸಹನು, ವಿಶ್ವಸಹನಿಂದ ಖಟ್ವಾಂಗ
ನು. ಈ ರಾಯನು ದೇವಾಸುರಯುದ್ಧದಲ್ಲಿ ದೇವಸಹಾಯಾರ್ಥವಾಗಿ ಅಸು
ರರನು ಸಂಹರಿಸಿದನು. ಸ್ವರ್ಗಲೋಕದಲ್ಲಿ ಮಾಡಲ್ಪಟ್ಟ ಪ್ರಿಯವನುಳ್ಳ
ದೇವತೆಗಳು ಈ ರಾಯನಂ ಕುಱಿತು "ವರವಂ ಬೇಡು" ಎನ್ನಲಾಗಿ;
"ವರವಂ ಕುಡುವಲ್ಲಿ ನನ್ನ ಆಯುಃಕಾಲವಂ ಹೇಳತಕ್ಕದು" ಎಂದನು.
ಅದಕ್ಕೆ ಅವರು "ಕೇಳು ರಾಯನೇ! ಆಯುಸ್ಸು ಕ್ಷಣಮಾತ್ರವಿದೆ"
ಎಂದು ಹೇಳಿದ ಮುಹೂರ್ತದಲ್ಲಿಯೇ ದೇಹವಂ ಬಿಟ್ಟು ತಡೆಯಿಲ್ಲದ
ವಿಮಾನಾರೋಹಣವಂ ಮಾಡಿಕೊಂಡು, ಲಘಿಮಾದ್ಯಷ್ಟೈಶ್ವರ್ಯಸಮೇತ
ನಾಗಿ ಮನುಷ್ಯಲೋಕವನೆಯ್ದಿ ಈ ಮಾತ ನುಡಿದನು. "ಕೇಳಿ ಮನುಷ್ಯ
ರಿರ! ನನಗೆ ಬ್ರಾಹ್ಮಣನ ದೆಸೆಯಿಂದ ಬೇಱೊಬ್ಬ ಪ್ರಿಯತಮನಿಲ್ಲ; ನಾನು
ಧರ್ಮಾತಿಕ್ರಮವಾದ ಕಾರ್ಯವನೊಂದುವೇಳೆಯುಮೆಸಗಿದವನಲ್ಲ. ಸಕಲ
ದೇವಮನುಷ್ಯಪಶುವೃಕ್ಷಾದಿಗಳಲ್ಲಿಯೂ ಅಚ್ಯುತವ್ಯತಿರೇಕವಾದ ದೃಷ್ಟಿ
ಯು ನನಗೆ ಇಲ್ಲ. ಮನುಜರಿಗೆ ಸ್ಮರಣೀಯನಾಗಿ ಧ್ಯೇಯನಾದ ಚಿದಾನಂ
ದಸ್ವರೂಪನಾದ ಪರಮಾತ್ಮನನ್ನು ಅಸ್ಖಲಿತಗತಿಯುಳ್ಳವನಾಗಿ ಐದು
ವೆನು" ಎಂದು ಆ ಅಶೇಷದೇವಗುರುವಾಗಿ ಅನಿರ್ದೇಶ್ಯವಾದ ಶರೀರವುಳ್ಳ
ವನಾಗಿ ಚಿದಾನಂದಸ್ವರೂಪನಾಗಿ (ಸತ್ತಾಮಾತ್ರಾತ್ಮನಾಗಿ ವಾಸುದೇವಾ
ಖ್ಯನಾದ) ಪರಮಾತ್ಮನಲ್ಲಿ ತನ್ನ ಮನಸ್ಸನ್ನು ಅನುಸಂಧಾನವಂ ಮಾಡಿದನಾ
ದಕಾರಣ ಅಲ್ಲಿಯೇ ಲಯವನೈದಿದನು.

---

† ಸಂಸ್ಕೃತ ಮಾತೃಕೆಯ ಪ್ರಕಾರ ಮೂಲಕನಿಗೆ ನಾರೀಕವಚನೆಂದು ಹೆಸರು ಇರಬೇಕು. ಆದರಪ್ರಕಾರ "ಆತನಿಂದ ಮೂಲಕನು" ಎಂಬ ವಾಕ್ಯ ಮೊದಲಿರಬೇಕಾಗುತ್ತದೆ.

ಈ ವಿಷಯದಲ್ಲಿ ಸಪ್ತರ್ಷಿಗಳಿಂದ ಈ ಶ್ಲೋಕವು ಹೇಳಲ್ಪಟ್ಟಿತು:-

ಶ್ಲೋಕ॥ ಖಟ್ವಾಂಗೇನ ಸಮೋ ನಾನ್ಯಃ ಕಶ್ಚಿದುರ್ವ್ಯಾಂ ಭವಿಷ್ಯತಿ ।
ಯೇನ ಸ್ವರ್ಗಾದಿಹಾಗಮ್ಯ ಮುಹೂರ್ತಂ ಪ್ರಾಪ್ಯ ಜೀವಿತಂ ।
ತ್ರಯೋತಿಸಂಹಿತಾಲೋಕಾ ಬುಧ್ಯಾ ಸತ್ಯೇನ ಚೈವಹಿ॥ "

ಅದರ ತಾತ್ಪರ್ಯವೇನೆಂದೊಡೆ-ಆವ ಖಟ್ವಾಂಗರಾಯನಿಂದ ದೇವಸಹಾಯಪೂರ್ವಕವಾಗಿ ಸ್ವರ್ಗದಿಂದಿಲ್ಲಿಗೆ ಬಂದು ಕ್ಷಣಮಾತ್ರ ಆಯುಸ್ಸ ಪಡೆದು ಸತ್ಯದಿಂದಲೂ ಧರ್ಮದಿಂದಲೂ ಮೂರುಲೋಕವು ಆಕ್ರಮಿಸಿ ಜಯಿಸಲ್ಪಟ್ಟಿತು, ಆಖಟ್ವಾಂಗರಾಯಂಗೆ ಸಮನಾದವನೊಬ್ಬನೂ ಭೂಮಿಯಲ್ಲಿಲ್ಲ.

ಆ ಖಟ್ವಾಂಗರಾಯಂಗೆ ದೀರ್ಘಬಾಹುವೆಂಬ ಪುತ್ರನು, ಆತನಿಂದ ರಘುವೆಂಬಾತನು, ಆತನಿಂದ ಅಜನು, ಅಜಂಗೆ ದಶರಥನು, ದಶರಥಂಗೆ ಭಗವಂತನಾಗಿ ವಿಮಲಾಚ್ಯುತನಾದ ವಿಷ್ಣುವು ಲೋಕಸಂರಕ್ಷಣಾರ್ಥವಾಗಿ ತನ್ನ ಅಂಶದಿಂದ ರಾಮ ಲಕ್ಷ್ಮಣ ಭರತಶತ್ರುಘ್ನ ರೂಪಂಗಳಾಗಿ ಪುತ್ರತ್ವವನೆಯ್ದಿದನು. ಅವರೊಳು ರಾಮಸ್ವಾಮಿ ಬಾಲ್ಯದಲ್ಲಿಯೇ ವಿಶ್ವಾಮಿತ್ರಯಾಗಸಂರಕ್ಷಣಾರ್ಥವಾಗಿ ಪೋದಲ್ಲಿ ತಾಟಕಾನಿಗ್ರಹಪೂರ್ವಕವಾಗಿ ಯಾಗದಲ್ಲಿ ಮಾರೀಚನಂ ಇಷುವಿನಿಂದಾಪತನಂ ಮಾಡಿ, ಸುಬಾಹು ಮೊದಲಾದರಾಕ್ಷಸರಂ ಯಮನ ಸನ್ನಿಧಿಗೆ ಕಳುಹಿಸಿ, ದರ್ಶನಮಾತ್ರದಿಂದಲೇ ಅಹಲ್ಯೆಯಂ ನಿರ್ದೋಷಳಂ ಮಾಡಿ, ಜನಕಮಹಾರಾಯನ ಮಿಥಿಲಾಪಟ್ಟಣದಲ್ಲಿ ಹರಧನುರ್ಭಂಗಪೂರ್ವಕವಾಗಿ ಅಯೋನಿಜೆಯಾದ ಸೀತಾದೇವಿಯಂ ವಿವಾಹವಂ ಮಾಡಿಕೊಂಡು, ಸಕಲ ಕ್ಷತ್ರಿಯಕ್ಷಯಕಾರಿಯಾದ ಹೈಹಯಕುಲಧೂಮಕೇತುವಾದ ಜಮದಗ್ನಿಕುಮಾರನಾದ ಪರಶುರಾಮನನಪಾಸ್ತವೀರ್ಯನೆನಿಸಿ, ಪಿತೃವಾಕ್ಯಪರಿಕಾಲನೆಯಿಂದ ಅಗಣಿತರಾಜ್ಯಾಭಿಮಾನಿಯಾಗಿ, ಭ್ರಾತೃಭಾರ್ಯಾಸಮೇತನಾಗಿ ವನಪ್ರವೇಶವಂ ಮಾಡಿ, ವಿರಾಧಖರದೂಷಣಕಬಂಧವಾಲಿ ಮೊದಲಾದವರಂ ನಿಗ್ರಹಿಸಿ, ಸುಗ್ರೀವಮಿತ್ರನಾಗಿ, ಸಮುದ್ರಬಂಧನಪೂರ್ವಕವಾಗಿ ಸಮಸ್ತರಾಕ್ಷಸಕುಲಕ್ಷಯವಂ ಮಾಡಿ,ದಶಾನನಸ್ಪರ್ಶಕಳಂಕವನ್ನು ಅನಲಪ್ರವೇಶದಿಂದ ಶುದ್ಧಿಮಾಡಿ(ಕೊಂಡ) ಅಶೇಷದೇವೇಶಸಂಸ್ತುತಿಗಳಿಂದ ಮಾನ್ಯೆಯಾದ ಜನಕತನಯೆಯಾದ ಸೀತಾದೇವಿಯಿಂ ಕೂಡಿ ಅಯೋಧ್ಯಾಪುರಪ್ರವೇಶವಂ ಮಾಡಿ—(ಪಟ್ಟಾಭಿಷಿಕ್ತನಾದನು. ಕೇಳು ಮೈತ್ರೇಯ !

ಆಪಟ್ಟಾಭಿಷೇಕಮಂಗಳವನ್ನು ನೂರುವರುಷ ಹೇಳಿದರೂ ತೀರದು. ಸಂಗ್ರಹವಾಗಿ ಹೇಳುತ್ತೇನೆ ಲಕ್ಷ್ಮಣ ಭರತ ಶತ್ರುಘ್ನ ವಿಭೀಷಣ ಸುಗ್ರೀವ ಅಂಗದ ಜಾಂಬವಂತ ಹನುಮಂತ ಮೊದಲಾದವರಿಂದ ಛತ್ರಚಾಮರಾದಿಗಳಿಂದ ಸೇವಿಸಲ್ಪಟ್ಟವನಾಗಿ, ಬ್ರಹ್ಮೇಂದ್ರಾಗ್ನಿ ಯಮ ನಿರೃತಿ ವರುಣ ವಾಯು ಕುಬೇರೇಶಾನಪ್ರಭೃತಿ ಸಕಲದೇವತೆಗಳಿಂದಲೂ ವಸಿಷ್ಠ ವಾಮದೇವ ವಾಲ್ಮೀಕಿ ಮಾರ್ಕಂಡೇಯ ವಿಶ್ವಾಮಿತ್ರ ಭರದ್ವಾಜಾಗಸ್ತ್ಯ ಪ್ರಭೃತಿ ಮುನಿವರರಿಂದಲೂ ಋಗ್ಯಜುಸ್ಸಾಮಾದಿಮಂತ್ರಗಳಿಂದ ಸ್ತೋತ್ರಮಾಡಲ್ಪಟ್ಟವನಾಗಿ, ನೃತ್ಯಗೀತವಾದ್ಯಾದ್ಯಖಿಳಮಂಗಳವಾಕ್ಯಗಳಿಂದಲೂ, ವೀಣಾ ವೇಣು ಮೃದಂಗ ಭೇರೀ ಪಟಹ ಶಂಖ ಕಾಹಳ ಗೋಮುಖಪ್ರಭೃತಿ ಸುನಾದಗಳಿಂದಲೂ ಸಕಲರಾಜರ ಮಧ್ಯದಲ್ಲಿ ಸಕಲಲೋಕರಕ್ಷಣಾರ್ಥವಾಗಿ ಕೋಸಲೇಂದ್ರನಾದ ರಘುಕುಲತಿಲಕನಾದ ಜಾನಕೀಪ್ರಿಯನಾದ ಭ್ರಾತೃತ್ರಯಪ್ರಿಯನಾದ ರಾಮನು ಅಭಿಷಿಕ್ತನಾಗಿ, ಸಿಂಹಾಸನಗತನಾಗಿ, ಹನ್ನೊಂದು ಸಾವಿರವರ್ಷ ರಾಜ್ಯವಾಳಿದನು.) ಸ್ವಾಂಶವಾದ ಭರತನಿಂದ ಗಂಧರ್ವಕೋಟಿತ್ರಯವಂ ನಿಗ್ರಹಂಮಾಡಿ ತದ್ರಾಜ್ಯವನಾಕ್ರಮಿಸಿ, ಶತ್ರುಘ್ನನಿಂದ ಲವಣಾಸುರನಿಗ್ರಹಪೂರ್ವಕವಾಗಿ ಮಧುರಾಪಟ್ಟಣವಂ ವಶವಂ ಮಾಡಿದನು. ಇವು ಮೊದಲಾದ ಅತುಳಬಲಪರಾಕ್ರಮವಿಕ್ರಮದಿಂದ ರಾವಣಾದ್ಯಸುರನಿಗ್ರಹದಿಂದ ಜಗದ್ರಕ್ಷಾಪ್ರವರ್ತಕರಾದ ರಾಮಲಕ್ಷ್ಮಣಭರತಶತ್ರುಘ್ನರು ಎಂದಿನ ಪ್ರಕಾರದಲ್ಲಿ ಸ್ವರ್ಗಾರೋಹಣವಂ ಮಾಡಿದರು. ಅಷ್ಟುಮಾತ್ರವೆಯಲ್ಲ. ಆದೇಶದ ಜನಂಗಳು ಪೌರಜನಂಗಳು ಭಗವದಂಶರಾದ ರಾಮಲಕ್ಷ್ಮಣಾದಿಗಳಲ್ಲಿ ಅನುರಾಗವುಳ್ಳವರಾಗಿ ತದ್ಗತಮನಸ್ಕರಾಗಿ ಸಾಲೋಕ್ಯವಂ ಪಡೆದರು.

ಇನ್ನು ರಾಮಸ್ವಾಮಿಗೆ ಕುಶಲವರೆಂಬಿಬ್ಬರು ಪುತ್ರರು ; ಲಕ್ಷ್ಮಣಂಗೆ ಅಂಗದ ಚಂದ್ರಕೇತುಗಳು ; ಭರತಂಗೆ ತಕ್ಷಕಪುಷ್ಕಳರು ; ಶತ್ರುಘ್ನಂಗೆ ಸುಬಾಹು ಶೂರಸೇನರಿಬ್ಬರು ; ಕುಶಂಗೆ ಅತಿಥಿಯೂ, ಅತಿಥಿಗೆ ನಿಷದನೂ, ನಿಷದಂಗೆ ಅನಲನೂ, ಆತಂಗೆ ನಭನೂ, ನಭಂಗೆ ಪುಂಡರೀಕನೂ, ಆತಂಗೆ ಕ್ಷೇಮಧನ್ವನೂ, ಆತಂಗೆ ದೇವಾನೀಕನೂ, ಆತಂಗೆ ಅಹೀನಗುವೂ, ಆತಂಗೆ ಗುರುವೂ, ಆತಂಗೆ ಪಾರಿಯಾತ್ರನೂ, ಪಾರಿಯಾತ್ರಂಗೆ [1]ಬಳನೂ,[1]

ಪಾ—1. ದಳನೂ.

ಬಳಂಗೆ [1]ಶಲನೂ, ಶಲಂಗೆ ಉತ್ಕನೂ, ಉತ್ಕಂಗೆ[1] ವಜ್ರನಾಭನೂ, ವಜ್ರನಾಭಂಗೆ ಶಂಖಣನೂ, ಶಂಖಣಂಗೆ ವ್ಯುಷಿತಾಶ್ವನೂ, ವ್ಯುಷಿತಾಶ್ವಂಗೆ ವಿಶ್ವಸಹನೂ, ಆತಂಗೆ ಹಿರಣ್ಯನಾಭನು. ಅವನು ಜೈಮಿನಿಶಿಷ್ಯನಾದ ಯಾಜ್ಞವಲ್ಕ್ಯನಿಂದ ಯೋಗಾಭ್ಯಾಸವಂ ಕಲಿತು ಮಾಡಿ ಯೋಗಿಶ್ರೇಷ್ಠನಾದನು. ಹಿರಣ್ಯನಾಭನ ಪುತ್ರನು ಪುಷ್ಯನು, ಪುಷ್ಯಂಗೆ ಧ್ರುವಸಂಧಿಯು, ಧ್ರುವಸಂಧಿಗೆ ಸುದರ್ಶನನು, ಅವಂಗೆ ಅಗ್ನಿವರ್ಣನು, ಆತಂಗೆ ಶೀಘ್ರಗನು, ಆತಂಗೆ ಮರುವು. ಮರುರಾಯನು ಯೋಗಾಭ್ಯಾಸದಿಂದ ಈಗಲೂ ಕಲಾಪಗ್ರಾಮದಲ್ಲಿ ಸಾಲಗ್ರಾಮಪರ್ವತದಲ್ಲಿ ಇರುತಲಿದ್ದಾನು. ಕೇಳು ಮೈತ್ರೇಯ, ಮರುಚಕ್ರವರ್ತಿಯು ಸಾಲಗ್ರಾಮಪರ್ವತದೊಳಿದ್ದುಕೊಂಡು ಮುಂದಣ ಸೂರ್ಯವಂಶಪ್ರವರ್ತಕನಾಗಲುಳ್ಳವನು. ಆ ಮರುವಿಂಗೆ ಪ್ರಶುಶುಕ್ರನು, [2]ಆತಂಗೆ ಸುಸಂಧಿ, ಆತನಿಂದ ಅಮರ್ಷನು, ಆತಂಗೆ ಸಹಸ್ವಂತ, ಸಹಸ್ವಂತನಿಂ ವಿಶ್ವಭವನು, ಅವಂಗೆ ಬೃಹದ್ಬಲನು, ಅಬೃಹದ್ಬಲನೆಂಬಾತನು, ಭಾರತಯುದ್ಧದಲ್ಲಿ ಅರ್ಜುನಪುತ್ರನಾದ ಅಭಿಮನ್ಯುವಿನಿಂದ ಕ್ಷಯವನೆಯ್ದಿದನು.

ಈ ಪೂರ್ವೋಕ್ತರಾದ ರಾಯರುಗಳು ಇಕ್ಷ್ವಾಕುಭೂಪರೊಳು ಪ್ರಧಾನರಾದವರು. ಇವರೆಲ್ಲರೂ ಅಲ್ಲದೆ ಅಣ್ಣತಮ್ಮಂದಿರ ವಂಶವನ್ನೇ ಕುರುವೆಂಬುದು. ಈ ಪುಣ್ಯಶ್ಲೋಕರ ಚರಿತ್ರಮಂ ಶ್ರದ್ಧೆಯಿಂದ ಕೇಳಿದಲ್ಲಿ ಸರ್ವಪಾಪಪ್ರಣಾಶನವೂ ಸರ್ವಕಾಮಾವಾಪ್ತಿಯೂ ಅಹುದು.

ಎಂದು ಶ್ರೀಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ನಾಲ್ಕನೆಯ ಅಧ್ಯಾಯಂ.

## ಐದನೆಯ ಅಧ್ಯಾಯ.

ಕೇಳು ಮೈತ್ರೇಯ ! ಇಕ್ಷ್ವಾಕುಕುಮಾರನಾದ ನಿಮಿಯೆಂಬಾತನು ಸಹಸ್ರವರ್ಷ ಯಾಗವಂ ಮಾಡಬೇಕೆಂದು ಸಂಕಲ್ಪಿಸಿ ಯಾಗದಲ್ಲಿ ಗುರುವಾದ ವಸಿಷ್ಠರನ್ನು ಹೋತೃವಾಗಿ ವರಣವಂ ಮಾಡಿದಲ್ಲಿ, ವಸಿಷ್ಠರು ಆ

ಪಾ--1—ತ್ರೈನನೂ, ತ್ರೈನಂಗೆ ವೃತ್ಕನೂ. 2—ಆತಂಗೆ ಸುಸಂಧಿ, ಆತನಿಂದ, ಅಶನು, ಆತಂಗೆ ಸಹಸ್ಯ, ಸಹಸ್ಯನಿಂದ ವಿಶ್ವಭವನು, ಅವಂಗೆ ಬ್ರಾಹುರ್ತಬಲನು, ಆಬಾಹುರ್ತಬಲನೆಂಬಾತನು— ಕನ್ನಡ ಮಾತೃಕೆಯ ಪಾಠಗಳು.

ರಾಯನಂ ಕುಱಿತು—"ಕೇಳು ನಿಮಿಚಕ್ರವರ್ತಿಯೇ! ನಾನು ಐನೂಱು ವರ್ಷ ಮಾಡಲ್ಪಡುವ ಯಾಗದಲ್ಲಿ ಇಂದ್ರನಿಂದ ಮೊದಲೇ ವರಣವಂ ಮಾಡಲ್ಪಟ್ಟಿರುವೆನು. ಅಲ್ಲಿಂದ ಬಂದ ತಱುವಾಯದಲ್ಲಿ ನೀನು ಮಾಡುವ ಯಾಗದೊಳು ಋತ್ವಿಕ್ಕು ಆದೇನು" ಎಂದ ಮಾತಂ ಕೇಳಿ, ರಾಯನು ಸುಮ್ಮನೆ ಇದ್ದನು. ವಸಿಷ್ಠಮುನಿಯು ಈ ರಾಯನು ಸಮ್ಮತಿಸಿದನು ಎಂದು ತಾನು ಅಮರಪತಿಯ ಯಾಗವಂ (ಕೈಕೊಂಡು ಆಯಾಗವಂ) ಮಾಡಿಸುವ ಸಮಯದಲ್ಲಿ—ಈ ನಿಮಿಚಕ್ರವರ್ತಿಯು ಗೌತಮಾದಿಮುನಿಗಳೊಡಗೂಡಿ ಯಾಗವಂ ಮಾಡಿದನು. ಇಂದ್ರನ ಯಾಗವು ಪೂರ್ತಿಯಾಗಲು ಶೀಘ್ರದಲ್ಲಿಯೇ ವಸಿಷ್ಠಋಷಿಯು ನಿಮಿಚಕ್ರವರ್ತಿಯ ಯಾಗವಂ ಮಾಡಿಸಬೇಕೆಂದು ಬಂದನು. ಯಾಗಕರ್ಮಕರ್ತೃತ್ವವು ಗೌತಮನ ಅಧಿಕಾರವಾಗಿದ್ದುದಂ ಕಂಡು, "ಯಾವ ಕಾರಣದಿಂದ ಈನಿಮಿಚಕ್ರವರ್ತಿಯು ಯಾಗಕರ್ಮಕರ್ತೃತ್ವವಂ ಗೌತಮಮುನಿಯ ಅಧೀನವಂ ಮಾಡಿದನೋ ಅದಱಿಂದ ಈತನು ದೇಹವಿಲ್ಲದವನಾಗಿ ಹೋಗಲಿ!" ಎಂದು (ನಿದ್ರೆಯಲ್ಲಿದ್ದ ನಿಮಿಗೆ) ಶಾಪವಂ ಕೊಟ್ಟನು. ಅವನಿಪತಿಯಾದ ನಿಮಿಯು ನಿದ್ರೆಯಿಂದೆದ್ದು ಈ ಶಾಪವೃತ್ತಾಂತವನಱಿದವನಾಗಿ, "ಯಾವ ಕಾರಣದಿಂದ ತಾನು ಮಲಗಿರುವ ಸಮಯದಲ್ಲಿ ತಾನು ಅಱಿಯದೆ ಈದುಷ್ಟಗುರುವು ಶಾಪವಂ ಕೊಟ್ಟನೋ ಆಕಾರಣದಿಂದ ಇವನ ದೇಹವು ಬಿದ್ದು ಹೋಗಲಿ!" ಎಂದು ಪ್ರತಿಶಾಪವಂ ಕೊಟ್ಟು, ತಾನೂ ದೇಹವಂ ಬಿಟ್ಟನು. ಆನಿಮಿಚಕ್ರವರ್ತಿಯ ಶಾಪದಿಂದ ವಸಿಷ್ಠನ ಸ್ಥೂಲಶರೀರವು ಸದ್ಯಕ್ಕೆ ನಿವೃತ್ತಿಯಾಯಿತು. ಸೂಕ್ಷ್ಮಶರೀರವಾದ ಲಿಂಗಶರೀರವು ಮಿತ್ರಾವರುಣತೇಜಸ್ಸಂ ಪ್ರವೇಶಮಾಡಿ, ದೇವಸ್ತ್ರೀಯಾದ ಊರ್ವಶಿಯ ದರ್ಶನದಿಂದ ಆವೀರ್ಯವು ಸರ್ಜನವಾಗಿ ವಸಿಷ್ಠಮುನಿಯ ದೇಹವು ಮತ್ತೊಂದು ನವೀನವಾಗಿ ಜನಿಯಿಸಿತು. ನಿಮಿಚಕ್ರವರ್ತಿಯ ದೇಹವು (ಮನೋಹರವಾದ) ತೈಲಗಂಧಾದಿಗಳಲ್ಲಿ ಇರಿಸಿದುದಱಿಂದ ಜೀರ್ಣವಾಗದೆ (ಕ್ಲೇದಾದಿ ದೋಷರಹಿತವಾಗಿ ಆಗ ತಾನೇ) ದೇಹತ್ಯಾಗವಂ ಮಾಡದವನ ಪ್ರಕಾರದಲ್ಲಿ ಇದ್ದಿತು.[1] ಯಜ್ಞಸಮಾಪ್ತಿಯಲ್ಲಿ ಯಜ್ಞಾ

---

ಟೀಕು —1. ಯಜ್ಞಸಮಾಪ್ತ್ಯರ್ಥವಾಗಿಯೂ, ಅರಾಜಕತ್ವಪರಿಹಾರಾರ್ಥವಾಗಿಯೂ ಆ ಮೃತಶರೀರವು ಹಾಗೆ ಇದ್ದಿತೆಂದು ತಿಳಿಯಬೇಕು.

ಭಾಗಸ್ವೀಕೃತಾರ್ಥವಾಗಿ ಬಂದ ದೇವತೆಗಳಂ ಕುರಿತು ಋತ್ವಿಕ್ಕುಗಳಾದ ಗೌತಮಾದಿಗಳು ಈಮಾತಂ ನುಡಿದರು :—(“ಯಜಮಾನನಿಗೆ ವರವು ಕೊಡಲ್ಪಡಲಿ” ಎಂದು. ಆಗ ದೇವತೆಗಳಿಂದ ಪ್ರರೋಚಿತನಾಗಿ ನಿಮಿಯು)—“ಕೇಳಿ ದೇವತೆಗಳಿರಾ ! ನೀವು ಸಕಲಸಂಸಾರದುಃಖಚ್ಛೇದಿಗಳು. ಈ ಸಂಸಾರಕ್ಕಿಂತಲೂ ಬೇರೊಂದು ದುಃಖವಿಲ್ಲ ; ಯಾವ ವರವು ಶರೀರಾತ್ಮವಿಯೋಗವಿಲ್ಲದೆ ಪ್ರತ್ಯೇಕವಿರ್ಪುದೋ ಅಂತಹ ವರವಂ ಕೇಳುತ್ತ ಇದ್ದನು. [1]ಅದಾವುದು ದೇಹವಿಲ್ಲದ ವರವು-ಎಂದರೆ[1] ಸಕಲ ಜನಂಗಳ ಲೋಚನಂಗಳಲ್ಲಿ ವಾಸವಂ ಮಾಡಿಕೊಂಡು ಪುನಃ ಶರೀರಗ್ರಹಣವಂ ಮಾಡದಹಾಗೆ ಇರುವಂಥ ವರವಂ ಕುಡಿ ಎನ್ನಲಾಗಿ ; “ಹಾಗೆ ಆಗಲಿ” ಎಂಬ ದೇವತಗಳ ವರಪ್ರದಾನದಿಂದ ಸಕಲಲೋಚನಂಗಳಲ್ಲಿಯೂ ಆವಿರ್ಭವಿಸಿದವನಾದನು. ಅಂದಿನಾರಭ್ಯ ಪ್ರಾಣಿಗಳಿಗೆ ನಿಮೇಷೋನ್ಮೇಷಂಗಳುಂಟಾದುವು.

[2]ಮೃತಿಹೀನವಾದ[2] ಆ ನಿಮಿಚಕ್ರವರ್ತಿಯ ಶರೀರವಂ ಅರಾಜಕದ ಭಯವುಳ್ಳ ಮುನಿಗಳು ಮಥನೆಯಂ ಮಾಡಿದರು ; ಪುತ್ರನು ಜನಿಸಿದನು. ಆ ಕುಮಾರನು ಜನನದಿಂದ ಜನಕನೆಂಬ ನಾಮಧೇಯವಂ ಪಡೆದನು. ಈ ನಿಮಿಚಕ್ರವರ್ತಿಯು ವಿದೇಹನಾದುದರಿಂದ ವಿದೇಹನೆನಿಸಿಕೊಂಡನು. ಆತನ ಪುತ್ರನು ವೈದೇಹನು, (ಮತ್ತು) ಮಥನದಿಂದ ಜನಿಸಿದವನಾದುದರಿಂದ ಮಿಥಿಯೂ ಆದನು.) ಆತಂಗೆ ಉದಾವಸು, ಆತಂಗೆ ನಂದಿವರ್ಧನನು. ಆತನಿಂದ ಸುಕೇತು, ಆತನಿಂದ ದೇವರಾತನು, ಅವನಿಂದ [3]ಬೃಹದುಕ್ಥನು.[3] ಆತಂಗೆ ಮಹಾವೀರ್ಯನು, ಅವನ ಕುಮಾರ [4]ಸುಧೃತಿಯು.[4] ಆತಂಗೆ ದೃಷ್ಟಕೇತು, ದೃಷ್ಟಕೇತುವಿಂಗೆ ಹರ್ಯಶ್ವ, ಅವಂಗೆ ಮರು, ಆಮರುವಿಂಗೆ [5]ಪ್ರತಿಕ,[5] ಆತಂಗೆ [6]ಕೃತಿರಥ[6], ಆತಂಗೆ ದೇವಮೀಢ, ಆತನ ಕುಮಾರನು ವಿಬುಧ, ವಿಬುಧಂಗೆ ಮಹಾಧೃತಿ, ಆತನ ಪುತ್ರನು [7]ಕೃತರಾತನು,[7] ಆತನಿಂದ ಮಹಾರೋಮನು, ಆತನಿಂದ ಹ್ರಸ್ವರೋಮನು, ಹ್ರಸ್ವರೋಮನ

---

ಟೀಕು—1. ಈವಾಕ್ಯವು ಸಂಸ್ಕೃತಮೂಲದಲ್ಲಿ ಇಲ್ಲ, ಅರ್ಥಾತ್ ಲಭಿಸುತ್ತದೆ.
2. ಈ ಪದಕ್ಕೆ ಪ್ರತಿಯಾಗಿ ಸಂ|| ಮೂಲದಲ್ಲಿ “ಅಪುತ್ರಸ್ಯ” ಎಂದಿದೆ.
3. ಬೃಹ. 4. ಸುದ್ರುವಿ. 5. ಪ್ರತಿಮೀಧಕ. 6. ಕೃತರಥ.
7. ಶ್ರುತಿರಾತನು—ಎಂಬದಾಗಿ ಕನ್ನಡಮಾತೃಕೆಯ ಪಾಠಗಳು.

ಪುತ್ರನು ಸೀರಧ್ವಜನು; ಆತನು ಪುತ್ರಾರ್ಥವಾಗಿ ಯಾಗಭೂಮಿಯ ಶೋಧಿಸುವಲ್ಲಿ ಹಲದಲ್ಲಿ ಸೀತಾದೇವಿಯುತ್ಪನ್ನೆಯಾಗಿ ಮಗಳಾದಳು. ಸೀರಧ್ವಜಂಗೆ (ತಮ್ಮನು) ಸಾಂಕಾಶ್ಯಾಧಿಪತಿಯಾದ ಕುಶಧ್ವಜನೆಂಬಾತನು. (ಸೀರಧ್ವಜನ) ಪುತ್ರನು ಭಾನುಮಂತನು. ಭಾನುಮಂತಂಗೆ ಶತದ್ಯುಮ್ನನು, ಆತನಿಂದ ಶುಚಿಯು, ಆತಂಗೆ ಊರ್ಜನಾಮಕನೆಂಬ ಪುತ್ರನಾದನು. ಊರ್ಜನಾಮಕಂಗೆ [1]ಶತಧ್ವಜನು.[1] ಆತನಿಂದ ಕೃತಿಯು, ಕೃತಿಗೆ ಅಂಜನನು ; ಆತನ ಪುತ್ರನು ಪುರುಜಿತು, ಆತಂಗೆ ಅರಿಷ್ಟನೇಮಿಯು, ಆತಂಗೆ ಶ್ರುತಾಯು, ಶ್ರುತಾಯುವಿಂಗೆ [2]ಸುಪಾರ್ಶ್ವನು,[2] ಆತನಿಂದ ಸೃಂಜಯನು,ಆತಂಗೆ ಕ್ಷೇಮಾವಿಯು, ಆತಂಗೆ ಅನೇನನು, ಆತಂಗೆ [3]ಭೌಮರಥನು,[3] ಆತಂಗೆ ಸತ್ಯರಥನು, ಅತಂಗೆ ಉಪಗು ; ಉಪಗುವೆಂಬವಂಗೆ ಉಪಗುಪ್ತನು, ಆತಂಗೆ ಸ್ವಾಗತನು, ಆತಂಗೆ [4]ಸ್ವಾಂಗನು. ಆತನಿಂದ ಸ್ವಾಪನು,[4] ಆತನಿಂದ ಸುವರ್ಚನು, ಸುವರ್ಚಂಗೆ ಸುಭಾಷನು, ಸುಭಾಷನಿಂದ [5]ಸುಶ್ರುತನು, ಸುಶ್ರುತನ ಪುತ್ರನು ಜಯನು,[5] ಜಯನ ಪುತ್ರನು ವಿಜಯನು, ವಿಜಯಂಗೆ ಋತನು, ಋತಂಗೆ ಸುನಯನನು, ಸುನಯನಂಗೆ ವೀತಹವ್ಯನು, ಆತಂಗೆ ಧೃತಿಯು, ಧೃತಿಗೆ ಬಹುಳಾಶ್ವನು, ಆತಂಗೆ ಕೃತಿಯು ; ಕೃತಿಯೆಂಬ ರಾಯನು ಈಗ ಇರುತಲಿದ್ದಾನು. (ಈ ಕೃತಿಯಲ್ಲಿ ಜನಕವಂಶವು ಸಮಾಪ್ತಿಯಾಗುತ್ತಲಿದೆ.) ಈ ಪೂರ್ವೋಕ್ತ ರಾಯರುಗಳು ಮೈಥಿಲರು ; ಈ ರಾಯರೆಲ್ಲರೂ (ಪ್ರಾಯೇಣ) ಬ್ರಹ್ಮನಿಷ್ಠರೂ, ಮುಮುಕ್ಷುಗಳೂ ಆಗಿರುತ್ತಾರೆ.

ಎಂಬಲ್ಲಿಗೆ ಶ್ರೀಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಐದನೆಯ ಅಧ್ಯಾಯಂ.

---

ಪಾ—1—ಸನದ್ವಾಜನು; 2—ಸುಪಾರ್ಶ್ವನು; 3—ದ್ವಾದಶರಥನು; 4—ಉಚ್ಚಸ್ಥಾನಾಗತನು, ಆತಂಗೆ ಮಕ್ಷಸ್ವಾಗಳನು; 5—ಸ್ರುವಂಜಯನು, ಸ್ರುವಂಜಯನ ಪುತ್ರನು ಜಯನು—ಇವು ಕನ್ನಡ ಮೂಲಮಾತೃಕೆಯ ಪಾಠಗಳು.

## ಆಱನೆಯ ಅಧ್ಯಾಯಂ.

---

ತರುವಾಯ ಮೈತ್ರೇಯನು ಪರಾಶರಮಹರ್ಷಿಯಂ ಕುಱಿತು— "ಕೇಳು, ಗುರುವೆ! ಸೂರ್ಯವಂಶ ವೃತ್ತಾಂತವು ತಮ್ಮಿಂದ ಹೇಳಲ್ಪಟ್ಟಿತು. ಇನ್ನು ಮುಂದೆ ಸೋಮವಂಶ ವಿಸ್ತಾರವಂ ಕೇಳಲಿಚ್ಛಿಸುತ್ತಲಿದ್ದೇನೆ. (ಸ್ಥಿರಕೀರ್ತಿಗಳಾದ ಯಾವ ಸೋಮವಂಶದ ರಾಜರುಗಳ ಸಂತತಿಯು ಈಗಲೂ ಯಶಸ್ಸನ್ನು ಹೊಂದಿ ನೆಲಗೊಂಡಿರುತ್ತದೆಯೋ, ಆ ಮಹಾನುಭಾವರುಗಳ ಕಥೆಯನ್ನು ಪೂಜ್ಯರಾದ ತಾವು ದಯೆಮಾಡಿ ಹೇಳಬೇಕು" ಎನ್ನಲು ; ಪರಾಶರ ಮುನಿಯು ಇಂತೆಂದನು:—

ಕೇಳು ಮೈತ್ರೇಯ, ಆ ಸಂತತಿಯೆಂತಿಹುದೆಂದೊಡೆ ಸ್ಥಿರಕೀರ್ತಿಯುಳ್ಳದು ; ಮತ್ತು ಪ್ರಥಿತ ತೇಜಸ್ಕರಾದ ಅತಿಬಲಪರಾಕ್ರಮದ್ಯುತಿಶೀಲಚೇಷ್ಟಾದಿಗಳಿಂದ ಯುಕ್ತರಾದ ಅತ್ಯಂತ ಗುಣಾನ್ವಿತರಾದ) ನಹುಷ ಯಯಾತಿ ಕಾರ್ತವೀರ್ಯಾದಿ ಭೂಪಾಲರುಗಳಿಂದ ಅಲಂಕರಿಸಲ್ಪಟ್ಟುದು. ಅಂತಹ ಪರಂಪರೆಯನ್ನು ನಿನಗೆ ವಿಸ್ತರಿಸಿ ಹೇಳುವೆನು.

ಕೇಳು ಮೈತ್ರೇಯ, ಅಖಿಳಜಗತ್ಕರ್ತೃವಾದ ಭಗವಂತನಾದ ನಾರಾಯಣನ ನಾಭೀಕಮಲದಲ್ಲಿ ಉತ್ಪನ್ನನಾದ ಬ್ರಹ್ಮದೇವಂಗೆ ಅತ್ರಿಯೆಂಬ ಕುಮಾರನು ಆದನು. ಅತ್ರಿಗೆ ಸೋಮನು (ಜನಿಸಿದನು) ಆಚಂದ್ರನನ್ನು ಪೂಜ್ಯನಾದ ಬ್ರಹ್ಮದೇವನು ಸಮಸ್ತ ಓಷಧಿಗಳಿಗೂ ದ್ವಿಜನಕ್ಷತ್ರಾದಿಗಳಿಗೂ ಅಧಿಪತ್ಯದಲ್ಲಿ ಅಭಿಷೇಕವಂ ಮಾಡಿದನು. ಆ ಚಂದ್ರನು ರಾಜಸೂಯಯಾಗವಂ ಮಾಡಿದನು. ಆತಂಗೆ (ಅಪ್ರಭಾವದಿಂದಲೂ), ಆಧಿಪತ್ಯದ ಪ್ರಭಾವದಿಂದಲೂ, ಮದವು ಆವೇಶವಾಯಿತು, (ಆ ಮದಾವಲೇಪದಿಂದ) ಸಕಲ ದೇವಗುರುವಾದ ಬೃಹಸ್ಪತಿಯ ಪತ್ನಿಯಾದ ತಾರೆಯೆಂಬ ಸ್ತ್ರೀಯನ್ನು ಅಪಹರಿಸಿದನು. ಆಮೇಲೆ ಬೃಹಸ್ಪತಿಯಿಂದ (ಅತಿಯಾಗಿ) ಪ್ರೇರಿಸಲ್ಪಟ್ಟಂಥ ಬ್ರಹ್ಮದೇವನಿಂದ [1]ಆಜ್ಞಾಪಿಸಲ್ಪಟ್ಟೂ,[1] ದೇವರ್ಷಿಗಳಿಂದ ಪ್ರಾರ್ಥಿತನಾದೊಡಂ (ಆಕೆಯನ್ನು) ಬಿಡದೆ ಇದ್ದುದಱಿಂದ ಬೃಹಸ್ಪತಿಯು ಚಂದ್ರನನ್ನು

---

ಪಾ—1—ಆಜ್ಞಾಪಿಸಲ್ಪಟ್ಟ, ಎಂದು,—ಕನ್ನಡ ಮಾತೃಕೆಯ ಪಾಠ.

ದ್ವೇಷಿಸಿದನು. (ಬೃಹಸ್ಪತಿಯಲ್ಲಿ ದ್ವೇಷವಿದ್ದುದರಿಂದ) ಶುಕ್ರನು ಚಂದ್ರನ ಪಕ್ಷವನ್ನು ಅವಲಂಬಿಸಿದವನಾಗಿ, ಅವನಿಗೆ ಸಹಾಯವಾದನು.[1] ಅಂಗಿರಸನ[1]† ಸನ್ನಿಧಿಯಲ್ಲಿ ಸಕಲವಿದ್ಯಾಪಾರಂಗತನಾದ [2]ಪೂಜ್ಯನಾದ ರುದ್ರನು ಬೃಹಸ್ಪತಿಗೆ[2] ಸಹಾಯವಾದನು. (ಯಾವ ಪಕ್ಷದಲ್ಲಿ ಶುಕ್ರನು ಇದ್ದನೋ), ಅಲ್ಲಿ ಶುಕ್ರನಿಗೆ ಸಹಾಯವಾಗಿ ಜಂಭಕುಂಭಾದಿ ಸಮಸ್ತ ದೈತ್ಯದಾನವ ಸಮೂಹವು ಅತಿಯಾಗಿ ಯುದ್ಧೋದ್ಯಮವನ್ನು ಮಾಡಿತು. (ಬೃಹಸ್ಪತಿಗಾದರೋ ಸಕಲ ದೇವಸೈನ್ಯಯುತನಾಗಿ ದೇವೇಂದ್ರನು ಸಹಾಯನಾದನು.) ಈಪ್ರಕಾರ ದೇವಾಸುರ ಸೇನೆಗಳಿಗೆ ನಡೆದ ಅತ್ಯಂತೋಗ್ರವಾದ ಯುದ್ಧವು ತಾರಾದೇವಿ ನಿಮಿತ್ತವಾದುದರಿಂದ, ತಾರಕಾಮಯವೆಂಬ ಹೆಸರುಳ್ಳುದಾಯಿತು. ಅನಂತರದಲ್ಲಿ ರುದ್ರರು ಮೊದಲಾದ ದೇವತೆಗಳು ಅಸುರರುಗಳಲ್ಲಿ ಸಮಸ್ತವಾದ ಶಸ್ತ್ರಂಗಳನ್ನು ಕಳಿದರು, ದೈತ್ಯದಾನವರು ದೇವತೆಗಳ ಸೈನ್ಯದಲ್ಲಿ ಸಮಸ್ತಶಸ್ತ್ರಂಗಳನ್ನು ಪ್ರಯೋಗಿಸಿದವರಾದರು. ಈಪ್ರಕಾರ ದೇವಾಸುರಯುದ್ಧದಲ್ಲಿ ಸಂಕ್ಷೋಭಕ್ಷುಬ್ಧವಾದ ಹೃದಯವುಳ್ಳ ಸಕಲ ಜಗತ್ತೂ ಸಕಲಲೋಕಪಿತಾಮಹನಾದ ಬ್ರಹ್ಮದೇವರನ್ನು ಶರಣವನ್ನು ಹೋಗುತಿರಲಾಗಿ— ಆಮೇಲೆ ಭಗವಂತನಾದ ಬ್ರಹ್ಮದೇವನು ಶುಕ್ರನನ್ನು ಶಂಕರನನ್ನು ಅಸುರರನ್ನು ದೇವತೆಗಳನ್ನೂ ನಿವಾರಣಮಾಡಿ ತಾರೆಯನ್ನು ಬೃಹಸ್ಪತಿಯ ಅಧೀನವಂ ಮಾಡಿದನು. [3]ಆ ತಾರಾದೇವಿ ಪತಿಯಾದ ಬೃಹಸ್ಪತಿಯ ವಶವಾದಮೇಲೆ,[3] ಬೃಹಸ್ಪತಿಯು ಆಕೆಯನ್ನು ಗರ್ಭವುಳ್ಳದನು ಕಂಡು,-ಕೇಳು ತಾರೆಯೇ, ನನ್ನ ಕ್ಷೇತ್ರದಲ್ಲಿ ನಿನ್ನಿಂದ ಅನ್ಯಪುರುಷನ ಸಂತಾನವು ಧರಿಸತಕ್ಕುದಲ್ಲ. ಈ ಗರ್ಭಗತವಾದ ಶಿಶುವನ್ನು ಬಿಡು, ಈ ದಿಟ್ಟತನವನ್ನು ಸಾಕುಮಾಡು—ಎಂಬದಾಗಿ ಹೇಳಲು ; ಬೃಹ

---

ಟೀಕು—† 1. ಬೃಹಸ್ಪತಿಯು ಗುರುಪುತ್ರನಾದ್ದರಿಂದ—ಎಂದು ವ್ಯಾಖ್ಯಾನಮಾಡಿದ್ದಾರೆ.

---

ಪಾ—1. ಬೃಹಸ್ಪತಿಯು ಎಂದೂ,

2. ದೇವೇಂದ್ರನು ಗುರುವಿಂಗೆ ಎಂದೂ,

3. ಈ ವಾಕ್ಯವು ಸಂಸ್ಕೃತ ಮಾತೃಕೆಯಲ್ಲಿಲ್ಲ.

ಸ್ಪತಿಯಿಂದ ಹಾಗೆ ಹೇಳಲ್ಪಟ್ಟ [1]ಅತಿಪತಿವ್ರತೆಯಾದ[1] ತಾರಾದೇವಿಯು ಭರ್ತೃವಚನಾನಂತರ ಆಗರ್ಭಗತವಾದ ಶಿಶುವನ್ನು ಲಾಳತೃಣವಿಶೇಷವಾದ ಗುಲ್ಮದಲ್ಲಿ ಬಿಟ್ಟಳು. ಆ ಗರ್ಭಗತವಾದ ಶಿಶುವು ಅವಳಿಂದ ಬಿಡಲ್ಪಟ್ಟಮಾತ್ರದಿಂದಲೇ ([2]ತನ್ನ ಅತಿತೇಜಸ್ಸಿನಿಂದ ದೇವತೆಗಳ ತೇಜಸ್ಸನ್ನು ಅಪಹರಿಸಿದವನಾಗಲು),[2] ಅದನ್ನು ನೋಡಿ ಬೃಹಸ್ಪತಿ ಚಂದ್ರರಿಬ್ಬರಿಗೂ ಕುಮಾರನ ಅತ್ಯಂತ ಮನೋಹರತೆಯಿಂದ ಅವನಲ್ಲಿ ಅಭಿಮಾನವುಂಟಾಯಿತು ಅದನ್ನು ದೇವತೆಗಳು ಕಂಡು ಉತ್ಪನ್ನಸಂದೇಹವುಳ್ಳವರಾಗಿ—ಈ ಕುಮಾರನು ಚಂದ್ರಂಗೋ ಬೃಹಸ್ಪತಿಗೋ, ಸತ್ಯವಾಗಿ ನುಡಿಯೆಂದು ತಾರಾದೇವಿಯನ್ನು ಕೇಳದಲ್ಲಿ-ಆಕೆಯು ಲಜ್ಜೆಯಿಂದ ಏನನ್ನೂ ನುಡಿಯದಿರಲಾಗಿ—ಅನೇಕವಿಧದಿಂದ ದೇವತೆಗಳು ಕೇಳಿದರೂ ಕಿಂಚಿತ್ತೂ ನುಡಿಯದೆ ಹೋಗಲು; ಅನಂತರದಲ್ಲಿ ಆ ಕುಮಾರನು ತಾಯಿಗೆ ಶಾಪವ ಕೊಡಲುದ್ಯುಕ್ತನಾಗಿ ದೃಢವಾಗಿ ನುಡಿದನು. “ದುಷ್ಟೆಯಾದ ಎಲೆ ತಾಯೇ ಕೇಳು, ಏನುಕಾರಣ ನನ್ನ ತಂದೆ ಇಂಥವನೆಂದು ನುಡಿಯದೆ ಇರ್ಪೆ ? ಅಬದ್ಧವಾದ ಲಜ್ಜೆಯುಳ್ಳ ನಿನ್ನನ್ನು ಹೇಗೆ ನೀನು [3]ವಕ್ರಹೃದಯಳಾಗಿ ಆಗುವುದಿಲ್ಲವೊ[3] ಆರೀತಿಯಿಂದ ಈಗಲೇ ಶಿಕ್ಷಿಸೇನು ? ಎಂದು ಕುಮಾರನು ನುಡಿಯುತ್ತಿರುವಲ್ಲಿ—ಭಗವಂತನಾದ ಪಿತಾಮಹನು ಬಂದು, ಆಕುಮಾರನನ್ನು ನಿವಾರಿಸಿ,—ಕೇಳು ಸಣ್ಣವಳೆ ! ಈ ಕುಮಾರನು ಬೃಹಸ್ಪತಿಗೊ ಚಂದ್ರನಿಗೊ ಎಂದು ಕೇಳಲು, ತಾರೆಯು ಲಜ್ಜೆಯಿಂದ ಸೋಮಂಗೆ ಎಂದಳು. ಆ ಮಾತಂ ಕೇಳಿದನಂತರದಲ್ಲಿ ಪ್ರಕಾಶಿಸುತ್ತಲಿದ್ದ ನಿರ್ಮಲವಾದ ಕಪೋಲಸ್ಥಲ ಕಾಂತಿಯುಳ್ಳ ಉಡುಪತಿಯಾದ ಚಂದ್ರನು ಕುಮಾರನನ್ನು ನೋಡಿ ಆಲಿಂಗನವಂ ಮಾಡಿ—ಬಳ್ಳಿತಾಯಿತು, ಬಳ್ಳಿತಾಯಿತು. (ವತ್ಸ! ನೀನು ಪ್ರಾಜ್ಞನು), ಎಂದು ಹೇಳಿ, ಆಸಣ್ಣವನಿಗೆ ಬುಧನೆಂದು ನಾಮಕರಣವನ್ನು ಮಾಡಿದನು.

(ಕೇಳು ಮೈತ್ರೇಯ, ಆ ಬುಧನಿಗೆ ಇಳಾದೇವಿಯಲ್ಲಿ ಪುರೂರವನು

---

ಟೀಕು—1. “ ಅತಿಪತಿವ್ರತೇತಿಪದೇನ ಗರ್ಭೋಬಲಾದಾಹಿತ ಇತ್ಯವಗಮ್ಯತೇ” ಎಂದು ವ್ಯಾಖ್ಯಾನ ಮಾಡಿದ್ದಾರೆ.

---

ಪಾ—2. ದೇವತೆಗಳ ತೇಜಸ್ಸಿನಿಂದ ಪ್ರಕಾಶಿಸುವುದನ್ನು ನೋಡಿ-ಕನ್ನಡ ಮಾತೃಕೆ

3. ಅತಿದೂಷಿತೆಯಪ್ಪೆಯೋ—ಕನ್ನಡ ಮಾತೃಕೆ.

ಹೇಗೆ ಉತ್ಪನ್ನನಾದನೊ ಅದನ್ನು ಆಗಲೇ ಹೇಳಿದ್ದೆನು.) ಆ ಪೂರರವನೆಂಬ ರಾಯನು ಅತಿದಾನಶೀಲನು, ಅತ್ಯಂತ ಯಾಗಾದ್ಯನುಷ್ಠಾನಶೀಲನು, ಅತ್ಯಂತ ತೇಜಸ್ವಿಯು [1]ಆ ಸತ್ಯವಾದಿಯಾದ ಅತಿರೂಪಸ್ವಿಯಾದ ಮನಸ್ವಿಯಾದ ಪುರೂರವಸ್ಸನ್ನು ಮಿತ್ರಾವರುಣಶಾಪದಿಂದ ಭೂಲೋಕದಲ್ಲಿ (ತನ್ನಿಂದ ವಾಸಮಾಡಲ್ಪಡಬೇಕೆಂದು ಕೃತಮತಿಯಾಗಿ, ಭೂಲೋಕದಲ್ಲಿ) ಇದ್ದ ಊರ್ವಶಿಯು ಕಂಡು,[1] (ಗರ್ವವನ್ನು ತೊರೆದು,) ಬಿಡಲ್ಪಟ್ಟ ಸ್ವರ್ಗಾದಿ ಸುಖವನುಳ್ಳವಳಾಗಿ ಆತನನ್ನೇ ಅನುಸರಿಸಿಕೊಂಡು ಇದ್ದಳು. ಆತನು ಸಕಲಲೋಕ ಸ್ತ್ರೀಯರುಗಳಗಿಂತ ಅತಿಯುಶವಾದ ಕಾಂತಿ ಸೌಕುಮಾರ್ಯ ಲಾವಣ್ಯಗತಿವಿಲಾಸಸಾಹಸಾದಿಗುಣಗಳುಳ್ಳ ಅವಳಂ ಕಂಡು ತದ್ಗತವಾದ ಮನಸ್ಸುಳ್ಳವನಾದನು. (ಅವರಿಬ್ಬರ ಮನಸ್ಸು ಅನ್ಯೋನ್ಯಾಸಕ್ತವಾಯಿತು. ಅವರು ಬಿಡಲ್ಪಟ್ಟ ಅನ್ಯಪ್ರಯೋಜನವುಳ್ಳವರಾಗಿಯೂ, ಅನ್ಯದೃಷ್ಟಿಯಿಲ್ಲ ದವರಾಗಿಯೂ ಆದರು.) ಕೇಳು ಮೈತ್ರೇಯ, ರಾಯನು ಪ್ರೀತಿಯಿಂದ ಆದೇವಸ್ತ್ರೀಯಂ ಕುರಿತು ಈ ಮಾತ ನುಡಿದನು. "ಶೋಭನವಾದ ಭ್ರೂವಿಲಾಸಗಳನುಳ್ಳವಳೆ! ನಿನ್ನಲ್ಲಿ ನಾನು ಅತ್ಯಂತ ಪ್ರೇಮವುಳ್ಳವನಾ ದೆನು. ನೀನು ನನ್ನಲ್ಲಿ ಪ್ರೇಮವುಳ್ಳಂಥವಳಾಗು. ಸ್ನೇಹವನ್ನು ವರ್ಧಿಸು" ಎಂದು ನುಡಿಯಲ್ಪಟ್ಟವಳಾದ ಊರ್ವಶಿಯು ರಾಯನಂ ಕುರಿತು, "ಕೇಳು ರಾಯನೇ, ನೀನು ನನ್ನ ಸಮಯಸಂಕೇತವನ್ನು ಪರಿಪಾಲಿಸಿದ್ದಲ್ಲಿ ಹಾಗೆಯೇ ಆಗಲಿ" ಎನ್ನಲಾಮಾತಂ ಕೇಳಿ ಪುರೂರವಸ್ಸು, "ಅದೇನು ಸಮಯಸಂಕೇ ತವು? ಅದಂ ಎನ್ನೊಡನೆ ಹೇಳತಕ್ಕುದು" ಎಂದು ಕೇಳಲಾಗಿ; ಅಪ್ಸರ ಸ್ತ್ರೀಯು ನುಡಿಯುತಿದ್ದಾಳೆ. "ಕೇಳು, ನನ್ನ ಶಯನಸಮೀಪದಲ್ಲಿ ಪುತ್ರ ಪ್ರಾಯರಾದ ಎರಡು ತಗರುಗಳು ಇರುತಲಿದ್ದಾವು, ಅವು ಒಂದು ಸಮಯ ದಲ್ಲಿಯೂ ಅಪಹರಿಸಲ್ಪಡತಕ್ಕುವಲ್ಲ. ನೀನು ನಗ್ನನಾಗಿ ನನ್ನಂ ನೋಡತಕ್ಕ ವನಲ್ಲ, ನನಗೆ ಆಹಾರವು ಘೃತಮಾತ್ರವೇ ಆಗತಕ್ಕುದು" ಎನ್ನಲು; "ನೀನು ಮಾಡಿದ ಸಮಯಸಂಕೇತಗಳು ಹಾಗೆಯೇ ಆಗಲಿ!" ಎಂದು

---

ಪಾ—1. ಯಾವ ಸತ್ಯವಾದಿಯಾದ ಪುರೂರವಸ್ಸು ಭೂಲೋಕದಲ್ಲಿ ಇದ್ದ ಊರ್ವ ಶಿಯನ್ನು ಕಂಡು, ತನ್ನ ಸಂಗಡ ವಾಸವಂ ಮಾಡಿಕೊಂಡಿರು ಎಂದು ನುಡಿಯಲು—ಎಂದು ಕನ್ನಡ ಮಾತೃಕೆ.

ನುಡಿದು, ಆಕೆಯೊಡನೆ ಅಳಕಾಪಟ್ಟಣದ ಚೈತ್ರರಥಾದಿ ವನಂಗಳಲ್ಲಿ ಅಮಲವಾದ ಪದ್ಮಷಂಡಗಳಲ್ಲಿ ಅತಿರಮಣೀಯವಾದ ಮಾನಸಸರೋವರಗಳಲ್ಲಿ ವಿಹರಿಸುವವನಾಗಿ ಅರುವತ್ತೊಂದುಸಾವಿರ ವರ್ಷವು ಅನುದಿನವು ಪ್ರವೃದ್ಧಮಾನ ಪ್ರಮೋದವುಳ್ಳವನಾಗಿ ಕಾಲಕ್ರಮಣವಂಮಾಡಿದನು. ಊರ್ವಶಿಯೂ ಕೂಡ ರಾಯನ ಸಂಗೋಪಭೋಗದಿಂದ ಪ್ರತಿದಿನಪ್ರವರ್ಧಮಾನವಾದ [1] (ಅನುರಾಗವುಳ್ಳವಳಾಗಿ ಅಮರಲೋಕವಾಸದಲ್ಲಿಯೂ ಆಸೆಯನ್ನುತೊರೆದಳು. ಊರ್ವಶಿಯಿಂದ ಬಿಡಲ್ಪಟ್ಟ ಸ್ವರ್ಗಲೋಕವು ಇತರ ಸ್ವರ್ಗಸ್ಥರಾದ)[1] ಅಪ್ಸರಸ್ಸುಗಳಿಗೂ ಸಿದ್ಧಗಂಧರ್ವರಿಗೂ ಅತ್ಯಂತ ರಮಣೀಯವಾಗಿ ತೋರಲಿಲ್ಲ. ಅನಂತರದಲ್ಲಿ (ಊರ್ವಶಿಯು ಪುರೂರವಸ್ಸಿನೊಡನೆ ಮಾಡಿದ ಸಮಯವರಿತು ವಿಶ್ವಾವಸುವು ಗಂಧರ್ವಸಹಿತನಾಗಿ ಬಂದು ರಾತ್ರಿಯಲ್ಲಿ ಶಯನಸಮೀಪದೊಳಿದ್ದ ತಗರೊಂದನ್ನು ಅಪಹರಿಸಿದನು. ಅದಂ ಆಕಾಶದಲ್ಲಿ ಎಳೆದುಕೊಂಡುಹೋಗುವ ಸಮಯದಲ್ಲಿ ಆತಗರಿನ ಶಬ್ದವನ್ನು ಕೇಳಿ (ಊರ್ವಶಿಯು)–ಅನಾಥೆಯಾದವಳ ಪುತ್ರನು ಆವನೋ ಒರ್ವನಿಂದ ಅಪಹರಿಸಲ್ಪಡುತಲಿದ್ದೀತು, ಆವನಂ ಮರಿಹುಗಲಿ, ಎಂದು ವ್ಯಾಕುಲಚಿತ್ತಳಾಗಿ ಪ್ರಳಾಪಿಸುತಿರುವುದಂ ಕೇಳಿ, ಪುರೂರವಸ್ಸು–ತಾನು ನಗ್ನನು, ತನ್ನಂ ದೇವಿಯು ನೋಡಬಾರದಲ್ಲ–ಎಂದು ತಾನೆಯ್ದದೆ ಇದ್ದನು. ಅನಂತರದಲ್ಲಿ ಮತ್ತೊಂದು ತಗರನ್ನು ಗಂಧರ್ವರು ಅಪಹರಿಸಿದವರಾದರು. ಅಪಹರಿಸಲ್ಪಡುತಿದ್ದ ಆತಗರಿನ ಶಬ್ದವಂ ಕೇಳಿ,–ತಾನು ಅನಾಥೆಯು, ಪತಿಹೀನೆಯು, ಕುತ್ಸಿತಪುರುಷಾಶ್ರಯಳು ಎಂದು ಮೊರೆಯಿಟ್ಟಳು. ಅವಳ ಆರ್ತಧ್ವನಿಯನ್ನು ಕೇಳಿ, ಪುರೂರವಸ್ಸು ಕೋಪದಿಂದ–ತಾನು ವಸ್ತ್ರಹೀನನಾದರೂ ಅಂಧಕಾರವಷ್ಟೆ, ಎಂದು ಖಡ್ಗಧಾರಿಯಾಗಿ ಆಕಾಶಗಾಮಿಯಾಗಿ "ನಿಲ್ಲುನಿಲ್ಲು, ದುಷ್ಟದುಷ್ಟ, ಕೊಲಲ್ಪಟ್ಟೆ," ಎಂದು ಅಟ್ಟಿಕೊಂಡು [2] (ಪೋದನು. ಅಷ್ಟರೊಳಗೆ ಆ ಗಂಧರ್ವರಿಂದ ಅತ್ಯುಜ್ಜ್ವಲವಾದ ಮಿಂಚು

---

ಪಾ –1. ಅನುರಾಗವಂ ನೋಡಿ ಸ್ವರ್ಗಾಧಿಪತಿಯಾದ ದೇವೇಂದ್ರನಲ್ಲಿಯೂ ಅಪೇಕ್ಷೆಮಾಡದೆ ಇದ್ದಲ್ಲಿ ಊರ್ವಶಿ ಹೊರಟಾದ ಸ್ವರ್ಗಸ್ಥರಾದ— ಕನ್ನಡ ಮಾತೃಕೆ.

2. ಹೋಗುತಿರಲಾಗಿ ಆಗಂಧರ್ವರ ಅತ್ಯಂತ ಕಾಂತಿಯಿಂದಕನ್ನಡ–ಮಾತೃಕೆ.

ಜನಿಸಲ್ಪಟ್ಟಿತು. ಅದಱ ಕಾಂತಿಯಿಂದ)[2] ಪ್ರಕಾಶನಿರ್ವಾಣನಾದ ರಾಯನಂ ಊರ್ವಶಿಯು ನೋಡಿ (ನಿವೃತ್ತಸಂಕೇತವುಳ್ಳವಳಾಗಿ ಹೊಱಟುಹೋದಳು.) ಆಗಂಧರ್ವವು ತಾವು ಬಂದ ಕಾರ್ಯವು ಆದುದಱಿಂದ ಎರಡು ತಗಱುಗಳನ್ನೂ ಅಲ್ಲೇ ಬಿಟ್ಟು [1]ಭಯದಿಂದ[1] ತಮ್ಮ ಲೋಕವನೆಯ್ದಿದರು. ರಾಯನು [2]ಅವರ ದೇಹಕಾಯಿಂದ ಪ್ರಕಾಶಿಸುತಲಿದ್ದ[2] ಎರಡು ಮೇಷಗಳನ್ನೂ ತೆಗೆದುಕೊಂಡು ಸಂತುಷ್ಟವಾದ ಮನಸ್ಸುಳ್ಳವನಾಗಿ ತನ್ನ ಶಯನಸ್ಥಲವನೆಯ್ದಿ ಊರ್ವಶಿಯಂ ಕಾಣಲಿಲ್ಲ. ಅದಱಿಂದ ಚಿತ್ತಭ್ರಾಂತಿಯುಂಟಾಗಿ (ವಸ್ತ್ರಹೀನನಾಗಿಯೇ ಉನ್ಮತ್ತನಹಾಗೆ ತಿರುಗುತಿರಲಾಗಿ, ಕುರುಕ್ಷೇತ್ರದಲ್ಲಿ ಕಮಲಸರಸ್ಸಿನಲ್ಲಿ ನಾಲ್ಕುಮಂದಿ ಅಪ್ಸರಸ್ಸುಗಳೊಡನೆ ಸಮವೇತವಾಗಿರುವ ಊರ್ವಶಿಯಂ ಕಂಡು, ರಾಯನು ಉನ್ಮತನಾಗಿ—ಎಲೆ ಸ್ತ್ರೀಯೆ,[3] (ನಿಲ್ಲು, ಮನಸ್ಸಿನಲ್ಲಿ ಘೋರೆಯಾದವಳೇ ! ನಿಲ್ಲು, ವಾಕ್ಕಿನಲ್ಲಿ ಕಪಟಿಯಾದವಳೆ ![3] ನಿಲ್ಲು), ಇಲ್ಲಿ ನಿಲ್ಲುನಿಲ್ಲು ಎಂದು ಅನೇಕಪ್ರಕಾರವಾದ ಮಾತುಗಳಂ ನುಡಿಸುತ್ತಿರಲಾಗಿ ; ಆ ಮಾತಂ ಕೇಳಿ ಊರ್ವಶಿಯು-- [4]ಕೇಳು ಮಹಾರಾಜನೇ ! ಈ ಅವಿವೇಕವ್ಯಾಪಾರವು ಸಾಕು ನಾನು ಈಗ ಗರ್ಭಿಣಿಯಾಗಿದ್ದೇನೆ. ವತ್ಸರಾಂತರದಲ್ಲಿ ನೀನು ಇಲ್ಲಿ ಬರಲುಳ್ಳವನು. ನಿನಗೆ ಕುಮಾರನಾದಾನು. ಒಂದುರಾತ್ರಿ ಮಾತ್ರ ನಿನ್ನಸಂಗಡ ವಾಸವಂ ಮಾಡೇನು."[4] (ಎಂದು ಹೇಳಲು ; ಪ್ರಹೃಷ್ಟನಾಗಿ, ತನ್ನ ಪುರವನ್ನು ಕುಱಿತು ತೆರಳಿದವನಾದನು) (ಇತ್ತ ಊರ್ವಶಿಯು) ಮಿಕ್ಕ ಅಪ್ಸರೆಯರನ್ನು ಕಂಡು-ಈರಾಯನು ಉತ್ತಮಪುರುಷನು, ಅತ್ಯಂತ ಶ್ರೇಷ್ಠನಾದವನು.

---

ಟೀಕು—3. ವಾಕ್ಕಿನಲ್ಲಿ ಕಪಟಿಯಾದಳೇ = ವಾಕ್ಕಿನಲ್ಲಿ ಎಂದರೆ ನನ್ನೊಡನೆ ವಾಗ್ಮಿಶ್ರವನ್ನು ಮಾಡು ಎಂದರ್ಥ. ಇದರಿಂದ "ಅಯೇ ಜಾಯೇ ಮನಸಾತಿಷ್ಠಘೋರೆ ವಚಾಂಸಿ ಮಿಶ್ರೀಕೃಣವಾವಹೈ" ಇತ್ಯಾದಿಯಾದ ಅವರ ಸಂವಾದರೂಪವಾದ ಸೂಕ್ತವು ಸ್ಮಾರಿತವಾಯಿತೆಂದು ವ್ಯಾಖ್ಯಾತೃಗಳು ಬರೆಯುತ್ತಾರೆ.

4. ಈ ಊರ್ವಶಿಯ ಪ್ರತಿವಚನದಿಂದ "ಪುರೂರವಾಮಾಕೃಥಾ" ಇತ್ಯಾದಿ ಸೂಕ್ತವು ಸೂಚಿಸಲ್ಪಟ್ಟಿತೆಂದು ವ್ಯಾಖ್ಯಾತೃಗಳು ಬರೆಯುತ್ತಾರೆ.

---

ಪಾ—1, 2. ಸಂಸ್ಕೃತ ಮೂಲದಲ್ಲಿ ಇಲ್ಲ.

[1](ಯಾವ ಈ ರಾಯನೊಡನೆ ಇಷ್ಟುಕಾಲ ಅನುರಾಗದಿಂದ ಆಕರ್ಷಿಸಲ್ಪಟ್ಟ ಮನಸ್ಸುಳ್ಳವಳಾಗಿ ಇದ್ದೆನೋ ಅಂಥವನು)[1] ಎಂದು ಹೇಳಿದಳು. ಆ ಮಾತಂ ಕೇಳಿ ಅಪ್ಸರಸ್ಸುಗಳು ಈ ಮಾತಂ ನುಡಿದರು. ಒಳ್ಳೆತಾಯಿತು ಒಳ್ಳೆತಾಯಿತು. [2](ಈತನ ರೂಪವು ಮನೋಹರವಾದುದು. ಈತನ ಸಂಗಡ ಸಹಸ್ಥಿತಿಯು ಸರ್ವಕಾಲದಲ್ಲಿ ನಮಗೂ ಉಂಟಾಗಲಿ! ಎಂದರು)[2]

ಕೇಳು ಮೈತ್ರೇಯ! ಸಂವತ್ಸರ ಪೂರ್ತಿಯಾಗುತ್ತಮಿರಲಾಗಿ, ಆರಾಯನು ಅಲ್ಲಿಗೆ ಬಂದನು. (ಆಯುವೆಂದು ಹೆಸರುಳ್ಳ) ಕುಮಾರನನ್ನು ಊರ್ವಶಿಯು ರಾಯನಿಗೆ ಕೊಟ್ಟಳು. ಪುತ್ರನನ್ನು ಕೊಟ್ಟು ಆಹೊತ್ತಿನ ರಾತ್ರಿ ಅಲ್ಲಿ ಆರಾಯನ ಸಂಗಡ ಇದ್ದು ಐದುಮಂದಿ ಕುಮಾರರ ಉತ್ಪತ್ತಿಗೋಸ್ಕರ ಗರ್ಭವನ್ನು ಧರಿಸಿದಳು. ರಾಯನಂ ಕುರಿತು—"ಎಲೈ ಮಹಾರಾಜನೇ, ಸಮಸ್ತ ಗಂಧರ್ವರೂ (ನಮ್ಮಲ್ಲಿ ಪ್ರೀತಿಯಿಂದ ಮಹಾರಾಜನಾದ ನಿನಗೆ) ವರವಂ ಕೊಡುವವರಾಗಿ ಬಂದಿದ್ದಾರೆ, ವರವಂ ಕೇಳು." ಎಂದಳು. "ನನಗೆ ವರವಾವುದೆಂದರೆ, ಕೇಳಿ ಗಂಧರ್ವರಿರಾ! ಜಯಿಸಲ್ಪಟ್ಟ ಸಕಲ ಶತ್ರುಗಳನುಳ್ಳವನಾಗಿ ಜಯಿಸಲ್ಪಟ್ಟ ಇಂದ್ರಿಯಗಳನುಳ್ಳವನಾಗಿ ಬಂಧುವರ್ಗದೊಡಗೂಡಿ ಅತಿಬಲಕೋಶವುಳ್ಳವನಾಗಬೇಕು. ಊರ್ವಶೀ ಸಾಯುಜ್ಯಹೊರತು ಬೇರೆ[3] ನನಗೆ ಪ್ರಾಪ್ತವ್ಯವು ಬೇಡಿ. ಅದುಕಾರಣ ನಾನು ಈ ಊರ್ವಶಿಯೊಡನೆಯೇ ಕಾಲವನ್ನು ಕಳೆಯಲು ಆಶಿಸುತ್ತೇನೆ. ಊರ್ವಶೀಸಾಲೋಕ್ಯವಿಲ್ಲದ ವರವಂ ಕೊಡಬೇಡಿ. ಊರ್ವಶೀ ಸಹಿತವಾಗಿರುವ ವರವಂ ಕೊಡಿ" ಎಂದು ಕೇಳುತಿರಲಾಗಿ; ಗಂಧರ್ವರು ರಾಯಂಗೆ ಬಂದು ಅಗ್ನಿಸ್ಥಾಲಿಯಂ ಕೊಟ್ಟು, "ಕೇಳು ರಾಯನೇ, ಈ ಅಗ್ನಿಯನ್ನು ವೇದೋಕ್ತಮಾರ್ಗದಲ್ಲಿ ಮೂರುಪ್ರಕಾರವಾಗಿ ಮಾಡಿ ಊರ್ವಶೀ ಸಾಲೋಕ್ಯವುಂಟಾಗಬೇಕೆಂಬ ಮನೋರಥಕ್ಕಾಗಿ ಯಾಗವನ್ನು ಚೆನ್ನಾಗಿ ಮಾಡುವವನಾಗು. ಆಮೇಲೆ ನಿನ್ನ ಮನೋರಥವು ಪೂರ್ತಿಯಾದೀತು." ಎಂದ ಮಾತಂ ಕೇಳಿ ಅಗ್ನಿಸ್ಥಾಲಿಯಂ ಕೊಂಡೆಯ್ದಿದನು.

---

ಪಾ—1. ಬಂದಾನೊಂದು ಕಾರಣದಿಂದ ಈ ರಾಯನೊಳನುರಾಗಮನಸ್ಸಿನಿಂದ ಇರಲ್ಪಟ್ಟಿತು—ಎಂದೂ,

2. ಈತನ ರೂಪಿನಿಂದ ನಮಗೂ ಸಮಸ್ತಮನೋರಥವು ಆಗಲುಳ್ಳದು—ಎಂದೂ ಕನ್ನಡ ಮಾತೃಕೆ.

ಕೇಳು ಮೈತ್ರೇಯ! ರಾಯನು ಭ್ರಾಂತಿಯಿಂದ ನಡುಕಾಡಿನಲ್ಲಿ "ಅಕಟಕಟ! ಎನ್ನ ಮೂಢತೆಯನೇನೆಂದು ಹೇಳಲಿ; ಅಗ್ನಿಸ್ಥಾಲಿಯಂ ತಂದವನು ಊರ್ವಶಿಯಂ ಸಂಗಡ ತಾರದೆ ಹೋದೆನು!" ಎಂದು ಚಿಂತಿಸುತ ಆ ಸ್ಥಾಲಿಯನಲ್ಲಿಯೇ ಬಿಟ್ಟು, ಪಟ್ಟಣವಂ ಪ್ರವೇಶಮಾಡಿ, ಆ ದಿನದ ಅರ್ಧರಾತ್ರಿಯಲ್ಲಿ ನಿದ್ದೆಯಿಲ್ಲದವನಾಗಿ ಚಿಂತಿಸಿದವನಾದನು. "ನನಗೆ ಊರ್ವಶೀಸಾಲೋಕ್ಯಾರ್ಥವಾಗಿ ಅಗ್ನಿಸ್ಥಾಲಿಯು ಗಂಧರ್ವರಿಂದ ಕೊಡಲ್ಪಟ್ಟಿತು; ಅದು ಅಡವಿಯೊಳು ಬಿಡಲ್ಪಟ್ಟಿತು; ಅದುಕಾರಣ ಅಗ್ನಿಸ್ಥಾಲಿಯಂ ತರುವುದಕ್ಕೋಸ್ಕರ ನಾನು ಅಲ್ಲಿಗೆ ಹೋಪೆನು ಎಂದು (ಎದ್ದು, ಅಲ್ಲಿಗೆ) ಹೋಗಿ, ಆಯೆಡೆಯಲ್ಲಿ ಆ ಸ್ಥಾಲಿಯಂ ಕಾಣದೆ, [1]ಶಮೀವೃಕ್ಷವನ್ನು ಅಶ್ವತ್ಥವೃಕ್ಷವನ್ನು[1] ಕಂಡು, ಚಿಂತಿಸಿ, "ನಾನು ಇಲ್ಲಿ ಅಗ್ನಿಸ್ಥಾಲಿಯನಿರಿಸಿದೆನು, ಅದು [2]ಅಶ್ವತ್ಥವೃಕ್ಷವೂ ಶಮೀವೃಕ್ಷವೂ ಆಯಿತು:[2] ಆದುದರಿಂದ ಆ ಅಶ್ವತ್ಥವನ್ನೂ ಶಮಿಯನ್ನೂ ತೆಗೆದುಕೊಂಡು ನನ್ನ ಪಟ್ಟಣಕ್ಕೆ ಹೋಗಿ ಅರಣಿಯಂ ಮಾಡಿ ಉತ್ಪನ್ನವಾದ ಅಗ್ನಿಯಲ್ಲಿ ಯಾಗವಂ ಮಾಡೇನು"—ಎಂದು ತನ್ನ ಪಟ್ಟಣವನೆಯ್ದಿ ಅರಣಿಯಂ ಮಾಡಿದನು. ಅರಣಿಯ ಪ್ರಮಾಣವನ್ನು ಅಂಗುಲಿಗಳಿಂದ ಏರ್ಪಡಿಸಲು ಗಾಯತ್ರೀಮಂತ್ರಜಪವಂ ಪರಿಪಠಿಸುವನಾದನು. ([3]ಅರಣಿಯು ಗಾಯತ್ರಿಯ) ಅಕ್ಷರಸಂಖ್ಯಾಕವಾದ ಅಂಗುಲಿಗಳ ಗಣನೆ(ಯುಳ್ಳ)ದಾಯಿತು.)[3] ಈಪ್ರಕಾರದಲ್ಲಿ (ಮಾಡಿದ) ಆ ಅರಣಿಯಲ್ಲಿ (ಮೂರು) ಅಗ್ನಿಯಂ ಕಡೆದು ಹುಟ್ಟಿಸಿ, ವೇದವಿಧಿಯಿಂ ಯಾಗವ ಮಾಡಿ, ಊರ್ವಶೀಸಾಲೋಕ್ಯವೆಂಬ ಫಲಾಕಾಂಕ್ಷೆಯಂ ಸಂಕಲ್ಪಿಸಿ, ಮತ್ತೂ (ಅದೇ ಅಗ್ನಿಯಿಂದ) ಪಲವಗೆಯಾದ ಯಾಗಂಗಳಂ ಮಾಡಿ, ಗಂಧರ್ವಲೋಕಗಳನೆಯ್ದಿ, ಊರ್ವಶಿಯೊಡನೆ ವಿಶೇಷ ಭೋಗವನೆಯ್ದಿದನು. ಮೊದಲು ಒಂದು [1](ಅಗ್ನಿಯು ಆಯಿತು. ಅದರಿಂದಲೇ ಈ)[4] ಮೂರುಪ್ರಕಾರವಾಗಿ ಪ್ರವರ್ತಿಸಲ್ಪಟ್ಟಿತು.

ಎಂಬಲ್ಲಿಗೆ ಶ್ರೀಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಆರನೆಯ ಅಧ್ಯಾಯಂ.

---

ಟೀಕು—1. "ಶಮೀಗರ್ಭಂಚಾಶ್ವತ್ಥಂ" 2. "ಶಮೀಗರ್ಭೋಽಶ್ವತ್ಥೋಭೂತ್" ಎಂದು ಸಂಸ್ಕೃತ ಮಾತೃಕೆಯಲ್ಲಿದೆ.

3. ಆದ್ದರಿಂದ ಅರಣಿಯು ಇಪ್ಪತ್ತುನಾಲ್ಕು ಅಂಗುಲವುಳ್ಳದೆಂದಾಯಿತು.

ಪಾ—4. ಐದು ಆರನೆಯ ಮನ್ವಂತರದಲ್ಲಿ—ಕನ್ನಡ ಮಾತೃಕೆ.

## ಏಳನೆಯ ಅಧ್ಯಾಯ.

ಕೇಳು ಮೈತ್ರೇಯ! ಪುರೂರವರಾಯಂಗೆ [1](ಆಯುವು, ಧೀಮಂತನಾದ ಅಮಾವಸುವು, ಶ್ರುತಾಯು, ಶತಾಯು, ಅಯುತಾಯು ಎಂಬ)[1] ಆಱುಮಂದಿ ಪುತ್ರರು ಆದರು. ಅಮಾವಸುವಿಂಗೆ ಭೀಮನಾಮಕನು; ಆತಂಗೆ ಕಾಂಚನನು, ಕಾಂಚನನಿಂದ ಸಹೋತ್ರನು, ಆತಂಗೆ ಜಹ್ನು. (ಆ ಜಹ್ನುವು ತನ್ನ) ಯಾಗಶಾಲೆಯಂ ಗಂಗಾದೇವಿಯು ಜಲದಿಂ ನನೆಯಿಸುತಿರಲಾಗಿ, ಕೋಪದಿಂ ಕೆಂಪಾದ ಕಣ್ಣುಗಳನುಳ್ಳವನಾಗಿ ಭಗವಂತನಾದ ಯಜ್ಞಪುರುಷನಾದ ನಾರಾಯಣನಂ ಪರಮಧ್ಯಾನಸಮಾಧಿಯಿಂ ತನ್ನ ಹೃದಯದೊಳಗಾರೋಪಿಸಿ ಸಮಸ್ತ ಗಂಗಾಜಲವನ್ನೂ ಪಾನ ಮಾಡಿದನು. ಅದಂ ಕಂಡು [2]ದೇವತೆಗಳು ಮುನಿಗಳು[2] ಅವನಂ ಕುಱಿತು ಪ್ರಾರ್ಥನೆ ಮಾಡಿದರು. ಅವರ ಪ್ರಾರ್ಥನೆಯಿಂದ ಜಹ್ನುಮಹಾರಾಯನು ಮಗಳಾಗಿ ಭಾವಿಸಿ ಗಂಗೆಯಂ ಬಿಟ್ಟನು. ಆ ಜಹ್ನುರಾಯಂಗೆ ಸುಮಂತನು ಪುತ್ರನಾದನು. ಆತಂಗೆ ಅಜಕನು. ಆತನಿಂದ ಬಲಕಾಶ್ವನು. ಅತಂಗೆ ಕುಶನು. ಅವನಿಗೆ ಕುಶಾಂಬನು, ಕುಶನಾಭನು, ಧೂರ್ತರಜಸ್ಸು, ವಸು ಎಂಬ ನಾಲ್ವರು ಪುತ್ರರಾದರು. ಆನಾಲ್ವರು ಪುತ್ರರ ಮಧ್ಯದಲ್ಲಿ ಕುಶಾಂಬರಾಯನು ಶತಕ್ರತುವಾದ ದೇವೇಂದ್ರಂಗೆ ಸಮಾನವಾದ ಪುತ್ರನು ತನಗುಂಟಾಗಬೇಕೆಂದು ತಪಸ್ಸಂ ಮಾಡಿದನು. ಅಂತು ಉಗ್ರತಪವಂ ಗೆಯ್ವ ಕುಶಾಂಬರಾಯನಂ ಕಂಡು ಶತಮನ್ಯುವು ತನಗೆ ಸರಿಯಾದ (ಪರಾಕ್ರಮವುಳ್ಳ) ಪುತ್ರನೀತಂಗಾಗಬಾರದೆಂದು ತಾನೇ ಪುತ್ರನಾಗಿ ಜನಿಸಿದನು. ಆತನು ಗಾಧಿಯೆಂದು ಕೌಶಿಕಾನ್ವಯದಲ್ಲಿ ಹುಟ್ಟಿದನು. ಆಗಾಧಿಯು ಸತ್ಯವತಿಯೆಂಬ ಕುಮಾರಿಯಂ ಪಡೆದನು. ಆಸತ್ಯವತಿಯಂ ಭೃಗುವಿನ ಕುಮಾರಕನಾದ ಋಚಿಕನು ವರಿಸಿದನು. ಗಾಧಿರಾಯನು ಅತ್ಯಂತ ಕೋಪಿಯಾದ ಅತಿವೃದ್ಧನಾದ (ಬ್ರಾಹ್ಮಣನಾದ) ಋಚಿಕಂಗೆ ಕನ್ನೆಯಂ ಕೊಡಲು ಇಷ್ಟವಿಲ್ಲದೆ ಒಂದು ಕಿವಿ ಶ್ಯಾಮವರ್ಣವುಳ್ಳುದಾಗಿ ಚಂದ್ರಸಂಕಾಶವಾಗಿ ವಾಯುವೇಗ

---

ಪಾ—1. ಆಯುವೆಂಬಾತನು, ಆತಂಗೆ ಧೀಮಂತನು, ವಸು, ಶ್ರುತಾಯು ಇವರೇ ಮೊದಲಾದ–ಎಂದು ಕನ್ನಡ ಮಾತೃಕೆ; ಇದು ತಪ್ಪೆಂದು ತೋರುತ್ತದೆ.

2. ಸಂಸ್ಕೃತದ ಮೂಲದಲ್ಲಿ ದೇವರ್ಷಿಯು; ಎಂದಿದೆ.

ವುಳ್ಳುದಾಗಿ ಸಾವಿರ ಸಂಖ್ಯಾಕವಾದ ಅಶ್ವಂಗಳನ್ನು ಕನ್ಯಾಶುಲ್ಕವಾಗಿ ಕೊಂಡುಬಂದರೆ ಕನ್ನೆಯುಂ ಕೊಟ್ಟೇನು, ಎಂದನು. ಆವಮಾತಂ ಕೇಳಿ ಋಚಿಕನು ವರುಣನೆಡೆಗೆಯ್ದಿ ಅಶ್ವತೀರ್ಥದೊಳಗುತ್ಪನ್ನವಾದ ತಾದೃಶ ವಾದ ಅಶ್ವಸಹಸ್ರವಂ ತಂದು ಕೊಟ್ಟುದರಿಂದ (ಗಾಧಿಯು ಆತನಿಗೆ) ಕನ್ಯಾ ದಾನವಂ ಮಾಡಿದನಾದಕಾರಣ ಋಚಿಕನು (ಸತ್ಯವತಿಯ) ಪಾಣಿಗ್ರಹ ಣವಂ ಮಾಡಿದನು. ವಿವಾಹವಾದ ಬಳಿಕ ಆಯುಕ್ಕನಿಗೆ ಸಂತಾನಾರ್ಥವಾಗಿ ಒಂದು ಚರುವಂ ನಿರ್ಮಿಸಿದನು. ಅದಂ ಕಂಡವಳಾಗಿ ತಾನು ಪತಿಯುಂ ಕುರಿತು—"ಕೇಳು ಸ್ವಾಮಿ! ನಮ್ಮ ತಾಯಿಗೆ ಕ್ಷತ್ರಶ್ರೇಷ್ಠನಾದ ಪುತ್ರೋ ತ್ಪತ್ತ್ಯರ್ಥವಾಗಿ (ಬೇರೊಂದು ಚರುವಂ) ಅನುಗ್ರಹಿಸಬೇಕು" ಎಂದು ಪ್ರಾರ್ಥಿಸಲಾಗಿ; ಬೇರೆ ಚರುವೊಂದನುಂಟುಮಾಡಿ, "ಕೇಳು ಸತಿಯೇ, ಈ ಚರುವು ನಿನಗೆ; ಬೇರೆ ಚರುವು ನಿನ್ನ ತಾಯಿಗೆ ಕೊಡತಕ್ಕುದು" ಎಂದು ಹೇಳಿ, ತಾನು ವನವಂ ಕುರಿತು ತೆರಳಿದನು. ಆ ಚರುವಂ ತಾಯಿಗೆ (ಭುಜಿಸಲು) ಕೊಡುವ ಸಮಯದಲ್ಲಿ—ಅವಳ ತಾಯಿ, "ಕೇಳು ಮಗಳೇ! ಲೋಕದಲ್ಲಿ ಪುರುಷನು ತನ್ನ ಪುತ್ರನ ಅತ್ಯಂತ ಗುಣರೂಪಂಗಳನಪೇ ಕ್ಷಿಸುವನು. (ಯಾವನು ತನ್ನ ಪತ್ನಿಯ ತಮ್ಮನ ಗುಣರೂಪಗಳಲ್ಲಿ ಅಷ್ಟು ಆದರಣವನ್ನು ಮಾಡುತಿದ್ದಾನು?) ಆದಕಾರಣ ನಿನಗೆ ಕೊಟ್ಟ ಚರುವನ್ನು ನನಗೆ ಕೊಡು; ನನ್ನ ಚರು ನೀನು ತೆಗೆದುಕೊಂಡು ಭುಜಿಸು. ನನ್ನ ಪುತ್ರನಿಂದ ಸಕಲಭೂಮಂಡಲದ ಪಾಲನವು ಮಾಡತಕ್ಕುದು. ಬ್ರಾಹ್ಮ ಣಂಗೆ ಬಲವೀರ್ಯಸಂಪತ್ತುಗಳೇತಕ್ಕೋ" ಎಂದು ನುಡಿಯಲಾಗಿ; ಆಯುಕ್ಕನು ತನ್ನ ಚರುವಂ ತಾಯಿಗೆ ಕೊಟ್ಟವಳಾದಳು. ಅನಂತರದಲ್ಲಿ ವನದಿಂದ ಬಂದ ಋಷಿಯು ಸತ್ಯವತಿಯನ್ನು ಕಂಡು—"ಎಲೆ ಪಾಪಿ! ಇದೇನು ಅಕೃತ್ಯವನೆಸಗಿದೆ! ನಿನ್ನ ಶರೀರವು ಅತ್ಯಂತ ರೌದ್ರವಾಗಿ ಕಾಣು ತಲಿದ್ದೀತು. ನಿನ್ನ ತಾಯಿಗೋಸ್ಕರ ಉಪಯುಕ್ತವಾದ ಚರುವು ನಿನಗೆ ಉಪ ಯುಕ್ತವಾದಂತಿದೆ. ನಿನಗೆ ಇದು ಯುಕ್ತವಲ್ಲ. ಆಚರುವಿನಲ್ಲಿ ನನ್ನಿಂದ ಸಕಲೈಶ್ವರ್ಯವೀರ್ಯ ಶೌರ್ಯಬಲಸಂಪತ್ತುಗಳಾರೋಪಿಸಲ್ಪಟ್ಟದ್ದುವು. ನಿನ್ನ ಚರುವಿನಲ್ಲಿ ಅಖಿಲ ಶಾಂತಿಜ್ಞಾನ ತಿತಿಕ್ಷಾದಿ ಬ್ರಹ್ಮಗುಣ ಸಂಪತ್ತುಗ ಳಾರೋಪಿಸಲ್ಪಟ್ಟದ್ದುವು. ಇಂತಹ ಚರುವ ನೀನು ವಿಪರೀತವಾಗಿ ಮಾಡಿ

ದುದರಿಂದ ನಿನ್ನಲ್ಲಿ ಅತಿ ರೌದ್ರಾಸ್ತ್ರಧಾರಣಪಾಲಸಿಷ್ಠನಾದ ಕ್ಷತ್ರಿಯಾಚಾರವುಳ್ಳ ಮಗನಾದಾನು ; ನಿನ್ನ ತಾಯಿಯಲ್ಲಿ ಶುಚಿಯುಪಶಾಂತಿಗಳಿಂ ಕೂಡಿದ ಬ್ರಾಹ್ಮಣಾಚಾರವುಳ್ಳ ಮಗನಾದಾನು.'' ಎಂದನು. ಆ ಮಾತಂ ಕೇಳಿ ಆಸ್ತ್ರೀಯು ಮುನಿಯ ಪಾದಂಗಳಿಗೆ ಅಡ್ಡಬಿದ್ದು--'' ಭಗವಂತನೇ ! ನನ್ನ ಅಜ್ಞಾನದಿಂದ ಈ ಕೆಲಸವು ಮಾಡಲ್ಪಟ್ಟಿತು. ಅನುಗ್ರಹವನ್ನು ಮಾಡಬೇಕು. ನನಗೆ ಈವಿಧವಾದ ಕ್ಷತ್ರಪುತ್ರನು ಬೇಡ. ಶಾಂತನಾದ ಪುತ್ರನಂ ಕರುಣಿಸು '' ಎನಲು; '' ಹಾಗೆಯಾಗಲಿ '' ಎಂದನು. ಅನಂತರದಲ್ಲಿ ಆಕೆಯು ಜಮದಗ್ನಿಯಂ ಪಡೆದಳು. ಆಕೆಯ ತಾಯಿ ವಿಶ್ವಾಮಿತ್ರನಂ ಪಡೆದಳು. ಜಮದಗ್ನಿಯ ತಾಯಿಯಾದ ಸತ್ಯವತಿಯು ಕೌಶಿಕಿಯೆಂಬ ನದಿಯಾದಳು. ಆ ಜಮದಗ್ನಿಯು ಇಕ್ಷ್ವಾಕುವಿನ ವಂಶೋದ್ಭವನಾದ ರೇಣುವಿನ ಕುಮಾರ್ತಿ ರೇಣುಕೆಯಂ ವಿವಾಹವಾದನು. ಆರೇಣುಕೆಯಲ್ಲಿ ಅಶೇಷಕ್ಷತ್ರಕುಲಹಂತೃವಾದ ಪರಶುರಾಮನಂ ಪಡೆದನು. ಆಪರಶುರಾಮನು ಷಡ್ಗುಣೈಶ್ವರ್ಯ ಸಂಪನ್ನನಾದ ಅಖಿಲಲೋಕಗುರುವಾದ ನಾರಾಯಣನ ಅಂಶವು. ವಿಶ್ವಾಮಿತ್ರಂಗೆ ಭೃಗುವಂಶೋತ್ಪನ್ನನಾದ ಶುನಶ್ಶೇಫನೆಂಬ ಮಗನು (ದೇವತೆಗಳಿಂದ) ಕೊಡಲ್ಪಟ್ಟನು. ಆದುದರಿಂದ ಆಶುನಶ್ಶೇಫನಿಗೆ ದೇವರಾತನೆಂಬ ಹೆಸರಾಯಿತು. ಮತ್ತು ಆ ವಿಶ್ವಾಮಿತ್ರಂಗೆ ಮಧುಚ್ಛಂದ ಧನಂಜಯ ಕೃತದೇವಾಷ್ಟಕ ಕಚ್ಛಪ ಹರಿತಾಖ್ಯರಾದ ಔರಸಪುತ್ರರರೂ ಜನಿಸಿದರು. ಆಕೌಶಿಕಗೋತ್ರೋತ್ಪನ್ನರಾದ ಬಹುಜನರು ಋಷ್ಯಂತರದಲ್ಲಿ ವಿವಾಹವಂ ಮಾಡಿದರು.

ಎಂಬಲ್ಲಿಗೆ ಶ್ರೀಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಏಳನೆಯ ಅಧ್ಯಾಯಂ.

## ಎಂಟನೆಯ ಅಧ್ಯಾಯ.

ಕೇಳು ಮೈತ್ರೇಯ ! ಯಾವನು ಆಪುರೂರವಸ್ಸಿಗೆ ಜ್ಯೇಷ್ಠಪುತ್ರನಾದನೊ, ಆ ಆಯುವು ರಾಹುವಿನ ಮಗಳ ಮದುವೆಯಾಗಿ, ಆಯುಕ್ಕನಲ್ಲಿ ನಹುಷ, ಕ್ಷತ್ರವೃದ್ಧ, ರಂಭ, ರಜಿ, ಅನೇನಸೆಂಬ ಐದುಮಕ್ಕಳಂ ಪಡೆದನು.

ಕ್ಷತ್ರವೃದ್ಧನಿಂ ಸುಹೋತ್ರನು ಹುಟ್ಟಿದನು. ಅವಂಗೆ ಕಾಶ್ಯಪ ಕೌಶ ಗೃತ್ಸಮದರೆಂಬೀ ಮೂವರು ಮಕ್ಕಳಾದರು. ಗೃತ್ಸಮದಂಗೆ ಚಾತುರ್ವರ್ಣ್ಯಪ್ರವರ್ತಕನಾದ ಶೌನಕನೆಂಬ ಮಗನಾದನು. ಕಾಶ್ಯಪಂಗೆ ಕಾಶೀರಾಜನಾದ ಕಾಶೇಯನು. ಅವಂಗೆ ರಾಷ್ಟ್ರನು. ಆತಂಗೆ ದೀರ್ಘತಪಸ್ಸು. ಆತಂಗೆ ಧನ್ವಂತರಿಯೆಂಬ ಮಗನಾದನು. ಆತಂಗೆ ಅಶೇಷ ಭೂತಂಗಳ ಕಾರ್ಯಕಾರಣಜ್ಞನಾದ ನಾರಾಯಣನಿಂದ ವರಪ್ರದಾನ ಮಾಡಲ್ಪಟ್ಟಿತು. ಎಂತೆಂದೊಡೆ ಕಾಶಿರಾಜನ ಗೋತ್ರದಲ್ಲಿ ಜನಿಸಿ ಆಯುರ್ವೇದವಾದ ವೈದ್ಯಶಾಸ್ತ್ರವಂ [1]ಎಂಟು ಪ್ರಕಾರವಾಗಿ[1] ಮಾಡಿ ಯಜ್ಞಭಾಗಭಾಗಿಯಾಗು ಎಂದು. ಅವನೇ ಧನ್ವಂತರಿ. ಅವನ ಪುತ್ರನು ಕೇತುಮಂತ. ಅವಂಗೆ ಭೀಮರಥನು. ಅವಂಗೆ ದಿವೋದಾಸನು. ಅವಂಗೆ ಪ್ರತರ್ದನನು. ಆತನು ಭದ್ರಶ್ರೇಣ್ಯವಂಶದ ಶತ್ರುಗಳಂ ಜಯಿಸಲು ಶತ್ರುಜಿತುವೆನಿಸಿಕೊಂಡನು. ಅವನು ತನ್ನ ಮಗನಂ (ಅತಿಪ್ರೀತಿಯಿಂದ) ವತ್ಸನೆಂದುದಱಿಂದ, (ಆ ಮಗನು) ವತ್ಸರಾಯನೆಂದು ಪ್ರಸಿದ್ಧನಾದನು; ಸತ್ಯಸಂಧನಾದುದಱಿಂ ಋತುಧ್ವಜನೆಂಬ ಹೆಸರನ್ನು ಪಡೆದನು; ಅನಂತರ ಕುವಲಯವೆಂಬಶ್ವಮಂ ಪಡೆದುದಱಿಂದ ಕುವಲಯಾಶ್ವನೆಂಬ ನಾಮದಿಂದ ಪ್ರಸಿದ್ಧನಾದನು. ಆ ವತ್ಸಂಗೆ ಅಳರ್ಕನೆಂಬ ಮಗನಾದನು. (ಆತನ ವಿಷಯವಾಗಿ ಅದ್ಯಾಪಿ ಈ ಶ್ಲೋಕವು ಗಾನಮಾಡಲ್ಪಡುವುದು :—

[2]ಶ್ಲೋ॥ "ಷಷ್ಟಿವರ್ಷಸಹಸ್ರಾಣಿ ಷಷ್ಟಿವರ್ಷ ಶತಾನಿಚ ।
ಅಳರ್ಕಾದಪರೋ ನಾನ್ಯೋ ಬುಭುಜೇ ಮೇದಿನೀಂ ಯುವಾ ॥")

ಆಮೇಲೆ ಆತಂಗೆ ಸನ್ಮತಿಯೆಂಬ ಮಗನು ಆದನು. ಅವಂಗೆ ಸುನೀತನು, ಆತಂಗೆ ಸುಕೇತು. ಅವನಿಂದ ಧರ್ಮಕೇತು. ಅವನಿಂದ ಸತ್ಯಕೇತು. ಅವನಿಂದ ವಿಭು. ಅವನ ಮಗ ಸ್ವವಿಭು. ಆತಂಗೆ ಸುಕುಮಾರನು. ಅವಂಗೆ

---

1. ಟೀಕು—ಎಂಟು ಪ್ರಕಾರವಾಗಿ = ಅಷ್ಟಾಂಗವುಳ್ಳದಾಗಿ; ಅವು ಯಾವುವೆಂದರೆ—
ಶ್ಲೋ॥ ಕಾಯಬಾಲಗ್ರಹೋರ್ಧ್ವಾಂಗ ಶಲ್ಯದಂಷ್ಟ್ರಾಜರಾವಿಷಾಃ।
ಅಷ್ಟಾವಂಗಾನಿ ತಸ್ಯಾಹುಶ್ಚಿಕಿತ್ಸಾ ಯೇಷು ಸಂಸ್ಥಿತಾ ॥
2. ಅರ್ಥ- ಈ ರಾಯನು ಪ್ರಾಯದವನಾಗಿ ಅಱುವತ್ತುಸಾವಿರದ ಆಱುನೂಱು ವರ್ಷ ಬೇಱೊಬ್ಬನಿಲ್ಲದೆ ತಾನೇ ಭೂಮಿಯಂ ಆಳಿದನು.

ಕೃಷ್ಣಕೇತು. ಅವನಿಂ ವೀತಿಹೋತ್ರನು. ಆತಂಗೆ ಭಾರ್ಗನು, ಅವನಿಂದ ಭಾರ್ಗಭೂಮಿಯು. ಅವನಿಂದ ಚಾತುರ್ವರ್ಣದ ಪ್ರವೃತ್ತಿಯು ಆದನು.

ಈ ಪೂರ್ವೋಕ್ತರಾದ ರಾಯರುಗಳ ಅನ್ವಯದಲ್ಲಿ ಕಾಶೀರಾಜನ ಸಂತತಿಯು ಹೇಳಲ್ಪಟ್ಟಿತು. ಮುಂದೆ ರಜಿಯೆಂಬ ರಾಯನ ಸಂತತಿಯು ಹೇಳಲ್ಪಡುತಲಿದ್ದೀತು; ಸಾವಧಾನದಿಂದ ಆಲಿಸು.

ಎಂಬಲ್ಲಿಗೆ ಶ್ರೀಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ ಶ್ರೀವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ ಎಂಟನೆಯ ಅಧ್ಯಾಯಂ.

## ಒಂಬತ್ತನೆಯ ಅಧ್ಯಾಯ.

ಕೇಳು ಮೈತ್ರೇಯ ! ರಜಿ ಎಂಬ ರಾಯಂಗೆ ಅತುಳವೀರ್ಯಪರಾಕ್ರಮರಾದ ಐನೂರುಮಂದಿ ಕುಮಾರರಾದರು. ದೇವಾಸುರಸಂಗ್ರಾಮಾರಂಭದಲ್ಲಿ ಪರಸ್ಪರವಧೇಪ್ಸುಗಳಾದ (ದೇವತೆಗಳೂ ಅಸುರರೂ) ಬ್ರಹ್ಮದೇವರಂ ಸೇರಿ, ಬ್ರಹ್ಮದೇವರಂ ಕುರಿತು “ ಕೇಳು, ಪಿತಾಮಹನೇ ! ನಮಗೊದಗಿರುವ ಈ ವಿರೋಧದಲ್ಲಿ ಆರ ಪಕ್ಷ ಜಯವುಳ್ಳುದಾದೀತು” ಎನಲು; ಬ್ರಹ್ಮದೇವರು— “ ಕೇಳಿ, ದೇವಾಸುರರಿರಾ ! ನಿಮ್ಮ ಪ್ರಯೋಜನಾರ್ಥವಾಗಿ ರಜಿ ಎಂಬ ರಾಯನು ಉದ್ಯತಾಯುಧವುಳ್ಳವನಾಗಿ, (ಆವ ಪಕ್ಷದಲ್ಲಿ) ಯುದ್ಧವನೆಸಗುವನು, ಆ ಪಕ್ಷವು ಜಯಿಸುವುದು. ” ಎಂದ ಮಾತಂ ಕೇಳಿ ದೈತ್ಯರ್ಕಳಿಂದ ರಜಿ ಎಂಬ ರಾಯನು ಆತ್ಮಸಹಾಯಾರ್ಥವಾಗಿ ಯಾಚಿಸಲ್ಪಟ್ಟವನಾಗಿ ಈ ಮಾತಂ ನುಡಿದನು—“ ಕೇಳಿ ದೈತ್ಯರಿರ ! ನಿಮ್ಮ ಸಹಾಯಾರ್ಥವಾಗಿ ದೇವತೆಗಳಂ ಜಯಿಸುವುದಕ್ಕೋಸ್ಕರ ಯುದ್ಧಮಾಡಿದೆನಾದರೆ ಆಮೇಲೆ ನಿಮಗೆ ನಾನು ಇಂದ್ರನಾದೇನು ” ಎಂದ ಮಾತಂ ಕೇಳಿ, ದೈತ್ಯರು “ ಹಾಗಾದರೆ ನಾವು ಈ ಮಾತಿಗೊಪ್ಪುವುದಿಲ್ಲ; ನಮಗೆ ಇಂದ್ರನು ಪ್ರಹ್ಲಾದನು. ಆತನಂ ಕುರಿತೇ ನಾವೀ ಯುದ್ಯೋಗವಂ ಮಾಡಿದೆವು” ಎಂದು ಹೇಳಿ, ದೈತ್ಯರು ಹೊರಟುಹೋದರು. ತರುವಾಯ ದೇವತೆಗಳಿಂದಲೂ ಅದೇ ಮೇರೆ ಪ್ರಾರ್ಥಿಸಲ್ಪಟ್ಟವನಾಗಿ, ಆ ರಜಿರಾಯನು ದೇವತೆಗಳ ಪಕ್ಷವಾಗಿ ಅನೇಕಾಸ್ತ್ರಸಂಘಾತಗಳಿಂದ ಸಕಲವಾದ ಅಸುರಬಲವಂ ಸಂಹಾರಮಾಡಿದನು. ಈ ತೆರದಿಂ ಶತ್ರುಪಕ್ಷವು ನಿಶ್ಶೇಷವಾಗುತಿರಲಾಗಿ, ದೇವೇಂದ್ರನು

ರಜಿರಾಯನ ಚರಣಯುಗಳವಂ ತನ್ನ ಶಿರಸ್ಸಿನಿಂದ ಮುಟ್ಟಿ ನಮಸ್ಕಾರವಂ ಮಾಡಿ, "ಕೇಳು ರಾಯನೇ! ನನಗೆ ಬಂದ ಭಯದಿಂದ ನನ್ನಂ ರಕ್ಷಿಸಿದೆ ಯಾದಕಾರಣ, ನೀನು ನನಗೆ ತಂದೆ. ಸಮಸ್ತ ಲೋಕಂಗಳಲ್ಲಿಯೂ ನೀನು ಉತ್ತಮನು. ಮೂರು ಲೋಕಕ್ಕೂ ಇಂದ್ರನಾದ ನಾನು ನಿನ್ನ ಪುತ್ರನು." ಎಂಬ ವಿನಯದ ಮಾತಂ ಕೇಳಿ, ರಜಿರಾಯಂ ನಕ್ಕು, "ಹಾಗೆಯೇ ಆಗಲಿ; ವೈರಪಕ್ಷದ ದೆಸೆಯಿಂದ ಹೊರತಾದ ಚಾಟೂಕ್ತಿಗಳಿಂದ ಸಹಿತವಾದ ನಮಸ್ಕಾರವನತಿಕ್ರಮಿಸಬಾರದಲ್ಲ" ಎಂದು ತನ್ನ ಪಟ್ಟಣವಂ ಕುರಿತೈದಿದನು. ಆಶತಕ್ರತುವಾದ ಇಂದ್ರನು ಇಂದ್ರತ್ವವಂ ಮಾಡಿದನು. ಅನಂತರದಲ್ಲಿ ರಜಿರಾಯನು ಸ್ವರ್ಗವನೆಯ್ದುತಿರಲಾಗಿ, ದೇವಮುನಿಯಾದ ನಾರದರಿಂದ ಪ್ರೇರಿತರಾಗಿ ರಜಿರಾಯನ ಸುತರು ತಮ್ಮ ತಂದೆಗೆ ಮಗನಾದ ಇಂದ್ರನನ್ನು ತಮ್ಮ ತಂದೆಯಾರ್ಜಿಸಿದ ಸ್ವರ್ಗರಾಜ್ಯವಂ ಯಾಚಿಸಿದರು. ಅವನು ಕೊಡದಿರಲಾಗಿ ವಿಕ್ರಮದಲ್ಲಿ ಇಂದ್ರನನ್ನು ಜಯಿಸಿ ಸ್ವರ್ಗವನ್ನು ಆಳಿದರು. ಈ ಪ್ರಕಾರ ರಜಿಪುತ್ರರು ಸ್ವರ್ಗರಾಜ್ಯವನಾಳುತಿರುವಲ್ಲಿ ಇಂದ್ರನು ಏಕಾಂತದಲ್ಲಿ ಬೃಹಸ್ಪತಿಯ ಸಮೀಪಕ್ಕೆ ಬಂದು—"ಕೇಳು ಗುರುವೇ, ಬದರೀಮಾತ್ರ ಪುರೋಡಾಶವನಾದರೂ ನನಗೆ ಕೊಡಿಸಿ, ಆಪ್ಯಾಯನವಂ ಮಾಡಿಸತಕ್ಕುದು" ಎಂದನು. ಆ ಮಾತಂ ಕೇಳಿ ಬೃಹಸ್ಪತಿಯು "ಕೇಳು ಇಂದ್ರನೇ! ನಿನಗೆ ಸ್ವಲ್ಪಕಾಲದಲ್ಲಿ ರಾಜ್ಯಪ್ರಾಪ್ತಿಯುಂಟುಮಾಡೇನು, ಕಂಗೆಡಬೇಡ" ಎಂದು ಪ್ರತಿದಿನವೂ (ಶಕ್ರನಿಗೆ ತೇಜೋಭಿವೃದ್ಧ್ಯರ್ಥವಾಗಿ) ಹೋಮವನ್ನೂ ಆ ಕುಮಾರರಂ ಕುರಿತು ಬುದ್ಧಿಮೋಹನಾರ್ಥವಾಗಿ ಅಭಿಚಾರ ಹೋಮವನ್ನೂ ಮಾಡಿದನಾದಕಾರಣ ಅವರು ಬ್ರಹ್ಮದ್ವೇಷಪೂರ್ವಕವಾಗಿ ಧರ್ಮತ್ಯಾಗಿಗಳಾಗಿ ವೇದಮಾರ್ಗವಿರಹಿತರಾದರು. ಅಪೇತಧರ್ಮಾಚಾರರಾದ ಅವರನ್ನು ಸಮಯ ನೋಡಿ ಇಂದ್ರನು ಯುದ್ಧದಲ್ಲಿ ಜಯಿಸಿದನು. (ಪುರೋಹಿತನಾದ ಬೃಹಸ್ಪತಿಯಿಂದ ಹೊಂದಲ್ಪಟ್ಟಂಥ ತೇಜಸ್ಸುಳ್ಳವನಾದ ಇಂದ್ರನು ಸ್ವರ್ಗವನ್ನು ಆಕ್ರಮಿಸಿದನು. ದೇವೇಂದ್ರನ ಸ್ವಸ್ಥಾನ ಪರಿಚ್ಯುತಿಯನೂ ಪುನಃಪ್ರಾಪ್ತಿಯನೂ ಹೇಳುವ ಈ ಕಥಾವೃತ್ತಾಂತವಂ ಕೇಳಿದವರಿಗೆ, ಎಲೈ ಮೈತ್ರೇಯನೆ! ಈ ಸ್ವಸ್ಥಾನಪರಿಚ್ಯುತಿಯೂ ದುರಾತ್ಮತೆಯೂ ಹೊದ್ದವು.

ಕೇಳು ಮೈತ್ರೇಯ! ಆ ಪುರೂರವನ ಮಕ್ಕಳಲ್ಲಿ ರಂಭನೆಂಬವನು ಅಪುತ್ರವಂತನು. ಕ್ಷತ್ರವೃದ್ಧನೆಂಬವನಿಗೆ ಪ್ರತಿಕ್ಷತ್ರನೆಂಬ ರಾಯನು; ಅವನಿಂದ ಸಂಜಯನು: ಆತನಿಗೆ ಜಯನು ; (ಆತನಿಗೆ ವಿಜಯನು) ಅವನಿಗೆ [1]ಕೃತನು[1], ಆತನಿಂದ [2]ಹರ್ಯಧನನು,[2] ಅವನ ಮಗ ಸಹದೇವನು ; ಆತನಿಂದ [3]ಅದೀನನು;[3] ಅವನಲ್ಲಿ ಜಯತ್ಸೇನನು; ಅವನ ಮಗ ಸಂಕೃತಿಯು; ಆತನ ಮಗ ಕ್ಷತ್ರಧರ್ಮನು ; ಈ ವಂಶಪರಂಪರೆಯು ಕ್ಷತ್ರವೃದ್ಧನಿಂದ ಆದುದು. ಅನಂತರದಲ್ಲಿ ನಹುಷಚಕ್ರವರ್ತಿಯ ವಂಶಕೀರ್ತನೆಯಂ ಮಾಡೇನು.

ಎಂಬಲ್ಲಿಗೆ ಶ್ರೀಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ನವಮೋಧ್ಯಾಯಂ.

## ಹತ್ತನೆಯ ಅಧ್ಯಾಯ.

ಕೇಳು ಮೈತ್ರೇಯ! ನಹುಷಚಕ್ರವರ್ತಿಗೆ ಯತಿಯು, ಯಯಾತಿಯು, ಸಂಯಾತಿಯು, ಆಯಾತಿಯು, ವಿಯಾತಿಯು ಕೃತಿಯು ಎಂಬ ಆರುಮಂದಿ ಕುಮಾರರು ಅತಿಬಲಪರಾಕ್ರಮಶಾಲಿಗಳಾದರು. ಅವರಲ್ಲಿ ಯತಿಯು ರಾಜ್ಯವನಿಚ್ಛೈಸಿದವನಾದನು. ಯಯಾತಿರಾಯನು ಭೂಪತಿಯಾದನು. ಯಯಾತಿಯು ದೇವಯಾನಿಯೆಂಬ ಶುಕ್ರಾಚಾರ್ಯರ ಕುಮಾರಿಯನ್ನೂ ಶರ್ಮಿಷ್ಠೆಯೆಂಬ ವೃಷಪರ್ವನ ಮಗಳನ್ನೂ ಮದುವೆ ಮಾಡಿಕೊಂಡನು. (ಈ ವಿಚಾರದಲ್ಲಿ ಒಂದು ವಂಶಾನುಶ್ಲೋಕವಿದೆ—)

ಶ್ಲೋ॥ "ಯದುಂ ಚ ದುರ್ವಸುಂ ಚೈವ ದೇವಯಾನೀ ವ್ಯಜಾಯತ।
ದ್ರುಹ್ಯಂ ಚಾನುಂಚ ಪೂರುಂಚ ಶರ್ಮಿಷ್ಠಾ ವಾರ್ಷಪರ್ವಣೀ॥"

ಆ ದೇವಯಾನಿ ಎಂಬುವಳು ಯದುವಂ ದುರ್ವಸುವಂ ಪಡೆದಳು ; ವೃಷಪರ್ವನ ಮಗಳಾದ ಶರ್ಮಿಷ್ಠೆಯು ದ್ರುಹ್ಯನಂ ಅನುರಾಯನಂ ಪೂರು ಎಂಬಾತನಂ ಪಡೆದಳು. ಶುಕ್ರಾಚಾರ್ಯರ ಶಾಪದಿಂದ ಯೌವನಕಾಲದಲ್ಲಿ ಯಯಾತಿಯು ಜರೆಯಂ ಪಡೆದನು. ಆಮೇಲೆ ಪ್ರಸನ್ನನಾದ ಶುಕ್ರನ ಅನುಗ್ರಹದಿಂದ ತನ್ನ ಜರೆಯಂ ಪರಿವರ್ತನೆ ಮಾಡಲು (ಸಮರ್ಥನಾಗಿ)

ಪಾ—1. ಕೇತುವು. 2. ಹರ್ಯಶ್ವನು, 3. ಅನೀಕನು—ಎಂದು ಕನ್ನಡ ಮಾತೃಕೆಯ ಪಾಠಗಳು.

ಯದುವಂ ಕುಱಿತು ನುಡಿದನು. “ಕೇಳು ಮಗನೇ, ನಿನ್ನ ಮಾತಾಮಹನ ಶಾಪದಿಂದ ನನಗೆ ಯೌವನಕಾಲದಲ್ಲಿ ಜರೆಯು ಪ್ರಾಪ್ತವಾಯಿತು. (ಆತನ ಅನುಗ್ರಹದಿಂದಲೇ) ಆ ಜರೆಯಂ ನಿನ್ನ ಅಧೀನ ಮಾಡಿ ಸಹಸ್ರ ವರ್ಷಗಳು ಮಾತ್ರ ಸಂಚರಿಸುತ್ತಿದ್ದು ವಿಷಯಭೋಗತೃಪ್ತಿಯನ್ನೈದಿಯೇನು: ಇದಕ್ಕೆ ಪ್ರತಿಕೂಲವಾಕ್ಯವಂ ಹೇಳಬೇಡ” ಎಂದನು. ತಂದೆಯ ಆ ಮಾತಿಗೆ ಒಡಂಬಡದವನಾಗಿರಲು, ಅದಱಿಂದ “ನಿನ್ನ ಸಂತತಿಯು ರಾಜ್ಯಾನರ್ಹವಾಗಲಿ!” ಎಂದು ಯದುವನ್ನು ಶಪಿಸಿದನು. ಅನಂತರದಲ್ಲಿ ದುರ್ವಸುವನು ಅದ್ರುಹ್ಯನನು ಅನುವನೂ ಒಬ್ಬೊಬ್ಬನಾಗಿ ಕರೆದು, ತನ್ನ ಜರೆಯನ್ನು ತೆಗೆದುಕೊಳ್ಳುವಹಾಗೆ ಕೇಳಿದನು. ಅದಕ್ಕೆ ಅವರೊಬ್ಬರೂ ಒಡಂಬಡದಿರಲಾಗಿ, ಅವರಂ ಶಪಿಸಿದನು. ತಱುವಾಯ ಶರ್ಮಿಷ್ಠೆಯ ಕುಮಾರನಾಗಿ ಎಲ್ಲರಿಗೂ ಕಿಱಿಯವನಾದ ಪುರುವಂ ಕುಱಿತು,—ತನ್ನ ಜರೆಯಂ ತೆಗೆದುಕೊ, ಎನ್ನಲಾಗಿ; ಅವನು ತಂದೆಗೆ ನಮಸ್ಕರಿಸಿ, “ನಿಮ್ಮ ಅನುಗ್ರಹ! ಮಹಾಪ್ರಸಾದ!” ಎಂದು ಉದಾರವಾರ್ತೆಯಂ ನುಡಿದು, ತನ್ನ ಯೌವನವಂ ತಂದೆಗೆ ಕೊಟ್ಟು ಅವನ ಜರೆಯಂ ಸ್ವೀಕರಿಸಿದವನಾದನು. ಈಪ್ರಕಾರ ಯಯಾತಿಯು ಪುರುವಿನ ಯೌವನಂ ಪಡೆದು ಧರ್ಮಾವಿರುದ್ಧವಾಗಿ ಯಥಾಕಾಲೋಚಿತವಾಗಿ ಉತ್ಸಾಹದೊಡನೆ ಯಥಾಕಾಮವಾಗಿ ವಿಷಯಗಳನನುಭವಿಸಿದನು. ಅಂತಲ್ಲದೆ ಪ್ರಜಾಪಾಲನೆಯನ್ನೂ ಮಾಡಿದನು. (ವಿಶ್ವಾಚಿಯೆಂಬ ಅಪ್ಸರಸ್ತ್ರೀಯೊಡನೆಯೂ) ಧರ್ಮಪತ್ನಿಯಾದ ದೇವಯಾನಿಯೊಡನೆಯೂ (ಕಾಮಗಳಲ್ಲಿ ತೃಪ್ತಿ ಹೊಂದೇನೆಂದು) ತದ್ಗತಮನಸ್ಕನಾದನು. ಅನುದಿನವೂ ಕಾಮಸುಖಗಳನನುಭವಿಸುತ ಅನುಭವಿಸುತ ಸಕಲ ವಿಷಯಭೋಗಂಗಳನು ಅತಿರಮಣೀಯವಾಗಿಯೇ ಕಂಡನು. ಆಮೇಲೆ ವಿಚಾರಮಾಡಿ (ಹೀಗೆ ಗಾನಮಾಡಿದನು :—

ಶ್ಲೋ॥ ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯಏವಾ ಭಿವರ್ಧತೇ ॥
ಯತ್ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ಏಕಸ್ಯಾಪಿ ನ ಪರ್ಯಾಪ್ತಂ ತಸ್ಮಾತ್ತೃಷ್ಣಾಂ ಪರಿತ್ಯಜೇತ್ ॥
ಯದಾ ನ ಕುರುತೇ ಭಾವಂ ಸರ್ವಭೂತೇಷು ಪಾತಕಂ ।
ಸಮದೃಷ್ಟೇಸ್ತದಾ ಪುಂಸಃ ಸರ್ವಾಸ್ಸುಖಮಯಾ ದಿಶಃ ॥
ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ ।

ತಾಂ ತೃಷ್ಣಾಂ ಸಂತ್ಯಜೇತ್ ಪ್ರಾಜ್ಞಸ್ಸುಖೇನೈವಾಭಿಪೂರ್ಯತೇ ॥
ಜೀರ್ಯಂತಿ ಜೀರ್ಯತಃ ಕೇಶಾ ದಂತಾ ಜೀರ್ಯಂತಿ ಜೀರ್ಯತಃ ।
ಧನಾಶಾ ಜೀವಿತಾಶಾ ಚ ಜೀರ್ಯತೋಽಪಿ ನ ಜೀರ್ಯತಃ ॥ )

(ಟೀಕು— ಈ ವಿಷಯಭೋಗಗಳಿಂದ ಕಾಮಸಂಕಲ್ಪವು ಉಪಶಾಂತಿಯನೆಯ್ದುದಾಯಿತು. ಅದೆಂತೆಂದೊಡೆ—ಹವಿಸ್ಸಿನಿಂದ ಅಗ್ನಿಯು ಹೇಗೆ ತೃಪ್ತಿಯನೆಯ್ದದೋ, ಹಾಗೆ ಭೂಮಿಯಲ್ಲಿರುವ ವ್ರೀಹಿ ಯವ ಹಿರಣ್ಯ ಪಶು ಸ್ತ್ರೀಯರುಗಳ ವಿಷಯದಲ್ಲಿ ಆರಿಗೂ ಆಸೆ ಪರ್ಯಾಪ್ತವಾಗದು. ಆದುದರಿಂದ ತೃಷ್ಣೆಯನ್ನು ಪರಿತ್ಯಾಗ ಮಾಡಬೇಕು.) ಸಕಲ ಭೂತಂಗಳಲ್ಲಿಯೂ ಸಮದೃಷ್ಟಿ ಭಾವವು ಆವ ಪರ್ಯಂತಕ್ಕೆ ಹುಟ್ಟದೋ, (ಅವರೆಗೆ) ಆ ಪುರುಷಂಗೆ ಸುಖವಿಲ್ಲ; ಆಮೇಲೆ ಸಮದೃಷ್ಟಿಭಾವನಾಗಲು ಅವಂಗೆ ಸಕಲ ದಿಕ್ಕುಗಳು ಸುಖಂಗಳಪ್ಪುವು. ಆವುದಾನೊಂದು ತೃಷ್ಣೆಯು ದುರ್ಮತಿಗಳಿಂದ ಬಿಡಲಶಕ್ಯವಾಗಿ ಜೀರ್ಣವಾಗದೆ ಇದ್ದೀತೋ, ತಾದೃಶ ತೃಷ್ಣೆಯನ್ನು ಪ್ರಾಜ್ಞನಾದ ಪುರುಷನು ಬಿಡುವುದರಿಂದ ಸುಖದಿಂ ವರ್ಧಿಸುವನು. ಇನ್ನು ಜರಾವಸ್ಥೆ ಪ್ರಾಪ್ತವಾದಲ್ಲಿ ಪುರುಷನ ಕೇಶಗಳು ದಂತಗಳು ಜೀರ್ಣವಾಗುತಲಿದ್ದಾವು; ಬದುಕಬೇಕೆಂಬ ಆಸೆಯೂ ಧನಕಾಂಕ್ಷೆಯೂ ಜೀರ್ಣವಾಗದೆ ಇದ್ದೀತು. ವಿಷಯಾಸಕ್ತಚಿತ್ತನಾದ ನನಗೆ ಸಹಸ್ರ ವರ್ಷ ಪೂರ್ತಿಯಾಯಿತು. ಹಾಗಾದರೂ ದಿನದಿನಕೆ ತೃಷ್ಣೆ ಹುಟ್ಟುತಲಿದ್ದೀತು. ಅದರಿಂದಲೀ ತೃಷ್ಣೆಯಂ ತ್ಯಜಿಸಿ ಪರಬ್ರಹ್ಮನಲ್ಲಿ ಚಿತ್ತವನಿರಿಸಿ ಬಿಡಲ್ಪಟ್ಟ ಸುಖದುಃಖವುಳ್ಳವನಾಗಿ, ಮಮತಾಬುದ್ಧಿಯಂ ಬಿಟ್ಟು, ಮೃಗಂಗಳೊಡನೆ ಸಂಚರಿಸುವೆನು" ಎಂದು ವಿಚಾರಮಾಡಿ, ಪುರುವಿಗೆ ಯೌವನವಂ ಕೊಟ್ಟು ಆತನ ಜರೆಯಂ ತೆಗೆದುಕೊಂಡು, ಅವನಂ ರಾಜ್ಯದಲ್ಲಿ ಅಭಿಷೇಕವಂ ಮಾಡಿ, ತಾನು ತಪವಂ ಮಾಡಬೇಕೆಂಬ ಇಚ್ಛೆಯಿಂದ ವನವಂ ಪ್ರವೇಶಿಸಿದನು.

ಉಳಿದ ಮಕ್ಕಳಲ್ಲಿ ಆಗ್ನೇಯದಿಕ್ಕಂ ದುರ್ವಸುವಿಗೆ, ಪಶ್ಚಿಮದಿಕ್ಕಂ ದ್ರುಹ್ಯನಿಗೆ, ಉತ್ತರದಿಕ್ಕಂ ಅನುವಿಂಗೆ, ದಕ್ಷಿಣದಿಕ್ಕಂ ಯದುವಿಗೆ, ನಿಯಾಮಿಸಿ, (ಅವರನ್ನು ಮಂಡಲನೃಪರನ್ನಾಗಿ ಮಾಡಿ, ಪುರುವನ್ನು ಸರ್ವಪೃಥಿವೀಪತಿಯನ್ನಾಗಿ) ಪ್ರತಿಷ್ಠೆ ಮಾಡಿ, ತಾನು ವನದಲ್ಲಿ ತಪೋನಿಷ್ಠನಾದನು.

ಎಂಬಲ್ಲಿಗೆ ಶ್ರೀಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ದಶಮೋಧ್ಯಾಯಂ.

## ಹನ್ನೊಂದನೆಯ ಅಧ್ಯಾಯ.

ಎಲೈ, ಮೈತ್ರೇಯ ! ಅನಂತರದಲ್ಲಿ ಯಾವ ವಂಶದಲ್ಲಿ ಅಶೇಷ ಲೋಕ ನಿವಾಸಿಯಾಗಿ, ಮನುಷ್ಯ ಸಿದ್ಧಗಂಧರ್ವಯಕ್ಷರಾಕ್ಷಸ ಗುಹ್ಯಕ ಕಿಂಪುರುಷಾಪ್ಸರೋರಗ ವಿಹಗದೈತ್ಯದಾನವಾದಿತ್ಯರುದ್ರವಸ್ವಶ್ವಿನೀಮರುದ್ದೇವರ್ಷಿಗಳಿಂದಲೂ ಮುಮುಕ್ಷುಗಳಿಂದಲೂ ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಪ್ರಾಪ್ತ್ಯರ್ಥವಾಗಿ ಸದಾಸ್ತೋತ್ರಾರಾಧನಂ ಮಾಡಲ್ಪಟ್ಟ ಅಪರಿಚ್ಛೇದ್ಯಮಹಿಮನಾದ ಆದಿನಿದಾನನಾದ ನಾರಾಯಣನು ಕೃಷ್ಣಾವತಾರವಂ ಮಾಡಿದನೋ, ಆ ಯಯಾತಿ ಪುತ್ರನಾದ ಯದುವಿನ ವಂಶಕ್ರಮವನ್ನು ಕೇಳುವವನಾಗು. (ಆಯದುವಂಶವಿಷಯವಾಗಿ ಒಂದು ಶ್ಲೋಕವು ಪ್ರಸಿದ್ಧವಾಗಿದೆ.

ಶ್ಲೋ॥ " ಯದೋರ್ವಂಶಂ ನರಶ್ರುತ್ವಾ ಸರ್ವಪಾಪೈಃ ಪ್ರಮುಚ್ಯತೇ ।
ಯತ್ರಾವತೀರ್ಣಂ ಕೃಷ್ಣಾಖ್ಯಂ ಪರಬ್ರಹ್ಮ ನರಾಕೃತಿ ॥ "

ಟೀಕು—ಯದುವಂಶಕೀರ್ತನೆಯನು ಆವ ಮನುಷ್ಯಂ ಮಾಡಿದೊಡಂ ಅವಂ ಸಮಸ್ತ ಪಾಪಂಗಳಿಂದ ಬಿಡಲ್ಪಡುವಂ. ಅದೇನುಕಾರಣವೆಂದೊಡೆ— ಆ ವಂಶದಲ್ಲಿ ಕೃಷ್ಣಾಖ್ಯವೆಂಬ ಪರಬ್ರಹ್ಮವು ಮಾಯಾಮನುಜಾವತಾರವಂ ಮಾಡಿದುದು. ಆದಕಾರಣ ಆ ವಂಶಕೀರ್ತನೆ ಸಕಲಪಾಪಘ್ನವು.

ಕೇಳು, ಮೈತ್ರೇಯ ! ಯದುವಿಂಗೆ ಸಹಸ್ರಜಿತ್ತು, ಕ್ರೋಷ್ಟು, ನಲ, ನಹುಷರೆಂಬ ನಾಲ್ಕುಮಂದಿ ಕುಮಾರರಾದರು. ಅವರೊಳಗೆ ಸಹಸ್ರಜಿತ್ತುಗೆ ಶತಜಿತಿಯೆಂಬ ಕುಮಾರನಾದನು. ಆತಂಗೆ ಹೈಹಯ, ಹೇಹಯ, ವೇಣುಹಯರೆಂಬ ಮೂರುಮಂದಿ ಕುಮಾರರು ಆದರು. ಅವರಲ್ಲಿ ಹೈಹಯನ ಪುತ್ರನು ಧರ್ಮನು; ಆತಂಗೆ ಧರ್ಮನೇತ್ರನು; ಅವನಿಗೆ ಕುಂತಿ; ಕುಂತಿಗೆ ಸಹಜಿತು; ಅವನಿಗೆ ಮಹಿಷ್ಮಂತ; ಅವನಿಂದ ಮಾಹಿಷ್ಮತಿಯೆಂಬ ನಗರಿಯು ನಿರ್ಮಿತವಾಯಿತು. ಆತನಿಗೆ ಭದ್ರಶ್ರೇಣ್ಯನು; ಅವಂಗೆ ದುರ್ದಮ. ಅವನಿಂದ ಧನಕ; ಅವನಿಗೆ ಕೃತವೀರ್ಯ, ಕೃತಾಗ್ನಿ, ಕೃತಧರ್ಮ, ಕೃತೌಜಸ್ಸು, ಎಂಬರು ನಾಲ್ವರು ಪುತ್ರರು. ಅವರಲ್ಲಿ ಕೃತವೀರ್ಯನ ಮಗ ಅರ್ಜುನನು, ಸಪ್ತದ್ವೀಪಪತಿಯಾಗಿ ಸಹಸ್ರಬಾಹುವಾಗಿ ಆದನು. ಆತನು ಭಗವಂತನಾಗಿ ಅತ್ರಿಕುಲೋತ್ಪನ್ನನಾದ ದತ್ತಾತ್ರೇಯಸ್ವಾಮಿಯಂ ಉಪಾಸನೆ ಮಾಡಿ

ಬಾಹುಸಹಸ್ರವಂ ಪಡೆದನು, ಮತ್ತು ಅಧರ್ಮಸೇವಾನಿವಾರಕನಾಗಿ ಧರ್ಮದಿಂ ಪೃಥಿವಿಯನ್ನು ಆಳಿ[1] ಶತ್ರುಪರಾಜಯವಂ ಮಾಡಿ[1] ಅಖಿಲ ಜಗತ್ಪ್ರಖ್ಯಾತ ಪುರುಷನಿಂದ ಮರಣವಂ (ಪಡೆಯಬೇಕೆಂದು) ಪ್ರಾರ್ಥಿಸಿ ಪಡೆದನು (ಮತ್ತು ಅವನು ಅಶೇಷದ್ವೀಪಗಳೊಡಗೂಡಿದ ಪೃಥಿವಿಯನ್ನು ಚೆನ್ನಾಗಿ ಪಾಲಿಸಿದನು.) ಅಷ್ಟುಮಾತ್ರವೇ ಅಲ್ಲ. ಹತ್ತು ಸಹಸ್ರ ಕ್ರತುಗಳಂ ಮಾಡಿದನು. ಇಂತಹ ಕಾರ್ತವೀರ್ಯಾರ್ಜುನನ ನಗರಿಯನ್ನು ಲೋಕದ ಪಾರ್ಥಿವರು ತಪೋದಾನ ಯಜ್ಞಗಳಿಂದ ಪಡೆಯದೆ ಇದ್ದರು. ಆತನ ರಾಜ್ಯದಲ್ಲಿ ನಷ್ಟದ್ರವ್ಯದ ಚಿಂತೆಯಿಲ್ಲ. ಈರೀತಿ ಎಂಬತ್ತೈದುಸಹಸ್ರ ವರ್ಷ ಅವ್ಯಾಹತನಾಗಿ ಆರೋಗ್ಯ ಶ್ರೀಬಲ ಪೌರುಷವುಳ್ಳವನಾಗಿ ರಾಜ್ಯಭಾರವಂ ಮಾಡಿದನು. ಬಂದಾನೊಂದು ಸಮಯದಲ್ಲಿ ದಿಗ್ವಿಜಯಾರ್ಥವಾಗಿ ಬಂದ ಅಶೇಷ ದೈತ್ಯಗಂಧರ್ವಜಯದಿಂದುಂಟಾದ ಮದೋದ್ಧವುಳ್ಳ ರಾವಣನು ನರ್ಮದಾಜಲದಲ್ಲಿ ಕ್ರೀಡಾವಗಾಹನಮದಾಕುಳನಾದ ಕಾರ್ತವೀರ್ಯಾರ್ಜುನನಿಂದ ಯತ್ನವಿಲ್ಲದೆ ಪಶುವಿನ ಪ್ರಕಾರದಲ್ಲಿ ಗ್ರಹಿಸಲ್ಪಟ್ಟವನಾಗಿ ನಗರದ ಏಕಾಂತಸ್ಥಳದಲ್ಲಿ ಕಟ್ಟಲ್ಪಟ್ಟನು. ಆ ತರುವಾಯದಲ್ಲಿ ಎಂಬತ್ತೈದುಸಾಸಿರ ವರ್ಷಗಳಮೇಲೆ ಭಗವಂತನಾದ ನಾರಾಯಣಾಂಶನಾದ ಪರಶುರಾಮನಿಂದ ಅಂತಹ ಮಹಿಮೆಯುಳ್ಳ ಕಾರ್ತವೀರ್ಯಾರ್ಜುನನು ಸಂಹರಿಸಲ್ಪಟ್ಟನು. ಆತಂಗೆ ನೂರುಮಂದಿ ಪುತ್ರರು. ಅವರೊಳಗೆ ಪ್ರಧಾನರು ಐದುಮಂದಿ. ಶೂರಸೇನ, ವೃಷ್ಣಿ, ಮಧು, ಜಯಧ್ವಜ, ಕಾಲಜಂಘರೆಂಬವರು. ಕಾಲಜಂಘಂಗೆ ಕಾಲಜಂಘರೆಂದು ನೂರುಮಂದಿ ಪುತ್ರರಾದರು. ಅವರಲ್ಲಿ ಜ್ಯೇಷ್ಠಪುತ್ರನು ವೀತಿಹೋತ್ರನು. ಅನ್ಯಕುಮಾರರಲ್ಲಿ ವೃಷ, ಭರತರೆಂಬುವರಿಬ್ಬರು. ಅವರಲ್ಲಿ ವೃಷಂಗೆ ಮಧುವೆಂಬ ಮಗನು. ಆತಂಗೆ ವೃಷ್ಣಿ ಮೊದಲಾದ ನೂರುಮಂದಿ ಮಕ್ಕಳು. ಈ ವೃಷ್ಣಿಯಿಂದಲಿವನ ಕುಲವು ವೃಷ್ಣಿಕುಲವೆನಿಸಿತು. ಮಧುಯೆಂಬವನಿಂದ ಮಧುರಾ ಎಂಬ ಪಟ್ಟಣವಾಯಿತು. ಯದುವಿನ ವಂಶೋತ್ಪನ್ನರಾದವರು ಯಾದವರೆನ್ನಿಸಿಕೊಂಡರು.

ಎಂಬಲ್ಲಿಗೆ ಶ್ರೀ ಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಏಕಾದಶಾಧ್ಯಾಯಂ.

---

ಪಾ—1. ಅರಾತಿಭ್ಯೋಽಪರಾಜಯಂ—ಎಂದು ಸಂಸ್ಕೃತ ಮಾತೃಕೆ.

## ೧೨ ನೆಯ ಅಧ್ಯಾಯ.

ಕೇಳು ಮೈತ್ರೇಯಾ, ಯದುಪುತ್ರನಾದ ಕ್ರೋಷ್ಟುವಿಂಗೆ ಧ್ವಜಿನೀವಾನನು ಪುತ್ರನಾದನು ; ಆತಂಗೆ ಸ್ವಾತಿಯು; ಅವನಿಂ ರುಶಂಕನು; ಆತಂಗೆ ಚಿತ್ರರಥನು ; ಆತನ ಪುತ್ರನು ಶಶಿಬಿಂದುವು ; ಅವನು ಧರ್ಮಾರ್ಥಸಂಹಿತೋಕ್ತಗಳಾದ [1]ಹದಿನಾಲ್ಕು ರತ್ನಂಗಳನುಳ್ಳ[1] ಚಕ್ರವರ್ತಿಯಾದನು. ಈ ಹದಿನಾಲ್ಕು ರತ್ನಂಗಳನುಳ್ಳ ಶಶಿಬಿಂದುವು ಶತಸಹಸ್ರ ಸ್ತ್ರೀಯರುಗಳನ್ನು ಅನುಭವಿಸಿದನು. ಆ ಸ್ತ್ರೀಯರುಗಳಲ್ಲಿ ಹತ್ತು ಲಕ್ಷ ಪುತ್ರರಾದರು. ಅವರುಗಳಲ್ಲಿ ಪೃಥುಶ್ರವಸ್ಸು, ಪೃಥುಕರ್ಮನು, ಪೃಥುಜಯನು, ಪೃಥುಕೀರ್ತಿ, ಪೃಥುದಾನ, ಪೃಥುಯಶಸ್ಸು ಎಂಬ ನಾಮಧೇಯವುಳ್ಳ ಪುತ್ರರೇ ಪ್ರಧಾನರು. ಪೃಥುಶ್ರವಸ್ಸಿಗೆ ಪೃಥುತಮನೆಂಬ ಪುತ್ರನು, ಅವಂಗೆ ಉಶನಸ್ಸು, ಆ ರಾಯನು ಅಶ್ವಮೇಧಶತವಂ ಮಾಡಿದನು. ಆ ಉಶನಸ್ಸಿಗೆ ಶಿತಪುವೆಂಬ ಕುಮಾರನಾದನು. ಅವಂಗೆ ರುಕ್ಮಕವಚನೆಂಬ ಮಗನು ; ಅವನಿಂದ ಪರಾವೃತ್ತು. ಆತಂಗೆ ರುಕ್ಮೇಷುವು, ಪೃಥುರುಕ್ಮನು, ಜ್ಯಾಮಘನು, ಪಲಿತನು, ಹರಿತನು ಎಂಬ ಐವರು ಕುಮಾರರು ಆದರು. ಅವರೊಳ್ ಜ್ಯಾಮಘನೆಂಬವನ ವಿಷಯವಾಗಿ ಈ ಕೀರ್ತನೆಯು ಈಗಲೂ ಗಾನ ಮಾಡಲ್ಪಡುತಲಿದ್ದೀತು:—

ಶ್ಲೋ॥ ಭಾರ್ಯಾವಶ್ಯಾಸ್ತುಯೇಕೇಚಿತ್ ಭವಿಷ್ಯಂತ್ಯಥವಾಮೃತಾಃ ।
ತೇಷಾಂತು ಜ್ಯಾಮಘಶ್ಶ್ರೇಷ್ಠಃ ಶೈಬ್ಯಾಪತಿರಭೂನ್ನೃಪಃ ॥

---

ಟೀಕು— 1. ಚತುರ್ದಶ ರತ್ನಂಗಳು- “ ಚಕ್ರಂರಥೋಮಣಿಃಖಡ್ಗಂ ಚರ್ಮರತ್ನಂ ಚ ಪಂಚಮಂ । ಕೇತುರ್ನಿಧಿಶ್ಚ ಸಪ್ತೈವ ಪ್ರಾಣಹೀನಾನಿಚಕ್ಷತೇ ॥ ಭಾರ್ಯಾಪುರೋಹಿತಶ್ಚೈವ ಸೇನಾನೀರಥಕೃಚ್ಚಯಃ । ಪತ್ತ್ಯಶ್ವಕಲಭಾಶ್ಚೇತಿ ಪ್ರಾಣಿನಃ ಸಪ್ತಕೀರ್ತಿತಾಃ ॥ಚತುರ್ದಶೇತಿ ರತ್ನಾನಿ ಸರ್ವೇಷಾಂ ಚಕ್ರವರ್ತಿನಾಂ ॥ ”—ಹದಿನಾಲ್ಕು ರತ್ನಗಳಲ್ಲಿ ಸಂಜೀವಂಗಳೇಳು, ನಿರ್ಜೀವಂಗಳೇಳು, ರಥ,ಚಕ್ರ, ಮಣಿ, ಬಾಣ, ಖಡ್ಗ, ಚರ್ಮ(ಗುರಾಣಿ), ಕೇತು— ಇವು ಏಳೂ ನಿರ್ಜೀವಗಳು ; ಇನ್ನು ಪುತ್ರ, ಮಿತ್ರ, ದಳಪತಿ, ಸೂತ, ಸತಿ, ಕುದುರೆ ಆನೆ, ಇವು ಏಳೂ ಸಜೀವಗಳು— ಈ ಹದಿನಾಲ್ಕು ರತ್ನಂಗಳು ಚಕ್ರವರ್ತಿಯಾದವನಿಗೆ ಅವಶ್ಯಕವಾಗಿ ಇರಬೇಕು.

"ಅಪುತ್ರಾ ತಸ್ಯ ಸಾಪತ್ನೀಶೈಬ್ಯಾನಾಮ ತಥಾಪ್ಯಸೌ ।
ಅಪತ್ಯಕಾಮೋಽಪಿಭಯಾತ್ ನಾನ್ಯಾಂ ಭಾರ್ಯಾಮವಿಂದತ ॥

ಟೀಕು: ಯಾರು ಹೆಂಡಿರುವಶರಾಗಿರುವರೋ. ಅಥವಾ ಭಾರ್ಯ್ಯಾವಶರಾಗಿ ನಡೆಯುವರೋ, ಅಂಥವರಲ್ಲಿ ಶ್ರೇಷ್ಠನಾದವನು ಶೈಬ್ಯೆಯ ಪತಿಯಾದ ಜ್ಯಾಮಘನೆಂಬುವನು. ಶೈಬ್ಯೆಯೆಂಬ ಆತನ ಸತಿಯು ಅಪುತ್ರಳಾಗಿದ್ದಳು. ಅವಳು ಹಾಗಿದ್ದರೂ ಆತನು ಅಪತ್ಯಕಾಮನಾಗಿದ್ದರೂ ಆಕೆಯ ಭಯದಿಂದ ಮತ್ತೊಬ್ಬಳನ್ನು ಭಾರ್ಯೆಯಾಗಿ ನೋಡಲಿಲ್ಲ.

ಈಜ್ಯಾಮಘರಾಯನು ಪುತ್ರರಾಗಲು ಬೇರೊಂದು ವಿವಾಹವಂ ಮಾಡಿಕೊಳ್ಳಲಿಲ್ಲ. ಬಂದಾನೊಂದು ಕಾಲದಲ್ಲಿ ಈತನು ಶತ್ರುರಾಜರೊಡನೆ (ಪ್ರಭೂತರಥತುರಗಗಜ) ಸಮ್ಮರ್ದದಿಂದ ಅರಿಭಯಂಕರವಾದಮಹಾಯುದ್ಧದಲ್ಲಿ ಸಕಲ ಶತ್ರುಸೈನ್ಯವಂ ಜಯಿಸಿದುದರಿಂದ ಆಶತ್ರುಗಳು ರಾಜ್ಯವನ್ನೂ ಪುತ್ರ ಕಳತ್ರ ಬಂಧು ಬಲ ಕೋಶವೆಂಬ ಸಪ್ತಾಂಗಗಳಂ ಬಿಸುಟ್ಟು ದಶದಿಕ್ಕುಗಳಿಗೆ ಓಡಿಹೋಗುತ್ತಿರುವಲ್ಲಿ (ಭಯದಿಂದ ಚಲಿಸುತ್ತಿರುವ ಕಣ್ಣುಗಳುಳ್ಳ ಒಬ್ಬ ಕನ್ಯಕೆಯು "ತಾಯೇ, ತಂದೆಯೇ, ಅಣ್ಣನೇ, ರಕ್ಷಿಸು ರಕ್ಷಿಸು!" ಎಂದು ಆಕುಲವಿಲಾಪಗಳಂ ಮಾಡುತ್ತಿದ್ದಳು. ಈರೀತಿ ಶತ್ರುಗಳಂ ಜಯಿಸಿ ತಿರುಗುವಲ್ಲಿ ಆ ಕನ್ಯಾರತ್ನವಂ ಕಂಡು ಆಯುಕ್ತನಲ್ಲಿ ಗತಮನಸ್ಕನಾಗಿ ಚಿಂತಿಸಿ. "ಒಳ್ಳೆತಾಯಿತು! ಮಕ್ಕಳಿಲ್ಲದ ವಂಧ್ಯಾಭರ್ತೃವಾದ ತನ್ನಿಂದ ಈಗ ದೈವಯೋಗದಿಂದ ಸಂತತ್ಯರ್ಥವಾಗಿ ಈ ಕನ್ಯಾರತ್ನವು ಸಂಪಾದಿಸಲ್ಪಟ್ಟಿತು. ಅದುಕಾರಣ ಈ ಯುಕ್ತನಂ ವಿವಾಹವಂ ಮಾಡಿಕೊಂಡೇನು. ಅಥವಾ ಇವಳಂ ರಥಾರೋಹಣಂಗೆಯ್ದು ತನ್ನ ಪಟ್ಟಣವನೆಯ್ದಿಸಿ ಅಲ್ಲಿಯೇ ನಿಜಪತ್ನಿಯಾದ ಶೈಬ್ಯೆಯನುಮತಿಯಿಂದ ವಿವಾಹವಂ (ಮಾಡಿಕೊಂಡೇನು" ಎಂದು ಯೋಚಿಸಿ, ಅವಳಂ ರಥಾರೋಹಣವಂ ಗೆಯ್ದು ತನ್ನ ನಗರಿಗೆ ಕರೆದುಕೊಂಡು ಹೋದನು.) ಈ ಪ್ರಕಾರದಲ್ಲಿ ಜ್ಯಾಮಘರಾಯನು ವಿಜಯಶೀಲನಾಗಿ ಬರುತ್ತಿರುವಲ್ಲಿ (ಅಶೇಷ ಪೌರಭೃತ್ಯಪರಿಜನಾಮಾತ್ಯಸಮೇತಳಾಗಿ) ಪತಿವ್ರತೆಯಾದ ಶೈಬ್ಯೆಯು ಸಂತೋಷದಿಂ ವಿಜಯಶೀಲನಾದ ಪತಿಯಂ ನೋಡಬೇಕೆಂದು ಅಂತಃಪುರದ ಬಾಗಿಲಿಗೆ ಬಂದಳು. ಬಂದು ರಾಯನ ಎಡೆಗಡೆಯಲ್ಲಿ ರಥದ ಮೇಲೆ ಕುಳಿತಿದ್ದ ಕನ್ಯಾರತ್ನವಂ ಕಂಡು

ಹುಟ್ಟಿದ ರೋಷದಿಂದ ಆವಿಷ್ಟೆಯಾಗಿ ವಿಸ್ಫುರದಧರಪಲ್ಲವೆಯಾಗಿ ರಾಯನಂ ನೋಡಿ, "ಎಲೈ ಚಪಲಚಿತ್ತನಾದ ದೊರೆಯೆ! (ಯಾರನ್ನು ರಥದಮೇಲೆ ಕೂರಿಸಿಕೊಂಡಿದ್ದೀಯೆ?) ಇವಳಾರು ?" ಎನ್ನಲಾಗಿ; ಜ್ಯಾಮಘನು (ಉತ್ತರವಂ ಯೋಚನೆಮಾಡಿರಲಿಲ್ಲವಾಗಿ) ಭಯಾನ್ವಿತನಾಗಿ ಪತ್ನಿಯಂ ಕುರಿತು, "ಎನಗೆ ಸೊಸೆ" ಎಂದು ನುಡಿಯಲಾಗಿ; "ನಾನು ಮಗನಂ ಪಡೆದವಳಲ್ಲ: ನಿನಗೆ ಇನ್ನೊಬ್ಬ ಪತ್ನಿಯೂ ಇಲ್ಲ; ಆವ ಕುಮಾರನ ಸಂಬಂಧದಿಂದ ಈಕೆಯು ನಿನಗೆ ಸೊಸೆಯಾದಳು?" ಎನಲು; ಆ ಮಾತಿಗೆ ರಾಯನು ಪತ್ನಿಯ ಕೋಪದಿಂದ ಮುಷಿತವಾದ ವಿವೇಕವುಳ್ಳವನಾಗಿ, (ಭಯದಿಂದ ತಪ್ಪುಮಾತನ್ನು ಪರಿಹರಿಸಲೋಸುಗ) "ಎಲೆ ಪತಿವ್ರತೆಯೇ: ಮುಂದೆ ನಿನ್ನಲ್ಲಿ ಜನಿಸುವ ಮಗನಿಗೆ ಈಕೆ ಅನಾಗತಭಾರ್ಯೆ" ಎಂದು ನುಡಿದನು. ಅದಂ ಕೇಳಿ ಮಂದಹಾಸದಿಂದ ("ಹಾಗೆಯೇ ಆಗಲಿ" ಎಂದು) ರಾಯನೊಡನೆ ಅಂತಃಪುರವಂ ಪೊಕ್ಕು ವಯಸ್ಸಿನಿಂದ ವೃದ್ಧೆಯಾದರೂ ಮುಂದೆ ಪುತ್ರನಾದಾನು ಎಂದು ಮನಸ್ಸು ಅತ್ಯಂತ ಶುದ್ಧವಾಗಿ, ಲಗ್ನಹೋರಾಂಶಗಳನುಳ್ಳ ಪುತ್ರಜನ್ಮಲಾಭಗುಣವುಳ್ಳವಳಾಗಿ ವಯಃಪರಿಣಾಮವುಳ್ಳವಳಾದರೂ ಸ್ವಲ್ಪ ದಿವಸದಲ್ಲಿ ಗರ್ಭಿಣಿಯಾಗಿ, ತಕ್ಕುವಾಯ ಸರಿಯಾದ ಕಾಲದಲ್ಲಿ ಪುತ್ರನಂ ಪಡೆದಳು. ಆ ಪುತ್ರನಿಗೆ ಜ್ಯಾಮಘನು ವಿದರ್ಭನೆಂದು ನಾಮಕರಣವಂ ಮಾಡಿದನು. ಪ್ರಾಯಸಮರ್ಥನಾದ ಮೇಲೆ ಅವಂಗೆ ಆ ಕನ್ಯೆಯಂ ಮದುವೆ ಮಾಡಿದನು. ಅವಳಲ್ಲಿ ವಿದರ್ಭಂಗೆ [1]ಕ್ರಥ,[1] ಕೈಶಿಕರೆಂಬ ಇಬ್ಬರು ಪುತ್ರರಾದ ಮೇಲೆ ಯಾವನು ನಾರದರಿಂದ ಹೊಂದಲ್ಪಟ್ಟ ಜ್ಞಾನವುಳ್ಳವನಾಗುವನೋ ಅಂಥ ಮೂರನೆಯ ಕುಮಾರನು ರೋಮಪಾದನೆಂಬವನಾದನು. ಆ ರೋಮಪಾದನಿಗೆ ಬಭ್ರುವೆಂಬುವನು ಮಗನಾದನು. ಆತಂಗೆ ಧೃತಿಯು, ಆ ಧೃತಿಯಿಂದ ಕೈಶಿಕನು; ಕೈಶಿಕನಿಗೆ ಚೇದಿಯು: ಆ ಚೇದಿಯ ಸಂತತಿಯಲ್ಲಿ ಚೈದ್ಯರೆನಿಸಿಕೊಂಡ ಭೂಪಾಲರು ಉತ್ಪನ್ನರಾದರು. ಇನ್ನು ಕ್ರಥನಲ್ಲಿ ಕುಂತಿಯೆಂಬ ಪುತ್ರನು, ಅವನಿಗೆ ಧೃಷ್ಟಿಯು, ಆತಂಗೆ ನಿರ್ವೃತಿಯು, ಅವನಲ್ಲಿ ದಶಾರ್ಹನು, ಅವನಿಂದ ವ್ಯೋಮನು: ಅವನಿಂ ಜೀಮೂತನು. ಅವಂಗೆ ವಿಕೃತಿಯು; ಅವಂಗೆ ಭೀಮರಥನು; ಅವನಿಂದ ನವರಥನು; ಅವನಿಗೆ ದಶರಥನು,

ಪಾ. [1] [illegible]

ಅವಂಗೆ ಶಕುನಿ; ಅವಂಗೆ ಕರಂಭಿ; ಅವನಿಂ ದೇವರಾತನು; ಅವಂಗೆ ದೇವಕ್ಷತ್ರನು; ಅವನಿಂ ಮಧು; ಮಧುವಿಂ [1]ಕುಮಾರವಂಶನು[1]; ಕುಮಾರವಂಶಂಗೆ ಅನುವು; ಅನುವಿಂ [2]ಪುರುಮಿತ್ರನು[2]; ಅವನಿಂ ದಂಶು ; ಆತನಿಂ ಸತ್ವತನು ; ಆಸತ್ವತನಿಂದ ಸಾತ್ವತರು ಆದರು. ಇದೀಗ ಜ್ಯಾಮಘನ ಸಂತತಿಯು. ಈ ಸಂತತಿಕ್ರಮವಂ ಆವನು ಶ್ರದ್ಧಾಭಕ್ತಿಸಮನ್ವಿತನಾಗಿ ಕೇಳುತಲಿದ್ದಾನೋ ಆತನು ಸಮಸ್ತ ಪಾಪಂಗಳಿಂ ಬಿಡಲ್ಪಡುತ್ತಿದ್ದಾನೆಂದು ಶ್ರೀಪರಾಶರರು ಮೈತ್ರೇಯಂಗೆ ನಿರೂಪಿಸಿದರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಹನ್ನೆರಡನೆಯ ಅಧ್ಯಾಯಂ ಸಂಪೂರ್ಣಂ.

---

## ೧೩ ನೆಯ ಅಧ್ಯಾಯ.

ಕೇಳು ಮೈತ್ರೇಯಾ, ಸತ್ವತನ ವಂಶದಲ್ಲಿ ಭಜನ, ಭಜಮಾನ, ದಿವ್ಯಾಂಧಕ, ದೇವಾವೃಧ, ಮಹಾಭೋಜ, ವೃಷ್ಣಿಯೆಂಬ ಪುತ್ರರಾದರು. ಭಜಮಾನಂಗೆ ನಿಮಿ ಕೃಕಣ ವೃಷ್ಣಿಗಳೆಂಬ (ಮೂರು ಮಕ್ಕಳು,) ಶತಜಿತು, ಸಹಸ್ರಜಿತು, ಆಯುತ್ತೆಂಬ ಸಾಪತ್ನೀಭ್ರಾತೃಗಳಾದ ಇನ್ನು ಮೂರು ಮಕ್ಕಳು ಆದರು. ದೇವಾವೃಧಂಗೆ ಬಭ್ರುವೆಂಬ ಪುತ್ರನು ಆದನು.

(ಈ ದೇವಾವೃಧಬಭ್ರುವೆಂಬ ತಂದೆಮಕ್ಕಳ ವಿಷಯದಲ್ಲಿ ಹೀಗೆ ಗಾನಮಾಡಲ್ಪಡುತ್ತಲಿದ್ದಿತು :—)

ಶ್ಲೋ॥ ಯಥೈವ ಶೃಣುಮೋ ದೂರಾತ್ ಸಂಪಶ್ಯಾಮಸ್ತಥಾಂತಿಕಾತ್ ।
ಬಭ್ರುಶ್ಶ್ರೇಷ್ಠೋ ಮನುಷ್ಯಾಣಾಂ ದೇವೈರ್ದೇವಾವೃಧಸ್ಸಮಃ ॥
ಪುರುಷಾಃ ಷಟ್ಚಷಷ್ಟಿಶ್ಚ ಸಹಸ್ರಾಣಿ ತಥಾಷ್ಟಯೇ।
ತೇಽಮೃತತ್ವಮನುಪ್ರಾಪ್ತಾ ಬಭ್ರೋರ್ದೇವಾವೃಧಾದಪಿ ॥

ಟೀಕು—ದೂರದಲ್ಲಿರುವ ವಸ್ತುವನ್ನು ಹೇಗೆ ಕೇಳುವೆವೋ, ಹತ್ತಿರದಲ್ಲಿರುವ ವಸ್ತುವನ್ನು ಹೇಗೆ ನೋಡಿ ಪ್ರತ್ಯಕ್ಷಿಸುವೆವೋ ಹಾಗೆಯೇ) ಬಭ್ರುವೇ ಮನುಷ್ಯಶ್ರೇಷ್ಠನು, ದೇವಾವೃಧನು ದೇವತೆಗಳಿಗೆ ಸಮನು. ಇವರಿಬ್ಬರ ದೆಸೆಯಿಂದ ಅರುವತ್ತಾರು ಪುರುಷರು ಅವರ ಶಿಷ್ಯರು ಎಂಟು

---

ಪಾ—1. ಕುರು. 2. ಪುರುಹೋತ್ರ— ಎಂದು ಕನ್ನಡಮಾತೃಕೆಯ ಪಾಠಗಳು.

ಸಹಸ್ರ ಜನರೂ ಮೋಕ್ಷವನೆಯ್ದಿದರು.[1] ಆ ವಂಶದಲ್ಲಿ ಮಹಾಭೋಜನೆಂಬ ರಾಯನು ಅತ್ಯಂತ ಧಾರ್ಮಿಕನು: ಆತನ ವಂಶದಲ್ಲಿ ಭೋಜರು (ಜನಿಸಿದರು. ಅವರು ಮೃತ್ತಿಕಾವರ ಪುರನಿವಾಸಿಗಳಾದುದರಿಂದ ಮಾರ್ತಿಕಾವರರೆಂಬ ಹೆಸರುಳ್ಳವರಾದರು.) ವೃಷ್ಣಿಯೆಂಬವನಿಂ ಸುಮಿತ್ರ, ಯುಧಾಜಿತ್ತೆಂಬ ಇಬ್ಬರು ಮಕ್ಕಳಾದರು. ಸುಮಿತ್ರನಿಂದ ಅನಮಿತ್ರನು. ಆತಂಗೆ ನಿಘ್ನನೆಂಬ ಪುತ್ರನಾದನು. ಆತನ ಮಕ್ಕಳು ಪ್ರಸೇನಜಿತು, ಸತ್ರಾಜಿತು. ಆ ಸತ್ರಾಜಿದ್ರಾಯಂಗೆ ಆದಿತ್ಯನು ಸಖನಾದನು. ಅದೆಂತೆಂದರೆ—ಒಂದು ಸಮಯದಲ್ಲಿ ಸಮುದ್ರತೀರದಲ್ಲಿ ಸತ್ರಾಜಿತು ತಪೋನಿಷ್ಠನಾಗಿ ಆದಿತ್ಯನಂ ಸ್ತೋತ್ರಮಾಡಿದನು. ತದ್ಗತಮನಸ್ಕನಾಗಿ ಮಾಡಿದ ಸ್ತೋತ್ರಕ್ಕೆ ಸೂರ್ಯದೇವನೈತಂದು ಮುಂದೆ ನಿಂದನು. ಅಸ್ಪಷ್ಟಮೂರ್ತಿಯಾದ[2] ಮಾರ್ತಾಂಡನಂ ಕಂಡು ಸತ್ರಾಜಿದ್ರಾಯನು ಇಂತೆಂದು ನುಡಿದನು—"ಕೇಳು ಸೂರ್ಯನೇ, ಆಕಾಶದಲ್ಲಿ ಹೇಗೆ ಅಗ್ನಿಪಿಂಡದೋಪಾದಿಯಲ್ಲಿ[3] ನಿನ್ನನ್ನು (ಕಂಡೆನೋ, ಆಪ್ರಕಾರವೇ ಈಗಲು ನನ್ನೆದುರಿಗೆ ಇದ್ದೀಯೆ, ಇಲ್ಲಿ ನನಗೆ ತಾವು ಏನೂ ವಿಶೇಷವಾಗಿ ಅನುಗ್ರಹಮಾಡಲಿಲ್ಲ.") ಎಂದ ಸತ್ರಾಜಿತಂಗೆ ತನ್ನ ಕಂಠದೊಳಿದ್ದ ಸ್ಯಮಂತಕವೆಂಬ ಮಹಾರತ್ನವಂ (ತೆಗೆದು, ರಹಸ್ಯವಾಗಿ) ಕೊಟ್ಟನು. (ಅಬಳಿಕ) ಕೆಂಪಾದ ಕಾಂತಿಯಿಂದ ಪ್ರಕಾಶಿಸುತ್ತಿದ್ದ (ಹ್ರಸ್ವವಪುವುಳ್ಳ) ಸ್ವಲ್ಪ ಪಿಂಗಳವರ್ಣದಿಂ (ಕೂಡಿದ ಕಣ್ಣುಳ್ಳ)[4] ಆದಿತ್ಯದೇವನ ಸೂಕ್ಷ್ಮಶರೀರವಂ ಕಂಡನು. ಅದಂ ಕಂಡು ರಾಯಂ ಸೂರ್ಯಂಗೆ ನಮಸ್ಕಾರಂ ಗೆಯ್ದು ಭಕ್ತಿಯಿಂದ ನುತಿಸಲಾಗಿ, (ಸಹಸ್ರಕಿರಣನಾದ) ಸೂರ್ಯನು ಸಂತುಷ್ಟನಾಗಿ ವರವಂ ವರಿಸೆನಲು; (ಸತ್ರಾಜಿತನು) ಆ ಸ್ಯಮಂತಕಮಣಿಯಂ ಕುಡಹೇಳಿ ಬೇಡಿದನು. ಆ ದೀಧಿತಿಪತಿಯಾದ ಸೂರ್ಯನು ಆ ಮಣಿ

---

ಟೀಕು—1. ಅವರು ಉಪದೇಶ ಮಾಡಿದ ಕ್ರಮದಿಂದ ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು.

2. ಅಸ್ಪಷ್ಟಮೂರ್ತಿಯಾದ—ತೇಜೋಧಿಕ್ಯದಿಂದ ಕಣ್ಣಿಗೆ ಸ್ಪಷ್ಟವಾಗಿ ರೂಪ ಕಾಣಿಸದ.

3. ಇರುವೆಯೋ ಆಕ್ರಮವನ್ನು ಆಪ್ರಕಾರದ ರೂಪನೇ ಬೇಜೊಂದು ನೋಡದೆ ನೋಡಿಯೇನು – ಎಂದು ಕನ್ನಡಮಾತೃಕೆ.

4. ತೋರಲ್ಪಟ್ಟ—ಎಂದು ಕ. ಮಾತೃಕೆ

ಯನಾತಂಗಿತ್ತು ಆಕಾಶದಲ್ಲಿ ತನ್ನ ಸ್ಥಾನವನಾಶ್ರಯಿಸಿದನು. ಆ ಸತ್ರಾಜಿತನು ಆ ಅಮೂಲ್ಯಮಣಿರತ್ನಸನಾಥಕಂಠನಾದುದರಿಂದ ಸೂರ್ಯನೋಪಾದಿಯಲ್ಲಿ ತೇಜಸ್ಸಿನಿಂದ ಸಮಸ್ತ ದಿಗಂತಂಗಳಂ ಬೆಳಗುವವನಾಗಿ ದ್ವಾರಕಾಪುರವಂ ಪ್ರವೇಶಿಸಿದನು. ಆ ಪುರಜನ ಪರಿಜನಂಗಳು (ಬರುತ್ತಿರುವ) ಸತ್ರಾಜಿತನಂ ಕಂಡು,—ಭಗವಂತನಾದ ಆದಿಪುರುಷನು ಭೂಭಾರನಿರ್ಹರಣಾರ್ಥವಾಗಿ ಅವತಾರವಂ ಮಾಡಿ ಮಾಯಾಮನುಷ್ಯನಾಗಿರುವ ಶ್ರೀಕೃಷ್ಣಸ್ವಾಮಿಯಂ ಕುರಿತು, ಕೇಳು ಕೃಷ್ಣಸ್ವಾಮಿಯೇ, ನಿನ್ನಂ ನೋಡಬೇಕೆಂದು ಆದಿತ್ಯನು ಇಳಿದು ಬರುತ್ತಲಿದ್ದಾನೆ." ಎನ್ನಲು; ಅದಂ ಕೇಳಿ ಪರಮಾತ್ಮನು ನಕ್ಕು ಆ ಪ್ರಜೆಗಳಂ ಕುರಿತು ಈ ಮಾತನಾಡಿದನು :—"ಇವನು ಆದಿತ್ಯನಲ್ಲ. ಸೂರ್ಯನಿತ್ತ ಸ್ಯಮಂತಕಮಣಿಯಂ ಧರಿಸಿಕೊಂಡು ಸತ್ರಾಜಿದ್ರಾಜನು (ಬರುತಲಿದ್ದಾನೆ.) ಭಯವಂ ಬಿಟ್ಟು ನೋಡಿರಿ." ಎನ್ನಲಾಗಿ, ಎಲ್ಲರೂ ಸ್ವಸ್ಥ ಸ್ಥಾನಂಗಳಂ ಕುರಿತೆಯ್ದಿದರು.

ಸತ್ರಾಜಿತನಾ ಮಣಿಯಂ ತನ್ನ ಮನೆಯೊಳಿರಿಸಿದನು. ಆ ಮಣಿಯು ಪ್ರತಿದಿನವೂ ಎಂಟುಭಾರ[1] ಸುವರ್ಣವಂ ಕುಡುವುದು. ಈ ಮಣಿಯ ಪ್ರಭಾವದಿಂದ ರಾಜ್ಯರಾಷ್ಟ್ರಂಗಳಿಗೆ ಅನಾವೃಷ್ಟಿ ದುರ್ಭಿಕ್ಷ ರೋಗಪೀಡೆ ಅಗ್ನಿ ಸರ್ಪಗಳ ಭಯವು ಇಲ್ಲದೆ ಸುಖವುಂಟಾಗಿದ್ದಿತು. ಶ್ರೀಕೃಷ್ಣನು ಆ ದಿವ್ಯರತ್ನವಂ ಉಗ್ರಸೇನಂಗೆ ಅರ್ಹವೆಂದು ಅಪೇಕ್ಷಿಸಿ, ಸಮರ್ಥನಾದರೂ ಗೋತ್ರಭೇದಭಯದಿಂದ ಅದನ್ನು ಅಪಹರಿಸಿದವನಾಗಲಿಲ್ಲ. ಸತ್ರಾಜಿತನು ಶ್ರೀಕೃಷ್ಣನು ಈ ರತ್ನವಂ ತನ್ನಂ ಕೇಳಿಯಾನೆಂದು (ರತ್ನಲೋಭದಿಂದ ಅದನ್ನು) ತನ್ನ ತಮ್ಮನಾದ ಪ್ರಸೇನಜಿತ್ತಿಗೆ ಕೊಟ್ಟನು.

ಕೇಳು ಮೈತ್ರೇಯಾ, ಆವನು ಆ ಮಣಿಯಂ ಶುಚಿಯಾಗಿ ಧರಿಸುತಲಿರುವನೋ ಅವನಿಗೆ ಅದು ನಿತ್ಯವೂ ಸುವರ್ಣಭಾರವ ಕುಡುತ್ತಲೇ ಇರುವುದು. ಅಶುಚಿಯಾಗಿ ಧರಿಸಿದವಂಗೆ ತನ್ನ ಗುಣಂಗಳಂ ಮಾಡದೆ ಧರಿಸಿದವನಂ ಸಂಹರಿಸುವುದು. (ಇದಂ ತಿಳಿಯದೆ) ಈ ಪ್ರಸೇನಜಿತ್ತು ಕಂಠದಲ್ಲಿ

---

ಟೀಕು—1. ೫ ಗುಂಜಿ ತೂಕಕ್ಕೆ ೧ ಮಾಷ, ೧೬ ಮಾಷಕ್ಕೆ ೧ ಕರ್ಷ, ೬ ಕರ್ಷಕ್ಕೆ ೧ ಸ್ವರ್ಣ, ೪ ಸ್ವರ್ಣಕ್ಕೆ ೧ ಪಲ, ೧೦೦ ಪಲಕ್ಕೆ ೧ ತೊಲೆ, ೨೦ ತೊಲೆಗೆ ೧ ಭಾರ.

ವಾದ ಮಣಿಸಹಿತ ಅಶ್ವಾರೋಹಣವಂ ಮಾಡಿ ಬೇಟೆಗೆಯ್ದುವನಾದಕಾರಣ ಆ ವನದಲ್ಲಿ ಆತಂ ಸಿಂಹನೊಂದರಿಂ ಹತನಾದನು. ಅಶ್ವಸಹಿತನಾಗಿ ಪ್ರಸೇನಜಿತ್ತನ್ನು ಸಂಹರಿಸಿ ಆ ಸಿಂಹವು ಆ ಮಣಿಯುಂ ವಕ್ತ್ರದೊಳು ತೆಗೆದುಕೊಂಡು ಗುಹಾಂತರವಂ ಕುರಿತು ಹೋಗುವ ಸಮಯದಲ್ಲಿ ಋಕ್ಷಪತಿಯಾದ ಜಾಂಬವಂತನು ಅದಂ ಕಂಡು ಆ ಸಿಂಹವಂ ಸಂಹರಿಸಿ ಸ್ಯಮಂತಕಮಣಿಯುಂ ಕೊಂಡು ತನ್ನ ಬಿಲವಂ ಪ್ರವೇಶಿಸಿದನು. ಬಳಿಕ ಅದಂ (ಸುಕುಮಾರನೆಂಬ ಪೆಸರುಳ್ಳ) ತನ್ನ ಪುತ್ರಂಗೆ ಕ್ರೀಡಾರ್ಥವಾಗಿ ಕೊಟ್ಟನು. ಮೃಗಯಾರ್ಥವಾಗಿ ಪೋದ ಪ್ರಸೇನಜಿತ್ತು ಬಾರದಿದ್ದುದರಿಂದ ಸತ್ರಾಜಿತುವು-ಕೃಷ್ಣನು ಈ ರತ್ನವನಪೇಕ್ಷಿಸಿದ್ದವನು ತನ್ನ ತಮ್ಮನಾದ ಪ್ರಸೇನಜಿತ್ತಂ ವಧಿಸಿ ಮಣಿಯುಂ ಸಂಗ್ರಹಿಸಿದನು ಎಂದು ಜನರು ಆಡಿಕೊಂಬ ಮಾತಂ ಕೇಳಿ ಯಾದವಸಮೂಹವು ಒಬ್ಬರೊಡನೊಬ್ಬರು ಪರಸ್ಪರ ಪೇಳುತ್ತುಮಿರಲಾಗಿ, ಭಗವಂತನಾದ ಕೃಷ್ಣನು ತನ್ನಲ್ಲಿ ಅಪವಾರ್ತೆಯುಂ ಕೇಳಿ ಯದುಸೈನ್ಯಪರಿವಾರದೊಡನೆ ಪ್ರಸೇನಜಿತ್ತಿನ ಅಶ್ವಪದವಿಯನನುಸರಿಸಿ ನಡೆದನು. ಅಶ್ವಪದಾನುಸಾರಿಯಾದ ಶ್ರೀಕೃಷ್ಣನು ಅಶ್ವಸಮೇತನಾಗಿ ಸಿಂಹದಿಂದ ನಿಪಾತಿತನಾಗಿ ಬಿದ್ದಿದ್ದ ಪ್ರಸೇನಜಿತುವಂ ಕಂಡು, ಅಖಿಳಜನಮಧ್ಯದಲ್ಲಿ ಸಿಂಹದಿಂದ ಕೊಲ್ಲಲ್ಪಟ್ಟನು ಎಂದನು. ಆಗ ಅಪವಾದದಿಂ ಪರಿಶುದ್ಧನಾದ ಕೃಷ್ಣನು ಸಿಂಹಪದಾನುಸಾರಿಯಾಗಿ ನಡೆದನು. ಸಿಂಹಮಾರ್ಗಾನುಸಾರಿಯಾದ ಕೃಷ್ಣನು ಸ್ವಲ್ಪ ಮಾರ್ಗದಲ್ಲಿ ಋಕ್ಷದಿಂದ ಹತವಾದ ಸಿಂಹವಂ ಕಂಡು ರತ್ನಶ್ರೇಷ್ಠನಿಮಿತ್ತವಾಗಿ ಋಕ್ಷಪದವಂ ಕುರಿತೈದಿದನು. ಪರ್ವತದ ತಪ್ಪಲಲ್ಲಿ ಸೈನ್ಯಮನಿರಿಸಿ ಋಕ್ಷಪದಾನುಸಾರಿಯಾಗಿ ಋಕ್ಷಬಿಲವಂ ಪ್ರವೇಶಮಾಡಿ, ಅಂತರದಲ್ಲಿ ಉಪಲಾಲನಂಗೆಯ್ಯುತ್ತಿದ್ದ ದಾದಿಯ ವಾಕ್ಯವಂ ಕೇಳಿದನು. "ಎಲೈ ಮಗನೇ, ಸಿಂಹವು ಪ್ರಸೇನಜಿತ್ತಂ ಕೊಂದಿತು: ಆ ಸಿಂಹವಂ ಜಾಂಬವಂತನು ಸೀಳಿಸಿದನು. ನೀನು ರೋದನವಂ ಮಾಡಬೇಡ; ಈ ನಿನ್ನ ಸ್ಯಮಂತಕಮಣಿಯುಂ ನೋಡು" ಎಂದು ಹೇಳುವ ದಾದಿಯ ಮಾತಂ ಕೇಳಿ, ಸ್ಯಮಂತಕಮಣಿಯಿದ್ದ ಬಿಲವಂ ಪ್ರವೇಶಮಾಡಿ ಬಾಲಕ್ರೀಡಾರ್ಥವಾಗಿ ದಾದಿಯ ಹಸ್ತದಲ್ಲಿ ಜಾಜ್ವಲ್ಯಮಾನವಾಗಿಯೊಪ್ಪುತ್ತಿದ್ದ ಮಣಿಯುಂ ಕಂಡವನಾದನು. ಸ್ಯಮಂತಕಾಭಿಲಾಷಾಪೂರ್ವಕನಾಗಿ

ಬಂದ ಈ ಅಪೂರ್ವಪುರುಷನಂ ಆ ದಾದಿಯು, ಕಂಡು "ತ್ರಾಹಿ! ತ್ರಾಹಿ!" ಎಂದು ಕೂಗಿದವಳಾದಳು. ಅದಂ ಕೇಳಿ ರೋಷಾವೇಶಚಿತ್ತನಾಗಿ ಜಾಂಬವಂತನು ಬಂದು[1] ಕೃಷ್ಣನ ಸಂಗಡ "ನನ್ನ ಬಿಲವಂ ಪ್ರವೇಶಮಾಡಬಹುದೇ!" ಎಂದು ಹೇಳಿ, [1] ಇಪ್ಪತ್ತೊಂದುದಿನ ದ್ವಂದ್ವಯುದ್ಧವಂ ಮಾಡುತಿರಲಾಗಿ, ಹೊರಗಿದ್ದ ಯದುಸೇನೆಯು ಏಳೆಂಟು ದಿನದವರೆಗೂ ಇದ್ದು ಕೃಷ್ಣನು ಹೊರಗೆ ಬರುವನೋ ಎಂದು ನೋಡುತ್ತಲಿದ್ದು, ಕೃಷ್ಣಸ್ವಾಮಿಯು ಬಹು ದಿವಸ ಬಾರದಿದ್ದುದರಿಂದ-ಖಂಡಿತವಾಗಿ ಈ ಬಿಲದಲ್ಲಿ ನಾಶವನೆಯ್ದಿದನು. (ಹಾಗಿಲ್ಲದೆ ಆವನು ಜೀವಿಸಿದ್ದಲ್ಲಿ ಇಷ್ಟುದಿನಗಳು ಶತ್ರುಜಯದಲ್ಲಿ ಹೇಗೆ ಸಾವಕಾಶವಾಗುತಲಿದ್ದೀತು.) ಎಂದು ದೃಢಪಟ್ಟು, ದ್ವಾರಕಾಪಟ್ಟಣವನೆಯ್ದಿ, ಕೃಷ್ಣನು ಹತನಾದನೆಂದು ಹೇಳಿದುದರಿಂದ ಅವನ ಬಂಧುಗಳು ಕಾಲೋಚಿತವಾಗಿ (ಆತನಿಗೆ) ಅಖಿಲ ಉತ್ತರಕರ್ಮಗಳಂ ಮಾಡಿದರು. (ಯುದ್ಧಮಾಡುತ್ತಿರುವ ಕೃಷ್ಣಂಗೆ ಅತ್ಯಂತ ಶ್ರದ್ಧೆಯಿಂದ ಕುಡಲ್ಪಟ್ಟ ಪಿಂಡಜಲಗಳಿಂದ ಬಲವೂ ಪ್ರಾಣಪುಷ್ಟಿಯೂ ಉಂಟಾಯಿತು ; ಜಾಂಬವಂತನಿಗೆ ದಿನದಿನವೂ ಅತಿಗುರುವಾದ ಪುರುಷನಿಂದ ಹೊಡೆಯಲ್ಪಡುವ ಮತ್ತು ಅತಿಕಠಿನವಾಗಿ ಪೀಡಿಸಲ್ಪಟ್ಟ ಸಕಲಾವಯವಗಳುಳ್ಳವನಾಗಿ ನಿರಾಹಾರದಿಂದ ಬಲಹಾನಿಯುಂಟಾಯಿತು. ಭಗವಂತನಿಂದ ಪರಾಜಿತನಾಗಿ ಜಾಂಬವಂತನು ನಮಸ್ಕಾರಮಾಡಿ ಈರೀತಿ ಹೇಳಿದನು. "ಎಲೈ ಭಗವಂತನೇ, ಅಖಿಲ ಸುರಾಸುರಯಕ್ಷಗಂಧರ್ವ ಮೊದಲಾದವರಿಂದ ನೀನು ಜಯಿಸಲಶಕ್ಯನು. ಭೂಚರರಾದ (ಅಲ್ಪವೀರ್ಯರಾದ ನರರಿಂದಲೂ ಮನುಷ್ಯತುಲ್ಯರಾದ) ತಿರ್ಯಂಚರರಿಂದಲೂ ಜಯಿಸಲಶಕ್ಯನು ಎಂದು ಹೇಳತಕ್ಕುದೇನು? ಹೀಗಿರಲು ನೀನು ನಮ್ಮಿಂದ ಜಯಿಸಲಾಗುವುದೇ? (ಈ ನೀನು ಸಕಲಜಗತ್ಪರಾಯಣನಾದ ನಾರಾಯಣನ ಅಂಶಾವತಾರವಾದ ನಮ್ಮ ಸ್ವಾಮಿಯಾದ ರಾಮಸ್ವಾಮಿಯ ಅಂಶವಾಗಿಯೇ ನಿಜವಾಗಿ ಆಗಿರಬೇಕು.) ಎಂದು ದೃಢವಾಗಿ ಈ ಪ್ರಕಾರದಲ್ಲಿ ಜಾಂಬವಂತನಿಂದ ಸ್ತೋತ್ರಮಾಡಲ್ಪಟ್ಟ ಶ್ರೀಕೃಷ್ಣಸ್ವಾಮಿಯು ಜಾಂಬವಂತನಂ ಕುರಿತು_ಅಖಿಲಾವನೀಭಾರಾವತರಣಾರ್ಥವಾಗಿ ತನ್ನ ಅವತಾರವು ಎಂದು ಹೇಳಿ, ಅವನ ಶ್ರಮಭರವಂ ತಿಳಿದು, ಪ್ರೀತ್ಯಭಿವ್ಯಂಜಿತ

---

1 [illegible] ಇಲ್ಲ.

ವಾದ ಕರತಲಸ್ಪರ್ಶದಿಂ ಜಾಂಬವಂತನಂ ಪರಿಹರಿಸಲ್ಪಟ್ಟ ಯುದ್ಧಶ್ರಮವುಳ್ಳವನಾಗಿ ಮಾಡಿದನು. ಬಳಿಕಲಾಜಾಂಬವಂತನು ಕೃಷ್ಣಸ್ವಾಮಿಗೆ ಪೊಡಮಟ್ಟು ಸನ್ಮಾನಿಸಿ ಜಾಂಬವತಿಯೆಂಬ ತನ್ನ ಕನ್ನೆಯನ್ನು (ತನ್ನ ಮನೆಗೆ ಬಂದ) ಕೃಷ್ಣಸ್ವಾಮಿಗೆ ಅರ್ಘ್ಯಾದಿಪೂಜಾಪೂರ್ವಕವಾಗಿ ಕುಡುತ್ತಮಿರಲಾಗಿ, ಸ್ವಾಮಿಯು ಸ್ವೀಕರಿಸಿದವನಾದನು. ಅಂತುಮಲ್ಲದೆ ಸ್ಯಮಂತಕಮಣಿಯಂ ನಮಸ್ಕಾರಪೂರ್ವಕವಾಗಿ ಕೊಟ್ಟನು. ಪರಮಾತ್ಮನು ಪ್ರಣತನಾದ ಜಾಂಬವಂತನಿಂದ ಮಣಿಯು ಅಗ್ರಾಹ್ಯವಾದುದಾದರೂ ತನ್ನ ಅಪವಾದಪರಿಹಾರಾರ್ಥವಾಗಿ ತೆಗೆದುಕೊಂಡು ಜಾಂಬವತಿಯೊಡನೆ ದ್ವಾರಕಾಪಟ್ಟಣವನೆಯ್ದಿದನು. ಅನಂತರದಲ್ಲಿ ಪರಮಾತ್ಮನ ಆಗಮನದಿಂದ ಉಂಟಾದ ಹರ್ಷೋತ್ಕರ್ಷವುಳ್ಳ ದ್ವಾರಕಾವಾಸಿಜನಕ್ಕೆ ಕೃಷ್ಣಾವಲೋಕನದಿಂದ ಈಸಮಯದಲ್ಲಿ ಅತ್ಯಂತಪರಿಣತವಯಸ್ಸುಳ್ಳವರಾದರೂ ನವಯೌವನವುಳ್ಳವರ ಪ್ರಕಾರದಲ್ಲಿ ಆದರು. ಮತ್ತು ಸಕಲ ಯಾದವರೂ ಸ್ತ್ರೀಯರುಗಳೂ ಅನ್ಯೋನ್ಯಹರ್ಷಗಳಿಂದ ಪೂಜೆಗಳಂ ಮಾಡಿ, "ಮಂಗಳವಾಗಲಿ! ಮಂಗಳವಾಗಲಿ!!" ಎಂದರು. ಅನಂತರ ಕೃಷ್ಣಸ್ವಾಮಿಯು ಯಥಾವತ್ತಾಗಿ ಯಾದವರೊಡನೆ ತಾನು ಜಾಂಬವಂತನಸಂಗಡ ಮಾಡಿದ ಯುದ್ಧವಂ ಅಲ್ಲಿ ನಡೆದ ಪ್ರಸಂಗವಂ ತಿಳುಹಿ ಸ್ಯಮಂತಕರತ್ನವಂ ಸತ್ರಾಜಿತನಿಗೆ ಕೊಟ್ಟು ಮಿಥ್ಯಾಪವಾದವಂ ಪರಿಹಾರವಂ ಮಾಡಿಕೊಂಡು ಜಾಂಬವತಿಯಂ ಅಂತಃಪುರದೊಳಿರಿಸಿದವನಾದನು.

ಕೇಳು ಮೈತ್ರೇಯ, ಸತ್ರಾಜಿತನು ಶ್ರೀ ಕೃಷ್ಣನ ವಿಷಯದಲ್ಲಿ ವೃಥಾಪವಾದವಂ ಹೇಳಿದನೆಂಬ ಭಯದಿಂದಲೂ ಬಲವದ್ವಿರೋಧವು ಮಾಡತಕ್ಕುದಲ್ಲವೆಂದೂ, ಕೃಷ್ಣಂಗೆ ತನ್ನ ಕುಮಾರ್ತಿಯಾದ ಸತ್ಯಭಾಮೆಯಂ ಪ್ರಾಪ್ತವಿರೋಧಪರಿಹಾರವಂ ಮಾಡಿಕೊಳ್ಳಲು ಕೊಟ್ಟುದರಿಂದ ಆಕೆಯನ್ನು ಅಕ್ರೂರ ಕೃತವರ್ಮ ಶತಧನ್ವ ಮೊದಲಾದ ಯಾದವರು ಮೊದಲೇ ಬಯಸಿದ್ದರಾದಕಾರಣ ತಮಗೆ ಮಾನಹಾನಿಯಾಯಿತೆಂದು ಸತ್ರಾಜಿತನಲ್ಲಿ ವೈರಾನುಬಂಧವಂ ಮಾಡಿದವರಾದರು. ಅಕ್ರೂರ ಕೃತವರ್ಮಾದಿಗಳು ಶತಧನ್ವನಂ ಕುರಿತು ಈಮಾತಂ ನುಡಿದವರಾದರು:—"ಕೇಳು ಗೆಳೆಯೋ! ಈ ಸತ್ರಾಜಿತನು ಅತ್ಯಂತ ದುರಾತ್ಮನು, ಇವನು ನಿನ್ನಿಂದಲೂ ನನ್ನಿಂದಲೂ

ಪ್ರಾರ್ಥಿಸಲ್ಪಟ್ಟವನಾದರೂ ನಮ್ಮಂ ಗಣನೆಗೆ ತಾರದೆ ತನ್ನ ಮಗಳಾದ ಸತ್ಯಭಾಮೆಯನ್ನು ಕೃಷ್ಣಂಗೆ ಕೊಟ್ಟನು. ಇನ್ನು ನಾವು ಬದುಕಿರುವುದರಿಂದೇನು ಫಲ ? ಇವನಂ ಕೊಂದು ಮಹಾರತ್ನವಾದ ಆ ಸ್ಯಮಂತಕಮಣಿಯು ಏನು ಕಾರಣ ಅಪಹರಿಸಲ್ಪಡದೇ ಇದ್ದೀತು ? ನಾವು ಸಹಾಯವಂ ಮಾಡೇವು ಕೃಷ್ಣನು ನಿನಗೆ ವಿರೋಧಿಸಿದಲ್ಲಿ ಹೇಗೆ ಎಂಬೆಯೊ ? ಅರಗುಮನೆಯಲ್ಲಿ ದಗ್ಧರಾದ ಪಾಂಡುಸುತರ ಯೋಗಕ್ಷೇಮವಂ ಬಲ್ಲ ಭಗವಂತನಾದ ಶ್ರೀಕೃಷ್ಣನು ದುರ್ಯೋಧನನು ಮಾಡಿದ ಯತ್ನವಂ ವ್ಯರ್ಥವಾಡಬೇಕೆಂಬುದಾಗಿಯೂ ಪಾಂಡವರಿಗೆ ಸಾಹಾಯ್ಯವಂ ಮಾಡಲೋಸುಗವೂ ಈಗ ಹಸ್ತಿನಾಪಟ್ಟಣವಂ ಕುರಿತೈದಿದ್ದಾನೆ.'' (ಎಂದು ಹೇಳಲು; ಶತಧನ್ವನು ಅವರೆಲ್ಲರಂ ಕೂಡಿ,) ಆ ಸಮಯದಲ್ಲಿ ಮಲಗಿದ್ದ ಸತ್ರಾಜಿತನಂ ಸಂಹರಿಸಿ ಸ್ಯಮಂತಕಮಣಿಯನಪಹರಿಸಿದಕಾರಣ ಪಿತೃವಧಾಮರ್ಷಪೂರ್ಣೆಯಾದ ಸತ್ಯಭಾಮೆಯು ಶೀಘ್ರದಲ್ಲಿ ರಥಾರೋಹಣವಂ ಮಾಡಿ ಹಸ್ತಿನಾಪುರವನೆಯ್ದಿ, '' ತನ್ನನ್ನು ತಂದೆಯು ಶ್ರೀಕೃಷ್ಣನಿಗಾಗಿ ಕೊಟ್ಟನು ಎಂದು ಶತಧನ್ವನು ನನ್ನ ತಂದೆಯಂ ಕೊಂದು, ಪಿತಃ ಕಾಂತಿಯಿಂದ ಮೂರು ಲೋಕವು ಅಸಹ್ಯತತಿಮಿರವಾಗುವುದೋ ಅಂತಹ ಸ್ಯಮಂತಕರತ್ನವಂ ಅಪಹರಿಸಿದನು. (ನಾನಾರವಳೊ ಅವಂಗೆ ಈ ಕಾರ್ಯವು) ಹಾಸ್ಯಾಸ್ಪದವು ಎಂಬುದಂ ಯೋಚಿಸಿ ಆವ ಕಾರ್ಯವು ಯುಕ್ತವೋ ಅದಂ ಮಾಡತಕ್ಕುದು '' ಎಂದು ಕೃಷ್ಣಸ್ವಾಮಿಗೆ ಬಿನ್ನವಿಸಿದಳು.

ಕೇಳು ಮೈತ್ರೇಯಾ, ಈಪ್ರಕಾರ ಸತ್ಯಭಾಮೆಯಿಂದ ನುಡಿಯಲ್ಪಟ್ಟವನಾಗಿ,[1] (ಆ ಮಾತನ್ನು ಕೇಳಿ) ಪರಿತುಷ್ಟಾಂತಃಕರಣನಾದ [1]ಶ್ರೀಕೃಷ್ಣನು ಕೋಪಾವೇಶದಿಂದ ಕೆಂಪಾದ ಕಣ್ಣುಳ್ಳವನಾಗಿ ಈಮಾತಂ ನುಡಿದನು. '' ಕೇಳು ಸತ್ಯಭಾಮೆಯೇ, ಈ ಪರಿಹಾಸವು ನನಗೆ ಸೇರತಕ್ಕುದೇ ಸರಿ. ನಾನು ಆ ದುರಾತ್ಮನ ತಿರಸ್ಕಾರವಂ ಸಹಿಸತಕ್ಕವನಲ್ಲ, '' ಎಂದು ಹೇಳಿ ಸತ್ಯಭಾಮೆಯ ವಾಕ್ಯವನತಿಕ್ರಮಿಸದೆ,-ಆಮುಕ್ಕನ ಗೃಹಾಂಗಣದ ಕಲ್ಪವೃಕ್ಷದಾಶ್ರಯವಂ ಮಾಡಿದ ಪಕ್ಷಿಗಳುಕೂಡ ಬಾಧಿಸಲ್ಪಡಕೂಡದಾಗಿರುವಲ್ಲಿ ತನ್ನ ಮುಂದೆ ಈರೀತಿ ಶೋಕಸಂತಪ್ತೆಯಾಗಿ ನುಡಿದ ವಾಕ್ಯವಂ

---

ಟಿಪ್ಪಣಿ--1. ಸಂಸ್ಕೃತದ ಮೂಲದಲ್ಲಿ ಇಲ್ಲ.

ಕೇಳಿ (ತಾನು) ಸುಮ್ಮನಿರಬಹುದೇ ಎಂದು, ದ್ವಾರಕಾಪಟ್ಟಣವಂ ಹೊಕ್ಕು ಏಕಾಂತದಲ್ಲಿ ಬಲದೇವನಂ ಕುಱಿತು ಈ ಮಾತಂ ನುಡಿದನು:—" ಕೇಳು ಅಣ್ಣನೇ, ಪ್ರಸೇನನು ಬೇಟೆಯ ನಿಮಿತ್ತವಾಗಿ ವನವನೆಯ್ದಿದನು. ಮೃಗಪತಿಯಾದ ಸಿಂಹವು ಅವನಂ ವಧಿಸಿತು. ಈಗ ಶತಧನ್ವನಿಂದ ಸತ್ರಾಜಿತನು ಮರಣವಂ ಹೊಂದಿದನು. ಅವರಿಬ್ಬರ ವಿನಾಶದಿಂದ ಸ್ವಮಂತಕರತ್ನವು ನಮ್ಮಿಬ್ಬರಿಗೂ ಪುದುವಾಗಿದೆ. ಅದುಕಾರಣ ಶೀಘ್ರದಲ್ಲಿ ಎದ್ದು ರಥವಂ ಸಜ್ಜಿಸಿ ರಥಾರೋಹಣವಂ ಮಾಡಿ ಶತಧನ್ವನಂ ನಿಗ್ರಹಿಸತಕ್ಕುದು" ಎಂದು ಹೇಳಿದ ವಾಕ್ಯವಂ ಕೇಳಿ, "ಹಾಗೆಯೆ ಆಗಲಿ" ಎಂದು ಬಲರಾಮನು ಸಮ್ಮತಿಸಿದನು. ಈರೀತಿ ಕೃಷ್ಣಬಲರಾಮರಿಬ್ಬರೂ ಯುದ್ಧಯತ್ನವಂ ಮಾಡಿದುದಂ ತಿಳಿದು ಶತಧನ್ವನು ಕೃತವರ್ಮನನಂ ಸಹಾಯಾರ್ಥವಾಗಿ ಕರೆದಲ್ಲಿ, ಅವನು, "ಕೇಳು, ಶತಧನ್ವನೇ! ಶ್ರೀಕೃಷ್ಣಬಲರಾಮರೊಡನೆ ಯುದ್ಧಮಾಡಲು [1]ಸೂರ್ಯನಿಂದಲೇ ಆಗದಿರುವಾಗ[1] ನಾನು ಸಮರ್ಥನೇ!" ಎಂದು ಹೇಳಿದ ಮಾತಂ ಕೇಳಿ, ಬಳಿಕ ಅಕ್ರೂರನಂ ಪ್ರೇರಿಸಿದನು. ಅಕ್ರೂರಂ ಕೇಳಿ, "ಕೇಳಯ್ಯಾ ಶತಧನ್ವನೇ, ಪಾದಪ್ರಹಾರಮಾತ್ರದಿಂದ ಕಂಪಿಸಲ್ಪಟ್ಟ ಜಗತ್ರಯವುಳ್ಳವನಾಗಿ, ಅಸುರಪುರವನಿತೆಯರಿಗೆ ವೈಧವ್ಯವನುಂಟುಮಾಡುವನಾಗಿ ಪ್ರಬಲರಿಪುಸಮೂಹದೊಳಗಪ್ರತಿಹತವಾದ ಚಕ್ರವನುಳ್ಳ ಶ್ರೀಕೃಷ್ಣನೊಡನೆಯೂ ಮದಮುದಿತನಯನಾವಲೋಕನವುಳ್ಳ ಅರಿಬಲಸಂಹಾರಕನಾದ ಅತ್ಯಂತ ಗುರುವೈರಿವಾರಣಂಗಳಂ ಅಪಕರ್ಷಿಸುವ ಮಹಿಮೆಯುನಾಂತ ಹಲವಂ ತಳೆದ ಬಲರಾಮನೊಡನೆಯೂ ಆರು ಸೆಣಸುವರು? ಅಂತುಮಲ್ಲದೆ ಸಕಲಜಗದ್ವಂದ್ಯರಾದ ಬ್ರಹ್ಮೇಂದ್ರಶಿವಾದಿಗಳೊಡನಾದರೂ ಯುದ್ಧವಂ ಮಾಡಿ ಜಯಿಸುವ ಸಾಮರ್ಥ್ಯವುಳ್ಳವನೂ ಅಂಥವರೊಡನೆ ಹೆಣಗಲು ಸಮರ್ಥನಲ್ಲ. ನಾನೆಂತು ಸೆಣಸುವೆನು! ಅದುಕಾರಣ, ಎಲೈ ಶತಧನ್ವನೇ, ಬೇಱೆ ಸಹಾಯಾಂತರವ ಮಾಡಿಕೊಳ್ಳತಕ್ಕುದು" ಎಂದು ಹೇಳಲು; ಶತಧನ್ವನು—"ಎಲೈ ಅಕ್ರೂರ, ನೀನು ನನ್ನನ್ನು ಪಾಲಿಸಲು ಶಕ್ಯವಲ್ಲವೆಂದು ತಿಳಿಯುತ್ತಲಿದ್ದೀಯೆ. ಅದಂತರಲಿ. ನೀನು ಈ ಸ್ವಮಂತಕರತ್ನವನ್ನಾದರೂ ತೆಗೆದುಕೊಂಡು ನನಗೆ ಸಹಾಯಮಾಡತಕ್ಕುದು." ಎಂದು ನುಡಿದ ಮಾತಂ ಕೇಳಿ ಅಕ್ರೂರನು, "ಎಲೈ, (ನಿನ್ನ) ಅಂತ್ಯಾವಸ್ಥೆಯಲ್ಲಿಯೂ ನೀನು ಬಬ್ಬ

ನಿಗೂ (ಈಮಣಿ ನನ್ನಲ್ಲಿಗೆ ಎಂದು) ಹೇಳದಿರುವೆಯಾದರೆ ನಾನೀಮಣಿ ಯಂ ತೆಗೆದುಕೊಂಡೇನು" ಎಂದು ಹೇಳಿ, ಆರತ್ನವಂ ತೆಗೆದುಕೊಂಡನು. ಬಳಿಕ ಶತಧನ್ವನು ಬಹಳ ವೇಗವುಳ್ಳುದಾಗಿ ನೂಱುಯೋಜನವಂ ನಡೆವು ದಾಗಿರುವ ಒಂದು ಹೆಣ್ಣುಕುದುರೆಯಂ ಏಱಿ ಓಡಿಹೋಗುತ್ತುಮಿರಲಾಗಿ, ಸ್ವಾಮಿಯೂ ಬಲರಾಮನು [1]ಶೈಬ್ಯ[1] ಸುಗ್ರೀವ ಮೇಘಪುಷ್ಪ ಬಲಾಹಕಂ ಗಳೆಂಬ ಅಶ್ವಚತುಷ್ಟಯಯುಕ್ತವಾದ ರಥವನ್ನು ಏಱಿದವರಾಗಿ ಶತಧನ್ವನ ನಟ್ಟಿಕೊಂಡು ಹೋದರು. ಕೇಳು ಮೈತ್ರೇಯ! ಆ ಕುದುರೆ ಶತಯೋಜನ ಪ್ರಮಾಣಮಾರ್ಗವನ್ನು ಓಡಿದುದಱಿಂದಲೂ (ಇನ್ನೂ ಓಡುತ್ತ) ಅಧಿಕ ಮಾರ್ಗವನ್ನು ವಹಿಸಿದ್ದುದಱಿಂದಲೂ ಅತ್ಯಂತಶ್ರಮದಿಂದ ಮಿಥಿಲಾವನಪ್ರ ದೇಶದಲ್ಲಿ ಪ್ರಾಣಂಗಳಂ ಬಿಟ್ಟುದಾಯಿತು. ಶತಧನ್ವನು ಅದಂ ಬಿಟ್ಟು ಪಾದ ಚಾರಿಯಾಗಿ ಓಡಿಹೋಗುತ್ತುಮಿರಲಾಗಿ, ಶ್ರೀಕೃಷ್ಣನು ಬಲರಾಮನಂ ಕು ಱಿತು—"ರಥಸ್ಥನಾಗಿ ನೀನು ಇಲ್ಲಿ ಇರತಕ್ಕುದು. ನಾನು ಕಾಲ್ನಡೆಯಿಂದ ಓಡುವ ಶತಧನ್ವನಂ ಪಾದಚಾರಿಯಾಗಿ ಹೋಗಿ ನಿಗ್ರಹಿಸುವೆನು. ಕೇಳು ಅಣ್ಣ! ಈ ಭೂಪ್ರದೇಶದಲ್ಲಿ ದೃಷ್ಟದೋಷಭಯಂಗಳನುಳ್ಳ ಈ ಅಶ್ವಂ ಗಳು ಮುಂದೆ ನಿನ್ನಿಂದ ಪ್ರೇರಿಸತಕ್ಕುದಲ್ಲ" ಎಂದ ಮಾತಂ ಕೇಳಿ, ಬಲರಾ ಮನು ರಥಸ್ಥನಾಗಿ ಅಲ್ಲಿಯೇ ನಿಂತನು. ಶ್ರೀಕೃಷ್ಣನು ದ್ವಿಕ್ರೋಶ ಮಾತ್ರ ಮಾರ್ಗವನನುಸರಿಸಿ ದೂರದೊಳಿದ್ದ ಶತಧನ್ವನ ತಲೆಯಂ ಚಕ್ರಾಯುಧ ಪ್ರಯೋಗದಿಂ ಛೇದಿಸಿದನು. ಆ ಶತಧನ್ವನ ಶರೀರಾಂಬರಾದಿಗಳೊಳತ್ತು ನೋಡಿದರೂ ಸ್ಯಮಂತಕಮಣಿಯಂ ಪಡೆಯದೆ, (ಹಿಂದಿರುಗಿ ಬಂದು) ಬಲ ಭದ್ರನಂ ಕುಱಿತು ಈಮಾತಂ ನುಡಿದನು. "ಕೇಳು ಅಣ್ಣ, ವ್ಯರ್ಥ ವಾಗಿ ಶತಧನ್ವನಂ ಕೊಂದೆವು. ಅಖಿಲಜಗತ್ಸಾರಭೂತವಾದ ಮಹಾರತ್ನ ವಾದ ಸ್ಯಮಂತಕಮಣಿಯು ನಮ್ಮಿಂದ ಪಡೆಯಲ್ಪಡಲಿಲ್ಲ" ಎಂದನು. ಈ ರೀತಿಯಾದ ಕೃಷ್ಣನ ಮಾತಂ ಕೇಳಿ, ರಾಮನು ಕೋಪೋದ್ದೀಪಿತನಾಗಿ ಈರೀತಿ ನುಡಿದನು. "ಸುಡು! ಸುಡು! ನಿನ್ನ (ಯೋಗ್ಯತೆಯನ್ನು) ನೀನು ಈಪ್ರಕಾರದಲ್ಲಿ ಮಣಿಯನಪಹರಿಸಿದವನಾಗಿ ಅಕಾರ್ಯವಂ ಮಾಡಿದೆ. ತಮ್ಮನಾದುದಱಿಂದ ಬಿಟ್ಟೆನು. ಅದುಕಾರಣ ನಿನ್ನದಾರಿವಿಹಿದು ನೀನು

---

ಪಾ--1. ಸಂಸ್ಕೃತದಲ್ಲಿ "ಸೈನ್ಯ" ಎಂದಿದೆ.

ಹೋಗು. ನನಗೆ ದ್ವಾರಕೆಯಿಂದೇನು! ಸಕಲ ಬಂಧುಗಳೊಡನೆ ತಾನೆ ಏನು? ಸಾಕು ಸಾಕು! ಈ ಅಕಾರ್ಯ ಶಪಥಂಗಳಿಂದೇನು!" ಎಂದು ಆಕ್ಷೇಪಿಸಿ, ಕೆಲವು ಪ್ರಸಂಗಗಳಿಂದ (ಕೃಷ್ಣನಿಂದ) ಬಹಂಬಡಿಸಲ್ಪಟ್ಟವನಾದರೂ ಲೆಕ್ಕಿಸದೆ ಅಲ್ಲಿ ನಿಲ್ಲದೆ ವಿದೇಹನಗರಿಯಂ ಪ್ರವೇಶಿಸಿದವನಾದನು. ವಿದೇಹನಗರಿಯ ಜನಕರಾಯನು (ಬಲರಾಮನನ್ನು) ಅರ್ಘ್ಯಪೂರ್ವಕವಾಗಿ ಪಟ್ಟಣವಂ ಪ್ರವೇಶಿಸಿದವನಾದಕಾರಣ ಅಲ್ಲಿ ಕೆಲವುಕಾಲ ವಾಸಮಾಡಿದನು. (ಇತ್ತ) ಶ್ರೀಕೃಷ್ಣನು ದ್ವಾರಕಾಪುರವಂ ಪ್ರವೇಶಮಾಡಿದನು. ಎಷ್ಟುದಿವಸ ಜನಕರಾಯನ ಗೃಹದಲ್ಲಿ ಬಲಭದ್ರನಿದ್ದನೋ ಅಷ್ಟುದಿವಸವೂ ದುರ್ಯೋಧನನು ಅವನ ಸಮೀಪದಲ್ಲಿ ಗದಾಯುದ್ಧಕ್ರಮದೊಳ್ ಶಿಕ್ಷೆಯಂ ಹೊಂದಿದನು. ಈಪ್ರಕಾರವಿರುವಲ್ಲಿ ಮೂರುವರ್ಷದ ಮೇಲೆ ಸ್ಯಮಂತಕರತ್ನವು ಶ್ರೀಕೃಷ್ಣನಿಂದ ಅಪಹರಿಸಲ್ಪಡಲಿಲ್ಲವೆಂಬ ನಿಶ್ಚಯಬುದ್ಧಿಯುಳ್ಳವರಾಗಿ (ಬಭ್ರು) ಉಗ್ರಸೇನ ಮೊದಲಾದವರು ವೈದೇಹನ ಪುರ[1]ವನೆಯ್ದಿ ಬಲದೇವನನೊಡಂಬಡಿಸಿ ದ್ವಾರಕಾಪಟ್ಟಣಕ್ಕೆ ಕರೆದುಕೊಂಡುಬಂದರು. ಇತ್ತ (ಭಗವದ್ಧ್ಯಾನಪರನಾದ) ಅಕ್ರೂರನು ಉತ್ತಮವಾದ ಮಣಿಯಿಂದ ಉತ್ಪನ್ನವಾದ ದ್ರವ್ಯದಿಂದ ಅನೇಕ ಯಾಗಂಗಳಂ ಮಾಡಿದನು. ಯಾಗಭೂಮಿಪ್ರತಿಷ್ಠಿತರಾದ ಕ್ಷತ್ರಿಯವೈಶ್ಯರುಗಳನ್ನು (ಕೊಂದರೆ) ಬ್ರಹ್ಮಹತ್ಯಬರುವುದಾದುದರಿಂದ ಅಕ್ರೂರನು (ಅದಕ್ಕಾಗಿ ಯಜ್ಞ) ದೀಕ್ಷಾಕವಚವನ್ನು[2] ಧರಿಸಿಯೇ ಇದ್ದವನಾದನು. ಈಪ್ರಕಾರದಲ್ಲಿ ಅರುವತ್ತೆರಡು ವರ್ಷಂಗಳು ಆಮಣಿಶ್ರೇಷ್ಠಪ್ರಭಾವದಿಂದ ಆದೇಶದಲ್ಲಿ ಅವಗ್ರಹದುರ್ಭಿಕ್ಷಮಾರಿಕಾಮರಣಾದಿಗಳು ಆದುದಿಲ್ಲ. ಅನಂತರದಲ್ಲಿ ಅಕ್ರೂರಪಕ್ಷೀಯರಾದ ಭೋಜರುಗಳಿಂದ (ಸತ್ವತನ ಪ್ರಪೌತ್ರನಾದ ಶತ್ರುಘ್ನನು ಕೊಲ್ಲಲ್ಪಡಲು,) ಭೋಜರೊಡನೆ ಅಕ್ರೂರನು ದ್ವಾರಕಾಪಟ್ಟಣದಿಂದ ಹೊರಡಿಸಲ್ಪಟ್ಟನು.[3] ಆತನು

---

ಟೀಕು—1. ಜನಕರಾಯನಪಟ್ಟಣ.

ಟೀಕು—2. ದೀಕ್ಷಾಕವಚ = ದೀಕ್ಷೆಯಲ್ಲಿದ್ದರೆ ತನ್ನನ್ನು ಯಾರೂ ಕೊಲ್ಲುವುದಿಲ್ಲವೆಂಬುದಾಗಿ ತಿಳಿದು, ಅದನ್ನೇ ತನ್ನ ರಕ್ಷಾಕವಚವನ್ನಾಗಿ ಮಾಡಿಕೊಳ್ಳುವುದು.

3. ಓಡಿಹೋದನು—ಎಂದು ಸಂಸ್ಕೃತದ ಮಾತೃಕೆಯು.

ದ್ವಾರಕಾನಗರಿಯಂ ಬಿಟ್ಟು ಹೊರಟ ದಿನದಾರಭ್ಯ ಆವೂರಲ್ಲಿ ದುರ್ಭಿಕ್ಷ ವ್ಯಾಳಾದ್ಯುಪದ್ರವಗಳೂ ಅನಾವೃಷ್ಟಿಮಾರಿಕಾದ್ಯುಪದ್ರವಗಳೂ ಹುಟ್ಟಿದುವು. ಅವುಗಳಂ ಕಂಡು ಬಲಭದ್ರ ಉಗ್ರಸೇನಾದಿ ಯಾದವರು ಕೂಡಿ ಮಂತ್ರಾಲೋಚನೆಯಂ ಮಾಡಿದವರಾದರು. ಅದರಲ್ಲಿ ಗರುಡಧ್ವಜನಾದ ಶ್ರೀಕೃಷ್ಣನು—ಏಕಕಾಲದಲ್ಲಿಯೇ ಬಹಳ ಉಪದ್ರವಗಳು ಬಂದಿರುವ ವಿಷಯವು ಆಲೋಚಿಸಲ್ಪಡಲಿ, ಎನಲು ; ಅಂಧಕನೆಂಬ ಯದುವೃದ್ಧನು ನುಡಿದನು. "ಕೇಳಿ ಯಾದವರಿರಾ ! ಈ ಅಕ್ರೂರಂಗೆ ತಂದೆಯಾದ ಶ್ವಫಲ್ಗನು ಎಲ್ಲಿ ಎಲ್ಲಿ ಇದ್ದನೋ ಆಯಾಸ್ಥಳಗಳಲ್ಲಿ ಮಾರಿಕಾನಾವೃಷ್ಟಿದೋಷಗಳ. ಇಲ್ಲವಾಯಿತು. ಕಾಶೀರಾಜನ ದೇಶದಲ್ಲಿ ಅನಾವೃಷ್ಟಿದೋಷವುಂಟಾಯಿತು. ಆವಾಗ ಶ್ವಫಲ್ಗನು ಅಲ್ಲಿಗೆ ಬಯ್ಯಲ್ಪಟ್ಟನು. ಅದರಿಂದ ಒಡನೆಯೇ ದೇವೇಂದ್ರನು ವರ್ಷಿಸಿದನು. ಅಂತುಮಲ್ಲದೆ ಪೂರ್ವದಲ್ಲಿ ಕಾಶೀರಾಯನ ಪತ್ನಿಯು ಗರ್ಭದಲ್ಲಿ (ಬೆಳೆಯುತ್ತಿದ್ದ) ಕನ್ಯೆಯು ಪೂರ್ಣವಾದ ಪ್ರಸವಕಾಲದಲ್ಲಿಯೂ ಪ್ರಸವವಿಲ್ಲದೆ ಇದ್ದಳು. ಕಾಶೀರಾಜನ ಪತ್ನಿಯು ಗರ್ಭವು ಹನ್ನೆರಡುವರ್ಷಕಾಲವಿದ್ದಿತು. ಅದನ್ನುಕಂಡು (ಕಾಶೀರಾಜನು ಗರ್ಭಸ್ಥೆಯಾದ ಆ ಹೆಣ್ಣುಶಿಶುವಂ ಕುರಿತು ಬಂದು ಈಪ್ರಕಾರ ಮಾತ ನುಡಿದನು. "ಕೇಳು ಮಗಳೇ, ಏನುಕಾರಣ ಜನನವಾಗದೆ ಇದ್ದೀಯೆ ? ಹೊರಟುಬಾ. ನಿನ್ನ ಮುಖವನ್ನು ನೋಡಲಿಚ್ಛೈಸುತ್ತಲಿದ್ದೇನೆ. ನಿನ್ನ ತಾಯಿಯನ್ನು ಏನುಕಾರಣ (ಬಹುಕಾಲದಿಂದ) ಕ್ಲೇಶಪಡಿಸುತ್ತಿದ್ದೀಯೆ ?' ಎಂದು ನುಡಿಯಲ್ಪಟ್ಟ ಗರ್ಭಸ್ಥೆಯಾದ ಕನ್ನೆಯು ಉತ್ತರವಾಗಿ ನುಡಿದಳು. 'ಕೇಳು ತಂದೆ, ಎತ್ತಾನುಂ ನೀನು ಬ್ರಾಹ್ಮಣರಿಗೋಸ್ಕರ ಪ್ರತಿದಿನದಲ್ಲಿಯೂ ಗೋಪ್ರದಾನವಂ ಮಾಡಿದಲ್ಲಿ ಮೂರುವರ್ಷದಮೇಲೆ ಈ ಗರ್ಭದ ದೆಸೆಯಿಂದ ಹೊರಟುಬಂದೇನು.' ಎಂದುದಂ ಕೇಳಿ ರಾಯನು ಅಂದಿನಾರಭ್ಯ ಪ್ರತಿದಿನದಲ್ಲಿಯೂ ಗೋದಾನವಂ ಮಾಡಿದನು. ಬ್ರಾಹ್ಮಣರಿಗೆ ಗೋದಾನವಂ ಮಾಡಿದಕಾರಣ ಮೂರುವರ್ಷದ ಮೇಲೆ ಕನ್ನೆಯು ಜನಿಸಿದಳು. ಅವಳಿಗೆ ಗಾಂದಿನಿಯೆಂಬ ನಾಮಕರಣವಂ ಮಾಡಿದನು. ಅವಳಂ ಪ್ರಿಯೋಪಕಾರಿಯಾಗಿ ಮನೆಗೆ ಬಂದ ಶ್ವಫಲ್ಗಂಗೆ ಪೂಜಾರ್ಥವಾಗಿ ವಿವಾಹಮಾಡಿಕೊಟ್ಟನು. ಆ ಗಾಂದಿನಿಯಲ್ಲಿ ಶ್ವಫಲ್ಗನಿಗೆ ಈ ಅಕ್ರೂರನು ಜನಿಸಿದನು. ಈ ವೃತ್ತಾಂ

ತವಂ ಕೇಳು. ಏತಾದೃಶಗುಣಯುಕ್ತವಾದ ಸ್ತ್ರೀಪುಂಮಿಥುನದಿಂದುತ್ಪನ್ನನಾದ ಈ ಅಕ್ರೂರನು ಹೊರಟುಹೋದುದರಿಂದ ದುರ್ಭಿಕ್ಷಮಾರಿಕಾದ್ಯುಪದ್ರವಂಗಳು ಹೀಗೆ ತಲೆದೋರಿರುವುವು. ಇವು ಉಪಶಾಂತಿಯಾಗಬೇಕಾದಲ್ಲಿ ಆ ಅಕ್ರೂರನು ಕರೆಸಲ್ಪಡಲಿ. ಅತ್ಯಂತಗುಣವಂತನಾದ ಪುರುಷನ ಅಪರಾಧಾನ್ವೇಷಣವು ಸಾಕು" ಎಂದನು. ಕೇಳು ಮೈತ್ರೇಯಾ, ಈರೀತಿ ಹೇಳಿದ ಯದುವೃದ್ಧನ ಮಾತಂ ಕೇಳಿ ಶ್ರೀಕೃಷ್ಣ ಉಗ್ರಸೇನ ಬಲಭದ್ರ ಮೊದಲಾದವರಿಂದ ಕೃತಾಪರಾಧನಾದಗೂ ಉಪದ್ರವಪರಿಹಾರಾಪೇಕ್ಷೆಯಿಂದ ಅಭಯದಾನಪೂರ್ವಕವಾಗಿ ಅಕ್ರೂರನು ದ್ವಾರಕೆಗೆ ಕರೆಯಲ್ಪಟ್ಟನು. ಆತನ ಆಗಮನಮಾತ್ರದಲ್ಲಿ ಆ ಸ್ಯಮಂತಕಮಣಿಯ ಪ್ರಭಾವದಿಂದ ಅನಾವೃಷ್ಟಿಮಾರಿಕಾದುರ್ಭಿಕ್ಷವ್ಯಾಳಾದ್ಯುಪದ್ರವಂಗಳು ಉಪಶಮನವಾದುವು. ಅದಂ ಕಂಡು ಶ್ರೀಕೃಷ್ಣನು ಹೀಗೆಯೋಚಿಸಿದನು. "ಅವುದಾನೊಂದು ಕಾರಣಗಾಂದಿನಿಯಲ್ಲಿ ಈ ಅಕ್ರೂರನು ಜನಿಸಿದನೋ ಅದು ಅಲ್ಪವಾದ ಕಾರಣವು; ಈ ಅನಾವೃಷ್ಟಿಮಾರಿಕೋಪದ್ರವಪರಿಹಾರಕವಾದ ಪ್ರಭಾವಕ್ಕೆ (ಇದು) ಪ್ರಧಾನಕಾರಣವಲ್ಲ. ಅದರಿಂದ ಈತನಲ್ಲಿ ಮಹಾಮಣಿಶ್ರೇಷ್ಠವಾದ ಸ್ಯಮಂತಕವು ಇರುತಲಿದ್ದೀತು. ಆ ಮಣಿಗೀಗ ಏತಾದೃಶಪ್ರಭಾವವುಂಟೆಂದು ಕೇಳಲ್ಪಟ್ಟಿದೆ. ಅಂತುಮಲ್ಲದೆ ಈತನು ಬಂದು ಯಜ್ಞಾನಂತರದಲ್ಲಿ ಮತ್ತೊಂದು ಕ್ರತು, ತದನಂತರ ಮತ್ತೊಂದು ಯಾಗ. ಈರೀತಿ (ಅವಿಚ್ಛಿನ್ನವಾಗಿ ಯಾವಾಗಲೂ ಅಪರೂಪವಾದ ಯಾಗಗಳನ್ನು ಮಾಡುತಲಿದ್ದಾನೆ) ಇವನು ಅಲ್ಪಸ್ಥಿತಿಯುಳ್ಳವನು. ಬಹುಪ್ರಯಾಸಸಾಧ್ಯವಾದ ಯಜ್ಞಾದಿಗಳನಾಚರಿಸುವಲ್ಲಿ ನಿಸ್ಸಂಶಯವಾಗಿ ಮಣಿಯು ಈತನಲ್ಲಿಯೇ ಇದ್ದೀತು." ಎಂದು ನಿಶ್ಚಯಿಸಿದವನಾಗಿ, ಮತ್ತೊಂದು ಪ್ರಯೋಜನನಿಮಿತ್ತವಾಗಿ ಸಕಲ ಯಾದವಸಮೂಹವಂ ತನ್ನ ಗೃಹದಲ್ಲಿಯೇ ಕೂಡಿಸಿ ಯೋಚಿಸಿದವನಾದನು. ಸಮಾಜದಲ್ಲಿ ಸಕಲ ಯದುಶ್ರೇಷ್ಠರೂ ಕುಳಿತಿರುವ ವೇಳೆಯಲ್ಲಿ ಪೂರ್ವಕಥಾಪ್ರಸಂಗಗಳಂ ಮಾಡುತ್ತ, ಮಧ್ಯೇ ಅಕ್ರೂರನೊಡನೆ ಹಾಸ್ಯರಸಾವಹವಾಗಿ ಮಾತನಾಡುತ, "ಎಲೈ ದಾನಪತಿಯಾದ ಅಕ್ರೂರನೇ, ಶತಧನ್ವನಿಂದ (ಅಖಿಲ ಜಗತ್ಸಾರಭೂತವಾದ) ಮಣಿಶ್ರೇಷ್ಠವಾದ ಸ್ಯಮಂತಕವು ನಿನಗೆ ಕೊಡಲ್ಪಟ್ಟುದಂ ಬಲ್ಲೆವು. ನಿನ್ನಲ್ಲಿ ಇದ್ದುದರಿಂದ ಈಗೀಶ

ರಾಷ್ಟ್ರಂಗಳಿಗೆ ಉಪಕಾರವಾದುದು. ಸಮಸ್ತರಾದ ನಾವು ಆ ರತ್ನಪ್ರಭಾ
ವದಿಂದ ಉಂಟಾದ ಫಲಭೋಕ್ತೃಗಳು. ಈ ಬಲರಾಮನು ಯಾವ ಕಾರ
ಣದಿಂದ ನನ್ನಲ್ಲಿ ಶಂಕೆಯಂ ಮಾಡಿದ್ದಾನೋ ಆದುಕಾರಣ ನನ್ನ ಪ್ರೀತಿಗೋ
ಸ್ಕರ ಆ ಮಣಿಯಂ ತೋರಿಸು" ಎಂದು ನುಡಿದು ಸುಮ್ಮನಾದನು. ಆ ರತ್ನ
ವುಳ್ಳ ಅಕ್ರೂರನು ಅದಂ ಕೇಳಿ, "ಮಣಿಯು ನನ್ನಲ್ಲಿ ಇಲ್ಲವೆಂದರೆ ವಸ್ತ್ರ
ಗಳಂ ಶೋಧಿಸಿಯಾರು. ಆಗ ರತ್ನ ದೊರಕಿದರೆ ಇವರಲ್ಲಿ ವಂಚನೆಯಾ
ದೀತು." ಎಂದು ಬುದ್ಧಿಶಾಲಿಯಾದುದರಿಂದ ಯೋಚಿಸಿ ಅಖಿಲಜಗತ್ಕಾರಣ
ಭೂತನಾಗಿ ನಾನಾ ಚರಾಚರಂಗಳಿಗಾಲಯನಾದ ಶ್ರೀಕೃಷ್ಣನಂ ಕುರಿತು ಈ
ಮಾತಂ ನುಡಿದನು "ಕೇಳು ಸ್ವಾಮಿ! ನನಗೆ ಈ ರತ್ನವು ಶತಧನ್ವನಿಂದ ಕೊ
ಡಲ್ಪಟ್ಟಿತು. ಆತನು ಹೋದ ತರುವಾಯದಲ್ಲಿ (ಸ್ವಾಮಿಯು) ಈಗ,
ನಾಳೆ, ನಾಡಿದು ನನ್ನನ್ನು ಕೇಳಿದರೆ ಕೊಡೋಣವೆಂದು ಇಷ್ಟು ದಿನ ಪರ್ಯಂತ
ಬಹು ಪ್ರಯಾಸದಿಂದ ಧರಿಸಿ ಆ ರತ್ನಧಾರಣಕ್ಲೇಶದಿಂದ ನಾನು ಅಶೇಷಭೋ
ಗಂಗಳೊಳಾಸಕ್ತಿಯಿಲ್ಲದೆ ಸುಖಲೇಶವನಾದರೂ ಅರಿಯದೆ ಇದ್ದೆನು. ನಾನು
ಸಮಸ್ತ ರಾಜ್ಯರಾಷ್ಟ್ರೋಪಕಾರಿಯಾದ ರತ್ನವಂ ಧರಿಸಲು ಅಸಮರ್ಥನು.
ನೀನು ಏನು ತಿಳಿದೀಯೋ ಎಂಬ ಭಯದಿಂದ ನಾನು ನಿನಗೆ ಹೇಳಲಿಲ್ಲ.
ಆದುಕಾರಣ ಈಗ ಈ ರತ್ನವು ಗ್ರಹಿಸಲ್ಪಡಲಿ. ಕೇಳು ಸ್ವಾಮಿ, ನಿಮ್ಮ
ಮನವಾವನಲ್ಲಿದೆಯೋ ಆತಂಗೆ ಇದು ಕೊಡಲ್ಪಡಲಿ" ಎಂದು ಬಳವಸ್ತ್ರ
ದಲ್ಲಿ ಗುಪ್ತವಾಗಿ ಅತ್ಯಂತ ಲಘುವಾದ (ಚಿನ್ನದ ಭರಣಿಯಲ್ಲಿ) ಪ್ರತಿದಿ
ನವೂ ಸುವರ್ಣಭಾರಂಗಳಂ ಕೊಡುತಲಿದ್ದ ಆ ರತ್ನವಂ ಈಚೆಗೆ ತೆಗೆದು ಯಾ
ದವಸಮೂಹದಲ್ಲಿ ಇಟ್ಟನು. ಆ ಆಸ್ಥಾನಮಂಟಪವು ಅದರ ಬಹಳ ಕಾಂತಿ
ಯಿಂದ ದೇದೀಪ್ಯಮಾನವಾಗಿ ಹೋಯಿತು. ಆಗ ಅಕ್ರೂರನು-" ಈ
ಮಣಿಯು ಶತಧನ್ವನಿಂದ ನನಗೆ ಕೊಡಲ್ಪಟ್ಟಿತು. ಆವನಂಗೆ ಈ ರತ್ನವು
ಸಲ್ಲತಕ್ಕುದೋ ಅವನು ತೆಗೆದುಕೊಳ್ಳಲಿ" ಎನ್ನಲು; ಅಂತಹ ಅಕ್ರೂರನಂ
ಕುರಿತು ಸಕಲ ಯಾದವರೂ ಆಶ್ಚರ್ಯದಿಂದ "ಸಾಧು, ಸಾಧು" ಎಂಬ
ಮಾತಂ ನುಡಿದವರಾದರು. ಆ ರತ್ನವಂ ಕಂಡು ಬಲಭದ್ರನು—(ಇದು
ನನಗೆ ಹಿಂದೆಯೆ ಕೃಷ್ಣನಿಂದ ಪ್ರದುವಾದ ರತ್ನವೆಂದು ಹೇಳಲ್ಪಟ್ಟಿತು.) ಅದ
ರಲ್ಲಿ ನನಗೆ ಅಪೇಕ್ಷೆಯಿದೆಯೆಂದು (ಹೇಳಿದನು.) ಸತ್ಯಭಾಮೆಯು

ಪಿತ್ರಾರ್ಜಿತವಾದುದರಿಂದ ತನಗೆ ಆಗಬೇಕೆಂದೂ ಬಯಸಿದಳು. ಬಲಭದ್ರಸತ್ಯಭಾಮೆಯರ ಮುಖಾವಲೋಕನದಿಂದ ಶ್ರೀಕೃಷ್ಣನು [1]ಗೋಚಕ್ರಮಧ್ಯಗತಜಂತುವಿನಂತೆ[1] ತನ್ನನ್ನು ವಿಚಾರಿಸಿದವನಾಗಿ, ಸಕಲಯಾದವರ ಸಮಕ್ಷದಲ್ಲಿಯೂ ಅಕ್ರೂರನಂ ಕುರಿತಿಂತೆಂದನು :—ಈಮಣಿಯು ನನ್ನ ಅಪವಾದಪರಿಹಾರಾರ್ಥವಾಗಿ ಯಾದವರಿಗೆ ತೋರಿಸಲ್ಪಟ್ಟಿತು. ಇದು ನನಗೂ ಬಲಭದ್ರನಿಗೂ ಸಮಾನವು. ಸತ್ಯಭಾಮೆಗೆ ಪಿತ್ರಾರ್ಜಿತವು. ಇದು ನಮಗೊಬ್ಬರಿಗೂ ಅಲ್ಲ. ಯಾವಾಗಲೂ ಶುಚಿಯುಳ್ಳವನಾಗಿ ಬ್ರಹ್ಮಚರ್ಯಾದಿಗುಣಗಳುಳ್ಳ ಪುರುಷನಿಂದ ಧರಿಸಲ್ಪಟ್ಟದ್ದಾದರೆ ಸಮಸ್ತರಾಷ್ಟ್ರಕ್ಕೂ ಉಪಕಾರವಂ ಮಾಡುವುದು. ಅಶುಚಿಯಾದವನಿಂದ ಧರಿಸಲ್ಪಟ್ಟರೆ ಆ ಪುರುಷನನ್ನೇ ಕೊಲ್ಲುವುದು. ಅದುಕಾರಣ ತಾನು ಹದಿನಾರು ಸಾವಿರ ಸ್ತ್ರೀಯರಂ ಪರಿಗ್ರಹಿಸಿದವನಾದುದರಿಂದ ಧರಿಸಲಸಮರ್ಥನು. ಸ್ತ್ರೀಯಾದ ಸತ್ಯಭಾಮೆಯು ಕೈಯಲ್ಲಿ ಹೇಗೆ ಧರಿಸುವಳು (ಅಸಮರ್ಥನಾದ) ಬಲಭದ್ರನು ಮದ್ಯಾದಿ ಸಮಸ್ತಭೋಗಪರಿರತನು. ಅದಂತಿರಲಿ. ಈ ಯದುವೃದ್ಧರೂ, ಸತ್ಯಭಾಮೆಯೂ ಬಲರಾಮನೂ ನಾನೂ, ಎಲೈ ಅಕ್ರೂರನೇ! ನಿನ್ನಂ ಪ್ರಾರ್ಥಿಸುವುದೇನೆಂದರೆ :—ಆ ರತ್ನವಂ ನೀನೇ ಧರಿಸಲು ಸಮರ್ಥನು. ನಿನ್ನಿಂದ ಧರಿಸಲ್ಪಡಲಿ. ಅದರಿಂದ ಈರಾಷ್ಟ್ರಕ್ಕುಪಕಾರವಹುದು. ನೀನೇ ಸಕಲರಾಜ್ಯದ ಸಲುವಾಗಿ ಎಂದಿನಂತೆ ಈರತ್ನವನ್ನು ಧರಿಸು) ಇದಕ್ಕೆ ನೀನು ಬಗಲು ಹೇಳತಕ್ಕುದಲ್ಲ" ಎಂದ ಕೃಷ್ಣನ ಮಾತಂ ಕೇಳಿ ದಾನಪತಿ ಅಕ್ರೂರನು ಹಾಗೆಯೇ ಆಗಲೆಂದು ಆರತ್ನವಂ ಕೊಂಡು ತನ್ನ ಕೊರಲಲ್ಲಿ ಧರಿಸಿ ಜಾಜ್ವಲ್ಯಮಾನವಾದ ಕಾಂತಿಯಿಂದ ಆದಿತ್ಯನಂತೆ ಸಂಚರಿಸುತಿರ್ದನು.

ಈಪ್ರಕಾರದಲ್ಲಿ ಪರಮಾತ್ಮಂಗೆ ಬಂದ ಅಪವಾದ ಕಥಾವೃತ್ತಾಂತವಂ ಯಾವನು ಸ್ಮರಿಸುತಲಿದ್ದಾನೆಯೋ ಆತಂಗೆ ಆವಾಗಲೂ ಅಲ್ಪವಾದ ಮಿಥ್ಯಾಪವಾದವೂ ಕೂಡ ಹೊದ್ದದೆ ಇದ್ದೀತು; ಅಂತುಮಲ್ಲದೆ ಅವನು ಇಂದ್ರಿಯಂಗಳಿಗೆ ಅಧೀನನಾಗದೆ ಅಖಿಲ ಪಾಪಮೋಕ್ಷವಂ ಪಡೆವನು.

ಎಂದು ಶ್ರೀಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ
ಶ್ರೀವಿಷ್ಣುಪುರಾಣದ ಚತುರ್ಥಾಂಶದಲ್ಲಿ ಹದಿಮೂರನೆಯ ಅಧ್ಯಾಯಂ.

---

ಟೀಕೆ—1. ಬಂಡಿಯು ಹೋಗುತ್ತಿರುವಾಗ ಚಕ್ರಗಳ ಮಧ್ಯದಲ್ಲಿ ಸಿಕ್ಕಿದ ಪ್ರಾಣಿಯು ಕ್ಲೇಶವನ್ನು ಅನುಭವಿಸುವಂತೆ—ಎಂದು ತಾತ್ಪರ್ಯ.

## ಹದಿನಾಲ್ಕನೆಯ ಅಧ್ಯಾಯ.

ಕೇಳು ಮೈತ್ರೇಯ! ಅನಮಿತ್ರನ ಸುತನು ಶಿನಿಯೆಂಬುವನು. ಆತಂಗೆ ಸತ್ಯಕನು. ಅವನಿಗೆ ಸಾತ್ಯಕಿಯು; ಆ ಸಾತ್ಯಕಿಗೆ ಯುಯುಧಾನನೆಂದು ಮತ್ತೊಂದು ಹೆಸರು. ಅವನಿಗೆ ಸಂಜಯನು; ಅವನ ಮಗ ಕುಣಿಯೆಂಬುವನು; ಕುಣಿಗೆ ಯುಗಂಧರನು—(ಇವರೇ ಶಿನಿವಂಶೋತ್ಪನ್ನರಾದ ಶೈನೇಯರೆಂಬುವರು.) ಅನಮಿತ್ರನ ಅನ್ವಯದಲ್ಲಿಯೇ ವೃಷ್ಣಿಯಾದನು. ಆತನಿಂದ ಶ್ವಫಲ್ಗನು: [1](ಅವನ ಪ್ರಭಾವವು ಹೇಳಲ್ಪಟ್ಟೇ ಇದೆ. ಆ ಶ್ವಫಲ್ಗನಿಗೆ ಮತ್ತೊಬ್ಬ ಚಿತ್ರಕನೆಂಬ ಹೆಸರುಳ್ಳ ಚಿಕ್ಕ ಸಹೋದರನು ಆದನು. ಶ್ವಫಲ್ಗನ ಬೆಸೆಯಿಂದ ಅಕ್ರೂರನು ಗಾಂದಿನಿಯಲ್ಲಿ ಆದನು. ಹಾಗೆಯೇ ಉಪಮದ್ಗುವು. ಉಪಮದ್ಗುವಿಗೆ ಮದಾಮೃದ ವಿಶ್ವಾರಿ ಮೇಜಯಗಿರಿಕ್ಷತ್ರೋಪಕ್ಷತ್ರ ಶತ್ರುಘ್ನಾರಿಮರ್ದನ ಧರ್ಮಧೃಕ್ ದೃಷ್ಟಧರ್ಮಗಂಧಮೋಜವಾಹ ಪ್ರತಿವ್ಯಾಹಾಖ್ಯರಾದ ಪುತ್ರರೂ ಸುತಾರಾಯೆಂಬ) ಕನ್ಯೆಯೂ ಆದರು.[1] ದೇವವಾನ ಉಪದೇವನು ಎಂಬರು ಇಬ್ಬರು ಅಕ್ರೂರನ ಪುತ್ರರು. [2](ಚಿತ್ರಕನಿಗೆ ಪೃಥು ವಿಪೃಥು ಪ್ರಮುಖರಾದ)[2] ಬಹುಪುತ್ರರು ಆದರು.) [3]ಹಾಗೆಯೇ †ಅಂಧಕನಿಗೆ ಕುಕುರ ಭಜಮಾನಶುಚಿ ಕಂಬಳ ಬರ್ಹಿಷರೆಂಬ)[3] ನಾಲ್ಕು ಮಂದಿ ಕುಮಾರರು. ಕುಕರನಿಗೆ ಧೃಷ್ಟನು, ಅವನಿಗೆ ಕಪೋತರೋಮನು, ಅವನಿಗೆ ವಿಲೋಮನು, ಅವನಿಂದ ([4]ತುಂಬುರುಸಖನಾದ ಅನುವೆಂಬವನು ಆದನು.)[4] ಅನುವಿಂಗೆ ಆನಕದುಂದುಭಿಯು. ಆತಂಗೆ

---

ಪಾ—1. ಆತನಲ್ಲಿಯೂ ಗಾಂದಿನಿಯಲ್ಲಿಯೂ ಸ್ವನ್ನನಾದನು. ಆತನಿಂದ ಉಪಮದ್ಗುವೆಂಬುವನು. ಅವನಿಂದ ಮೃಧರವಿಸಾವಿಜಯನಿಂ ರಕ್ಷೋಪೇಕ್ಷಶತ್ರುಘ್ನಾರಿಮರ್ಧನ ಚರ್ಮ ದುಷ್ಟವರ್ಮ ಗಂಧಜವಾಹ ಪ್ರತಿವಾಹಾಖ್ಯರೆಂಬ ಪುತ್ರರೂ ಸುಪಾನೆಯೆಂಬ ಕನ್ನೆಯೂ ಆದರು. ಅವಳಲ್ಲಿ. 2. ಶತ್ರುಘ್ನಂಗೆ ಪೃಥಿವಿ ಮೊದಲಾದ. 3. ಅರಿಮರ್ದನಂಗೆ ಕುಮಾರನು, ಶುಚಿ, ತುಂಬಳ, ಬ್ರಹಿಸ್ಸು ಎಂಬ. 4. ತುಂಬುರಸಖನು ಅನು ಎಂಬ ಇಬ್ಬರು ಕುಮಾರರು ಆದರು—ಇವು ಕನ್ನಡಮಾತೃಕೆಯಲ್ಲಿರುವ ಪಾಠಗಳು.

† ಟೀಕು—ಅಂಧಕ=. ಸತ್ವತನ ಮಗ.

ಅಭಿಜಿತ್ತು. ಅವನಿಗೆ ಪುನರ್ವಸುವು, ಅವನಿಗೆ ಆಹುಕನೆಂಬ ಪುತ್ರನೂ ಆಹುಕಿಯೆಂಬ ಕನ್ಯೆಯೂ ಆದರು. ಆಹುಕಂಗೆ ದೇವಕನೆಂದೂ ಉಗ್ರಸೇನನೆಂದೂ ಇಬ್ಬರು ಮಕ್ಕಳು. ಆ ದೇವಕಂಗೆ ದೇವವಂತ, ಉಪದೇವ, ಸಹದೇವ, ದೇವರಕ್ಷಿತ್ರ ಎಂಬ ನಾಲ್ವರು ಪುತ್ರರು. ಅವರಿಗೆ ವೃಕದೇವಾ, ಉಪದೇವಾ, ದೇವರಕ್ಷಿತಾ, [1]ಶ್ರೀದೇವಾ,[1] ಶಾಂತಿದೇವಾ, ಸಹದೇವಾ, ದೇವಕೀ ಎಂದು ಏಳುಮಂದಿ ಒಡಹುಟ್ಟಿದ ಭಗಿನಿಗಳು. ಅವರು ಏಳುಮಂದಿಯನ್ನೂ ವಸುದೇವನು ವಿವಾಹಮಾಡಿಕೊಂಡನು. ಉಗ್ರಸೇನನಿಗೂ ಕಂಸ, ನ್ಯಗ್ರೋಧ, ಸುನಾಮ, [2]ಆನಕ,[2] ಶಂಕು, ಸುಭೂಮಿ, ರಾಷ್ಟ್ರಪಾಲ, [3]ಯುದ್ಧಮುಷ್ಟಿ,[3] ಸುತುಷ್ಟಿಮರೆಂಬ ಪುತ್ರರು ಆದರು. ([4]ಕಂಸಾ, ಕಂಸವತೀ, ಸುತನೂ, ರಾಷ್ಟ್ರಪಾಲಿಕಾ ಎಂಬ ಹೆಣ್ಣು ಮಕ್ಕಳೂ ಉಗ್ರಸೇನನಿಗೆ ಆದರು.)[4] [5]ಭಜಮಾನನಿಗೆ † ವಿದೂರಥನೆಂಬೊಬ್ಬ ಮಗನು. ವಿದೂರಥನಿಗೆ ಶೂರನು. ಶೂರನಿಗೆ ಶಮಿಯು; ಶಮಿಗೆ ಪರಿಕ್ಷತ್ರನು; ಅತನಿಗೆ ಸ್ವಯಂಭೋಜನು; ಅವನಿಗೆ ಹೃದಿಕನು; ಅವನಿಗೆ ಕೃತವರ್ಮ, ಶತಧನು, ದೇವಾರ್ಹದೇವಗರ್ಭರೇ ಮೊದಲಾದ ಪುತ್ರರು ಆದರು. ದೇವಗರ್ಭನಿಗೆ ಶೂರನು ಮಗನು. ಆ ಶೂರನಿಗೆ ಮಾರಿಷೆಯೆಂಬವಳು ಪತ್ನಿಯಾದಳು. ಆ ಪತ್ನಿಯಲ್ಲಿ ವಸುದೇವ ಮೊದಲಾದ ಹತ್ತು ಮಕ್ಕಳನ್ನು ಪಡೆದನು.)[5] ಆ ವಸುದೇವನು ಹುಟ್ಟಿದಕಾಲದಲ್ಲಿ ಅವನ ಗೃಹದಲ್ಲಿ ಮುಂದೆ ಭಗವದಂಶಾವತಾರ

---

ಪಾ—1. ತ್ರಿವೇದ. 2. ಕಂಕ. 3. ದೃಷ್ಟಿ—ಕನ್ನಡಮಾತೃಕೆಯಪಾಠಗಳು.

4. ಕನ್ನಡಮಾತೃಕೆಯಲ್ಲಿ ಇಲ್ಲ.

5. ಭಜಮಾನಂಗೆ ಶಮಿಯು, ಶಮಿಗೆ ಪರಿಕ್ಷಿತನು, ಆತಂಗೆ ಭೋಜನು, ಆತನಿಂ ವೃಧಿಕನು, ಅವಂಗೆ ಕೃತವರ್ಮನು, ಆತನಿಂ ಶರಧನ್ವನು, ಅಲ್ಲಿಂದೇವಮೀಢನು, ಆವಂಗೆ ಶೂರನು, ಆತಂಗೆ ಮರಿಷೆಯೆಂಬ ನಾಮವಾಯಿತು. ಆತಂಗೆ ದೇವಭಾಗ ದೇವಾದ್ಯಷ್ಟಿಯೆಂಬ ಶೂರಂಗೆ ಮರಿಷೆಯು ಪತ್ನಿಯಾದನು. ಅವಳಲ್ಲಿ ಶೂರಂಗೆ ಹತ್ತು ಕುಮಾರರಾದರು. ಅವರು ವಸುದೇವ ಮೊದಲಾದವರು—ಕನ್ನಡಮಾತೃಕೆಯ ಪಾಠ.

† ಟಿಪ್ಪಣಿ—ಸತ್ವತನ ಪುತ್ರನಾದ ಭಜಮಾನನಿಗೆ ನಿಮಿಕೃಕಣ, ವೃಷ್ಣಿ ಇತ್ಯಾದಿಯಾಗಿ ಮೊದಲು ಒಂದು ವಂಶವು ಹೇಳಲ್ಪಟ್ಟಿತು. ಈಗ ಅವನ ಮತ್ತೊಂದು ವಂಶಾಂತರವನ್ನು ಹೇಳುತ್ತಾನೆ.

ಆಗುವುದೆಂದು ಯೋಗದೃಷ್ಟಿಯಿಂದ ಬಲ್ಲ ದೇವತೆಗಳು ದುಂದುಭಿ ಮೊದಲಾದುವಂ ವಾದಿಸಿದುದರಿಂದ, ಆತನಿಗೆ ಆನಕದುಂದುಭಿಯೆಂಬ ನಾಮವಾಯಿತು. ಆತಂಗೆ ದೇವಭಾಗ, ದೇವಶ್ರವ, [1]ಅಷ್ಟಕ, ಕಕುಚ್ಚಕ್ರ[1] ಧಾರಕ, ಸೃಂಜಯ, ಶ್ಯಾಮ, ಶ್ಯಮಿಕ, ಗಂಡೂಷರೆಂಬ ಒಂಬತ್ತುಮಂದಿ ಭ್ರಾತೃಗಳಾದರು. ಪೃಥೆ, ಶ್ರುತದೇವಿ, ಶ್ರುತಕೀರ್ತಿ, ಶ್ರುತಶ್ರವಾ, ರಾಜಾಧಿದೇವಿಯೆಂದು ಐದು ಜನ ವಸುದೇವಾದಿಗಳಿಗೆ ಒಡಹುಟ್ಟಿದ ಭಗಿನಿಯರು. ಶೂರಂಗೆ ಕುಂತಿಯೆಂಬಾತನು ಸಖನು ಆದನು. ಅಪುತ್ರನಾದ ಕುಂತಿಗೆ ಶೂರನು ಪೃಥೆಯೆಂಬ ಮಗಳನ್ನು ಪುತ್ರಿಯಾಗಿ (ಶಾಸ್ತ್ರೋಕ್ತಪ್ರಕಾರ ದತ್ತು) ಕೊಟ್ಟನು. ಅವಳನ್ನು ಪಾಂಡುವು ವಿವಾಹಮಾಡಿಕೊಂಡನು, ಅವಳಲ್ಲಿ ಯಮನ, ವಾಯುವಿನ, ಇಂದ್ರನ ಅಂಶಗಳಿಂದ ಯುಧಿಷ್ಠಿರ, ಭೀಮಸೇನ, ಅರ್ಜುನರೆಂದು ಮೂವರು ಪುತ್ರರು ಹುಟ್ಟಿದರು. ಮದುವೆಯಾಗುವುದಕ್ಕೆ ಮೊದಲೇ ಕನ್ಯಾವಸ್ಥೆಯಲ್ಲಿ ಅವಳಿಗೆ ಭಗವಂತನಾದ ಸೂರ್ಯನಿಂದ [2]ಧರ್ಮಬದ್ಧನಾಗಿ[2] ಕರ್ಣನು ಜನಿಸಿದನು. ಆ ಪೃಥೆಗೆ ಮಾದ್ರಿಯೆಂಬ ಸವತಿಯುಂಟಾದಳು. ಆ ಮಾದ್ರಿಗೆ ನಾಸತ್ಯದಸ್ರರೆಂಬ ಅಶ್ವಿನೀದೇವರ ಅಂಶದಿಂದ ನಕುಲಸಹದೇವರೆಂಬ ಇಬ್ಬರು ಪಾಂಡುವಿಗೆ ಸುತರು ಆದರು. ಶ್ರುತದೇವಿಯನ್ನು [3]ವೃದ್ಧಧರ್ಮನೆಂಬ[3] (ಕಾರೂಶದೇಶಾಧಿಪನು ವಿವಾಹವಾದನು. ಅವಳಲ್ಲಿ ದಂತವಕ್ರನೆಂಬ ಹೆಸರುಳ್ಳ ಮಹಾಸುರನೊಬ್ಬನು ಹುಟ್ಟಿದನು.) ಶ್ರುತಕೀರ್ತಿಯೆಂಬವಳು ಕೇಕಯರಾಜನಿಗೆ ಪತ್ನಿಯಾದಳು. [4]ಅಯಕ್ಕನಲ್ಲಿ (ಸಂತರ್ದನಾ ಮೊದಲಾದ ಕೈಕೆಯರೆಂಬ ಪಂಚಪುತ್ರರು) ಆದರು[4]. ರಾಜಾಧಿದೇವಿಯಲ್ಲಿ ಅವಂತಿದೇಶದ (ಸರಾದವಿಂದಾನುವಿಂದರು) ಜನಿಸಿದರು. ಶ್ರುತಶ್ರವಸ್ಸನ್ನು ಚೇದಿರಾಜನಾದ ದಮಘೋಷನು ವಿವಾಹವಂ ಮಾಡಿಕೊಂಡನು. ಅವಳಲ್ಲಿ ಶಿಶುಪಾಲನು ಹುಟ್ಟಿದನು. ([5]ಆ ಶಿಶುಪಾಲನು ಪೂರ್ವದಲ್ಲಿ ಉದಾ

ಪಾ—1. ದೃಷ್ಟಿ, ಗುರು, ಬಕವತ್ಸ—ಕ. ಮಾ. ಪಾ.

ಪಾ—2. ಕಾನೀನನಾದ ಕರ್ಣನು ಎಂದು ಸಂಸ್ಕೃತಮಾತೃಕೆಯ ಪ್ರಕಾರ ಇರಬೇಕು. 3. ವೃದ್ಧಶರ್ಮನೆಂಬಾತನು. 4. ಪ್ರತರ್ದನಾದಿ ಬಹುಮಂದಿ ಮಕ್ಕಳಾದರು. 5. ಅವನು ಪೂರ್ವದಲ್ಲಿ ಉದಾರ ವಿಕ್ರಮನೆಂದು ಹೆಸರುಳ್ಳವನಾಗಿ ಆದಿಪುರುಷನಾದ ವಿಷ್ಣುವಿನಿಂದ ಸಂಹರಿಸಲ್ಪಟ್ಟ ಹಿರಣ್ಯಕಶಿಪುವೆಂಬಾತನು.—ಕ.ಮಾ. ಪಾ.

ರವಿಕ್ರಮನಾಗಿ ದೈತ್ಯರುಗಳಿಗೆ ಆದಿಪುರುಷನಾಗಿ ಹಿರಣ್ಯಕಶಿಪುವೆಂಬ ಹೆಸರುಳ್ಳವನಾಗಿ ಸಕಲಲೋಕಗುರುವಾದ ನರಸಿಂಹರೂಪದಿಂದಾವಿರ್ಭವಿಸಿದ ವಿಷ್ಣುವಿನಿಂದ ಸಂಹರಿಸಲ್ಪಟ್ಟನು. ಆತನು) ೧ ಆ ತರುವಾಯದಲ್ಲಿ ಅಕ್ಷಯವೀರ್ಯ ಶೌರ್ಯಸಂಪತ್ಪರಾಕ್ರಮಗಳಿಂದ ತ್ರೈಲೋಕ್ಯೇಶ್ವರರನ್ನು ಜಯಿಸಿ ತ್ರೈಲೋಕ್ಯವನ್ನು ಆಕ್ರಮಿಸಿದ ಮಹಾಪ್ರಭಾವವುಳ್ಳ * ದಶಾನನಾಗಿ ಹುಟ್ಟಿ ರಾಘವರೂಪದಿಂದ ಅವತರಿಸಿದ ಪರಮಾತ್ಮನಿಂದ ಸಂಹರಿಸಲ್ಪಟ್ಟನು. ಪುನಃ ಅವನೇ ಚೇದಿರಾಜನಾದ ದಮಘೋಷನಲ್ಲಿ ಶಿಶುಪಾಲನಾಗಿ ಜನಿಸಿದನು. ಶಿಶುಪಾಲನಾಗಿದ್ದಾಗ ಭೂಭಾರವನು ಇಳುಹಲೋಸುಗ ಅವತರಿಸಿದ ಪುಂಡರೀಕನಾಮಕನಾದ ಕೃಷ್ಣನ ಮೇಲೆ ಅತಿಯಾಗಿ ದ್ವೇಷಾನುಬಂಧವನ್ನು ಮಾಡಿ, ಆ ಪರಮಾತ್ಮನಿಂದ ಸಂಹರಿಸಲ್ಪಟ್ಟನು. (ಆ ಪರಮಾತ್ಮನು ಅವನಿಗೆ ತನ್ನಲ್ಲಿ ಏಕಾಗ್ರಮನಸ್ಸುಳ್ಳವನಾಗಿದ್ದ ಕಾರಣ) ಸಾಯುಜ್ಯಪದವಿಯನ್ನು ಪಾಲಿಸಿದನು. ಕೇಳು ಮೈತ್ರೇಯ ! (ಭಗವಂತನು ಪ್ರಸನ್ನನಾದರೆ ಇಷ್ಟಾರ್ಥವನ್ನು ಕುಡುವಹಾಗೆ, ಅಪ್ರಸನ್ನನಾಗಿ ಕೊಂದರೂ ಅನುಪಮವಾದ ದಿವ್ಯಸ್ಥಾನವನ್ನು ಕುಡುವನು)

ಎಂಬ ಬಳಿಗೆ ಶ್ರೀ ವಿಷ್ಣುಪುರಾಣದಲ್ಲಿ ಚತುರ್ಥಾಂಶದಲ್ಲಿ ಹದಿನಾಲ್ಕನೆಯ ಅಧ್ಯಾಯಂ ಸಂಪೂರ್ಣಂ.

## ೧೫ ನೆಯ ಅಧ್ಯಾಯ.

ಮೈತ್ರೇಯನು ಕೇಳುತಿದ್ದಾನು :—ಎಲೈ ಗುರುವೇ ! ಹಿರಣ್ಯಕಶಿಪುವಾಗಿದ್ದಾಗಲೂ ರಾವಣನಾಗಿದ್ದಾಗಲೂ ಪರಮಾತ್ಮನಿಂದ ಸಂಹರಿಸಲ್ಪಟ್ಟು ದೇವರ್ಕಳಿಗೂ ದುರ್ಲಭವಾದ ಭೋಗಗಳನ್ನು ಪಡೆದನೇ ಹೊರತು ಲಯವನ್ನು ಹೊಂದಲಿಲ್ಲ ; ಶಿಶುಪಾಲತ್ವದಲ್ಲಿ ಮಾತ್ರ ಸಂಹರಿಸಲ್ಪಟ್ಟವನಾಗಿ ಶಾಶ್ವತನಾದ ವಿಷ್ಣುಪರಮಾತ್ಮನಲ್ಲಿ ಸಾಯುಜ್ಯವಂ ಹೊಂದಿದನು. ಅದು

* ಟಿಪ್ಪಣಿ—ಬಹುಕಾಲೋಪಭುಕ್ತ ಭಗವತ್ಸಕಾಶಾವಾಪ್ತ ಶರೀರ ಪಾತೋದ್ಭವ ಪುಣ್ಯಫಲಃ:—ಎಂಬದಾಗಿ ರಾವಣನಿಗೆ ಮತ್ತೊಂದು ವಿಶೇಷಣವು ಸಂಸ್ಕೃತಮಾತೃಕೆಯಲ್ಲಿ ಇದೆ.

ಹೇಗೆ? ಎಂಬುದಂ ಕೇಳಲಿಚ್ಛೈಸುತ್ತಲಿದ್ದೇನೆ. ಎಲೈ ಸರ್ವಧರ್ಮಭೃತರುಗಳಲ್ಲಿ ಶ್ರೇಷ್ಠನಾದ ಗುರುವೇ! ಅತ್ಯಂತ ಕುತೂಹಲಪರನಾದ ನನ್ನಿಂದ ಕೇಳಲ್ಪಟ್ಟುದನ್ನು ನಿರೂಪಿಸಬೇಕು—ಎಂದು ಪ್ರಾರ್ಥಿಸಲು ; ಪರಾಶರಮುನಿಗಳು ನಿರೂಪಿಸುತಲಿದ್ದಾರೆ :—

ಕೇಳು ಮೈತ್ರೇಯ! ಹಿರಣ್ಯಕಶಿಪುವೆಂಬ (ದೈತ್ಯೇಶ್ವರನ) ವಧೆಗೋಸ್ಕರ ಶ್ರೀಮಹಾವಿಷ್ಣುವು ಸಕಲ ಜಗತ್ಸ್ಥಿತಿಸಂಹಾರಕಾರಿಯಾಗಿ ಪೂರ್ವದಲ್ಲಿ ಪಡೆದ ವರದಾನಕ್ಕೋಸ್ಕರ ನರಸಿಂಹರೂಪಿಯಾಗಿ ಆವಿರ್ಭವಿಸಿದನು. ಅಂತಹ ನೃಸಿಂಹಾವತಾರವು (ಸಾಕ್ಷಾತ್) ವಿಷ್ಣುವೆಂಬ ಜ್ಞಾನವು ಆತನಿಗೆ ತೋರದುದಾಯಿತು. ಆದರೆ ಆಭಾಗ್ಯ ಹೇಗೆ [1](ಪರಿಣಮಿಸಿತೆಂದೊಡೆ)[1] ನಿರತಿಶಯವಾದ ಪುಣ್ಯಜನನಕ್ಕೆ ಕಾರಣ[2](ವಾಯಿತು.)[2] ರಜೋಗುಣಪ್ರೇರಿತನಾಗಿ ಅವನಲ್ಲಿಯೇ ಏಕಾಗ್ರಚಿತ್ತನಾಗಿ ಭಾವನಾಯೋಗದ ದೆಸೆಯಿಂದ ಅವನಿಂದ ಪಡೆಯಲ್ಪಟ್ಟು ನಿರತಿಶಯವಾದ ತ್ರಿಲೋಕವಿಜಯ ಸಂಜಾತ (ತ್ರೈಲೋಕ್ಯಾಧಿಪ) ತ್ವೈಶ್ವರ್ಯವನ್ನು ರಾವಣನಾಗಿ ಪಡೆದನು. ಆದರೆ ಆದಿಮಧ್ಯಾಂತರಹಿತನಾದ ಪರಬ್ರಹ್ಮ[3](ಭೂತವಾದ ಆ ಭಗವಂತನನ್ನು ಮನಸ್ಸು ವಿಷಯೀಕರಿಸಲಿಲ್ಲವಾಗಿ[3] ಆ ಬ್ರಹ್ಮದಲ್ಲಿ ಲಯವನ್ನು ಹೊಂದಲಿಲ್ಲ. ದಶಾನನಾಗಿ ಇದ್ದಾಗಲೂ ಅನಂಗಪರಾಧೀನನಾಗಿದ್ದುದಱಿಂದ ಜಾನಕೀನ್ಯಸ್ತಮನಸ್ಕನಾದ ಭಗವಂತನಾದ ರಾಮನಿಂದ ಹತನಾದರೂ) ಅವನಿಗೆ ರಾಮನ ರೂಪದರ್ಶನಮಾತ್ರವೇ ಆಯಿತು. ಆ ರಾಮರೂಪದಲ್ಲಿ ರಾವಣನು ವಿಷ್ಣುವೆಂದು ತಿಳಿದುಕೊಳ್ಳದೆ ಮನುಷ್ಯನೆಂದೇ ಬುದ್ಧಿಯನ್ನು ಮಾಡಿದನು. ಆದುದಱಿಂದ ರಾಮಾವತಾರದ ಪರಮಾತ್ಮನಿಂದ ಸಂಹೃತನಾಗಿ, ತಜ್ಜನಿತಪುಣ್ಯಪರಿಪಾಕದಿಂದ ಅಖಿಲಭೂಮಂಡಲಶ್ಲಾಘ್ಯವಾದ ಚೇದಿರಾಜಕುಲದಲ್ಲಿ ಜನನವೂ ಅವ್ಯಾಹತೈಶ್ವರ್ಯವೂ ಶಿಶುಪಾಲಜನ್ಮದಲ್ಲಿ ಬಂದಿತು. ಆ ಜನ್ಮದಲ್ಲಿ ಸಮಸ್ತವಾದ ಭಗವನ್ನಾಮಂಗಳಂ ವ್ಯಂಗ್ಯಂಗ

---

ಪಾ—1. ಬಂದಿತೆಂದೊಡೆ. 2. ವಿದೀಗ—ಕ. ಮಾ. ಪಾ.

3. ಅನಂತರದಲ್ಲಿ ಆದಿಮಧ್ಯಾಂತರಹಿತನಾದ ಪರಬ್ರಹ್ಮದಲ್ಲಿ ಏಕಚಿತ್ತವಿಲ್ಲದೆ ಇರುವುದರಿಂದ —ಕ. ಮಾ. ಪಾ.

ಳಾಗಿಯೂ ವಿಪರೀತಾರ್ಥಂಗಳಾಗಿಯೂ ದೂಷಣಂಗಳಾಗಿಯೂ ತಾನು ಅವನು ಎಂದು ಉದಾಸೀನಂಗಳಾಗಿಯೂ ಮಾಡಿದನು. ತತ್ಕಾಲದಲ್ಲಿ ಹೇಳಲ್ಪಟ್ಟ ಅಚ್ಯುತನ ಗುಣನಾಮಂಗಳಂ ಅನೇಕ ಜನ್ಮಸಂವರ್ಧಿತದ್ವೇಷಾನುಬಂಧಚಿತ್ತದಿಂದ ನಿಂದನ ತರ್ಜನಭರ್ತ್ಸನಾದಿಗಳಲ್ಲಿ ನುಡಿದು ಪರಮಾತ್ಮನನ್ನು ನಿಂದಿಸಿದವನಾದನು. ಪರಮಾತ್ಮನು ಎಂತಹ ರೂಪನೆಂದೊಡೆ–ವಿಕಸಿತ ಪದ್ಮದಳಾಕ್ಷನಾಗಿ ಅತ್ಯಂತ ಪ್ರಕಾಶವಾದ ಪೀತಾಂಬರವನ್ನು ಧರಿಸಿದವನಾಗಿ ನಿರ್ಮಲಕಾಂತಿಯುಳ್ಳ ಕಿರೀಟಕೇಯೂರ ಕಂಕಣಹಾರಶೋಭಿತನಾಗಿ ಚತುರ್ಬಾಹುಗಳಲ್ಲಿ ಉದಾರಶಂಖಚಕ್ರಗದಾಧರನಾಗಿರುವನು. ಅಂಥ ಪರಮಾತ್ಮನಲ್ಲಿ ವೈರಾನುಬಂಧದಿಂದ ಸಂಚರಿಸುವಾಗಲೂ ಭೋಜನಸ್ನಾನಶಯನಾದಿ ಸಮಸ್ತಾವಸ್ಥೆಗಳಲ್ಲಿಯೂ ತದ್ಗತಮನಸ್ಕನಾಗಿದ್ದನು. ಏಕಚಿತ್ತದಿಂದ ನಾನ್ಯಮನಸ್ಕನಾಗಿ ಏತಾದೃಶನಾದ ಭಗವಂತನನ್ನು ನಿಷ್ಠುರೋಕ್ತಿಯಿಂದ (ಬಯ್ಯುತ್ತ), ದ್ವೇಷಾನುಬಂಧದಿಂದ ಆ ಪರಮಾತ್ಮನನ್ನೇ ಹೃದಯದಲ್ಲಿ ಧ್ಯಾನಿಸುತ್ತಿರಲಾಗಿ, (ತನ್ನ ವಧೆಗೋಸುಗ ಹಸ್ತಚಕ್ರಾಂಶುಮಾಲೋಜ್ವಲನಾಗಿ ಅಕ್ಷಯತೇಜಸ್ವರೂಪನಾಗಿ ಪರಬ್ರಹ್ಮಭೂತನಾಗಿ ಹೇಯಪ್ರತಿಭಟನಾದ ಪರಮಾತ್ಮನನ್ನು ಕಂಡು, ಆತನ ಚಕ್ರದಿಂದ ಸಂಹೃತನಾದನು. ಈತನಿಗೆ ಸಾಯುಜ್ಯವಾಗುವಲ್ಲಿ ಈತನ ಪಾಪಂಗಳು ಕ್ಷೀಣವಾದ ತೆಱನೆಂತೆನೆ–ಭಗವಚ್ಚರಣಧ್ಯಾನದಿಂದ ದಗ್ಧಾಖಿಲಪಾಪಸಂಚಯನಾಗಿ, ಪರಮಪುರುಷನಿಂದಲೇ ಅಂತ್ಯಾವಸ್ಥೆಯನೈದಿಸಿದವನಾಗಿ, ಆತನಲ್ಲಿಯೇ ಸಾಯುಜ್ಯವಂ ಪಡೆದನು. ಕೇಳು, ಮೈತ್ರೇಯ! ಆ ಷಡ್ಗುಣಮೂರ್ತಿಯಾದ ಪರಮಾತ್ಮನು ತನ್ನನ್ನು ದ್ವೇಷಾನುಬಂಧದೊಳಾದರೂ ಕೀರ್ತಿಸಿದವನಿಗೆ ಸಕಲ ಸುರಾಸುರರುಗಳಿಗೆ ದುರ್ಲಭವಾದ ಫಲವನ್ನು ಕುಡುತಲಿದ್ದಾನು ; ಇನ್ನು ಭಕ್ತಿಯಿಂದ ಕೂಡಿದ ಪುರುಷಂಗೆ ಕೇಳತಕ್ಕುದೇನು! (ಆನಕದುಂದುಭಿಯಾದ ವಸುದೇವನಿಗೆ ಪೌರವಿ, ರೋಹಿಣಿ, ಮದಿರೆ, ಭದ್ರೆ, ದೇವಕಿಯರೇ ಮೊದಲಾಗಿ ಬಹು ಪತ್ನಿಯರು ಅದರು.) ಬಲಭದ್ರ, ಶಠ, ಸಾರಣ, ದುರ್ಮದಪ್ರಮುಖರಾದ ಮಕ್ಕಳನ್ನು ಆನಕದುಂದುಭಿಯು ರೋಹಿಣಿಯಲ್ಲಿ ಪಡೆದನು. ಬಲಭದ್ರನು ರೇವತಿಯೆಂಬ ಪತ್ನಿಯಲ್ಲಿ ವಿಶಠ ಉಲ್ಮುಕರೆಂಬ ಇಬ್ಬರು ಪುತ್ರರಂ ಪಡೆದನು. ಸಾರ್ಷ್ಟಿ, ಮಾರ್ಷ್ಟಿ, ಶಿಶು, ಸತ್ಯ, ಸತ್ಯಧೃತಿ

ಪ್ರಮುಖರು ಸಾರಣನ ಮಕ್ಕಳು. ಭದ್ರಾಶ್ವ, ಭದ್ರಬಾಹು ದುರ್ದಮ ಭೂತರು ಮೊದಲಾದವರು ರೋಹಿಣಿಯ ಕುಲಜರು. (ಇನ್ನು) ನಂದ ಉಪನಂದ, ಕೃತಕಾದಿಗಳು ಮದಿರೆಯ ಪುತ್ರರು. ಉಪನಿಧಿ ಗದಾದಿಗಳು ಭದ್ರೆಯ ಮಕ್ಕಳು. ವೈಶಾಲಿಯಲ್ಲಿ ಕೌಶಿಕನೆಂಬ ಒಬ್ಬ ಮಗನು ಜನಿಸಿದನು. ದೇವಕಿಯಲ್ಲಿ ವಸುದೇವಂಗೆ ಕೀರ್ತಿಮಂತ, ಸುಷೇಣ, ದಾಯು, ಭದ್ರಸೇನ, ಋಜುದಾಸ, ಭದ್ರದೇವ ಎಂಬುವರು ಆರುಮಂದಿ ಜನಿಸಿದರು. ಆ ಆರುಮಂದಿ ಶಿಶುಗಳನ್ನೂ ಕಂಸನು ಸಂಹರಿಸಿದನು. ಅನಂತರದಲ್ಲಿ ಏಳನೆಯ ಗರ್ಭವನ್ನು ಅರ್ಧರಾತ್ರಿಯಲ್ಲಿ ಭಗವತ್ಪ್ರೇರಿತೆಯಾದ ಯೋಗನಿದ್ರೆಯು ಆಕರ್ಷಿಸಿ ರೋಹಿಣಿಯುದರದಲ್ಲಿ ಹಾಕಿದಳು. ಆಕರ್ಷಿಸಿಹಾಕಿದುದರಿಂದ ಅವನು ಸಂಕರ್ಷಣನಾಮವನೆಯ್ದಿದನು. ಅನಂತರದಲ್ಲಿ ಸಕಲಜಗತ್ತೆಂಬ ಮಹಾವೃಕ್ಷಕ್ಕೆ ಮೂಲಭೂತನಾದ, ಭೂತಭವಿಷ್ಯದ್ವರ್ತಮಾನಜ್ಞನಾದ, ಸಕಲಸುರಾಸುರಮುನಿಜನಂಗಳ ವಾಙ್ಮನಸಾಗೋಚರನಾದ, ಭಗವಂತನಾದ, ಆದಿಮಧ್ಯಾಂತರಹಿತನಾದ, ವಾಸುದೇವನು ಬ್ರಹ್ಮಮುಖ್ಯರಾದ ದೇವತೆಗಳಿಂದ ಭೂಭಾರೋತ್ತರಣಕ್ಕೋಸುಗ ನಮಸ್ಕೃತನಾಗಿ ಪ್ರಾರ್ಥಿಸಲ್ಪಟ್ಟು ದೇವಕಿಯ ಗರ್ಭವಂ ಪ್ರವೇಶಮಾಡಿದನು. ಭಗವತ್ಪ್ರಸಾದದಿಂದ ವರ್ಧಿಸಲ್ಪಟ್ಟ ಮಹಿಮೆಯುಳ್ಳ ಯೋಗನಿದ್ರೆಯು ನಂದಗೋಪಪತ್ನಿಯಾದ ಯಶೋದೆಯ ಗರ್ಭವನಾಶ್ರಯಿಸಿದಳು. ಪುಂಡರೀಕಾಕ್ಷನ ಅವತಾರಸಮಯದಲ್ಲಿ ಸಕಲ ಜಗತ್ತೂ ಪ್ರಸನ್ನವಾದ ಆದಿತ್ಯಚಂದ್ರಾದಿ ಗ್ರಹಕಿರಣಯುಕ್ತವಾಗಿ ವ್ಯಾಘ್ರಾದಿಭಯರಹಿತವಾಗಿ ಸ್ವಸ್ಥಚಿತ್ತವುಳ್ಳುದಾಗಿ ಅಧರ್ಮದೂರವಾದುದಾಗಿ ಆಯಿತು. ಅವತರಿಸಿದ ಪುಂಡರೀಕಾಕ್ಷನಿಂದ ಸಕಲಜಗತ್ತೂ ಸನ್ಮಾರ್ಗವರ್ತಿಯಾಗಿ ಮಾಡಲ್ಪಟ್ಟಿತು. ಈ ಮರ್ತ್ಯಲೋಕದೊಳವತರಿಸಿದ ಪರಮಾತ್ಮನಿಗೂ ಹದಿನಾರುಸಾವಿರದ ನೂರೊಂದು ಮಂದಿ ಪತ್ನಿಯರಾದರು. ಅವರಲ್ಲಿ ರುಕ್ಮಿಣಿ, ಸತ್ಯಭಾಮೆ, ಜಾಂಬವತಿ, ಚಾರುಹಾಸಿನಿಮೊದಲಾದ ಎಂಟುಮಂದಿ ಪ್ರಧಾನಸ್ತ್ರೀಯರಾದರು. ಈ ಸ್ತ್ರೀಯರುಗಳಲ್ಲಿ ಲಕ್ಷವೂ ಎಂಬತ್ತುಸಾವಿರ ಪುತ್ರರನು ಅಖಿಲಮೂರ್ತಿಯಾದ ಭಗವಂತನು ಪಡೆದನು. ಅವರಲ್ಲಿ ಪ್ರದ್ಯುಮ್ನ,

ಪ್ರದ್ಯುಮ್ನನು ರುಕ್ಮಿಯ ಮಗಳಾದ ರುಕ್ಮವತಿಯೆಂಬವಳನ್ನು ಮದುವೆಯಾದನು. ಅವಳಲ್ಲಿ ಅನಿರುದ್ಧನು ಜನಿಸಿದನು. ಅವನು ರುಕ್ಮಿಯ ಪೌತ್ರಿಯಾದ ಸುಭದ್ರೆಯನ್ನು ವಿವಾಹವಮಾಡಿಕೊಂಡನು. ಅವನಿಗೆ ಅವಳಲ್ಲಿ ವಜ್ರನೆಂಬವನೊಗೆದನು. ಆ ವಜ್ರಂಗೆ ಪ್ರತಿಬಾಹುವೆಂಬಾತನು ಮಗನು. ಆ ಪ್ರತಿಬಾಹುವಿಂಗೆ ಸುಚಾರವು ಪುತ್ರನಾದನು. ಈ ರೀತಿ ಯದುಕುಲದಲ್ಲಿ ಅನೇಕ ಶತಸಹಸ್ರಕುಮಾರರು ಅವತರಿಸಿದರು. ಅವರ ಸಂಖ್ಯೆಯನ್ನು ಅನೇಕ ಶತವರ್ಷಗಳಿಂದಲೂ ಎಣಿಸಿ ಹೇಳಲಶಕ್ಯವು. (ಏಕೆಂದರೆ?) ಧನುರ್ವಿದ್ಯಾಭ್ಯಾಸ ಮುಂತಾದುದರಲ್ಲಿ ಶಿಕ್ಷಿಸುವ ಗೃಹೋಪಾಧ್ಯಾಯರುಗಳೇ ಮೂರುಕೋಟಿಯು ಎಂಟುಸಾವಿರದ ಎಂಟುನೂರು ಮಂದಿಗಳಿರುವಾಗ ಮಹಾತ್ಮರಾದ ಯದುಕುಲೋತ್ಪನ್ನರಾದ ಕುಮಾರರ ಗಣನೆಯನಾವ ಮನುಷ್ಯನೆಸಗಬಲ್ಲನು ? ಏತಾದೃಶಾಸಂಖ್ಯಾತಕುಮಾರರೊಡನೆ ಯದುಪತಿಯಾದ ಆಹುಕನು ನಿಯುತನಾಗಿದ್ದನು

ಎಲೈ ಮೈತ್ರೇಯ ! ಈ ಯದುಕುಲವು ಅಸಂಖ್ಯಾತವಾಗಿ ವೃದ್ಧಿಯನೆಯ್ದುವ ಕಾರಣವೆಂತೆಂದರೆ—ಹಿಂದೆ ದೇವಾಸುರ ಯುದ್ಧದಲ್ಲಿ ಹತರಾದ ಮಹಾಬಲಿಷ್ಠರಾದ ದೈತ್ಯರು ಮನುಷ್ಯರೊಳುತ್ಪನ್ನರಾಗಿ ಜನೋಪದ್ರವಕಾರಿಗಳಾಗಿರುವುದಂ ಕಂಡು ಅವರ ನಿಗ್ರಹಾರ್ಥವಾಗಿ ದೇವತೆಗಳು ಯದುಕುಲದಲ್ಲಿ ಭೂಮಿಯಲ್ಲಿ ಸಂಭವಿಸಿದರು. (ಆವ ಪರಮಾತ್ಮನು ಅವರುಗಳ ಕಾರ್ಯನಿರ್ವಾಹದಲ್ಲಿಯೂ, ಪಾಲನೆಯಲ್ಲಿಯೂ ವ್ಯವಸ್ಥಿತನಾಗಿದ್ದನೋ ಅಂಥ ಪರಮಾತ್ಮನ ಆಜ್ಞಾನುವರ್ತಿಗಳಾಗಿರಲಾಗಿ ಸಕಲ ಯಾದವರು ಪುತ್ರಧನಾದ್ಯಭಿವೃದ್ಧಿಯನ್ನು ಹೊಂದಿದವರಾದರು.) ಇಂತಹ ವೈಷ್ಣವಶ್ರೇಷ್ಠರಾದ ವೃಷ್ಣಿಗಳ ವಂಶವನ್ನು ಆವನಂ ಕೇಳುತ್ತಿಹನೋ ಅವನು ಸಕಲಪಾಪಂಗಳಿಂ ವಿಮುಕ್ತನಾಗಿ ವಿಷ್ಣುಲೋಕವನ್ನೈದುವನು.

ಎಂಬ ಕಥಾವೃತ್ತಾಂತವಂ ಶ್ರೀಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಹದಿನೈದನೆಯ ಅಧ್ಯಾಯಂ ಸಂಪೂರ್ಣಂ.

## ೧೬ ನೆಯ ಅಧ್ಯಾಯ.

ಕೇಳು ಮೈತ್ರೇಯ! (ಈ ರೀತಿಯಲ್ಲಿ) ಯದುವಂಶವಂ ವಿಸ್ತರಿಸಿದುದಾಯಿತು. ಅನಂತರ ದುರ್ವಸುವಿನ ವಂಶವಂ ಕೇಳು. ದುರ್ವಸುವಿನ ಮಗನು ವಹ್ನಿಯು ; ಆತನ ಪುತ್ರನು ಭಾರ್ಗನು ; ಆತನಿಗೆ ಭಾನುವು ; ಅವನಿಗೆ ತ್ರಯಿಸಾನುವು ; ಅವನಿಗೆ ಕರಂದಮನು ; ಆತಂಗೆ ಮರುತ್ತನು; ಆತನು ಪುರುವಂಶೋತ್ಪನ್ನನಾದ ದುಷ್ಯಂತನನ್ನು ಪುತ್ರನನ್ನಾಗಿ ಮಾಡಿಕೊಂಡನು. ಈ ಪ್ರಕಾರದಲ್ಲಿ ಯಯಾತಿಯ ಶಾಪದಿಂದ ಆ ವಂಶವು ಪುರುವಂಶವನ್ನೇ ಆಶ್ರಯಿಸಿತು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಹದಿನಾರನೆಯ ಅಧ್ಯಾಯಂ ಸಮಾಪ್ತಂ.

## ೧೭ ನೆಯ ಅಧ್ಯಾಯ.

ಕೇಳು ಮೈತ್ರೇಯ! ದ್ರುಹ್ಯನ ವಂಶವನ್ನು ಹೇಳುತ್ತೇವೆ ದ್ರುಹ್ಯನಿಗೆ ಬಭ್ರುವು ಮಗನಾದನು. ಆ ಬಭ್ರುವಿಗೆ ಸೇತುವು ; ಆತನಿಗೆ [1]ಆರಬ್ಧನೆಂಬವನು [1]ಪುತ್ರನು; ಆರಬ್ಧನಿಗೆ ಪುತ್ರನು ಗಾಂಧಾರನು; ಆತನಿಗೆ ಘರ್ಮನು; ಘರ್ಮನಿಗೆ ಘೃತನು ; ಘೃತನಿಗೆ ದುರ್ದಮನು ; ಆತನಿಗೆ ಪ್ರಚೇತಸ್ಸುವು; [2](ಪ್ರಚೇತಸ್ಸುವಿನ ಮಗನಾದ ಶತಧರ್ಮನು ಉತ್ತರದಿಕ್ಕಿನಲ್ಲಿದ್ದ ಬಹುಮಂದಿ ಮ್ಲೇಚ್ಛರುಗಳಿಗೆ ಅಧಿಪತಿಯಾದನು.)[2]

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಹದಿನೇಳನೆಯ ಅಧ್ಯಾಯಂ ಸಂಪೂರ್ಣಂ.

---

ಪಾ— 1. ಅಂಧಕನು.—ಕ. ಮಾ. ಪಾ.

2. ಆ ಪ್ರಚೇತಸ್ಸುವಿನ ಮಕ್ಕಳು ನೂರು ಮಂದಿ ಆದರು. ಧರ್ಮವಿಲ್ಲದೆ ಅಧರ್ಮನಿಷ್ಠರಾದ ಮ್ಲೇಂಛರಿಗೆ ಅಧಿಪತ್ಯವಂ ಮಾಡಿದರು.— ಕ. ಮಾ. ಪಾ.

## ೧೮ ನೆಯ ಅಧ್ಯಾಯ.

---

ಕೇಳು ಮೈತ್ರೇಯ, ಇನ್ನು ಯಯಾತಿಯು ನಾಲ್ಕನೆಯ ಮಗನಾದ ಅನುವಿಂಗೆ [1]( ಸಭಾನಲನೆಂದೂ, ಚಕ್ಷುವೆಂದೂ, ಪರಮೇಷುವೆಂದೂ ಮೂವರು ಮಕ್ಕಳಾದರು.) (ಅವರೊಳು ಸಭಾನಲನ ಪುತ್ರನು ಕಾಲಾನಲನು ) [1]ಕಾಲಾನಲನಿಂದ ಸೃಂಜಯನು ; ಅವನಿಂದ ಪುರಂಜಯನು ; ಆತಂಗೆ ಜನಮೇಜಯನು ; ಅವನಿಂ ಮಹಾ[2]ಶಾಲಾ[2]ಖ್ಯನು ; ಅವಂಗೆ ಮಹಾಮನಸ್ಸು; (ಆತಂಗೆ ಉಶೀನರನು ತಿತಿಕ್ಷುವು ಎಂಬ ಇಬ್ಬರು ಪುತ್ರರಾದರು. ಉಶೀನರನಿಗೆ ಶಿಬಿ, ನೃಗ, ನವ, ಕ್ರಿಮಿ, ವರ್ಮಾಖ್ಯರಾದ ಪಂಚಪುತ್ರರು ಆದರು. ಆ ಶಿಬಿಗೆ ವೃಷದರ್ಭ, ಸುವೀರ, ಕೇಕಯ, ಮದ್ರಕರೆಂಬ ನಾಲ್ಕು ಮಕ್ಕಳಾದರು ತಿತಿಕ್ಷುವಿಂಗೆ ರುಶದ್ರಥನೆಂಬ ಪುತ್ರನಾದನು. ಆತಂಗೆ ಹೇಮನು ; ಆತಂಗೆ ಸುತಪಸ್ಸು ; ಆತಂಗೆ ಬಲಿಯು. ಆ ಬಲಿಯೆಂಬವನ ಕ್ಷೇತ್ರದಲ್ಲಿ ದೀರ್ಘತಮಸ್ಸೆಂಬವನಿಂದ) ಅಂಗ, ವಂಗ, ಕಳಿಂಗ, ಸುಹ್ಮ, ಪೌಂಡ್ರಾಖ್ಯರೆಂಬ ಕ್ಷತ್ರಿಯರು ಬಾಲೇಯರೆನಿಸಿ[3]ಕೊಂಡು ಜನಿಸಿದರು. ಅವರ ನಾಮಂಗಳಲ್ಲಿ ಸಂತತಿಯೂ ದೇಶವೂ ಈ ಐದು ಪ್ರಕಾರವಾಯಿತು. ಆ ಅಂಗನಿಗೆ ಅಪಾನನು; ಅವನಿಂದ ದಿವಿರಥನು ; ಆತಂಗೆ ಧರ್ಮರಥನು ; ಆತನಿಂ ಚಿತ್ರರಥನು ರೋಮಪಾದನೆನಿಸಿಕೊಂಡು ದಶರಥರಾಯನಿಗೆ ಮಿತ್ರನಾದನು. [4]( ಅಜಮಹಾರಾಜನ ಪುತ್ರನಾದ ದಶರಥರಾಯನು ಶಾಂತೆಯೆಂಬ ಕನ್ಯಕೆಯನ್ನು ಮಕ್ಕಳಾಗದ ರೋಮಪಾದನಿಗೆ ಮಗಳಾಗಿ ಕೊಟ್ಟನು.)[4] ಆ ರೋಮಪಾದಂಗೆ ಚತುರಂಗನೆಂಬ ಮಗನು ಆದನು. ಅವನಿಂ ಪೃಥುಪಾಲಕನು ; ಅವಂಗೆ ಚಾಂಪನು ತನುಜನಾದನು. [5](ಆ ಚಾಂಪನು ಚಂಪಾಪುರಿಯನ್ನು ಉಂಟುಮಾಡಿದನು.)[5]

ಆತಂಗೆ ಹರ್ಯಂಗನೆಂಬ ಮಗನಾದನು; ಅವಂಗೆ ಭದ್ರರಥನು; (ಅವನ

---

ಪಾ— 1. ಸಹನರನೆಂದು, ಪುತ್ರನೆಂದು, ಕಾಲಾನಲನೆಂದು ಮೂವರು ಮಕ್ಕಳಾದರು—ಕ. ಮ. ಪಾ. 2. ಸಾಲಾ—ಕ. ವಿ. ಪಾ.

4. 5. ಈ ವಾಕ್ಯಗಳು ಕನ್ನಡ ಮಾತೃಕೆಯಲ್ಲಿಲ್ಲ.

ಟೀಕು-3. ಬಾಲೇಯರು = ಬಲಿಯ ಕ್ಷೇತ್ರದಲ್ಲಿ ಎಂದರೆ ಭಾರ್ಯೆಯಲ್ಲಿ ಜನಿಸಿದವರು.

ಮಗನು ಬೃಹದ್ರಥನು); ಆತನ ಮಗನು ಬೃಹತ್ಕರ್ಮನು; ಆತನಿಂ ಬೃಹದ್ಭಾನುವು; ಆತನಿಂ ಬೃಹನ್ಮನಸ್ಸು; ಆತನಿಂ ಜಯದ್ರಥನು; ಆತಂಗೆ [1]ಬ್ರಹ್ಮಕ್ಷತ್ರಾಂತರಾಳದಲ್ಲಿ[1] ಹುಟ್ಟಿದ ಪತ್ನಿಯಲ್ಲಿ ವಿಜಯನೆಂಬ ಪುತ್ರನಾದನು. ಅವಂಗೆ ಧೃತಿಯೆಂಬ ಮಗನು; ಆತಂಗೆ ಧೃತವ್ರತನು; ಆತಂಗೆ ಸತ್ಯಕರ್ಮನು; ಆತಂಗೆ ಅತಿರಥನು ; ಆತನು ಗಂಗೆಗೆ ಹೋಗಿದ್ದಾಗ ಮಂಜೂಷಾ[2]ಗತನಾಗಿ ಕುಂತಿದೇವಿಯಿಂದ ಪರಿತ್ಯಕ್ತನಾದ ಕರ್ಣನನ್ನು ಕಂಡು ಪುತ್ರನನ್ನಾಗಿ ಮಾಡಿಕೊಂಡನು.[3] ಕರ್ಣನಿಗೆ ವೃಷಸೇನನು ತನುಜನಾದನು. ಈ ಪೂರ್ವೋಕ್ತರಾಜರುಗಳು [4]ಅಂಗವಂಶ್ಯರು.[4]

ಇನ್ನು ಪುರುವಂಶ ಕ್ರಮವಂ ಹೇಳುತ್ತಿದ್ದೇವೆ, ಕೇಳು.

ಎಂಬ ಒಳಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಅಷ್ಟಾದಶಾಧ್ಯಾಯಂ ಸಂಪೂರ್ಣಂ.

## ೧೯ ನೆಯ ಅಧ್ಯಾಯ.

ಕೇಳು ಮೈತ್ರೇಯ, ಪುರುವಿಂಗೆ ಜನಮೇಜಯನು ; ಆತಂಗೆ ಪ್ರಚಿನ್ವನು; ಅವಂಗೆ ಪ್ರವೀರನು; ಅವನಿಂ ಮನಸ್ಯನು; ಅವನಿಂ ಅಭಯದನು; ಆತಂಗೆ ಸುದ್ಯು ; ಸುದ್ಯುವಿಗೆ ಬಹುಗತನು ; ಅವಂಗೆ ಸಂಯಾತಿ; ಅವನಿಂದ ಅಹಂಯಾತಿ ; ಆವನಿಂದ [5]ರೌದ್ರಾಶ್ವನು;[5] ಅವಂಗೆ (ಋತೇಪು, ಕಕ್ಷೇಪು, ಸ್ಥಂಡಿಲೇಪು, ಕೃತೇಪು, ಜಲೇಪು, ಧರ್ಮೇಪು, ಸ್ಥಲೇಪು, ಸನ್ನತೇಪು, ವನೇಪು ಎಂಬ) ಹತ್ತುಮಂದಿ ಮಕ್ಕಳಾದರು. ಋತೇಪುವಿಗೆ ರಂತಿನಾರನು ಮಗನು;

ಟೀಕು—1. ಪ್ರಾತಿಲೋಮ್ಯದಿಂದ ಬ್ರಹ್ಮಕ್ಷತ್ರಸಂಕರಜಾತಿಯಲ್ಲಿ ಹುಟ್ಟಿದ ಎಂದು ಅರ್ಥ. ಅವಳಲ್ಲಿ ಹುಟ್ಟಿದ ವಿಜಯಾದಿಗಳಿಗೆ ಸೂತಜಾತಿಯವರು- ಎಂದು ವ್ಯಾಖ್ಯಾನ ಮಾಡಿದ್ದಾರೆ. 2. ಮಂಜೂಷ = ಕಾಷ್ಟಪಂಜರ. 3. ವಿಜಯನು ಸೂತಜಾತಿಯವನಾದ್ದರಿಂದ ತದ್ವಂಶ್ಯನಾದ ಕರ್ಣನಿಗೆ ಸೂತನೆಂದು ಪ್ರಸಿದ್ಧಿ ಬಂದಿತು. ಬ್ರಾಹ್ಮಣಸ್ತ್ರೀಯಲ್ಲಿ ಕ್ಷತ್ರಿಯನಿಗೆ ಹುಟ್ಟುವವನು ಸೂತನೆನಿಸಿಕೊಳ್ಳುವನು.

ಪಾ—4. ಅಂಗಾಧಿಪರು.— ಕ. ಮಾ. 5. ದತ್ತಾಶ್ವ—ಕ, ಮಾ.

ಆತಂಗೆ ಸುಮತಿ, ಅಪ್ರತಿರಥ, ಧ್ರುವಚಾಪ್ಯರೆಂಬ ಮೂವರಣುಗರಾದರು. ಅವರಲ್ಲಿ ಅಪ್ರತಿರಥಂಗೆ ಕಣ್ವನು ; ಆತಂಗೆ ಮೇಧಾತಿಥಿಯು; ಆತನಿಂದ ಕಾಣ್ವಾಯನರು ದ್ವಿಜರಾದರು. ಆಅಪ್ರತಿರಥಂಗೆ ಐಲೀನನೆಂಬ ಬೇರೊಬ್ಬ ಮಗನಾದನು. ಆ ಐಲೀನನಿಗೆ ದುಷ್ಯಂತಾದಿಯಾದ ನಾಲ್ವರು ಮಕ್ಕಳು ಆದರು. ದುಷ್ಯಂತನಿಗೆ ಭರತಚಕ್ರವರ್ತಿಯು ತನುಜನಾದನು.† (ಆತನ ಹೆಸರಿಗೆ ಕಾರಣವಾಗಿ ಈ ಶ್ಲೋಕವು ದೇವತೆಗಳಿಂದ ಗಾನಮಾಡಲ್ಪಟ್ಟಿತು :—

---

† ಈ ಕಡೆ ಕನ್ನಡದ ಮಾತೃಕೆಯಲ್ಲಿ ಸ್ವಲ್ಪ ಭಾಗವಾಗಿದೆ. ಅದು ಸಂಸ್ಕೃತ ಮಾತೃಕೆಯಲ್ಲಿ ಇಲ್ಲವಾಗಿ, ಅದು ಸಂದರ್ಭದ ವ್ಯಾಖ್ಯಾನವಾದ್ದರಿಂದ ಅದನ್ನು ಟಿಪ್ಪಣಿಯಾಗಿ ಇಲ್ಲಿ ಸೇರಿಸಿದ್ದೇನೆ :—

ಅವನು ದೇವತೆಗಳಿಂದ ಕೀರ್ತಿಸಲ್ಪಟ್ಟ ಮಹಿಮನು, ಆತನ ಜನ್ಮಪ್ರಭಾವವೆಂತೆಂಗೊಡೆ—ಪೂರ್ವದಲ್ಲಿ ವಿಶ್ವಾಮಿತ್ರನು ಮೇನಕಾ ಸಂಗದಿಂದ ಸದ್ಯೋಗರ್ಭದಲ್ಲಿ ಹುಟ್ಟಿದ ಶಿಶುವಂ ವನದಲ್ಲಿ ಬಿಟ್ಟು ಯಥೇಚ್ಛೆಯಲ್ಲಿ ಎಲ್ಲೋ ಹೋಗಲಾಗಿ ; ಆ ಶಿಶುವಂ ಪಕ್ಷಿಗಳು ರಕ್ಷಿಸುತ್ತಿರಲಾಗಿ ; ಆ ಸಮಯದಲ್ಲಿ ಕಣ್ವಋಷಿಯು ಆ ಮಾರ್ಗವಾಗಿ ಬಂದು ನೋಡಿ, ಆ ಶಿಶುವಂ ತನ್ನ ಆಶ್ರಮಕ್ಕೆ ಕರಕೊಂಡು ಹೋಗಿ ರಕ್ಷಿಸುತ್ತಿರಲಾಗಿ ; ಆಕೆಗೆ ಯೌವನಪ್ರಾದುರ್ಭಾವವಾದ ಕಾಲದಲ್ಲಿ ದುಷ್ಯಂತಮಹಾರಾಯನು ಸ್ವಾರಿಮಾರ್ಗವಾಗಿ ಕಣ್ವಾಶ್ರಮವಂ ಹೊಕ್ಕು ಯುವತಿಯಾಗಿ ಶಕುಂತಲೆಯೆನಿಸಿಕೊಂಡು ಇರುವಳಂ ಕಂಡು, ಆಕೆಯಂ ಒಡಂಬಡಿಸಿ, ಕಣ್ವಋಷಿಯಿಲ್ಲದ ಸಮಯದಲ್ಲಿ ಗಾಂಧರ್ವ ವಿವಾಹಪೂರ್ವಕದಿಂದ ಗರ್ಭಾದಾನವಂ ಮಾಡಿ, ತಾನು ತನ್ನ ಪಟ್ಟಣವಂ ಹೊಕ್ಕು ಸುಖದಿಂದಿರುವ ಕೆಲವು ಕಾಲದಲ್ಲಿ, (ಶಕುಂತಲೆಯು) ಪುತ್ರನಂ ಪಡೆಯಲಾಗಿ; ಅನಂತರ ಕೆಲವು ಕಾಲವಾದಮೇಲೆ (ಆಕೆಯು) ಪುತ್ರನು ಸಹಿತವಾಗಿ ಕಣ್ವಋಷಿಯ ಶಿಷ್ಯನೊಡಗೂಡಿ ದುಷ್ಯಂತರಾಯನ ಸಮೀಪಕ್ಕೆ ಬಂದು,—ಈತನು ನಿನ್ನ ಪುತ್ರನು, ರಾಜಾರ್ಹನು, ಎಂದಲ್ಲಿ ; ಆ ರಾಯನು—ತನಗೆಲ್ಲಿ ಈಪುತ್ರನು ? ಎಂದು ಸಂದೇಹದಿಂದಿರಲಾಗಿ; ಆಕಾಶದಲ್ಲಿ ದೇವಸಮೂಹಗಳಿಂದೀಯಶರೀರವಾರ್ತೆಯು ಹೇಳಲ್ಪಟ್ಟಿತು. . .ಅಮೇರೆ ನುಡಿಯಲ್ಪ

ಶ್ಲೋ॥ ಮಾತಾ ಭಸ್ತ್ರಾ ಪಿತುಃ ಪುತ್ರೋ ಯೇನ ಜಾತ ಸ್ಸಏವ ಸಃ ।
ಭರಸ್ವ ಪುತ್ರಂ ದುಷ್ಯಂತ ಮಾವಮಂಸ್ಥಾಶ್ಶಕುಂತಲಾಂ ॥
ರೇತೋಧಾಃ ಪುತ್ರೋನ್ನಯತಿ ನರದೇವ ಯಮಕ್ಷಯಾತ್ ।
ತ್ವಂ ಚಾಸ್ಯ ಧಾತಾ ಗರ್ಭಸ್ಯ ಸತ್ಯಮಾಹ ಶಕುಂತಳಾ ॥ )

ಟೀಕು—ಕೇಳು ರಾಯನೇ! ಲೋಕದಲ್ಲಿ ಪುತ್ರನಿಗೆ ತಾಯಾದವಳು ಚರ್ಮಭಸ್ತ್ರಿಕೆ, ತಂದೆಗೆ ಮಗನು. ಆವನಿಗೆ ಹುಟ್ಟಿದವನು ಅವನಿಗೆಯೆ ಮಗನು. ಅದುಕಾರಣ ಈ ಪುತ್ರನು ನಿನ್ನವನು, ಇವನ ವರಿಸು. ಶಕುಂತಲೆಯನು ಅವಮಾನ ಮಾಡತಕ್ಕುದಲ್ಲ. ಆವನ ರೇತಸ್ಸಿನಿಂದ ಪುತ್ರನು ಉತ್ಪನ್ನನೋ ಆ ಪುತ್ರನೇ ಅವನನು ನರಕದಿಂದ ಉತ್ತರಿಸುವನು. ಆದುದಱಿಂದ ಆಯುಕ್ಕನ ಗರ್ಭಾಧಾನಕ್ಕೆ ನೀನು ಕರ್ತನು. ಈ ಶಕುಂತಳೆಯು ಸತ್ಯಸಂಧೆಯು.

ಆ ಭರತನಿಗೆ ಮೂವರು ಪತ್ನಿಗಳಲ್ಲಿ ಒಂಬತ್ತು ಮಂದಿ ಮಕ್ಕಳಾದರು. ಆ ಮಕ್ಕಳು ತಂದೆಯ ಗುಣರೂಪಂಗಳಿಗೆ ಪ್ರತಿಕೂಲರಾಗಿದ್ದುದಱಿಂದ, ತಮಗೆ ವ್ಯಭಿಚಾರದೋಷವಂ ಕಲ್ಪಿಸಿಯಾನೆಂದು ಆ ಸ್ತ್ರೀಯರು ಆ ತಮ್ಮ ಪುತ್ರರುಗಳಂ (ಕೊಂದುಬಿಟ್ಟರು.) ಅನಂತರದಲ್ಲಿ ಸಂತಾನವು ವ್ಯರ್ಥವಾಗಲಾಗಿ, (ಭರತನು) ಸಂತಾನವಂ ಪಡೆಯಲಿಚ್ಛೆಯುಳ್ಳವನಾಗಿ [1] (ಮರುತ್ತೋಮನಾಶ್ಯವಾದ ಯಾಗವಂ ಮಾಡುತ್ತಿರುವಲ್ಲಿ—ದೀರ್ಘತಮಸ್ಸೆಂಬವನ ಪಾರ್ಶ್ವದಿಂದ ತಳ್ಳಲ್ಪಟ್ಟ ಬೃಹಸ್ಪತಿಯ ವೀರ್ಯದ ದೆಸೆಯಿಂದ ಉಚಥ್ಯಪತ್ನಿಯಾದ ಮಮತೆಯೆಂಬವಳಲ್ಲಿ ಸಮುತ್ಪನ್ನನಾದ ಭರದ್ವಾಜನೆಂಬ ನಾಮವುಳ್ಳವನು ಮರುತ್ತುಗಳಿಂದ ಆ ಭರತನಿಗೆ ಪುತ್ರನಾಗಿ ಕೊಡಲ್ಪಟ್ಟನು) [1] (ಈತನ ನಾಮನಿರ್ವಚನದ ಈ ಶ್ಲೋಕವು ಪಾಠ ಮಾಡಲ್ಪಡುತ್ತಲಿದೆ :—

---

ಟ್ಟವನಾಗಿ ಆಕೆಯನ್ನು ಪರಿಗ್ರಹಿಸಿದನು. ಆಮೇಲೆ ಆ ಪುತ್ರನು ಭರಣದಿಂದ ಭರತನೆಂಬ ನಾಮವಂ ತಾಳ್ದಿದನು.

ಟೀಕು—1. ಇಲ್ಲಿನ ಇತಿಹಾಸವು ಇದು :—ಬೃಹಸ್ಪತಿಯು ತನ್ನ ಅಣ್ಣನು ಉಚಥ್ಯನೆಂಬವನ ಪತ್ನಿಯಾದ ಮಮತೆಯೆಂಬವಳು ಗರ್ಭಿಣಿಯಾಗಿ ಮಲಗಿರುವ ಸಮಯದಲ್ಲಿ, ಅವಳಂ ಕಂಡು ಕಾಮಾಭಿಭೂತನಾಗಿ ಚಾರ
ಕಿ

ಸಂಸ್ಕೃತ॥ ಮೂಢೇ ಭರದ್ವಾಜಮಿಮಂ ಭರದ್ವಾಜಂ ಬೃಹಸ್ಪತೇ ।
ಯಾತೌ ಯದುಕ್ತ್ವಾ ಪಿತರೌ ಭರದ್ವಾಜಸ್ತತಸ್ತ್ವಯಂ ॥

ಟೀಕು—ಎಲೆ ಮೂಢಬುದ್ಧಿಯುಳ್ಳವಳೇ, ದ್ವಾಜನಾದ ಇವನನ್ನು ಭರಿಸು ಎಂದು ಬೃಹಸ್ಪತಿಯೂ—ಬೃಹಸ್ಪತಿಯೇ! ದ್ವಾಜನಾದ ಇವನನ್ನು ನಾನು ಒಬ್ಬಳೆ ಏಕೆ ಸಾಕಬೇಕು, ನೀನೇ ಇವನನ್ನು ಸಾಕು ಎಂದೂ ಅವಳೂ ಈರೀತಿ ಪರಸ್ಪರವಾಗಿ ಹೇಳಿ ಯಾವ ಕಾರಣ ತಾಯಿ ತಂದೆಗಳಾದ ಬೃಹಸ್ಪತಿ ಮಮತೆಯರು ಹೊರಟುಹೋದರೋ, ಆಕಾರಣ ಅವನು ಭರದ್ವಾಜನೆಂಬ ಹೆಸರನು ಪಡೆದನು) ಸಂತಾನವು ವಿತಥವಾಗುತ್ತಿರಲಾಗಿ ಮರುತ್ತುಗಳಿಂದ ಪುತ್ರನಾಗಿ ಕೊಡಲ್ಪಟ್ಟಕಾರಣ, ಅವನಿಗೆ ವಿತಥನೆಂಬ ಹೆಸರೂ ಆಯ್ತು. ಆ ವಿತಥನಿಗೆ ಮನ್ಯುವೆಂಬ ಮಗನಾದನು. ಆ ಮನ್ಯುವಿಗೆ ಬೃಹತ್‌ಕ್ಷತ್ರ, ಮಹಾವೀರ್ಯ, ನಗರ, ಗರ್ಗರೆಂಬ ಮಕ್ಕಳಾದರು. ನಗರನಿಗೆ ಸಂಕೃತಿಯು; ಸಂಕೃತಿಗೆ ಗುರುಪ್ರೀತಿ, ರಂತಿದೇವರೆಂಬ ಇಬ್ಬರು ಮಕ್ಕಳು ಆದರು. ಗರ್ಗನಿಗೆ ಶಿನಿಯು; ಆಶಿನಿಯಿಂದ (ಗಾರ್ಗ್ಯರಾದ) ಶೈನೇಯರೆಂಬ ಕ್ಷತ್ರೋಪೇತರಾದ ದ್ವಿಜಾತಿಗಳಾದರು. ಮಹಾವೀರ್ಯನಿಂದ

---

ದಿಂದ ಆಯುಕ್ಕನ ಗರ್ಭದಲ್ಲಿ ತನ್ನ ವೀರ್ಯವಂ ಬಿಡಲಾಗಿ, ಆ ಗರ್ಭದಲ್ಲಿದ್ದ ಶಿಶುವು ಸ್ಥಾನಸಂಕೋಚದಿಂದಲೂ ತನ್ನಮೇಲೆ ವೀರ್ಯ ಬೀಳಬಹುದೇ ಎನುತಲೂ ಅದನ್ನು ಬಾಹ್ಯಪ್ರದೇಶಕ್ಕೆ ತಳ್ಳಿಬಿಡಲಾಗಿ; ಅದು ಅಮೋಘವೀರ್ಯವಾದುದರಿಂದ ಭೂಮಿಯಲ್ಲಿ ಬಿದ್ದರೂ ಭರದ್ವಾಜನೆಂಬ ಹೆಸರಿನಿಂದ ಬೃಹಸ್ಪತಿಗೆ ಪುತ್ರನಾದನು. ಆಮೇಲೆ ಗರ್ಭದಲ್ಲಿದ್ದಂಥ ಉಚಥ್ಯಪುತ್ರನು ಬೃಹಸ್ಪತಿಯಿಂದ ಅಂಧನಾಗು ಎಂದು ಶಪ್ತನಾಗಿ ದೀರ್ಘತಮನಾಗಿ ಹುಟ್ಟಿದನು. ಆ ಭೂಮಿಯಲ್ಲಿ ಬಿದ್ದ ಬೃಹಸ್ಪತಿವೀರ್ಯಜಾತನಾದ ಬಾಲಕನನ್ನು ತಾಯಿತಂದೆಗಳು ಎಂದರೆ ಮಮತೆಯೂ, ಬೃಹಸ್ಪತಿಯೂ ನೋಡಿ—ನಮ್ಮಿಬ್ಬರಿಂದ ಹುಟ್ಟಿದ ದ್ವಾಜನಾದ ಇವನನ್ನು ನೀನು ಭರಣಮಾಡು ಎಂದು ಪರಸ್ಪರವಾಗಿ ಹೇಳಿ ಇಬ್ಬರೂ ಒಪ್ಪದೆ ತ್ಯಜಿಸಿ ಹೋದುದರಿಂದ, ಆ ಬಾಲಕನು ಭರದ್ವಾಜನೆಂಬ ಹೆಸರುಳ್ಳವನಾದನು. ಈ ಭಾಗವು ವ್ಯಾಖ್ಯಾನದ ಪರಿವರ್ತನವಾದ ಕಾರಣ ಟಿಪ್ಪಣದಲ್ಲಿ ಸೇರಿಸಲ್ಪಟ್ಟಿತು.

[1]ದುರಕ್ಷಯು[1] ನೆಂಬ ಮಗನಾದನು. ಆತನಿಗೆ ತ್ರಯ್ಯಾರುಣಿಯು, ಪುಷ್ಕರಿಣಿಯು ಕಪಿಯೆಂಬವನು ಇವರು ಮೂವರು ಪುತ್ರರಾದರು. ಈ ಮೂರು ಮಂದಿಯೂ (ಅನಂತರ) ಬ್ರಾಹ್ಮಣ್ಯವನು ಐದಿದರು. ([2]ಬೃಹತ್ಕ್ಷತ್ರನಿಗೆ ಸುಹೋತ್ರನು ಮಗನು.[2]) ಆ ಸುಹೋತ್ರಂಗೆ ಹಸ್ತಿಯೆಂಬ ಪುತ್ರನು ಉದ್ಭವಿಸಿದನು. ಆ ಹಸ್ತಿಯೆಂಬ ಅರಸು ಹಸ್ತಿನಾಪುರವೆಂಬ ಪಟ್ಟಣವಂ ನಿರ್ಮಿಸಿ, ಆತನೇ ಈ ರಾಜ್ಯವಂ ಅಂಗೀಕರಿಸಿ ರಾಜ್ಯವನಾಳಿದನು. ಅಜಮೀಢ, ದ್ವಿಜಮೀಢ ಪುರುಮೀಢರೆಂಬವರು ಮೂವರು ಆ ಹಸ್ತಿಯ ಮಕ್ಕಳು. ಆ ಅಜಮೀಢನಿಗೆ ಕಣ್ವನೆಂಬ ಮಗನುದಿಸಿದನು. ಆ ಕಣ್ವನ ಸೂನು ಮೇಧಾತಿಥಿಯಾದನು. ಆ ಮೇಧಾತಿಥಿಯ ಮಕ್ಕಳು ಕಾಣ್ವಾಯನರೆನಿಸಿಕೊಂಡ ದ್ವಿಜರಾದರು. ಆ ಅಜಮೀಢಂಗೆ ಬೃಹದಿಷುವೆಂಬ ಪುನಃ ಒರ್ವ ಮಗನಾದನು. ಆ ಬೃಹದಿಷುವಿಂಗೆ ಬೃಹದ್ಧನು ಎಂಬ ತನಯನು. ಆ ಬೃಹದ್ಧನು ಎಂಬಾತಂಗೆ ಬೃಹತ್ಕರ್ಮನೆಂಬ ಸುತನು. ಆ ಬೃಹತ್ಕರ್ಮನಿಗೆ ಜಯದ್ರಥನು. ಆತನಿಗೆ ವಿಶ್ವಜಿತೆಂಬವನು. ಆ ವಿಶ್ವಜಿತುವೆಂಬ ನರಪತಿಗೆ ಸೇನಜಿತೆಂಬ ತನುಜನು ಆದನು. ಆ ಸೇನಜಿತಂಗೆ [3]ರುಚಿರಾಶ್ವ[3] ನೆಂದೂ, ಕಾಶ್ಯನೆಂದೂ, ದೃಢಹನುವೆಂದೂ, [4]ವತ್ಸಹನು[4] ವೆಂದೂ ನಾಲ್ವರು ಅಣುಗರು ಜನಿಸಿದರು. ಆ ನಾಲ್ವರಲ್ಲಿ ರುಚಿರಾಶ್ವಂಗೆ ಪೃಥುಸೇನನೆಂಬ ಮಗನು. ಆ ಪೃಥುಸೇನಂಗೆ ಪಾರನೆಂಬ ಸುತನು. (ಆ ಪಾರನೆಂಬಾತಂಗೆ ನೀಲನು ಉದಿಸಿದನು.) ಆ ನೀಲಂಗೆ ನೂರ್ವರು ತನಯರಾದರು. ಆ ನೂರ್ವರಲ್ಲಿ ಮುಖ್ಯನು ಕಾಂಪಿಲ್ಯಾಧಿಪತಿಯಾದ ಸಮರನೆಂಬಾತನು. ಆ ಸಮರಂಗೆ ಪಾರನೆಂದು, ಸುಪಾರನೆಂದು, ಸದಶ್ವನೆಂದು ಮೂವರಣುಗರಾದರು. ಸುಪಾರನೆಂಬವಂಗೆ ಪೃಥುವೆಂಬಾತ್ಮಜನು, ಆ ಪೃಥುವಿಂಗೆ ಸುಕೃತಿಯೆಂಬ ಪುತ್ರನು. ಆ ಸುಕೃತಿಗೆ ವಿಭ್ರಾಜನೆಂಬ ತನಯನು. ಆ ವಿಭ್ರಾಜಂಗೆ ಅಣುಹನೆಂಬಾತನು; ಆ ಅಣುಹ ವ್ಯಾಸಪುತ್ರರಾದ ಶುಕಾಚಾರ್ಯರ ಮಗಳಾದ ಕೀರ್ತಿಯೆಂಬವಳನ್ನು

---

ಪಾ—1. ಉದಿತಕ್ಷಯು—ಕ. ಮಾ.

2. ಕಪಿಯ ಮಗ ಕ್ಷತ್ರನೂ, ಆತಂಗೆ ಸುಹೋತ್ರನು. ಅವರಲ್ಲಿ ಹಿರಿಯನಾದ ಬೃಹತ್ಕ್ಷತ್ರಂಗೆ ಸುಹೋತ್ರನೆಂಬ ಮಗನಾದನು.

3. ರುಷಿತಾಶ; 4. ಮತ್ಸ್ಯನು—ಕ. ಮಾ.

ಮದುವೆಯಾದನು. ಆ ಅಣುಹಂಗೆ ಬ್ರಹ್ಮದತ್ತನೆಂಬ ತನಯನು ಜನಿಸಿದನು. ಆತನಿಗೆ ವಿಷ್ವಕ್ಸೇನನು; ಆತನಿಗೆ ಉದಕ್ಸೇನನು; ಆ ಉದಕ್ಸೇನನ ಆತ್ಮಜನು ಬಲ್ಲಾಭನು. ಕೇಳು ಮೈತ್ರೇಯ, ಆ ಹಸ್ತಿಕುಮಾರನಾದ ದ್ವಿಜಮೀಢಂಗೆ ಯವಿನರನೆಂಬ ಅಣುಗನೊಗೆದನು. ಆ ಯವಿನರಂಗೆ ಧೃತಿಮಂತನೆಂಬ ನಂದನನಾದನು. ಆತನ ತನುಜನು ಸತ್ಯಧೃತಿಯು. ಆ ಸತ್ಯಧೃತಿಗೆ ಧೃಢನೇಮಿಯೆಂಬ ಪುತ್ರನು. ಆ ದೃಢನೇಮಿಗೆ ಸುಪಾರ್ಶ್ವನು. ಆ ಸುಪಾರ್ಶ್ವಂಗೆ ಸುಮತಿಯೆಂಬ ತನಯನು. ಆ ಸುಮತಿಗೆ ಸನ್ನತಿಮಂತನು. ಆ ಸನ್ನತಿಮಂತಂಗೆ ಕೃತನೆಂಬ ಮಗನು. ಆ ಕೃತನೆಂಬ ರಾಯನು ಹಿರಣ್ಯನಾಭಮುನಿಯಿಂದ ಯೋಗಾಭ್ಯಾಸವಂ ಕಲಿತುಕೊಂಡನು. (ಮತ್ತು) ಪ್ರಾಚ್ಯಸಾಮಗಳಿಗೆ ಇಪ್ಪತ್ತುನಾಲ್ಕು ಸಂಹಿತೆಗಳನೆಸಗಿ ಲೋಕದಲ್ಲಿ ನೆಗಳ್ತೆವಡೆದನು. ಆ ಕೃತನೆಂಬ ರಾಯಂಗೆ ಉಗ್ರಾಯುಧನೆಂಬ ನಂದನನಾದನು. ಆ ಉಗ್ರಾಯುಧನು ಸಂಗರದಲ್ಲಿ ನೀಪರೆಂಬ ದೊರೆಗಳಂ ಸಂಹರಿಸಿ ಪ್ರಸಿದ್ಧಿವಡೆದನು. ಆ ಉಗ್ರಾಯುಧಂಗೆ ಕ್ಷೇಮ್ಯನೆಂಬ ಸೂನು ಒಗೆದನು. ಆ ಕ್ಷೇಮ್ಯನ ಪುತ್ರನು ಸುಧೀರನು. ಆ ಸುಧೀರಂಗೆ ಪುತ್ರನು [1]ರಿಪುಂಜಯನು.[1] ಆ ರಿಪುಂಜಯಂಗೆ [2]ಬಹುರಥನೆಂಬವನು[2] ಆದನು. ಈ ಪೂರ್ವೋಕ್ತರಾದ ದೊರೆಗಳೇ ಪೌರವರೆನಿಸಿಕೊಂಡವರು. ಕೇಳು ಮೈತ್ರೇಯ, ಆ ಹಸ್ತಿಕುಮಾರನಾದ ಅಜಮೀಢಂಗೆ ಪೆಣ್ತೊರ್ವಳು ನಳಿನಿಯೆಂಬ ಮಡದಿಯುಂಟು. ಆ ಮಡದಿಯಲ್ಲಿ ನೀಲನೆಂಬ ಮಗನೊಗೆದನು. ಆನೀಲಂಗೆ ಶಾಂತಿಯೆಂಬ ತನುಜನಾದನು. ಆ ಶಾಂತಿಗೆ ಸುಶಾಂತಿಯೆಂಬಾತ್ಮಜನು. ಆ ಸುಶಾಂತಿಗೆ [3]ಪುರಂಜಯ[3]ನೆಂಬ ಪುತ್ರನೊಗೆದನು. ಆ ಪುರಂಜಯಂಗೆ ಋಕ್ಷನು ಮಗನು. ಆ ಋಕ್ಷಂಗೆ [4]ಹರ್ಯಶ್ವನು. ಆ ಹರ್ಯಶ್ವಂಗೆ (ಮುದ್ಗಲ, ಸೃಂಜಯ, ಬೃಹದಿಷು, ಯವಿನರ, ಕಾಂಪಿಲ್ಯ)[4] ರೆಂಬ ಐವರು ಮಕ್ಕಳಾದರು. ತನ್ನ ಸ್ವಂತದೇಶಗಳೈದಕ್ಕೂ ರಕ್ಷಣಾರ್ಥವಾಗಿ ತನ್ನ ಈ ಐದು ಮಕ್ಕಳೇ ಸಾಕು ಎಂದು ತಂದೆಯು ನುಡಿದುದರಿಂದ (ಅವರಿಗೆ)

---

ಪಾ—1. ಪುರಂಜಯ, 2. ಪ್ರಭುರಥ, 3. ಪುರಜಾತ. 4. ಮುದ್ಗಲನು. ಆ ಮುದ್ಗಲನಿಂದ ಸೃಂಜಯನೊಗೆದನು. ಆ ಸೃಂಜಯಂಗೆ ಬೃಹದಿಷ, ಬೃಹದ್ವನು, ಬೃಹದ್ರಥನು, ಯವಿನರನು, ಕಾಂಪಿಲ್ಯನು—ಕ. ಮಾ.

ಪಾಂಚಾಲರೆಂಬ ಹೆಸರಾಯಿತು. ಮತ್ತು ಆ ಮುದ್ಗಲನೆಂಬ ರಾಯಂಗೆ ಮೌದ್ಗಲ್ಯರೆಂಬ ಕೆಲವು ಮಕ್ಕಳಾದರು; ಅವರು ಕ್ಷಾತ್ರಧರ್ಮದೊಡಗೂಡಿ [1]ವಿಪ್ರಜಾತಿಯವರಾದರು.[1] ಮುದ್ಗಲಂಗೆ ಹರ್ಯಶ್ವನೆಂಬ ಮಗನೊಗೆದನು. ಆ ಹರ್ಯಶ್ವಂಗೆ ದಿವ್ರೋದಾಸನೆಂಬ ಕುಮಾರನೂ ಅಹಲ್ಯೆಯೆಂಬ ಕುಮರಿಯೂ (ಅವಳಿಗಳಾಗಿ) ಹುಟ್ಟಿದರು. ಆ ಅಹಲ್ಯೆಯನು ಗೌತಮನೆಂಬ ಬ್ರಹ್ಮರ್ಷಿಯು ಪರಿಣಯವಾದನು. ಆ ಗೌತಮನಿಗೆ ಅಹಲ್ಯೆಯಲ್ಲಿ ಶತಾನಂದನೆಂಬ ಮಗನಾದನು. ಆ ಶತಾನಂದಂಗೆ ಸತ್ಯಧೃತಿಯೆಂಬ ತನುಜನಾದನು. ಸತ್ಯಧೃತಿಯು ಶತಾನಂದನಿಂದ ಧನುರ್ವೇದವನ್ನು ಸಾಂಗವಾಗಿ ಕಲಿತನು. ಒಂದು ಸಮಯದಲ್ಲಿ ಅಪ್ಸರಸ್ತ್ರೀರತ್ನವಾದ ಊರ್ವಶಿಯು ತನ್ನ ಬಳಿಗೆ ಬರಲಾಗಿ ಅವಳ ರೂಪಾತಿಶಯಕ್ಕೆ ಮೋಹವನೈದಿ ರೇತಸ್ಸನು ನಿಲಿಸಲಾಱದೆ ಶರಸ್ತಂಬದಮೇಲೆ ಬಿಡಲಾಗಿ, ಆ ರೇತಸ್ಸು ಶರಸ್ತಂಬದಿಂದ ಎರಡುಭಾಗವಾಗಿ ಹೆಣ್ಣೊಂದು ಗಂಡೊಂದು ಈರ್ವರು ಮಕ್ಕಳಾದರು. [2]ಬಳಿಕ ಸತ್ಯಧೃತಿಯು ತನ್ನ ನಿಷ್ಠೆಯಳಿವುದೆಂದು ಎಣಿಸುತುಳಿದು ಆ ಶಿಶುಗಳನು ಪರಿತ್ಯಜಿಸಿ ಹೋದನು.[2] ಶಂತನು ಮಹಾರಾಜನು ಬೇಟೆಯಾಡುತ್ತ ವನಂಗಳಂ ನೋಡುತ್ತ ಬರ್ಪಲ್ಲಿ ಈ ಶಿಶುಗಳಂ ಕಂಡು ಕೃಪಾಪರನಾಗಿ ಒಡಗೊಂಡು (ಹೋಗಿ ಕಾಪಾಡಿಕೊಂಡು) ಬಂದುದಱಿಂದ ಆ ಕುಮಾರನಿಗೆ ಕೃಪನೆಂಬ ನಾಮವಾಯಿತು, ಆ ಹೆಣ್ಣಿಗೆ ಕೃಪಿಯೆಂಬ ಹೆಸರಾಯಿತು. ಆ ಕೃಪಿಯೆಂಬ ಮಗಳು ಭಾರದ್ವಾಜಮುನಿಯ ಮಗನಾದ ದ್ರೋಣಂಗೆ ಸತಿಯಾಗಿ ಅಶ್ವತ್ಥಾಮನೆಂಬ ಮಗನಿಗೆ ತಾಯಿಯಾದಳು. ಕೇಳು ಮೈತ್ರೇಯ, ಆ ದಿವ್ರೋದಾಸನೆಂಬರಾಯಂಗೆ ಮಿತ್ರಾಯುವೆಂಬ ಪುತ್ರನುದಿಸಿದನು. ಮಿತ್ರಾಯುವಿಂಗೆ ಚ್ಯವನನೆಂಬ ರಾಜನು ನಂದನನು. ಆ ಚ್ಯವನಂಗೆ ಸುದಾಸನು; ಆ ಸುದಾಸನಿಗೆ ಸಹದೇವನು; ಆ ಸಹದೇವಂಗೆ ಸೋಮಕನು; ಆ ಸೋಮಕಂಗೆ ನೂರ್ವರು ಅಣುಗರು; ಆ ನೂರ್ವರಲ್ಲಿ ಜಂತುವೆಂಬಾತನು ಜ್ಯೇಷ್ಠನು. ಅವರಲ್ಲಿ ಕಿರಿಯನು ಪೃಷತನೆನಿಸಿಕೊಂಡನು; ಆ ಪೃಷತರಾಯನ ಸೂನು ದ್ರುಪ

---

ಪಾ—1. ವಿಪ್ರಜಾತಿಯೊಳು ಹೊಂದಿದರು.

2. ಈಭಾಗ ಸಂಸ್ಕೃತ ಮಾತೃಕೆಯಲ್ಲಿಲ್ಲ.

ದನು. ದ್ರುಪದನ ಸೂನು ಧೃಷ್ಟದ್ಯುಮ್ನನು. ಅವಂಗೆ ಧೃಷ್ಟಕೇತುವೆಂಬ ಪುತ್ರನು. † ಕೇಳು ಮೈತ್ರೇಯ, ಆ ಅಜಮೀಢಂಗೆ ಪೆಱತೊರ್ವನು [1]ಋಕ್ಷ[1]ನೆಂಬ ತನುಜನಾದನು. ಆ ಋಕ್ಷನ ಮಗನು ಸಂವರಣನು. ಆಸಂವರಣಂಗೆ ಕುರುರಾಯನು ತನುಜನು. ಆ ಕುರುರಾಯನು ಕುರುಕ್ಷೇತ್ರವೆಂಬ ಧರ್ಮಕ್ಷೇತ್ರವನು ಮಾಡಿದನು. ಆ ಕುರುನೃಪಂಗೆ ಸುಧನು, ಜಹ್ನು, ಪರೀಕ್ಷಿತು ಮೊದಲಾದ ಕೆಲಬರಣುಗರಾದರು. ಅವರಲ್ಲಿ ಸುಧನುವಿಂಗೆ ಸುಹೋತ್ರನುದ್ಭವಿಸಿದನು. ಆ ಸುಹೋತ್ರನ ಪುತ್ರನು ಚ್ಯವನನು. ಆ ಚ್ಯವನಂಗೆ ಕೃತಕನೆಂಬಣುಗನೊಗೆದನು. ಆ ಕೃತಕಂಗೆ ಉಪರಿಚರವಸುವು ಮಗನು. ಅವಂಗೆ ಬೃಹದ್ರಥ, ಪ್ರತ್ಯಗ್ರ, ಕುಶಾಂಬ, ಕುಚೇಲ, ಮಾತ್ಸ್ಯ ಮೊದಲಾದ ಪಲ್ವರು ಪುತ್ರರಾದರು. ಆಯೇಳ್ವರಲ್ಲಿ ಬೃಹದ್ರಥಂಗೆ ಕುಶಾಗ್ರನೆಂಬ ಪುತ್ರನಾದನು. ಆ ಕುಶಾಗ್ರನಿಂದ ವೃಷಭನು; ಆ ವೃಷಭಂಗೆ ಪುಷ್ಪವಂತನು; ಆ ಪುಷ್ಪವಂತಂಗೆ ಸತ್ಯಹಿತನು; ಆ ಸತ್ಯಹಿತನಂದನನು ಸುಧನ್ವನು; ಆ ಸುಧನ್ವಂಗೆ ಜಂತುವೆಂಬವಂ ಸಂಭವಿಸಿದನು. ಕೇಳು ಮೈತ್ರೇಯ, ಆ ಉಪರಿಚರವಸುವಿನ ಹಿರಿಯಮಗನಾದ ಬೃಹದ್ರಥಂಗೆ [1]ಇರ್ವರು ಪೆಂಡಿರು. ಆಯಿರ್ವರ್ಗಂ ಋಷಿವರಲಬ್ಧವಾದ ಫಲವನೆರಡು ಪಾಲಾಗಿ ಕೊಟ್ಟಲ್ಲಿ ಒಬ್ಬೊಬ್ಬರು ಒಂದೊಂದು ಭಾಗವನು ಪೆತ್ತರು. ಆ ಭಾಗದ್ವಯವನು ನೋಡಿ ಅಚ್ಚರಿವಟ್ಟು ದಾಸಿಯರು ಊರ ಹೊಱಗೆ ಗರ್ತಗಳಲ್ಲಿ ಬಿಸುಡಲಾಗಿ, ಆ ಭಾಗದ್ವಯವನು ಜರೆಯೆಂಬ ರಕ್ಕಸಿ ಸಂಧಿಸಿ ಕೊಟ್ಟಕಾರಣ ಅವನು ಜರಾಸಂಧನೆಂಬ ಪೆಸರಿಂದ ಲೋಕಪ್ರಸಿದ್ಧ(ನಾದ ಮಗನಾದನು.)[2] ಆ ಜರಾಸಂಧಂಗೆ ಸಹದೇವನೆಂಬ ಮಗನಾದನು. ಆ ಸಹದೇವಂಗೆ ಸೋಮಪನೆಂಬಣುಗನು ಆದನು. ಆ ಸೋಮಪಂಗೆ ಶ್ರುತಿಶ್ರವ

ಟೀಕು—† ಇವರಿಬ್ಬರೂ ಪಾಂಚಾಲರೆನಿಸಿ ನೆಗಳ್ತೆವಡೆದರು—ಎಂದು ಒಂದು ವಾಕ್ಯವು ಕನ್ನಡಮಾತೃಕೆಯಲ್ಲಿ ಹೆಚ್ಚು ಇದೆ.

ಪಾ—1. ಆರುಕ್ಷ—ಕ. ಮಾ.

2. ಈ ಭಾಗದಲ್ಲಿ ಸಂಸ್ಕೃತ ಮಾತೃಕೆಯಲ್ಲಿ—ಬೃಹದ್ರಥನಿಂದ ಶಕಲದ್ವಯಜನ್ಮನಾಗಿ ಜರೆಯಿಂದ ಸಂಧಿಸಲ್ಪಟ್ಟ ಜರಾಸಂಧನೆಂಬ ಮತ್ತೊಬ್ಬ ಮಗನೊಗೆದನು—ಎಂದು ಅರ್ಥವಾಗುವ ವಾಕ್ಯವಿದೆ.

ನೆಂಬ ತನುಜನಾದನು. ಇವರಿನಿಬರೂ ಮಗಧದೇಶಕ್ಕೆ ಒಡೆಯರಾಗಿ ಮಾಗಧ ರೆಂಬ ಪೆಸರಿನಿಂದ ನೆಗಳ್ತೆವಡೆದವರು.

ಎಂಬೀ ಕಥೆಯನ್ನು ಶ್ರೀಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ ಶ್ರೀವಿಷ್ಣುಪುರಾಣದ ಚತುರ್ಥಾಂಶದಲ್ಲಿ ಹತ್ತೊಂಬತ್ತನೆಯ ಅಧ್ಯಾಯಂ ಸಂಪೂರ್ಣಂ.

## ಇಪ್ಪತ್ತನೆಯ ಅಧ್ಯಾಯ.

ಕೇಳು ಮೈತ್ರೇಯ, ಕುರುಮಹಾರಾಯನ ಮಗನಾದ ಪರೀಕ್ಷಿದ್ರಾಜಂಗೆ ಜನಮೇಜಯನೆಂದು, ಶ್ರುತಸೇನನೆಂದು, ಉಗ್ರಸೇನನೆಂದು, ಭೀಮಸೇನನೆಂದು ನಾಲ್ವರಣುಗರಾದರು. ಅವರಲ್ಲಿ [1]ಜನಮೇಜಯಂಗೆ[1] ಸುರಥನೆಂಬ ಪುತ್ರನಾದನು. ಆಸುರಥಂಗೆ [2]ವಿದೂರಥನು; ಆ ವಿದೂರಥಂಗೆ ಸಾರ್ವಭೌಮನು; ಆ ಸಾರ್ವಭೌಮಂಗೆ [2] ಜಯತ್ಸೇನನು. ಆ ಜಯತ್ಸೇನನ ಮಗನು [3]ಆರಾಧಿತನು:[3] ಆರಾಧಿತತನಯನು ಅಯುತಾಯುವು. ಆ ಅಯುತಾಯುವಿಗೆ ಅಕ್ರೋಧನನು ತನಯನು ಆ ಅಕ್ರೋಧನಂಗೆ ದೇವಾತಿಥಿಯೆಂಬ ಮಗನುದಿಸಿದನು. ಆತನಿಗೆ ಋಕ್ಷನು ಆ ಋಕ್ಷಂಗೆ ಭೀಮಸೇನನು. ಆ ಭೀಮಸೇನಂಗೆ ದಿಲೀಪನೆಂಬ ಆತ್ಮಜನಾದನು. ಆ ದಿಲೀಪಂಗೆ ಪ್ರತೀಪನುದಿಸಿದನು. ಆ ಪ್ರತೀಪಂಗೆ ದೇವಾಪಿ, ಶಂತನು, ಬಾಹ್ಲಿಕರೆಂದು ಮೂವರಣುಗರಾದರು. ದೇವಾಪಿಯು ಬಾಲ್ಯದಲ್ಲಿಯೇ ವೈರಾಗ್ಯಪರನಾಗಿ

---

ಟಿಪ್ಪಣಿ—1. ಕನ್ನಡಮಾತೃಕೆಯ “ ಜನಮೇಜಯಂಗೆ ” ಎಂಬುದಕ್ಕೆ ಬದಲಾಗಿ ಸಂಸ್ಕೃತಮಾತೃಕೆಯಲ್ಲಿ “ಜಹ್ನುವಿಗೆ ” ಎಂದಿದೆ. ಶ್ರೀಧರವ್ಯಾಖ್ಯಾನದಲ್ಲಿ—ಕುರುಪುತ್ರರ ಮಧ್ಯದಲ್ಲಿ ಸುಧನುವಿನ ವಂಶವು ಹೇಳಲ್ಪಟ್ಟಿತು, ಅನಂತರ ಕುರುಪುತ್ರನಾದ ಪರೀಕ್ಷಿತವಂಶವು “ ಪರೀಕ್ಷಿದ್ರಾಜಂಗೆ ” ಎಂಬದಾಗಿ ಹೇಳಲ್ಪಟ್ಟಿತು. ಕುರುಪುತ್ರನಾದ ಜಹ್ನುವಿನ ವಂಶವೇ ಮುಂದಕ್ಕೆ ಹೇಳಲ್ಪಡುತ್ತದೆ—ಎಂಬ ಅವತಾರಿಕೆಯನ್ನು ಕೊಟ್ಟು “ ಜಹ್ನುವಿಗೆ ” ಎಂದು ಆರಂಭ ಮಾಡಿದೆ. ಹಿಂದಣ ವಂಶಾನುವಚನಕ್ರಮವನ್ನು ನೋಡಲಾಗಿ ಕನ್ನಡಮಾತೃಕೆಯ ಮೂಲಪುಸ್ತಕವೇ ಸರಿಯೆಂದು ನಂಬಿ ಅದೇ ಪಾಠವು ಮೇಲೆ ಕೊಡಲ್ಪಟ್ಟಿದೆ.

ಪಾ—2. ವಿದೂರಥನೆಂದು ಸಾರ್ವಭೌಮನೆಂದು ಈರ್ವರಾತ್ಮಜರು. ಆ ಸಾರ್ವಭೌಮಂಗೆ—ಕ. ಮಾ. 3. ಧಾರಧೀರನೆಂಬವನು—ಕ. ಮಾ.

ತಪವನಾಚರಿಸಲೆಂದು ವನವಂ ಪ್ರವೇಶಿಸಿದನು. ಬಳಿಕ ಶಂತನುವು ಅರಸುತನವಂ ಅಂಗೀಕರಿಸಿ ರಾಜ್ಯವಾಳಿದನು. ಕೇಳು ಮೈತ್ರೇಯ, ಆಶಂತನುವಿನ ಚರಿತಾನುಗುಣವಾದಂಥ ಶ್ಲೋಕವೊಂದನ್ನು ಪೊಡವಿಯೆಡೆಯೊಳ್ ಬಲ್ಲವರು ಗಾನಂಗೆಯ್ಯುತಿರ್ಪರು. ಅದೆಂತೆನೆ :—

ಸಂಸ್ಕೃತ॥ ಯಂ ಯಂ ಕರಾಭ್ಯಾಂ ಸ್ಪೃಶತಿ ಜೀರ್ಣಂ ಯೌವನಮೇತಿ ಸಃ ।
ಶಾಂತಿಂ ಚಾಪ್ನೋತಿ ಯೇನಾಗ್ರ್ಯಾಂ ಕರ್ಮಣಾ ತೇನ ಶಂತನುಃ॥

ಇದಕ್ಕೆ ಅರ್ಥ—ಆ ಶಂತನು ಮಹಾರಾಜನು ತನ್ನ ಕರಗಳಿಂದ ಆವ ಪುರುಷನನು ಮುಟ್ಟುತ್ತಿರ್ಪನೋ, ಆ ಪುರುಷ ವೃದ್ಧನಾಗಿದ್ದರೂ ಕೋಪಶಾಂತನಾಗಿ ಸುಖದಲ್ಲಿ ಬಾಳುತಿರ್ಪನು. ಅಂತಪ್ಪ ಪೆಂಪಿನಿಂದ ಶಂತನುವೆಂದು ನೆಗಳ್ತೆವೆತ್ತನು. ಅಂತು ಸ್ತುತಿಸಲ್ಪಟ್ಟ ಶಂತನುಮಹಾರಾಯನು ಭೂಮಿಯನು ಧರ್ಮದಿಂದ ಪರಿಪಾಲಿಸುತ್ತಿರ್ಪಲ್ಲಿ ದೇವತೆಗಳಾಲೋಚಿಸಿಕೊಂಡು ಹನ್ನೆರಡುವರುಷಂಬರಂ ಮಳೆಗಱೆಯದೆ ಅವನಾಳ್ವ ರಾಷ್ಟ್ರವನೆಲ್ಲವನು ಲಯವನೈದಿಸುತಿರಲಾಗಿ, ಆ ರಾಷ್ಟ್ರದಳಿವಂ ಕಂಡು ಮನದೊಳು ಕಡುನೊಂದು ಶಂತನುರಾಯನು ವೇದಶಾಸ್ತ್ರಸಂಪನ್ನರಾದ ಧರ್ಮಜ್ಞರಾದ ಬ್ರಾಹ್ಮಣರನು ಸಮೀಪಕ್ಕೆ ಕರಿಸಿ—ಕೇಳಿರೈ ವಿಪ್ರರಿರಾ ! ಇದೇನು ಕಾರಣದಿಂ ದೇವತೆಗಳು ಎನ್ನ ರಾಷ್ಟ್ರದಲ್ಲಿ ಹನ್ನೆರಡುವರುಷದಿಂದ ಮಳೆಗಱೆಯದಿರ್ಪರು ? (ನನ್ನಲ್ಲಿ ಅಪರಾಧವೇನು ?) ಈ ವಿಷಯವಂ ನೀವೆಲ್ಲರುಂ ತಿಳಿದೆನ್ನೊಡನೆ ಸೊಲ್ಲಿಸಬೇಕೆನ್ನಲಾಗಿ, ಆ ಬ್ರಾಹ್ಮಣರೆಲ್ಲರೂ ತಮ್ಮೊಳು ತಾವೇ ತಿಳಿದು,--ಕೇಳೈಯ ಶಂತನುಭೂಪನೇ ! ನಿನ್ನ ಅಗ್ರಜನಾದ ದೇವಾಪಿಗೆ ಶಾಸ್ತ್ರೋಕ್ತದಿಂ ಸಲ್ವ ಭೂಮಿಯನೆಲ್ಲ ನೀನೇ ಆಳಿಕೊಂಡು ಅರಸಾಗಿರ್ಪುದಱಿಂದ ಪರಿವೇತೃವೆನಿಸಿಕೊಂಬ ದೋಷಕ್ಕೆ ಒಳಗಾದೆ—ಎಂದು ನುಡಿಯಲಾಗಿ;—ಕೇಳಿರೈ ವಿಪ್ರರಿರಾ ! ಇಂಥದಱಲ್ಲಿ ನಾನೇನಮಾಡಬೇಕು ? ಎಂತಿರಬೇಕು ? ಎಂದು ಬೆಸಗೊಳಲಾಗಿ, ಆ ಭೂಸುರರಿಂತೆಂದರು :—ಕೇಳು ರಾಯನೇ ! ನಿಮ್ಮಣ್ಣನಾದ ದೇವಾಪಿ ಎನ್ನೆವರಂ ಕೀಳ್ಪಡಿಸುವ ದೋಷಂಗಳಿಂದ ಪರಿಭವವಂ ಪಡೆಯದಿರ್ಪನೋ, ಅನ್ನೆವರ ಮಾತಂಗೆಯೆ ಅರಸುತನವು ಸಲ್ಲುವುದು. ಅದಱಿಂದ ಈ ರಾಜ್ಯವನೆಲ್ಲವನು ಆತಂಗೊಪ್ಪಿಸಿಬಿಡು—ಎಂದು ಪೌರ್ವರೆಲ್ಲರುಂ ನೀತಿಯಂ ನುಡಿಯು

ತ್ತಿರಲಾಗಿ; ಆ ಮಾತನಾಲಿಸಿ ಶಂತನುವಿನ ಮಂತ್ರಿಪ್ರವರನಾದ ಅಶ್ಮರಾವಿ ಯೆಂಬವನು ಅರಣ್ಯಕ್ಕೆ ಹೋಗಿ ತಪಸಂಗೆಯ್ಯುತಿರ್ದ ದೇವಾಪಿಗೆ ವೇದವಾದಕ್ಕೆ ವಿರೋಧವಾದ ಮಾರ್ಗವನು ಪ್ರವೇಶಿಸುವಂತೆ ಬೋಧಿಸುವ ಕೆಲವರನು ನೇಮಿಸಿದನು. ಆ ವಿಪ್ರರು ವನಪ್ರವೇಶಂಗೈದು ವೇದವಾದವಿರೋಧ ಮಾರ್ಗವನು ಬೋಧಿಸಿದುದರಿಂದ ಋಜುಮತಿಯಾದ ಮಹೀಪತಿಪುತ್ರನಾದ ದೇವಾಪಿಯು ವೇದವಾದವಿರೋಧಮಾರ್ಗವನು [1]ಅಂಗೀಕರಿಸಿ ಪತಿತನಾಗಿರ್ದನು.[1] ಇತ್ತಲಾ ಶಂತನುರಾಯನು ಆ ದ್ವಿಜರ ನುಡಿಯುಲಾಲಿಸಿ (ಅದರಿಂದ ಉತ್ಪನ್ನವಾದ) ಆಳಲ್ದೊರೆಯಲ್ಲಿ (ಮುಳುಗಿ) ಮರುಗುತ, ಆ ಬ್ರಾಹ್ಮಣರ ಬೆಂಬಳಿವಿಡಿದು ಅಣ್ಣನಾದ ದೇವಾಪಿಗೆ ರಾಜ್ಯವನೀಯಲೆಂದು ವಿಪಿನವನೈದಿ ಆತನ ಸಮೀಪಸಂ ಸಾರ್ದನು. (ಅನಂತರನಾದ ದೇವಾಪಿಯನು ಕುರಿತು ಆ ಬ್ರಾಹ್ಮಣರು)—ವಿಚಾರಿಸಿ ನೋಡಿದರೆ ಅಗ್ರಜಂಗೇನೆ ರಾಜ್ಯವು ಸಲ್ಲತಕ್ಕುದೆಂದು ವೇದವಾದಾನುಬಂಧಿಗಳಾದ ವಿಧಿವಾಕ್ಯಗಳಿಂದ ಸಿದ್ಧತವಾದ ತತ್ವಮಂ ನುಡಿಯಲಾಗಿ ; ಆ ಬ್ರಾಹ್ಮಣರೊಡನೆ ದೇವಾಪಿಯು ವೇದವಾದವಿರೋಧಿಯಾದ ಕುಯುಕ್ತಿದೂಷಿತವಾದ ನುಡಿಗಳನು ಅನೇಕಪ್ರಕಾರವಾಗಿ ನುಡಿದನು. ಕೇಳು, ಮೈತ್ರೇಯ, ಆ ವೇದವಾದ ವಿರೋಧಯುಕ್ತಿದೂಷಿತವಾದ ವಾಕ್ಯಂಗಳನಾಲಿಸಿ ಆ ವಿಪ್ರರೆಲ್ಲರು—ಎಲೈ ರಾಜಕುಮಾರನೇ, ನಡೆ ಈತಂಗೆ ನಿರ್ಬಂಧಮನೇಕೆ ಮಾಡಬೇಕು ? ಸಾಕುಮಾಡು. ಅಲ್ಲಿಯ ಅನಾವೃಷ್ಟಿದೋಷವು ಇನ್ನು ಶಾಂತಮಪ್ಪುದು. ಅನಾದಿಕಾಲದಿಂದ ವಿಹಿತಮಾಗಿರ್ದ ವೇದವಚನಗಳಿಗೆ ದೂಷಣವನಾಡಿದುದರಿಂದ ರಾಜ್ಯಾರ್ಹನಾಗಿದ್ದರೂ ನಿನ್ನಣ್ಣನಾದ ದೇವಾಪಿಯು ಪತಿತನಾದನು. ಇದರಿಂದ ನಿನಗೆ ಈ ದೋಷವಿಲ್ಲ. (ಅಗ್ರಜನು ಪತಿತನಾದಮೇಲೆ) ನಿನಗೆ ಪರಿವೇತ್ತೃತ್ವ ದೋಷ ಬರುವುದಿಲ್ಲ.) ನಡೆ, ಎಂದು ಪೇಳಲಾಗಿ; ಶಂತನುವು ಆ ಭೂಸುರರೊಡನೆ ತನ್ನ ರಾಜಧಾನಿಗೆ ಬಂದು ರಾಜ್ಯಭಾರವಮಾಡಿದನು. (ವೇದವಾದ ವಿರೋಧವಚನೋಚ್ಚಾರಣದಿಂದ ದೂಷಿತನಾದ ಅಗ್ರಜನಾದ ದೇವಾಪಿಯು ಬದುಕಿದ್ದರೂ), ಪೂಜ್ಯನಾದ ಪರ್ಜನ್ಯನು ಸಕಲ ಸಸ್ಯಗಳು ಬೆಳೆದು ಅಭಿವೃದ್ಧಿಯಪ್ಪಂತೆ ಶಂತನು ಆಳ್ವ ರಾಷ್ಟ್ರದಲ್ಲಿ ಮಳೆ

---

ಪಾ—1. ಅಂಗೀಕರಿಸಿದನು.—ಸಂ. ಮಾ.

ಗಳಿಸಿದು ಸುಭಿಕ್ಷವನೆಸಗಿದನು. ಕೇಳು ಮೈತ್ರೇಯನು, ಶಂತನುಮಹಾರಾಯನ ತಮ್ಮನಾದ ಬಾಹ್ಲಿಕಂಗೆ ಸೋಮದತ್ತನೆಂಬ ಮಗನಾದನು. ಆ ಸೋಮದತ್ತಂಗೆ ಭೂರಿಯೆಂದು, ಭೂರಿಶ್ರವನೆಂದು, ಶಲ್ಯನೆಂದು ಮೂವರಣುಗರೊಗೆದರು. ಆ ಶಂತನುವಿಗೆ [1]ಶಾಪದಿಂದ ಪತ್ನಿಯಾದ[1] ದೇವನದಿಯಾದ ಜಾಹ್ನವಿಯಲ್ಲಿ ಉದಾರನಾದ ಮಹಾಕೀರ್ತಿವಂತನಾದ ಸಕಲವಿದ್ಯಾವಿಶಾರದನಾದ ಅಸಹಾಯಶೂರನಾದ ವಸುವಿನಂಶವಾದ ಭೀಷ್ಮನೆಂಬ ಪುತ್ರನಾದನು. ಆ ಶಂತನುವಿಂಗೆ [2]ಸತ್ಯವತಿಯೆಂದು[2] ಯೋಜನಗಂಧಿಯೆಂದು ಪ್ರಸಿದ್ಧಳಾದ ಮಡದಿಯ ಗರ್ಭದಲ್ಲಿ ಚಿತ್ರಾಂಗದ ವಿಚಿತ್ರವೀರ್ಯರೆಂಬ ಇಬ್ಬರಣುಗರುದ್ಭವಿಸಿದರು. ಅವರಲ್ಲಿ ಚಿತ್ರಾಂಗದನು ಎಳವರೆಯದಲ್ಲಿಯೇ ಚಿತ್ರಾಂಗದನೆಂಬ ಗಂಧರ್ವನೊಡನೆ ಕಾಳೆಗದೊಳಿಟ್ಟಾಡಿ ಮಡಿದುಪೋದನು. ಆ ವಿಚಿತ್ರವೀರ್ಯನು ಕಾಶಿರಾಜನ ಪುತ್ರಿಯರಾದ ಅಂಬಿಕೆಯನೂ ಅಂಬಾಲಿಕೆಯನೂ ಪತ್ನಿಯರಾಗಿ ಅಂಗೀಕರಿಸಿದನು. ಅವರಿರ್ವರ [3]ಭೋಗಾಸಕ್ತಿಯಿಂದ[3] ರಾಜಯಕ್ಷ್ಮವೆಂಬ ಮಹಾಕ್ಷಯರೋಗದಿಂದ ಕ್ಷೀಣನಾಗಿ ಪಂಚತ್ವವನೈದಿದನು. ಆ ಬಳಿಕ ಸತ್ಯವತಿಯು ತನಗೆ ಬಾಲ್ಯದಲ್ಲಿ ಪರಾಶರಮುನಿಯಿಂದೊಗೆದ ಕೃಷ್ಣದ್ವೈಪಾಯನನನು ಸ್ಮರಿಸಿ ಬರಿಸಿ ಮಹಾರಾಜಪದವಿಗೆ ಅರ್ಹವಾಗಿಪ್ಪಂತೆ ಸಂತಾನವನುಂಟುಮಾಡೆಂದು ನೇಮಿಸಲಾಗಿ ; ಆ ಮಾತೃವಚನವನು ಕಡೆಗಾಣಿಸದೆ ಆ ವಿಚಿತ್ರವೀರ್ಯನ ಪತ್ನಿಯಾದ ಅಂಬಿಕೆಯಲ್ಲಿ ಧೃತರಾಷ್ಟ್ರನೆಂಬ ಮಗನನೂ, ಅಂಬಾಲಿಕೆಯಲ್ಲಿ ಪಾಂಡುವೆಂಬಣುಗನನೂ ಅವರಿಂದ ಪ್ರೇರಿತಳಾದ ಪೆಱತೊರ್ವ ಭೋಗಸ್ತ್ರೀಯಲ್ಲಿ [4]ಭಾಗವತೋತ್ತಮನಾದವಿದುರನನೂ[4] ತನ್ನ ತಪೋಮಹಿಮೆಯಿಂದ ಸಯೆಗೆಯ್ದು ಪುಟ್ಟಿಸಿ [5]ಸತ್ಯವತಿಗೆ ಕೊಟ್ಟು ತನ್ನ ನೆಲೆವೀಡಾದ ಬದರಿಕಾಶ್ರಮವನೈದಿದನು. ಅವರಲ್ಲಿ ಜಾತ್ಯಂಧನಾಗಿರ್ದ[5] ಧೃತರಾಷ್ಟ್ರನೆನಿಪಂಗೆ ಗಾಂಧಾರಿಯೆಂಬ ಮಡದಿಯಲ್ಲಿ ದುರ್ಯೋಧನ ದುಶ್ಶಾಸನ ಮುಖ್ಯರಾದ ನೂರ್ವರಣುಗರೊಗೆದರು. ಆ ಪಾಂಡುರಾಯಂಗೆ ಕುಂತಿಯೆಂದು ಮಾದ್ರಿಯೆಂದು ಇಬ್ಬರುಮಡದಿಯರಿದ್ದರು. ಆ ಪಾಂಡುವು ಒಂದು ಸಮಯದಲ್ಲಿ ಮೃಗಯಾತ್ರೆ ಪೋದವ

---

ಪಾ—1, 2, 4, 5 ಸಂಸ್ಕೃತಮಾತೃಕೆಯಲ್ಲಿಲ್ಲ

3. ಭೋಗಾತಿಖೇದಾಚ್ಚ—ಎಂದು ಸಂಸ್ಕೃತ ಮಾತೃಕೆ.

ಈಗಿನ ಕಾಲದಲ್ಲಿ ಭೂಮಂಡಲವನತ್ಯಂತಧರ್ಮದಿಂದ ಪಾಲಿಸುತಿರ್ಪ ಅಭಿಮನ್ಯುವಿನ ಕುಮಾರನಾದ ಪರೀಕ್ಷಿದ್ರಾಜಂಗೆ ಜನಮೇಜಯ, ಶ್ರುತಸೇನ, ಉಗ್ರಸೇನ, ಭೀಮಸೇನ ಎಂಬ ನಾಲ್ವರು ಕುಮಾರರು ಉದ್ಭವಿಸುವರು. ಆ ನಾಲ್ವರಲ್ಲಿ ಜನಮೇಜಯಂಗೆ ಒಬ್ಬ ಮಗನಾಗುವನು. ಅವನ ಹೆಸರು ಶತಾನೀಕನು. ಆ ಶತಾನೀಕನು ಯಾಜ್ಞವಲ್ಕ್ಯಋಷಿಯ ಬಳಿಯೊಳ್ ವೇದಾಧ್ಯಯನವಂ ಮಾಡಿ ಕೃಪಾಚಾರ್ಯರಿಂದ ಸಾಂಗವಾಗಿ ಸಕಲಾಸ್ತ್ರವಿದ್ಯಂಗಳಂ ಕಲಿತು ವಿಷಮಂಗಳಾಗಿ ತೋರ್ಪ ವಿಷಯಂಗಳಲ್ಲಿ ವಿರಕ್ತಿಯನೆಸಗಿ ಶೌನಕಾಚಾರ್ಯೋಪದೇಶದಿಂದಾತ್ಮಜ್ಞಾನನಿಪುಣನಾಗಿ ಕಡೆಯೊಳ್ ಮುಕ್ತಿಯನು ಪಡೆವನು. ಅಂತಪ್ಪ ಶತಾನೀಕಭೂಪತಿಗೆ ಅಶ್ವಮೇಧದತ್ತನೆಂಬಣುಗನೊಗೆವನು. ಆ ಅಶ್ವಮೇಧದತ್ತಂಗೆ ಅಧಿಸೀಮಕೃಷ್ಣನೆಂಬ ಸೂನು ಸಂಭವಿಸುವನು. ಆ ಅಧಿಸೀಮಕೃಷ್ಣಂಗೆ ನಿಚಕ್ಷುವೆಂಬ ತನುಜನು ; ಆ ನಿಚಕ್ಷುವೆಂಬ ನರಪತಿ ಗಂಗಾಪ್ರವಾಹದಲ್ಲಿ ಹಸ್ತಿನಾಪುರಿ ಮುಳುಗಲಾಗಿ ಕೌಶಾಂಬಿಯೆಂಬ ನಗರಿಯೊಳ್ ವಾಸಂಗೆಯ್ದು ರಾಜ್ಯವನಾಳುವನು. ಆ ನಿಚಕ್ಷುವಿಗೆ ಉಷ್ಣನೆಂಬ ತನಯನು ಜನಿಸುವನು. ಆ ಉಷ್ಣನಿಗೆ ವಿಚಿತ್ರರಥನು ; ಆ ವಿಚಿತ್ರರಥನಿಗೆ ಶುಚಿರಥನು. ಆ ಶುಚಿರಥನ ತನುಜಾತನು ವೃಷ್ಣಿಮಂತನು ; ಆ ವೃಷ್ಣಿಮಂತನ ಸೂನು ಸುಷೇಣನು. ಆತನ ಸೂನು [1]ಸುನೀಥನು[1]. [2]ಆ ಸುನೀಥನಿಗೆ ನೃಪಚಕ್ಷುವು ; ಆತಂಗೆ[2] ಸುಖಿಬಲನೊಗೆವನು. ಅವಂಗೆ ಪಾರಿಪ್ಲವನುದಿಸುವನು. ಆ ಪಾರಿಪ್ಲವನ ತನಯನು ಸುನಯನನು. ಆ ಸುನಯನನಾತ್ಮಜನು ಮೇಧಾವಿಯು. ಆ ಮೇಧಾವಿಗೆ ರಿಪುಂಜಯನೆಂಬ ಮಗನು. ಆ ರಿಪುಂಜಯಂಗೆ [3]ವಸ್ತನು ; ಆ ವಸ್ತಂಗೆ ತಿಗ್ಮನು[3] ; ಆ ತಿಗ್ಮಂಗೆ ಬೃಹದ್ರಥನು ; ಆ ಬೃಹದ್ರಥಂಗೆ [4]ವಸುದಾಸನೊಗೆವನು. ಆ ವಸುದಾಸಂಗೆ [5]ಪರನೆಂಬವನುದಿಸುವನು. ಆ ಪರಂಗೆ ಶತಾನೀಕನೆಂಬ ಕುಮಾರನು[5] ; ಆ ಶತಾನೀಕಂಗೆ ಉದಯನನೆಂಬ ಪುತ್ರನು ; ಆ ಉದಯನಂಗೆ ವಿಹೀನರನೆಂಬ ಸೂನು ;

---

ಪಾ— 1. ಸುಸಿದ್ಧನು. 2. ಆ ಸುಸಿದ್ಧಂಗೆ ವ್ರತನೆಂಬಾತ್ಮಜನು, ಆ ವ್ರತಂಗೆ ನೃಚಕ್ಷು, ಆತಂಗೆ. 3. ದುರ್ವಚನನೆಂಬ ಕುಮಾರನು, ಆ ದುರ್ವಚಂಗೆ- 4 ಸುನಾಥ. 5. ಆ ವಸುದಾಸಂಗೆ ಮುಕೊ.ಬ ಶತಾನೀಕನು—ಕ. ಮಾತೃಕೆಯ ಪ್ರಕಾರ.

ಅಭಿಮನ್ಯುವೆಂಬ ಪುತ್ರನುದಿಸಿದನು. ಆತನು ಬಾಲ್ಯದಲ್ಲಿಯೇ ಮಹಾಬಲಪರಾಕ್ರಮಿಯಾಗಿ ರಣರಂಗದಲ್ಲಿ ಅತಿರಥರಾದ ಸೇನಾನಾಯಕರನು ಜಯಿಸಿ ನೆಗಳ್ತೆವಡೆದನು. ಆ ಅಭಿಮನ್ಯುವಿಗೆ ವಿರಾಟಪುತ್ರಿಯಾದ ಉತ್ತರೆಯೆಂಬವಳು ಪತ್ನಿಯಾಗಿ ಗರ್ಭವನು ಪಡೆದಿರ್ದಳು. ಭಾರತಯುದ್ಧದಲ್ಲಿ ಪಾಂಡವಸಂತಾನವೆಲ್ಲವೂ ಅಳಿದುಪೋಗಲೆಂದು ಅಶ್ವತ್ಥಾಮನು ಕೋಪದಿಂದ ಎಚ್ಚಂಥ ಬ್ರಹ್ಮಾಸ್ತ್ರಜ್ವಾಲೆಯಿಂದ ಆ ಗರ್ಭಸ್ಥವಾದ ಶಿಶುವು ಭಸ್ಮೀಕೃತವಾಗಿ, ಸಕಲ ಲೋಕಗುರುವಾದ ಸಕಲ ಸುರಾಸುರವಂದಿತಚರಣಯುಗಳನಾದ ಸ್ವಸಂಕಲ್ಪಮಾತ್ರದಿಂದಮೆ ಕಾರಣಮಾನುಷರೂಪಧಾರಿಯಾದ ಕೃಷ್ಣಸ್ವಾಮಿಯ ಅನುಗ್ರಹದಿಂದ ಪುನರ್ಜೀವನಂ ಪಡೆದು ಜನಿಸಿತು. [1]ವಾಸುದೇವಸಂಪ್ರಯುಕ್ತವಾದ ಶ್ರೀಮತ್ಸುದರ್ಶನಚಕ್ರದಿಂದ ಸಂರಕ್ಷಣೆ ಪ್ರಾಣಧಾರಣಮಂ ಪಡೆದು ಬಳಿಕ ಜನಿಸಿರುದರಿಂದ ಆ ಶಿಶುವಿಗೆ ಪರೀಕ್ಷಿದ್ರಾಜನೆಂಬುದಾಗಿ ಹೆಸರಾದುದು.[1] ಅಂತಪ್ಪ ಪರೀಕ್ಷಿದ್ರಾಜನು [2] ಈ ವಿದ್ಯಮಾನಕಾಲದಲ್ಲಿ [2] ಈ ಭೂಮಂಡಲವನು [3]ಅಖಂಡಾಯತಿ[3] ಧರ್ಮದಿಂದ ಪರಿಪಾಲಿಸುತಿಪ್ಪನು.

ಎಂಬೀವಂಶವಿಸ್ತಾರಕಥೆಯನು ಶ್ರೀ ಪರಾಶರಮುನಿಯು ಮೈತ್ರೇಯಂಗೆ ನಿರೂಪಿಸಿದರೆಂಬ ಒಳಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಇಪ್ಪತ್ತನೆಯ ಅಧ್ಯಾಯಂ ಸಮಾಪ್ತಂ.

## ಇಪ್ಪತ್ತೊಂದನೆಯ ಅಧ್ಯಾಯ.

ಕೇಳು ಮೈತ್ರೇಯ, ಇನ್ನುಮೇಲೆ ಭವಿಷ್ಯತ್ಕಾಲದಲ್ಲಿ ಸಂಭವಿಪಂತಹ ಭೂಪಾಲಪರಂಪರೆಯನೊರೆವೆನು. ಅದೆಂತೆನೆ :—

ಟಿಪ್ಪಣಿ—1. ಈ ವಾಕ್ಯವು ಸಂಸ್ಕೃತಮಾತೃಕೆಯಲ್ಲಿಲ್ಲ. ಇದು ಪರೀಕ್ಷಿತ್ ಎಂಬ ನಾಮದ ಅರ್ಥನಿರ್ವಚನದ ವಾಕ್ಯವಾಗಿದೆ. ಶ್ರೀಧರವ್ಯಾಖ್ಯಾನದಲ್ಲಿ ಕುರುಗಳು ಪರಿಕ್ಷೀಣವಾಗುತಿರಲಾಗಿ ಭಗವಂತನಿಂದ ಅನುಭಾವಿತ ಜೀವಿತನಾದ್ದರಿಂದ ಪರೀಕ್ಷಿತ್ ಎಂಬ ಹೆಸರು ಬಂತು—ಎಂದಿದೆ.

2. ಪರೀಕ್ಷಿದ್ರಾಜ್ಯ ಸಮಕಾಲದಲ್ಲಿ ಈ ಪುರಾಣವು ಮೈತ್ರೇಯನಿಗೋಸ್ಕರ ಪರಾಶರರಿಂದ ಹೇಳಲ್ಪಟ್ಟಿತೆಂದು ಇದರಿಂದ ಗಮ್ಯವಾಗುತ್ತದೆ.

3. ಮುಂದಮುಂದಕ್ಕೆ ಸಂಪತ್ತು ಹೆಚ್ಚುವಹಾಗೆ ಎಂದರ್ಥ.

ಈಗಿನ ಕಾಲದಲ್ಲಿ ಭೂಮಂಡಲವನತ್ಯಂತಧರ್ಮದಿಂದ ಪಾಲಿಸುತಿರ್ಪ ಅಭಿಮನ್ಯುವಿನ ಕುಮಾರನಾದ ಪರೀಕ್ಷಿದ್ರಾಜಂಗೆ ಜನಮೇಜಯ, ಶ್ರುತಸೇನ, ಉಗ್ರಸೇನ, ಭೀಮಸೇನ ಎಂಬ ನಾಲ್ವರು ಕುಮಾರರು ಉದ್ಭವಿಸುವರು. ಆ ನಾಲ್ವರಲ್ಲಿ ಜನಮೇಜಯಂಗೆ ಬಬ್ಬ ಮಗನಾಗುವನು. ಅವನ ಹೆಸರು ಶತಾನೀಕನು. ಆ ಶತಾನೀಕನು ಯಾಜ್ಞವಲ್ಕ್ಯಋಷಿಯ ಬಳಿಯೊಳ್ ವೇದಾಧ್ಯಯನವಂ ಮಾಡಿ ಕೃಪಾಚಾರ್ಯರಿಂದ ಸಾಂಗವಾಗಿ ಸಕಲಾಸ್ತ್ರವಿದ್ಯಂಗಳಂ ಕಲಿತು ವಿಷಮಂಗಳಾಗಿ ತೋರ್ಪ ವಿಷಯಗಳಲ್ಲಿ ವಿರಕ್ತಿಯನೆಸಗಿ ಶೌನಕಾಚಾರ್ಯೋಪದೇಶದಿಂದಾತ್ಮಜ್ಞಾನನಿಪುಣನಾಗಿ ಕಡೆಯೊಳ್ ಮುಕ್ತಿಯನು ಪಡೆವನು. ಅಂತಪ್ಪ ಶತಾನೀಕಭೂಪತಿಗೆ ಅಶ್ವಮೇಧದತ್ತನೆಂಬಣುಗನೊಗೆವನು. ಆ ಅಶ್ವಮೇಧದತ್ತಂಗೆ ಅಧಿಸೀಮಕೃಷ್ಣನೆಂಬ ಸೂನು ಸಂಭವಿಸುವನು. ಆ ಅಧಿಸೀಮಕೃಷ್ಣಂಗೆ ನಿಚಕ್ನುವೆಂಬ ತನುಜನು ; ಆ ನಿಚಕ್ನುವೆಂಬ ನರಪತಿ ಗಂಗಾಪ್ರವಾಹದಲ್ಲಿ ಹಸ್ತಿನಾಪುರಿ ಮುಳುಗಲಾಗಿ ಕೌಶಾಂಬಿಯೆಂಬ ನಗರಿಯೊಳ್ ವಾಸಂಗೆಯ್ದು ರಾಜ್ಯವನಾಳುವನು. ಆ ನಿಚಕ್ನುವಿಗೆ ಉಷ್ಣನೆಂಬ ತನಯನು ಜನಿಸುವನು. ಆ ಉಷ್ಣನಿಗೆ ವಿಚಿತ್ರರಥನು ; ಆ ವಿಚಿತ್ರರಥನಿಗೆ ಶುಚಿರಥನು. ಆ ಶುಚಿರಥನ ತನುಜಾತನು ವೃಷ್ಣಿಮಂತನು ; ಆ ವೃಷ್ಣಿಮಂತನ ಸೂನು ಸುಷೇಣನು. ಆತನ ಸೂನು [1]ಸುನೀಥನು[1]. [2]ಆ ಸುನೀಥನಿಗೆ ನೃಪಚಕ್ಷುವು ; ಆತಂಗೆ[2] ಸುಖಿಬಲನೊಗೆವನು. ಅವಂಗೆ ಪಾರಿಪ್ಲವನುದಿಸುವನು. ಆ ಪಾರಿಪ್ಲವನ ತನಯನು ಸುನಯನನು. ಆ ಸುನಯನನಾತ್ಮಜನು ಮೇಧಾವಿಯು. ಆ ಮೇಧಾವಿಗೆ ರಿಪುಂಜಯನೆಂಬ ಮಗನು. ಆ ರಿಪುಂಜಯಂಗೆ [3]ವಸ್ತನು ; ಆ ವಸ್ತಂಗೆ ತಿಗ್ಮನು[3] ; ಆ ತಿಗ್ಮಂಗೆ ಬೃಹದ್ರಥನು ; ಆ ಬೃಹದ್ರಥಂಗೆ [4]ವಸುದಾಸನೊಗೆವನು. ಆ ವಸುದಾಸಂಗೆ [5]ಪರನೆಂಬವನುದಿಸುವನು. ಆ ಪರಂಗೆ ಶತಾನೀಕನೆಂಬ ಕುಮಾರನು[5] ; ಆ ಶತಾನೀಕಂಗೆ ಉದಯನನೆಂಬ ಪುತ್ರನು ; ಆ ಉದಯನಂಗೆ ವಿಹೀನರನೆಂಬ ಸೂನು ;

---

ಪಾ— 1. ಸುಸಿದ್ಧನು. 2. ಆ ಸುಸಿದ್ಧಂಗೆ ವ್ರತನೆಂಬಾತ್ಮಜನು, ಆ ವ್ರತಂಗೆ ನೃಚಕ್ಷು, ಆತಂಗೆ. 3. ದುರ್ವಚನನೆಂಬ ಕುಮಾರನು, ಆ ದುರ್ವಚಂಗೆ- 4 ಸುನಾಥ. 5. ಆ ವಸುದಾಸಂಗೆ ಮತೊಬ್ಬ ಶತಾನೀಕನು—ಕ. ಮಾತೃಕೆಯ ಪ್ರಕಾರ.

ಆತಂಗೆ ದಂಡಪಾಣಿಯೆಂಬ ತನುಜನು ; ಆತಂಗೆ ನಿಮಿತ್ತನೆಂಬ ತನುಭವನು; ಆ ನಿಮಿತ್ತಂಗೆ ಕ್ಷೇಮಕನೆಂಬ ನಂದನನುದ್ಭವಿಸುವನು. (ಇಲ್ಲಿ ಈ ಪದ್ಯವು ಪಠಿಸಲ್ಪಡುವುದು :—

ಶ್ಲೋ॥ † ಬ್ರಹ್ಮಕ್ಷತ್ರಸ್ಯ ಯೋ ಯೋನಿರ್ವಂಶೋ ದೇವರ್ಷಿಸತ್ಕೃತಃ ।
ಕ್ಷೇಮಕಂ ಪ್ರಾಪ್ಯರಾಜಾನಂ ಸಂಸ್ಥಾನಂ ಪ್ರಾಪ್ಸ್ಯತೇ ಕಲೌ ॥ )

ಟೀಕು—ಕೇಳು ಮೈತ್ರೇಯ, ನಿನಗೆ ಮೊದಲು ಹೇಳಿದ ಬೃಹತ್ಕ್ಷತ್ರನೆಂಬ ರಾಯನ ವಂಶವು ಈ ಕ್ಷೇಮಕನೆಂಬ ದೊರೆಯಪರ್ಯಂತವೂ ಲೋಕದೊಳ್ ನೆಗಳ್ತವಡೆದು ದೇವರ್ಷಿಸತ್ಕಾರ್ಯಂಗಳನೆಸಗಿ ಕೃತಾರ್ಥವೆನಿಸಿಕೊಂಬುದು.

ಈ ಕ್ಷೇಮಕನೆಂಬ ದೊರೆಯು ಪಾಂಡವರ ಕುಲಕ್ಕೆ ಸಮಾಪ್ತಿಯು.

ಎಂಬೀವೃತ್ತಾಂತವಂ ಶ್ರೀ ಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಇಪ್ಪತ್ತೊಂದನೆಯ ಅಧ್ಯಾಯಂ ಸಮಾಪ್ತಂ.

## ಇಪ್ಪತ್ತೆರಡನೆಯ ಅಧ್ಯಾಯ.

[1]ಕೇಳು, ಮೈತ್ರೇಯ ! ಪಾಂಡವರ ವಂಶವು ಕ್ಷೇಮಕನೆಂಬ ಅರಸಿಗೆ ಕಡೆಯಪ್ಪುದೆಂದು ಹೇಳಿದುದು ಸರಿಯಷ್ಟೆ.[1] ಇನ್ನು ಇಕ್ಷ್ವಾಕುವಂಶದಲ್ಲಿ ಮುಂದೆ ಸಂಜಾತರಪ್ಪ ಭೂಪರ ಪರಂಪರೆಯಂ ಪೇಳ್ವೆನದೆಂತೆನೆ :—

[2]ಭಾರತಯುದ್ಧದಲ್ಲಿ ಅಭಿಮನ್ಯುವಿನಿಂದ ಹತನಾದಂಥ[2] ಇಕ್ಷ್ವಾಕುವಂಶದ ಬೃಹದ್ಬಲನೆಂಬ ಭೂಪಂಗೆ ಬೃಹತ್ಕ್ಷಣನೆಂಬ ಮಗನು. ಆ ಬೃಹತ್ಕ್ಷಣಂಗೆ ದುರುಕ್ಷಯನೆಂಬ ಅಣುಗನು. ಆ ದುರುಕ್ಷಯಂಗೆ ವತ್ಸವ್ಯೂಹನೆಂಬ ಕುಮಾರನು. ಆ ವತ್ಸವ್ಯೂಹನೆಂಬವಂಗೆ [3]ವ್ಯೋಮನೆಂಬವನು.

---

ವಿಚಾರ—† ಕನ್ನಡ ಮಾತೃಕೆಯ ಟೀಕಿನ ಪ್ರಕಾರ ಸಂಸ್ಕೃತ ಶ್ಲೋಕದಲ್ಲಿ--"ಬೃಹತ್ಕ್ಷತ್ರಸ್ಯ" ಎಂಬ ಪಾಠವಿದ್ದಿರಬೇಕು.

ಪಾ—1, 2. ಸಂಸ್ಕೃತಮಾತೃಕೆಯಲ್ಲಿಲ್ಲ.

3. ಪ್ರತಿವ್ಯೂಹನು. ಆ ಪ್ರತಿವ್ಯೂಹಂಗೆ—ಕ. ಮಾ.

ಆ ವ್ಯೋಮಂಗೆ ದಿವಾಕರನುದಿಸುವನು. ಆ ದಿವಾಕರಂಗೆ ಸಹದೇವನು; ಆ ಸಹದೇವಂಗೆ ಬೃಹದಶ್ವನು ; ಆ ಬೃಹದಶ್ವನ ಮಗನು ಭಾನುರಥನು ; ಆ ಭಾನುರಥಂಗೆ ಪ್ರತೀತಾಶ್ವನುದಿಸುವನು. ಆ ಪ್ರತೀತಾಶ್ವಂಗೆ ಸುಪ್ರತೀಕನೊಗೆವನು ; ಆ ಸುಪ್ರತೀಕಂಗೆ ಮರುದೇವನು ; ಆ ಮರುದೇವಂಗೆ ಸುನಕ್ಷತ್ರನೆಂಬ ತನಯನು ; ಆ ಸುನಕ್ಷತ್ರಂಗೆ ಕಿನ್ನರನೆಂಬ ಸೂನು ; ಆ ಕಿನ್ನರಂಗೆ ಅಂತರಿಕ್ಷನೆಂಬ ತನುಜಾತನು ; ಆ ಅಂತರಿಕ್ಷಂಗೆ ಸುಪರ್ಣನೆಂಬ ನಂದನನು ; ಆ ಸುಪರ್ಣನೆಂಬವಂಗೆ ಅಮಿತ್ರಜಿತನು ; ಆ ಅಮಿತ್ರಜಿತಂಗೆ [1]ಬೃಹದ್ಭಾಜನು ; ಆ ಬೃಹದ್ಭಾಜಂಗೆ ಧರ್ಮಿಯು ; ಆ ಧರ್ಮಿಗೆ[1] ಕೃತಂಜಯನು ; ಆ ಕೃತಂಜಯಂಗೆ [2]ರಣಂಜಯನು ; ಆ ರಣಂಜಯಂಗೆ[2] ಸಂಜಯನೆಂಬಣುಗನು; ಆ ಸಂಜಯಂಗೆ ಶಾಕ್ಯನೊಗೆವನು. ಆ ಶಾಕ್ಯಂಗೆ ಶುದ್ಧೋದನನು ಪುಟ್ಟುವನು. ಆ ಶುದ್ಧೋದನನಿಂದ ರಾಹುಳನುದ್ಭವಿಸುವನು. ಆ ರಾಹುಳಂಗೆ ಪ್ರಸೇನಜಿತೆಂಬವನು ಹುಟ್ಟುವನು. ಆ ಪ್ರಸೇನಜಿತೆಂಬವಂಗೆ ಕ್ಷುದ್ರಕನು ; ಆ ಕ್ಷುದ್ರಕಂಗೆ [3]ಕುಂಡಕ[3]ನವತರಿಸುವನು. ಆ ಕುಂಡಕಂಗೆ ಸುರಥನು ಸಂಭವಿಸುವನು. ಆತನ ಮಗನು ಸುಮಿತ್ರನೊಗೆವನು. ಕೇಳು ಮೈತ್ರೇಯ, ಬೃಹದ್ಬಲನೇ ಮೊದಲಾಗಿ ಸುಮಿತ್ರನೆಂಬವನೇ ಕಡೆಯಾದ ಈ ಇಕ್ಷ್ವಾಕುವಂಶದ ದೊರೆಗಳು ಭೂಮಿಯನಾಳ್ವರೆಂದು ತಿಳಿದುಕೊಂಬುದು. ಈ ಅರ್ಥದಲ್ಲಿ ವಂಶಾನುಶ್ಲೋಕವು ಜಗದೊಳ್ ನೆಗಳ್ತೆವಡೆದಿರ್ಪುದು. ಅದೆಂತೆನೆ :—

ಶ್ಲೋ॥ ಇಕ್ಷ್ವಾಕೂಣಾಮಯಂ ವಂಶಃ ಸುಮಿತ್ರಾಂತೋ ಭವಿಷ್ಯತಿ।
ಯತಸ್ತಂ ಪ್ರಾಪ್ಯರಾಜಾನಂ ಸಂಸ್ಥಾಂ ಪ್ರಾಪ್ಸ್ಯತಿ ವೈ ಕಲೌ॥

ಟೀಕು—ಈ ಇಕ್ಷ್ವಾಕುವಂಶದ ರಾಯರು ಸುಮಿತ್ರನೆಂಬವನೇ ಕಡೆಯಾಗಿ ಲೋಕದೊಳು ಕಲಿಯುಗದಲ್ಲಿ ಪ್ರತಿಷ್ಠಾವಂತರಾಗಿ ಬಾಳುವರು.

ಎಂಬೀ ವಂಶವಿಸ್ತಾರವೃತ್ತಾಂತಮಂ ಶ್ರೀ ಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಇಪ್ಪತ್ತೆರಡನೆಯ ಅಧ್ಯಾಯಂ ಸಮಾಪ್ತಂ.

---

ಪಾ—1. ಬೃಹದ್ವೇಜನು. ಆತಂಗೆ ಸುಧರ್ಮಿಯು, ಆ ಸುಧರ್ಮಿಗೆ—ಕ. ಮಾ.
2. ಕರಣಂಜಯನು, ಆ ಕರಣಂಜಯಂಗೆ—ಕ. ಮಾ. 3. ಕುರುಂಡಕ, ಸುರಂಡ—ಕ. ಮಾ.

## ಇಪ್ಪತ್ತುಮೂಱನೆಯ ಅಧ್ಯಾಯ.

ಕೇಳು ಮೈತ್ರೇಯ! ಇಕ್ಷ್ವಾಕುವಂಶದ ದೊರೆಗಳು ಸುಮಿತ್ರಾಂತವಾಗಿ ಭೂಮಿಯನಾಳುವರೆಂದು ಹೇಳಿದುದಱಿಂದ ಇನ್ನು ಮುಂದೆ ಸೋಮವಂಶದೊಳು ಕವಲಾಗಿದ್ದ ಬೃಹದ್ರಥನ ಸಂತಾನವಾದ ಮಾಗಧಭೂಪರಲ್ಲಿ ಭವಿಷ್ಯತ್ಕಾಲದಲ್ಲಿ ಒಗೆವಂತಹ ದೊರೆಗಳಪರಂಪರೆಯನೊರೆವೆನು. ಅದೆಂತೆನೆ-

ಈ ವಂಶದಲ್ಲಿ ಲೋಕಪ್ರಸಿದ್ಧನಾದ ಮಹಾಬಲಶಾಲಿಯಾದ ಜರಾಸಂಧನೇ ಮುಖ್ಯನಾಗಿರ್ದನು. ಆ ಜರಾಸಂಧನ ಮಗನು ಸಹದೇವನು. ಆ ಸಹದೇವಂಗೆ [1]ಸೋಮಾಪಿಯು[1]; ಆತನ ಮಗನು ಶ್ರುತಶ್ರವನು; ಆ ಶ್ರುತಶ್ರವನ ತನಯನು ಅಯುತಾಯು ಆತನ ಮಗನು [2]ನಿರಮಿತ್ರನು[2]. ಆ ನಿರಮಿತ್ರಂಗೆ (ಸುನೇತ್ರನು; ಆ ಸುನೇತ್ರಂಗೆ) ಬೃಹತ್ಕರ್ಮನೊಗೆವನು. ಆ ಬೃಹತ್ಕರ್ಮಂಗೆ [3]ಸೇನಜಿತೆಂಬವನು[3]; ಆ ಸೇನಜಿತಂಗೆ ಶ್ರುತಂಜಯನು; ಆ ಶ್ರುತಂಜಯಂಗೆ ವಿಪ್ರನೊಗೆವನು. ಆ ವಿಪ್ರಂಗೆ ಶುಚಿಯೆಂಬವನು; ಆ ಶುಚಿಗೆ ಕ್ಷೇಮ್ಯನು; ಆ ಕ್ಷೇಮ್ಯಂಗೆ ಸುವ್ರತನವತರಿಸುವನು. ಆ ಸುವ್ರತಂಗೆ ಧರ್ಮನು; ಆ ಧರ್ಮಂಗೆ ಸುಶ್ರವನೆಂಬ ಕುಮಾರನು; [4](ಆತನಿಗೆ ದೃಢಸೇನನು; ಆ ದೃಢಸೇನಂಗೆ ಸುಬಲನೆಂಬ ಕುಮಾರನೊಗೆವನು.)[4] ಆ ಸುಬಲಂಗೆ ಸುನೀತನೆಂಬ ನಂದನನು; [5](ಆ ಸುನೀತಂಗೆ ವಸುನೀತನೆಂಬ ತನಯನು.[5]) ವಸುನೀತಂಗೆ ಸತ್ಯಜಿತೆಂಬ ತನಯನು; ಆ ಸತ್ಯಜಿತಂಗೆ ವಿಶ್ವಜಿತೆಂಬ ತನುಜನು: ಆ ವಿಶ್ವಜಿತಂಗೆ "[6]ರಿಪುಂಜಯ[6]" ನೆಂಬ ತನುಜನು ಉದ್ಭವಿಸುವನು.

ಕೇಳು, ಮೈತ್ರೇಯ! ಈಗಳೊರೆದ ಮಾಗಧರಾದ ಬಾರ್ಹದ್ರಥ ದೊರೆಗಳು ಒಂದು ಸಾಸಿರ ಬರಿಸ ಭೂಮಿಯನಾಳ್ವರು.

ಎಂಬೀವಂಶವಿಸ್ತಾರ ವೃತ್ತಾಂತಮಂ ಶ್ರೀ ಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಒಳಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಇಪ್ಪತ್ತುಮೂಱನೆಯ ಅಧ್ಯಾಯಂ ಸಮಾಪ್ತಂ.

---

ಪಾ- 1. ಸೋಮನು-ಕ.ಮಾ. 2. ಗಿರಿಮಿತ್ರನು. 3. ಸೇನಜಿತನೆಂಬವನು-ಕ. ಮಾ.
4. ಸುಶ್ರವಂಗೆ ರುದ್ರಸೇನನೆಂಬ ಕುಮಾರನು, ಆ ರುದ್ರಸೇನಂಗೆ ಸುಮತಿಯೆಂಬ ಪುತ್ರನು, ಆ ಸುಮತಿಗೆ ಸುಬಲನೆಂಬ ಕುಮಾರನು—ಕ. ಮಾ.
5. ಸಂಸ್ಕೃತಮಾತೃಕೆಯಲ್ಲಿಲ್ಲ. 6. ಪುರಂಜಯ--ಕ. ಮಾ.

## ಇಪ್ಪತ್ತುನಾಲ್ಕನೆಯ ಅಧ್ಯಾಯ.

ಕೇಳು ಮೈತ್ರೇಯ! ಆ ಮಗಧವಂಶದೊಳು (ಬಾರ್ಹದ್ರಥರಲ್ಲಿ ಕಡೆಯವನಾಗಿ) ಕಲಿಯುಗದೊಳು ರಾಜ್ಯವನಾಳುವ [1]ರಿಪುಂಜಯ[1]ನೆಂಬ ರಾಯಂಗೆ ಮುನಿಕನೆಂಬವನು ಮಂತ್ರಿಯಾಗಿ ವರ್ತಿಸುವನು. ಆ ಮಂತ್ರಿಯು ತನ್ನೊಡೆಯನಾದ ರಿಪುಂಜಯನನು ಕೊಂದು ಪುತ್ರನಾದ† ಪ್ರದ್ಯೋತನೆಂಬವಂಗೆ ಪಟ್ಟವಂ ಕಟ್ಟುವನು. ಆ ಪ್ರದ್ಯೋತಂಗೆ [2]ಬಲಾಕ[2]ನೆಂಬ ಪುತ್ರನುದಿಸುವನು. ಆತಂಗೆ ವಿಶಾಖಯೂಪನು ಜನಿಸುವನು. ಆ ವಿಶಾಖಯೂಪಂಗೆ ಜನಕನೆಂಬ ಕುಮಾರನಾವಿರ್ಭವಿಸುವನು. ಆ ಜನಕಂಗೆ ನಂದಿವರ್ಧನನೆಂಬ ಸೂನು. ಆ ನಂದಿವರ್ಧನಂಗೆ [3]ನಂದಿ[3] ಯೆಂಬ ಪುತ್ರನು ಸಂಜನಿಸುವನು.

ಕೇಳು ಮೈತ್ರೇಯ! ಈ ಐವರು ಪ್ರದ್ಯೋತರೆಂಬ ಸಂಜ್ಞೆಯಂ ಪಡೆದು (ಎಂಟು) ನೂರು ಮುವತ್ತೆಂಟು ವರ್ಷಪರ್ಯಂತವು ರಾಜ್ಯವನಾಳ್ವರು.

ಆ ಪ್ರದ್ಯೋತರ ಕಡೆಯೊಳೊಗೆದ [4]ನಂದಿ[4]ಗೆ ಶಿಶುನಾಭನೆಂಬ ಮಗನು ಜನಿಸುವನು. ಆ ಶಿಶುನಾಭಂಗೆ ಕಾಕವರ್ಣನೆಂಬ ಅಣುಗನವತರಿಸುವನು. ಆ ಕಾಕವರ್ಣಂಗೆ ಕ್ಷೇಮಧರ್ಮನೆಂಬ ಮಗನು. ಆ ಕ್ಷೇಮಧರ್ಮಂಗೆ ಕ್ಷತ್ರೌಜನು. ಆತನ ಸೂನು ವಿಧಿಸಾರನು. ಆ ವಿಧಿಸಾರನ ಸೂನು ಅಜಾತಶತ್ರು. ಆತನ ಪುತ್ರನು ಅರ್ಭಕನು. ಅರ್ಭಕನ ತನುಜನು ಉದಯನು. ಆ ಉದಯಂಗೆ ನಂದಿವರ್ಧನನು. ಆ ನಂದಿವರ್ಧನಂಗೆ ಮಹಾನಂದಿಯೆಂಬ ನಂದನನು ಪುಟ್ಟುವನು.

ಕೇಳು ಮೈತ್ರೇಯ! ಈ ಪೇಳ್ದ ಶಿಶುನಾಭನ ಸಂತತಿಯ ದೊರೆಗಳು ಮುಂದೆ ಕಲಿಕಾಲದಲ್ಲಿ ಮುನ್ನೂ (ಱುವತ್ತೆರಡು) ವರ್ಷಪರ್ಯಂತರವು ರಾಜ್ಯವನಾಳುವರು.

---

ಟಿಪ್ಪಣಿ-†. ಸ್ವಪುತ್ರಂ ಎಂದರೆ ತನ್ನ ಮಗನಾದ-ಎಂದು ಸಂಸ್ಕೃತಮಾತೃಕೆಯಲ್ಲಿದೆ.

ಪಾ—1. ಪುರಂಜಯ – ಕ. ಮಾ. 2. ಕಾಲಕ—ಕ. ಮಾ.
3. 4. ಮಹಾನಂದಿ—ಕ. ಮಾ.

ಆ ಶಿಶುನಾಭನ ಸಂತತಿಯು ಕಡೆಯೊಳುದಿಸಿದ ಮಹಾನಂದಿಯೆಂಬ ಅರಸಂಗೆ ಶೂದ್ರಸ್ತ್ರೀಗರ್ಭದಲ್ಲಿ ಮಹಾಪದ್ಮನೆಂದೂ ನಂದನೆಂದೂ ಈರ್ವರಣುಗರೊಗೆದಾರು. [1]ಅವರಲ್ಲಿ ಅತಿಲುಬ್ಧನಾಗಿಯೂ, ಅತಿಬಲನಾಗಿಯೂ ಇದ್ದ ನಂದನೆಂಬ ಭೂಪತಿ ಎರಡನೆಯ ಪರಶುರಾಮನೋ ಎಂಬಂತೆ ಸಕಲ ಕ್ಷತ್ರಿಯರನು ಸಂಹರಿಸುವನು.[1] ಆ ಬಳಿಕ ಭೂಮಂಡಲವನು ಶೂದ್ರಜಾತಿಯವರೇ ಆಳುವರು. ಆ [2]ಮಹಾಪದ್ಮನೆಂಬ ನರಪತಿ[2] ಭೂಮಂಡಲವನೇಕಚ್ಛತ್ರದಲ್ಲಿ ಅನುಲ್ಲಂಘಿತಶಾಸನನಾಗಿ ಪರಿಪಾಲಿಸುವನು. ಆ ಮಹಾಪದ್ಮನೆಂಬರಸಂಗೆ ಸಮಾಲ್ಯನು ಮೊದಲಾದೆಂಟು ಮಂದಿ ಮಕ್ಕಳುದಿಸುವರು. (ಅವರು ಆ ಮಹಾಪದ್ಮನನಂತರ ಭೂಮಿಯನು ಅನುಭವಿಸುವರು.) [3]ಆ ಮಹಾಪದ್ಮನು ಆತನ ಮಕ್ಕಳೆಂಟುಮಂದಿಯೂ[3] ಕೂಡಿ ನೂರುಸಂವತ್ಸರದನ್ನೆಗಂ ಪೊಡವಿಯನಾಳ್ವರು.

(ಅನಂತರ ನಂದನನು ಆತನ ಪುತ್ರರು ಒಂಬತ್ತು ಮಂದಿಯನು ಕೌಟಿಲ್ಯನೆಂಬ ಪೆಸರುಳ್ಳ ಪಾರ್ವನೊರ್ವನು ನಾಶಮಾಡುವನು) ಆ ಮಹಾಪದ್ಮನ ವಂಶವು ಸಂತಾನವಿಲ್ಲದಿರಲಾಗಿ (ಮೌರ್ಯರು ಭೂಮಿಯನು ಆಳುವರು) ಆ ಕೌಟಿಲ್ಯನು ಆ ಕುಲವನುದ್ಧರಿಸಲೆಂದೆಣಿಸಿ ಮೌರ್ಯರೆಂಬ ಪೆಸರುಳ್ಳವರಲ್ಲಿ [4]ಚಂದ್ರಗುಪ್ತನೆಂಬ[4]ವಂಗೆ ರಾಜ್ಯಾಭಿಷೇಕಂಗೆಯ್ವನು ಆ ಚಂದ್ರಗುಪ್ತಂಗೆ ಬಿಂದುಸಾರನೆಂಬ ಮಗನುದಿಸುವನು. ಆ ಬಿಂದುಸಾರಂಗೆ ಅಶೋಕವರ್ಧನನು ಜನಿಸುವನು. ಅಶೋಕವರ್ಧನನಿಗೆ ಸುಯಶನೆಂಬ ಮಗ ಪುಟ್ಟುವನು. ಆ ಸುಯಶಂಗೆ ದಶರಥನೆಂಬ ಸೂನು; ಆತನಿಗೆ ಸಂಯುತನು ; ಆತನ ತನುಭವನು ಶಾಲಿಶೂಕನು ; ಆ ಶಾಲಿಶೂಕಂಗೆ ಸೋಮಶರ್ಮನು; ಆ ಸೋಮಶರ್ಮಂಗೆ ಶತಧನ್ವನು ; ಆ ಶತಧನ್ವಂಗೆ ಅನು

ಟೀಕು—1. ಈಕಡೆ ಸಂಸ್ಕೃತಮಾತೃಕೆಯಲ್ಲಿ ತಪ್ಪು ಬಿದ್ದಂತಿದೆ.

2. ಮಹಾಪದ್ಮಸಂಖ್ಯೆಯ (1000000000) ಸೈನ್ಯಕ್ಕೂ ಅಥವಾಧನಕ್ಕೆ ಪತಿಯಾಗಿದ್ದಕಾರಣ, ಆತನಿಗೆ ಮಹಾಪದ್ಮನೆಂಬ ಹೆಸರುಂಟಾಯಿತೆಂದು ವ್ಯಾಖ್ಯಾನಮಾಡಿದ್ದಾರೆ.

3. ಸಂಸ್ಕೃತಮಾತೃಕೆಯಪ್ರಕಾರ ಮಹಾಪದ್ಮನೆಂಟು ಮಂದಿಯೂ.

4. ನಂದನಿಗೆ ಮುರಾನಾಮಕಳಾದ ಭಾರ್ಯೆಯಲ್ಲಿ ಹುಟ್ಟಿದ ಚಂದ್ರಗುಪ್ತ— ಎಂದು ವ್ಯಾಖ್ಯಾನ ಮಾಡಿದೆ.

ಬೃಹದ್ರಥನೆಂಬ ಮಗನು ಜನಿಸುವನು.

ಕೇಳು ಮೈತ್ರೇಯ, ಈ ಹೇಳಿದ ಹತ್ತುಮಂದಿ ದೊರೆಗಳು ಮೌರ್ಯ್ಯರೆಂಬ ಹೆಸರುಳ್ಳವರು. ಇವರು ರಾಜ್ಯವನಾಳುವುದು ನೂರು ಮೂವತ್ತೇಳು ಅಬ್ದ ಪರ್ಯಂತರವು.

ಕೇಳು ಮೈತ್ರೇಯ, ಆ ಮೌರ್ಯ್ಯರೆಂಬ ಹಿಂಗೆಯ ಪೆಸರುಳ್ಳ ದೊರೆಗಳು ಅಭಾವರಪ್ಪುದು, ದಶಶುಂಗರೆಂಬುವರು ಅವನಿಯನಾಳ್ವರು. ಆದಶಶುಂಗರೆಂಬರಸುಗಳಲ್ಲಿ [1]ಪುಷ್ಯಮಿತ್ರ[1]ನೆಂಬ ಸೇನಾಪತಿಯು [2]ಸ್ವಾಮಿಯಂ[2] ಕೊಂದು ಧರಣಿಯನಾಳ್ವನು. (ಆತನ ಮಗನು ಅಗ್ನಿಮಿತ್ರನು, ಆ ಅಗ್ನಿಮಿತ್ರನಿಗೆ ಸುಜ್ಯೇಷ್ಠನೆಂಬ ಪುತ್ರನೊಗೆವನು ಸುಜ್ಯೇಷ್ಠನಿಗೆ ವಸುಮಿತ್ರನು; ವಸುಮಿತ್ರನಿಗೆ ಉದಂಕನು, ಉದಂಕನಿಗೆ ಪುಳಿಂದಕನೊಗೆವನು. ಆ ಪುಳಿಂದಕಂಗೆ ಘೋಷವಸುವು; ಆ ಘೋಷವಸುವಿಗೆ ವಜ್ರಮಿತ್ರನು. ಆ ವಜ್ರಮಿತ್ರಂಗೆ ಭಾಗವತನು ; ಆ ಭಾಗವತಂಗೆ ದೇವಭೂತಿಯು ಜನಿಸುವನು. ಕೇಳು ಮೈತ್ರೇಯ, ಈ ಹೇಳಿದ ಹತ್ತುಮಂದಿ ಶುಂಗರೆಂಬ ಅರಸರು ನೂರು ಹನ್ನೆರಡು ವರುಷ ಧರಣಿಯನಾಳ್ವರು) ಅನಂತರದಲ್ಲಿ ಕಣ್ವರೆಂಬ ಸಂಜ್ಞೆಯುಳ್ಳವರಿಗೆ ಭೂಮಂಡಲವೆಲ್ಲಾ ಸೇರುವುದು.

ಆ ಶುಂಗರಾಜನಾದ ದೇವಭೂತಿಯು ದುರ್ವ್ಯಸನಪರನಾಗಿರ್ಪನು. ಆತನನು ಆತನ ಮಂತ್ರಿಯಾದ ವಸುದೇವನೆಂಬ (ಪೆಸರುಳ್ಳ ಕಣ್ವನು) ಕೊಂದು ತಾನೇ ಧರೆಯನಾಳ್ವನು. ಆ ವಸುದೇವಂಗೆ ಭೂಮಿತ್ರನೆಂಬ ಪುತ್ರನುದಿಸುವನು. ಆ ಭೂಮಿತ್ರಂಗೆ ನಾರಾಯಣನೆಂಬವನುದ್ಭವಿಸುವನು. ಆ ನಾರಾಯಣಂಗೆ ಸುಶರ್ಮನೆಂಬ ಮಗನಾವಿರ್ಭವಿಸುವನು. ಈಪೇಳ್ದ ನಾಲ್ವರು ದೊರೆಗಳು ಕಾಣ್ವಾಯರೆಂಬ ಪೆಸರುಳ್ಳವರಾಗಿ ನಾಲ್ವತ್ತೈದು ವರುಷ ಪರ್ಯಂತರವು ಪೃಥ್ವಿಯನಾಳ್ವರು.

ಕೇಳು ಮೈತ್ರೇಯ, ಅನಂತರದಲ್ಲಿ ಆ ಕಾಣ್ವಾಯನೆಂದು ಸಂಜ್ಞೆಯುಳ್ಳ ಸುಶರ್ಮನೆಂಬ ದೊರೆಯನು ಅವನ ಭೃತ್ಯನಾದ [3]ಬಲಿಪುಚ್ಛಕನೆಂಬವನು[3] ಮಡುಹಿ ಬಲವಂತನಾಗಿ ಆಂಧ್ರಜಾತಿಯನಾಗಿ ಇಳೆಯನಾಳ್ವನು.

---

ಟೀಕು—1. ಈತನು ಶುಂಗರಾಜರಲ್ಲಿ ಮೊದಲನೆಯವನು.

ಪಾ—2. ಪಿರಿಯನಂ—ಕ. ಮಾ.

ಅನಂತರ [1] (ಆವನ ತಮ್ಮನಾಗ ಕೃಷ್ಣನೆಂಬುವನು ಪೃಥಿವೀಪತಿಯಾಗುವನು. ಆತನಿಗೆ ಶಾಂತಿಕರ್ಣಿ ಎಂಬುವನು; ಆತನಿಗೆ ಪೂರ್ಣೋತ್ಸಂಗನು; ಆತನ ಮಗನು ಶಾತಕರ್ಣಿಯು; ಆ ಶಾತಕರ್ಣಿಗೆ ಲಂಬೋದರನು; ಆತನಿಗೆ ಪಿಲಕನು; ಆತನಿಗೆ ಮೇಘಸ್ವಾತಿಯೆಂಬ ತನುಭವನು;[1]) ಆ ಮೇಘಸ್ವಾತಿಗೆ ಪಟುಮಂತನೊಗೆವನು. ಆ ಪಟುಮಂತಂಗೆ ಅರಿಷ್ಟಕರ್ಮನು ಪುಟ್ಟುವನು; ಆ ಅರಿಷ್ಟಕರ್ಮಂಗೆ [2]ಹಾಲಾಹಲನು[2] ಉದಿಸುವನು. ಆ ಹಾಲಾಹಲಂಗೆ [3]ಪಲಲಕನು,[3] (ಆ ಪಲಲಕಂಗೆ ಪುಳಿಂದಸೇನನು ಹುಟ್ಟುವನು. ಆ ಪುಳಿಂದಸೇನನಿಗೆ ಸುಂದರನು; ಆ ಸುಂದರಂಗೆ ಶಾತಕರ್ಣಿಯುದಿಸುವನು.) ಆ ಶಾತಕರ್ಣಿಗೆ [4]ಶಿವಸ್ವಾತಿಯು[4] ಪುಟ್ಟುವನು. ಆ ಶಿವಸ್ವಾತಿಗೆ [5]ಗೋಮತಿಪುತ್ರನು[5] ಮಗನು; ಆತನ ಮಗನು [5]ಪುಳಿಮಂತ[5]ನು; ಆ ಪುಳಿಮಂತಂಗೆ [6]ಶಾಂತಕರ್ಣಿ[6] ಸಂಭವಿಸುವನು. ಆ ಶಾಂತಕರ್ಣಿಗೆ ಶಿವಶ್ರೀಯೆಂಬವನೊಗೆವನು. ಆತಂಗೆ ಶಿವಸ್ಕಂದನು; ಆ ಶಿವಸ್ಕಂದಂಗೆ [7]ಯಜ್ಞಶ್ರೀಯು;[7] ಆ ಯಜ್ಞಶ್ರೀಗೆ [8]ದ್ವಿಯಜ್ಞನು[8]; ಆತಂಗೆ [9]ಚಂದ್ರಶ್ರೀಯೆಂಬಾತ್ಮಜನು[9]; ಆ ಚಂದ್ರಶ್ರೀಗೆ ಪುಲೋಮಾಪಿಯುವತರಿಸುವನು

ಕೇಳು ಮೈತ್ರೇಯ, ಈ ಹೇಳಿದಂಥ ಆಂಧ್ರಜಾತಿಯ ದೊರೆಗಳು ಸಾವಿರದಿನ್ನೂರು ಐವತ್ತಾರು ವರುಷಪರ್ಯಂತ ಭೂಚಕ್ರವನಾಳ್ವರು. ಈ ಆಂಧ್ರಜಾತಿಯ ರಾಯರು ಸಮಾಪ್ತಿಯಾದ ಬಳಿಕ ಆ ಆಂಧ್ರಭೃತ್ಯರೇಳು ಮಂದಿಗಳಾಳ್ವರು, ಆ ಆಂಧ್ರಭೃತ್ಯರ ಅನಂತರದಲ್ಲಿ ಆಭೀರರೆಂಬವರು ಹತ್ತುಮಂದಿಗಳಾಳ್ವರು. ಆಭೀರರಾದ ಬಳಿಕ ಹತ್ತುಮಂದಿ ಗರ್ದಭಿಗಳು

---

ಪಾ—1. ಆರಂತಿಕಂಗೆ ಕೃಷ್ಣನೆಂಬ ಪುತ್ರನೊಗೆವನು. ಆ ಕೃಷ್ಣಂಗೊರ್ವನು ತಮ್ಮನಂತೆ ಕಡುಸ್ನೇಹಿತನಾಗಿರ್ಪನು. ಆ ಸ್ನೇಹಿತಂಗೆ ತ್ರಿಶಾತಕರಣಿಯೆಂಬಣುಗನು. ಆ ತ್ರಿಶಾತಕರಣಿಗೆ ಸುದರ್ಶನನೆಂಬ ಸೂನು, ಆ ಸುದರ್ಶನಂಗೆ ಲಂಬೋದರನೆಂಬ ತನಯನು. ಆ ಲಂಬೋದರಂಗೆ ಬಲಕನೆಂಬ ತನುಭವನು; ಆ ಬಲಕಂಗೆ ಮೇಘಸ್ವನನೆಂಬ ತನುಜಾತನು—ಕ. ಮಾ.

2. ಹಾಲನು; 3. ಪತ್ತಲಕ—ಕ. ಮಾ.

4. ಗೋಮಂತಕನು. 5. ಪುಳಿಮಂತನು. 6. ವಿಶಾಕರಣಿ.

7. ಯಜ್ಞಾತಿ. 8. ದ್ವಿಯಜ್ಞಾತಿ. 9. ಚಂದ್ರವಿತೆಂಬಾತನು—ಇವು ಕ. ಮಾ.

ದೊರೆಗಳಾಗುವರು. ಆ ಗರ್ದಭಿಗಳಾಳಿದಮೇಲೆ ಹದಿನಾಱು ಮಂದಿ [1]ಶಕನೃಪತಿಗಳು[1] ಇಳೆಯ ರಕ್ಷಿಸುವರು. ಆ ನೃಪತಿಗಳಾದನಂತರದಲ್ಲಿ ಎಂಟುಮಂದಿ ಯವನರು ದೊರೆಗಳಪ್ಪರು. ಆ ಯವನರಾಳಿದಬಳಿಕ ಹದಿನಾಲ್ಕುಮಂದಿ [2]ತುರುಷ್ಕರ[2]ವನಿಯನಾಳ್ವರು. ಅವರಾದ ಬಳಿಕ [3]ಹದಿಮೂಱು[3] ಮಂದಿ ಮುಂಡರೆಂಬವರಾಳ್ವರು. ಆ ಮುಂಡರಾಳಿದ ಬಳಿಕ [4]ಪನ್ನೊಂದು[4] ಮಂದಿ ಮೌನರೆಂಬವರು ಈಉರ್ವಿಯ ಪರಿಪಾಲಿಸುವರು.

ಕೇಳು ಮೈತ್ರೇಯ, ಆಂಧ್ರಾದಿ ಮೌನರೆಂಬವರು ಕಡೆಯಾದ ದೊರೆಗಳು [5]ಸಾವಿರದ ಮುನ್ನೂಱುತೊಂಬತ್ತು[5] ವರುಷಪರ್ಯಂತರವು ಪೊಡವಿಯನಾಳ್ವರು. ಇವರಿಬನಿರಾಳ್ದಬಳಿಕ ಪನ್ನೊಂದುಮಂದಿ [6]ಪೌರರೆಂಬ[6] ಪೆಸರುಳ್ಳವರು ದೊರೆಗಳು [7]ಮುನ್ನೂಱುಹತ್ತು[7] ವರ್ಷದನ್ನೆಗಂ ಧರಣಿಯನಾಳ್ವರು. ಈ ಪೌರರುಡುಗಿದಮೇಲೆ [8]ಕಿಲಕಿಲ[8]ರೆಂಬ ಯವನರು ದೊರೆಗಳಾಗಿ ವರ್ತಿಪರು. ಇವರಿನಿಬರು ಮೂರ್ಧಾಭಿಷೇಕವಿಲ್ಲದವರು. [9]ಈ ಕಿಲಕಿಲರೆಂಬ ಯವನರಾಳಿದಮೇಲೆ ವಿಂಧ್ಯಶಕ್ತಿಯೆಂಬವನೊಗೆವನು. ಆತಱುವಾಯ ರಾಜ್ಯವಾಳ್ವನು.[9] ಆ ವಿಂಧ್ಯಶಕ್ತಿಗೆ [10]ಪುರಂಜಯ[10]ನೆಂಬ ಅಣುಗನೊಗೆವನು. ಆ ಪುರಂಜಯಂಗೆ [11]ರಾಮಚಂದ್ರ[11]ನೆಂಬ ಮಗನುದಿಸುವನು. ಆತಂಗೆ[12]ಧರ್ಮವರ್ಮ[12]ನುದಿಸುವನು. ಆ ಧರ್ಮವರ್ಮಂಗೆ ವಂಗನು; [13]ಆ ವಂಗನ ಸೂನು ಭೂಸಂದನನು[13] ಆ ಭೂನಂದನನ ಸೂನು

---

ಪಾ—1. ಸಂಸ್ಕೃತಮಾತೃಕೆಯಲ್ಲಿ—ಭೂಪತಯಃ ಎಂದು ಮಾತ್ರ ಇದೆ.
2. ತುಷ್ಕರು. 3. ಮೂರು. 4. ಹತ್ತು. 1—4 ವರೆಗೆ ಕ. ಮಾ
5. ಸಾವಿರದ ತೊಂಭತ್ತು. 6. ಮೌನರೆಂಬ. 7. ಮೂನ್ನೂಱು
8. ಕೈಂಕಿಲರೆಂಬ. 5—8 ಸಂಸ್ಕೃತ ಮಾತೃಕೆಯಪ್ರಕಾರ ಪಾಠಗಳಿರಬೇಕು.
9. ತೇಷಾಮಪತ್ಯಂ ವಿಂಧ್ಯಶಕ್ತಿಃ ಎಂದು ಸಂಸ್ಕೃತಮಾತೃಕೆ.
10. ಪರಪುರಂಜಯ—ಕ. ಮಾ. 11. ವಾಮಚಕ್ರ—ಕ ಮಾ.
12. ಧರ್ಮಾಂಬರ—ಕ. ಮಾ.

ಟಿಪಣಿ—13. "ತತೋ ಭೂನ್ನಂದನಃ" ಎಂದು ಸಂಸ್ಕೃತಮಾತೃಕೆ. ಕನ್ನಡಮಾತೃಕೆಗೆ ಮೂಲಪ್ರತಿಯಲ್ಲಿ "ತತೋಭೂನಂದನಃ" ಎಂದಿರಬಹುದು. ಅದರ ಪ್ರಕಾರ,—ವಂಗನಸೂನು ಭೂನಂದನನು, ಎಂದು ಕ. ಮಾ. ಇದೆ.

[1]ಸುನಂದಿಯು.[1] ಆತನಾದಬಳಿಕ ಅವನನುಜನಾದ[2]ನಂದಿಯುಶನೆಂಬ[2]ವನಾಳ್ವನು. ಅವನಾಳಿದಬಳಿಕ [3]ಶುಕ್ರಪ್ರವೀರ[3] ನೆಂಬವನಾಳ್ವನು. ಇವರಿಸಿಬರುಂ ನೂಱು ಆಱುವರ್ಷಪರ್ಯಂತ ಅವನಿಯನಾಳ್ವರು. [4]ಈ ದೊರೆಗಳಾದಮೇಲೆ[4] ಇವರ ಮಕ್ಕಳು ಹದಿಮೂಱು ಮಂದಿ ಆಳ್ವರು. ಆಹದಿಮೂಱುಮಂದಿಯಾದನಂತರ ಮೂಱು ಮಂದಿ ಬಾಹ್ಲಿಕರೆಂಬವರಾಳ್ವರು. [5](ಅವರಾದ ಬಳಿಕ ಪುಷ್ಯಮಿತ್ರರು ಆಳುವರು. ಅವರಸಂತರದಲ್ಲಿ)[5] ಪಟುಮಿತ್ರರೆಂಬ ಹೆಸರುಳ್ಳ ಹದಿಮೂಱುಮಂದಿ ಆಳ್ವರು. ಅವರನಂತರದೊಳು [6]ಏಕಲರೆಂಬ[6]ರವನಿಯನಾಳ್ವರು. [7]ಅವರುಡುಗಿದಮೇಲೆ ಮತ್ತೇಳುಮಂದಿ ಆಂಧ್ರರುರ್ವಿಯುಂ ಪಾಲಿಸುವರು.[7] ಕೋಸಲದೇಶದೊಳು ಒಂಭತ್ತುಮಂದಿ ದೊರೆಗಳಾಳುವರು. ಈ ಒಂಭತ್ತು ಮಂದಿಯೂ (ನಿಷದ ದೇಶಾಧಿಪತಿಗಳಾಗಿ) ನೈಷಧರೆಂಬ ನಾಮವಂ ಪಡೆದಿರ್ಪರು. ಮಾಗಧದೇಶದಲ್ಲಿ ವಿಶ್ವಸ್ಫಾಟಿಕನೆಂಬವನು ಅರಸಾಗಿ [8]ಜಾತ್ಯಂತರವನು ಮಾಳ್ಪನು.[8] ಆ ವಿಶ್ವಸ್ಫಾಟಿಕನು ಕೈವರ್ತಪಟುಪುಳಿಂದರೆಂದು ಹೆಸರುಳ್ಳ ಪಾರ್ವರನು ರಾಜ್ಯಾಧಿಪತ್ಯದೊಳ್ ಸ್ಥಾಪಿಸುವನು. ನವನಾಗರೆಂಬ ಪೆಸರುಳ್ಳವರು ಸಕಲಕ್ಷತ್ರಜಾತಿಯನ್ನು ಜಯಿಸಿ ಪದ್ಮಾವತಿಯೆಂಬ ಪಟ್ಟಣದಲ್ಲಿ ರಾಜ್ಯವನು ಪರಿಪಾಲಿಸುವರು. ಗಂಗಾತೀರದೊಳಿರ್ಪ ಪ್ರಯಾಗವನೂ [9]ಗಯೆಯೆಂಬ ದೇಶಗಳನೂ ಗುಪ್ತವೆಂಬ ದೇಶಗಳನೂ ಮಾಗಧರೆಂಬವರು

ಪಾ—1. ಸುಷ್ಠಿನಂದಿ. 2. ನಂದಿ ಕ. ಮಾ 3. ಶುಕ್ರಃಪ್ರವೀರಃ—ಸಂ. ಮಾ.
4. ಈ ಶುಕ್ರಪ್ರವೀರನೆಂಬ ಪೆಸರುಳ್ಳ ದೊರೆಗಳಾದ ಬಳಿಕ—ಕ. ಮಾ.
5. ಆಬಾಹ್ಲಿಕರಾದ ಬಳಿಕ ಪುಷ್ಯಮಿತ್ರನೆಂಬವ ಅರಸಾಗುವನು. ಆ ಪುಷ್ಯಮಿತ್ರನಾದಬಳಿಕ—ಕ. ಮಾ.
9. ಪ್ರಯಾಗವೆಂಬ ಪುರವನು ಮಾಗಧದೇಶದ ಭೂಮಿಯನು ಮಗಧರೆಂಬವರು ಭಸ್ಮಂಗೆಯ್ದು ಆಳ್ವರು—ಕ. ಮಾ.

ಟೀಕು-6. ಏಕಲರು ಎಂಬುದಕ್ಕೆ ಖಂಡಮಂಡಲಪತಿಗಳೆಂದು ಶ್ರೀಧರವ್ಯಾಖ್ಯಾನ.
7. ಸಂಸ್ಕೃತಮಾತೃಕೆಯಲ್ಲಿ ಏಕಲಾಶ್ಚಸಪ್ತಾಂಧ್ರಾಃ ಎಂದಿದೆ. ಇದರ ಪ್ರಕಾರ ಖಂಡಮಂಡಲಪತಿಗಳಾಗ ಏಳುಮಂದಿ ಆಂಧ್ರರು ಆಳ್ವರು ಎಂದು ಅರ್ಥವಾಗುತ್ತದೆ. ಈ ಪಾಠವೇ ಸಮಂಜಸವಾಗಿ ತೋರುತ್ತದೆ.

ಟೀಕು—8. ಕ್ಷತ್ರವಂಶವನ್ನು ನಾಶಮಾಡಿ ಕೈವರ್ತರೆಂಬವರನ್ನು ರಾಜ್ಯದಲ್ಲಿ ಸ್ಥಾಪಿಸುವನು ಎಂದರ್ಥ.

ಆಳುವರು. [1]ಕೋಸಲ ಆಂಧ್ರ ಪುಂಡ್ರ ತಾಮ್ರಲಿಪ್ತದೇಶ[1]ಭೂಮಿಯನು ಸಮುದ್ರತಟಪುರಿಯಲ್ಲಿ[1] ದೇವರಕ್ಷಿತನೆಂಬವನಾಳ್ವನು. ಕಳಿಂಗಮಾಹಿಷಮಹೇಂದ್ರದೇಶದೂರ್ವಿಯನು [2]ಗುಹರೆಂಬವರು[2] ಆಳ್ವರು. ನೈಷದ ನೈಮಿಷಿಕಕಾಲಕೋಶಕರವೆಂಬ ಪೆಸರುಳ್ಳ ಜನಪದಗಳನು ಮಣಿ[3]ಧಾತ್ಯಕ[3]ವಂಶ್ಯರು ರಕ್ಷಿಸುವರು. ತ್ರೈರಾಜ್ಯಮುಷಿಕವೆಂಬ ಜನಪದಗಳನು [4]ಕನಕನೆಂಬ ಅಭಿಧಾನವುಳ್ಳನು ಪೊರೆವನು.[4] ಸೌರಾಷ್ಟ್ರ ಅವಂತಿ ಶೂದ್ರ ಆಭೀರ ಮತ್ತು ನರ್ಮದ ಮರುಭೂಮಿ ದೇಶಂಗಳನು ವ್ರಾತ್ಯದ್ವಿಜರೂ ಶೂದ್ರರೂ ([5]ಇನ್ನೂ ಕೆಲವರು[5])ಪಾಲಿಸುವರು. [6]ಸಿಂಧುತಟ ದಾವಿಕದೇಶ ಚಂದ್ರಭಾಗೆ[6]ಕಾಶ್ಮೀರದೇಶಗಳನು ವ್ರಾತ್ಯಮ್ಲೇಚ್ಛ [7]ಶೂದ್ರಾದಿಗಳು[7] ಪಾಲಿಸುವರು.

ಕೇಳು ಮೈತ್ರೇಯ, ಈ ಪೂರ್ವೋಕ್ತರಾಯರೆಲ್ಲರುಂ ಅಲ್ಲಲ್ಲಿ ನಾನಾ ವಿಷಯಗಳನು ಸಮಕಾಲದೊಳಾಳುತ್ತನುಭವಿಸುವರು. ಇವರಿನಿಬರುಂ ರಾಜ್ಯಭರಣಮಂ ಮಾಳ್ಪಲ್ಲಿ ಅಲ್ಪಪ್ರಸಾದವುಳ್ಳವರಾಗಿ ಅಧಿಕಕೋಪವಂತರಾಗಿ ಎಲ್ಲಾ ಕಾಲದಲ್ಲಿಯು ಅನೃತಾಧರ್ಮಾಸಕ್ತರಾಗಿ ಪರಸ್ವಹರಣದಲ್ಲಿ ಬಹಳಾಸೆಯುಳ್ಳವರಾಗಿ ಸ್ವಲ್ಪ ಬಲಯುತರಾಗಿ ಸ್ತ್ರೀಬಾಲವೃದ್ಧ ಗೋವಧೆಗಳನೆ ಮಾಳ್ಪವರಾಗಿ(ತಮಸ್ಪ್ರಾಯರಾಗಿ) ಅಲ್ಪಾಯುಸ್ಸಿನಿಂದ ಪುಟ್ಟಿ ಆಗಳೇ ಮಡಿವುದರಿಂದ ಉದಿತಾಸ್ತಮಿತಪ್ರಾಯರಾಗಿ ಮನವೆಳಸಿದಂತೆ ಕಿಱಿದಾದ ಧರ್ಮಂಗಳಂ ಕಿಱಿದಾಗಿ ನಡೆಸುತ್ತ ಲುಬ್ಧರಾಗಿ ದೊರೆಗಳೆಂದನಿಸಿಕೊಂಡು ವರ್ತಿಸುವರು. ಕೇಳು, ಮೈತ್ರೇಯ, ಈ ಪೇಳ್ದ ಭೂಪತಿಗಳೆಂತು ದುಶ್ಶೀಲರಾಗಿರ್ಪರೊ ಅಂತಿವರ ಮಿತ್ರರುಂ ರಾಷ್ಟ್ರಜನಂಗಳುಂ ಪರಿವಾರವುಂ ದುರಾಚಾರರಾಗಿ ತದನುವರ್ತಿಗಳಾಗಿ ರಾಜಾಶ್ರಯವುತಮಗುಂಟೆಂಬ ಹಮ್ಮುಳ್ಳವರಾಗಿ, ಮ್ಲೇಚ್ಛಾಚಾರವುಳ್ಳವರಾಗಿ, ವಿಪರ್ಯಾಸದಿಂದ ಪ್ರವರ್ತಿಸುವಂಥವರಾಗಿ, ಈ ಕಾಣಿಕೆ ಆ ಕಾಣಿಕೆ ಈ ಸುಂಕ

---

ಪಾ—1. ತಾಮ್ರಲಿಪ್ತಸಮತಟಪುರೀಂಚ— ಎಂದು ಸಂಸ್ಕೃತಮಾತೃಕೆ; ಇದು ತಪ್ಪಾಗಿರಬಹುದು. 2. ಗುಹನೆಂಬವನಾಳ್ವನು—ಕ. ಮಾ. 3. ಪರ—ಕ. ಮಾ. 4. ಕನಕರೆಂಬವರು ಪೊರೆವರು—ಕ. ಮಾ. 5. ಆಭೀರರೂ—ಕ. ಮಾ. 7. ಅಪಾಷಿಪ್ರಯೋಷ್ಠಿಚಂದ್ರಭಾಗೆಯೆಂಬ ನದೀತೀರಸ್ಥಳವಾದ—ಕ. ಮಾ. 7. ಶೂದ್ರರಾದವರು—ಕ. ಮಾ.

ಆ ಸುಂಕ ಬರಬೇಕೆಂದು ಸಕಲ ಪ್ರಜೆಗಳು ಮುಳುಗಿ ಪೋಪಂತೆ (ಮಾಳ್ಪರು.) ಇಂತಪ್ಪ ದುರ್ವರ್ತನ ತತ್ಪರರಾದ ದೊರೆಗಳ ವಿಷಯಂಗಳಲ್ಲಿ ಸಂತತವು ([1]ಧರ್ಮಾರ್ಥಗಳು ಅಲ್ಪಾಲ್ಪವಾಗಿ ಕ್ಷಯಿಸುತ್ತ ಬರುವುದರಿಂದ[1]) ಸಕಲಪ್ರಜೆಗಳು ಅಲ್ಪಾಯುಷ್ಯವಾಗಿ ನಷ್ಟವಾಗಿ ಪೋಪರು. ಇನಿತುಮಲ್ಲದೆ ಆ ಕಲಿಕಾಲದಲ್ಲಿ ಅರ್ಥವುಳ್ಳವನೇ ([2]ಕುಲೀನನಾಗುವನು[2]) ; ಕಾಯಬಲವೇ (ಅಶೇಷ) ಧರ್ಮಕ್ಕೆ ಕಾರಣವೆನಿಸುವುದು ; (ಅಭಿರುಚಿಯೇ ದಾಂಪತ್ಯಸಂಬಂಧಕ್ಕೆ ಕಾರಣವಾಗುವುದು ; ಸ್ತ್ರೀತ್ವವೇ ಉಪಭೋಗ ಹೇತುವಾಗುವುದು ; ([3]ಉನ್ನತವಾದ ಗಿರಿತಟದಲ್ಲಿ ನೀರುಳ್ಳ ಸ್ಥಲವೇ ವಾಸಯೋಗ್ಯತೆಗೆ ಕಾರಣವಾಗುವುದು[3]) ; ಯಜ್ಞೋಪವೀತಮಾತ್ರವೇ ಬ್ರಾಹ್ಮಣತ್ವಕ್ಕೆ ಕಾರಣವಪ್ಪುದು ; ಗಂಡಕಮಂಡಲು ಕಾಷಾಯಧಾರಣಮಾತ್ರವೇ ಯತ್ಯಾಶ್ರಮಕ್ಕೆ ಆವರಣವೆನಿಪ್ಪುದು ; [4]ಅನೃತವೇ ವ್ಯವಹಾರದಲ್ಲಿ ಜಯಹೇತುವಾಗುವುದು.[4] ಅನ್ಯಾಯಾರ್ಜನೆಯೇ ವೃತ್ತಿಗೆ ಕಾರಣವು, ದೌರ್ಬಲ್ಯವೇ ಅವೃತ್ತಿಗೆ ಕಾರಣವಾಗುವುದು. ಭಯವಿಲ್ಲದೆ ಪಲತೆಱನಾಗಿ ನುಡಿದ ಮಾತುಗಳೇ ಪಾಂಡಿತ್ಯಕ್ಕೆ ಹೇತುವೆನಿಸುವುದು. ಅನಾಢ್ಯತ್ವವೇ ಸಾಧುತ್ವಕ್ಕೆ ಹೇತುವಪ್ಪುದು. ಸ್ನಾನಮಾತ್ರವೇ ಪವಿತ್ರತ್ವಕ್ಕೆ ಹೇತುವೇ ಆಗಿಪ್ಪುದು ; ([5]ದಾನವೇ ಧರ್ಮ ಹೇತುವಪ್ಪುದು[5]). ತಮ್ಮತಮ್ಮ ಅಂಗೀಕಾರವೇ ವಿವಾಹಕ್ಕೆ ಕಾರಣವೆನಿಪ್ಪುದು. "[6]ವಸ್ತ್ರಾಭರಣಾದಿ[6]" ವೇಷಧಾರಿಯಾದವನೇ ಪಾತ್ರನೆನಿಸಿಕೊಂಬನು. ತಾನಿರ್ಪತಾಣಕ್ಕೆ ದೂರವಾದ ಒಳಿಯೇ ತೀರ್ಥವೆನಿಸಿಕೊಂಬುದು. (ಕಪಟವೇಷ

---

ಪಾ—1. ಬುದ್ಧಿಕ್ಷಯು ಕಿರಿದಾದುದರಿಂದ ಧರ್ಮಸಂಪಾದನೆ ಲೇಶವಾದರೂ ಇಲ್ಲವಾಗಿರ್ಪುದರಿಂದ—ಕ. ಮಾ. 2. ಕೂಲಿಯು ಮಾಡುವನು—ಕ. ಮಾ.; ಸಂಸ್ಕೃತ ಮಾತೃಕೆಯುಪ್ರಕಾರ—ಅರ್ಥವೇ ಸತ್ಕುಲದಲ್ಲಿ ಹುಟ್ಟಿದವನೆನಿಸಿಕೊಂಬುದಕ್ಕೆ ಕಾರಣವು ಎಂದಿರಬೇಕು.

ಟೀಕು—3. ಉನ್ನತವಾಗಿಯೂ ನೀರುಳ್ಳದಾಗಿಯುರುವುದೇ ವಾಸಕ್ಕೆ ಕಾರಣವಾಗುವುದೇ ಹೊರತು ಪುಣ್ಯಕ್ಷೇತ್ರಗಳಾಗುವುದಿಲ್ಲವೆಂದಭಿಪ್ರಾಯ.

4. ಅನೃತಚೌರ್ಯಂಗಳೇ ವ್ಯವಹಾರಕ್ಕೆ ಕಾರಣ—ಕ. ಮಾ.
5. ಯಾಗಾದಿಗಳಲ್ಲಿ ದಾನವು ಎಂದು ವ್ಯಾಖ್ಯಾನ ಮಾಡಿದ್ದಾರೆ.
6. ಸದ್ವೇಷಧಾರ್ಯೇವ—ಸಂ. ಮಾ.; ಸದ್ವೇಷಧಾರಿಯೆಂದರೆ ದಾಂಭಿಕನು.

*

ಧಾರಣವೇ ಮಹತ್ವಕ್ಕೆ ಕಾರಣವಾಗುವುದು.) ಕೇಳು ಮೈತ್ರೇಯ, ಈ ರೀತಿಯಲ್ಲಿ ಬಹುದೋಷಂಗಳಡಿಕಿರಿದಿರ್ಪ ಭೂಮಂಡಲದೊಳ್ ಆವ ಜಾತಿಯೊಳಾವವನು ಬಲವಂತನಾಗಿರ್ಪನೊ ಅವನೇ ದೊರೆಯಾಗಿ ರಾಜ್ಯವನಾಳುವನು. ಈ ಪ್ರಕಾರದಲ್ಲಿ ಅತ್ಯಂತ ಲೋಭದಿಂದ ದೊರೆಗಳೆಸಗುವ ಕರಶೂಲಾದಿ ಪೀಡೆಗಳಿಂದ ಕಣ್ಗೆಟ್ಟ ಪ್ರಜೆಗಳು ನಿಲಲಾಱದೆ ಪರ್ವತದ್ರೋಣಿಗಳ ತಾಣವನಾಶ್ರಯಿಸಿಕೊಂಡು ಕಾಡಿನಲ್ಲಿರ್ಪ ಮಧುಶಾಖ ಮೂಲಫಲಪತ್ರಪುಷ್ಪಾದ್ಯಾಹಾರಂಗಳಂ ಕೊಳುತ್ತ ನಾರಸೀರೆ ಸೆಣಬಿನ ಗೋಣಿ ದಟ್ಟದೊಡ್ಡಿತಾದ ಪರ್ಣಂಗಳು ಮೊದಲಾದ ಉಡಿಗೆಗಳನುಟ್ಟು ಶೀತವಾತಾತಪವೃಷ್ಟಿಗಳ ವ್ಯಾಕುಳವನು (ಸೈರಿಸುವಂತಪ್ಪರು.) ಮನುಜರೊಳೊರ್ವರಾದರೂ ಇಪ್ಪತ್ತು ಮೂಱುವರ್ಷ ಪರ್ಯಂತ ಅಸುವಿಡಿಯಲಾಱದೆ ಅಳಿದು ಪೋಪರು. ಅದುಕಾರಣದಿಂ †(ಈ ಕಲಿಯುಗದಲ್ಲಿ) ಭೂಮಿಯೊಳೆಲ್ಲಿಯುಂ ಶ್ರೌತಸ್ಮಾರ್ತಧರ್ಮಂಗಳ ಬೆಳವಿಗೆಯುಡುಗಿಪೋಗುವುದಱಿಂದ ಅಭಿವೃದ್ಧಿಯಂ ಪಡೆಯದೆ ನಿಖಿಲಜನವು ನಷ್ಟಪ್ರಾಯವಪ್ಪುದು.

ಕೇಳು ಮೈತ್ರೇಯ, ಈ ರೀತಿಯಲ್ಲಿ ಕಲಿಯುಗದೊಳೆಲ್ಲ ಧರ್ಮಕರ್ಮಮರ್ಯಾದೆಗಳು ಕ್ಷೀಣತ್ವವನೆಯ್ದುತ್ತಿರಲಾಗಿ—ಅಶೇಷಜಗತ್ಸ್ರಷ್ಟವಾದ ಚರಾಚರಗುರುವಾದ ಆದಿಮಧ್ಯಾನ್ತರಹಿತನಾದ ವೇದವೇದಾಂತಸುಯನಾದ ಸರ್ವಾಂತರ್ಯಾಮಿಯಾದ ಪರಬ್ರಹ್ಮಸ್ವರೂಪಿಯಾದ ಷಡ್ಗುಣೈಶ್ವರ್ಯಸಂಪನ್ನನಾದ ಪರವಾಸುದೇವನಂಶಾವತಾರವಾದ ಕಲ್ಕಿಮೂರ್ತಿಯು ಶಂಬಳಗ್ರಾಮದಲ್ಲಿ ಪ್ರಧಾನನಾದ [1]ವಿಷ್ಣುಶರ್ಮ[1]ನೆಂಬೊಬ್ಬ ವಿಪ್ರೋತ್ತಮನ ಗೃಹದಲ್ಲಿ ಅಷ್ಟಗುಣಪರಿಪೂರ್ಣನಾಗಿ ಅವತರಿಸಿ ಅನಂತಶಕ್ತಿಯುಳ್ಳವನಾಗಿ ಕ್ರೂರರಾಗಿ ದುರಾಚಾರರಾಗಿ ವರ್ತಿಸುವಂಥ ಮ್ಲೇಚ್ಛರನೂ ದಸ್ಯುಗಳನೂ ಇತರ ದುಷ್ಟಪ್ರಾಣಿಗಳನೂ ಸಂಹರಿಸುವನು. ಕೇಳು ಮೈತ್ರೇಯ, ಈ ರೀತಿಯಲ್ಲಿ ದುಷ್ಟರನ್ನು ಸಂಹರಿಸಿದ ಬಳಿಕ ಕಲ್ಕಿಮೂರ್ತಿಯು ಸಕಲ ಧರ್ಮವನು ಸ್ಥಾಪಿಸುವನು. ಕಲಿಯುಗದ ಕಡೆಯದಿನ ರಾತ್ರಿಯಸಮಯದಲ್ಲಿ ನಿದ್ರೆಗೈದು ಎಚ್ಚಱಿಕೆವಡೆದಂಥ ಮನುಷ್ಯರ ಬುದ್ಧಿಯು ಕ್ರಮವಾಗಿರುವಂತೆ, (ಅವರ ಬುದ್ಧಿಯೂ) ನಿರ್ಮಳವಾಗಿ ರಜಸ್ತಮೋಗುಣಂಗಳುಡುಗಿ

---

ಪಾ—†. ಸಕಲಜನವು ಅಭಿವೃದ್ಧಿಯಂ ಪಡೆಯದೆ ನಷ್ಟವಪ್ಪುದು-ಎಂದು ಒಂದು ವಾಕ್ಯ ಕ. ಮಾತೃಕೆಯಲ್ಲಿ ಅಧಿಕವಿದೆ. 1. ವಿಷ್ಣುಯಶಸ್ಸಿನ—ಸಂ. ಮಾ.

ಸತ್ವಗುಣಭರಿತವಾಗಿರ್ಪುದು. ಆ ಬಳಿಕ ಪ್ರಜಾಸೃಷ್ಟಿಗೆ ಆಗಳಿನ ಕಾಲಸ್ಥರಾಗಿರ್ಪ ಮನುಜರು ವೃದ್ಧರಾದರೂ ಅವರೇ ಬೀಜಭೂತರಾಗಿ ಅವರಿಗೆ ಸಂತಾನಪರಂಪರೆಯುಂಟಾಗುವುದು. ಅಂತು ವೃದ್ಧರಾದ ನಿರ್ಮಲಾಂತಃಕರಣರಾದ ಮಾನವರಿಗೆ ಸಂಭವಿಸಿದಂಥ ಮಕ್ಕಳು ಮಕ್ಕಳಿಗೆ ಕೃತಯುಗದ ಧರ್ಮದನುಸಾರಿಯಾಗಿ ಬುದ್ಧಿವಿಶೇಷ ಸಮಜನಿಸಿ ಸುಖದಲ್ಲಿ ಬಾಳ್ವರು. ಆವ ಸಮಯದಲ್ಲಿ ಕೃತಯುಗವು ಬರುವುದೆಂದರೆ, ಹೀಗೆ ಹೇಳಲ್ಪಟ್ಟಿದೆ:—

ಶ್ಲೋ|| ಯಥಾ ಚಂದ್ರಶ್ಚ ಸೂರ್ಯಶ್ಚ ತಥಾ ತಿಷ್ಯೋ ಬೃಹಸ್ಪತಿಃ |
ಏಕರಾಶೌ ಸಮೇಷ್ಯಂತಿ ತದಾ ಭವತಿ ವೈ ಕೃತಂ ||

ಟೀಕು — ಕೇಳು ಮೈತ್ರೇಯ, ಆವ ಸಮಯದಲ್ಲಿ ಚಂದ್ರನೂ ಸೂರ್ಯನೂ ಶುಕ್ರನೂ ಬೃಹಸ್ಪತಿಯೂ ಒಂದೇ ರಾಶಿಯೊಳ್ ಕೂಡುವರು, ಆ ಕಾಲವೇ [1]ಕೃತಯುಗ[1]ವೆನಿಸುವುದು.

ಕೇಳು ಮೈತ್ರೇಯ, ಈ ರೀತಿಯಲ್ಲಿ ಅತೀತಕಾಲದ ಹಿಂತಣ ದೊರೆಗಳ ವಂಶಪರಂಪರೆಯನೂ ವರ್ತಮಾನಕಾಲದರಸುಗಳ ಕುಲದ ಪರಿವಿಡಿಯನೂ ಭವಿಷ್ಯತ್ಕಾಲದಲ್ಲಿ ನೆಗಳ್ತೆಯಂ ಪಡೆವ ಭೂಪಾಲರನ್ವಯವನೂ ಹೇಳಿದೆವು. ಕೇಳು ಮೈತ್ರೇಯ, ಅಭಿಮನ್ಯುವಿನ ಕುಮಾರನಾದ ಪರೀಕ್ಷಿತ ಮಹಾರಾಜನ ಜನ್ಮವು ಆರಭ್ಯವಾಗಿ ನಂದನನೆಂಬವನರಸುತನವು ಕಡೆಯಾಗುವುದೊ ಆ ಕಾಲಕ್ಕೆ ಈ ಕಲಿಯುಗದಲ್ಲಿ ಸಾಸಿರದಯ್ನೂಱು ವರುಷವೆನಿಸುವುದು. ಸಪ್ತರ್ಷಿಗಳ ([2]ಮಂಡಲದೊಳಾವ[2]) ಎರಡು ನಕ್ಷತ್ರಗಳು ಮುಂಚಿತಾಗಿ ಗಗನದೊಳುದಿಸಿ ಕಾಣಲ್ಪಡುತಿರ್ಪವೋ, ಅವೆರಡಱ ಮಧ್ಯದೊ(ಳಾವ) ನಕ್ಷತ್ರವು ಓರೆಪೋರೆಯಿಲ್ಲದೆ ಸಮಾನವಾಗಿ ರಾತ್ರಿಯಲ್ಲಿ ಗೋಚರಿಸುತಿರ್ಪುದು ಆ ನಕ್ಷತ್ರದೊಡನೆಯೇ ಕೂಡಿ ಸಪ್ತರ್ಷಿಗಳು ಮನುಷ್ಯರ ನೂಱುವರುಷ ಪರ್ಯಂತ ಇರ್ಪರು. ಕೇಳು ಮೈತ್ರೇಯಾ, ಪರೀಕ್ಷಿದ್ರಾಜನು ರಾಜ್ಯವನಾಳ್ವ ಸಮಯದಲ್ಲಿ ಈ ಸಪ್ತರ್ಷಿಗಳು ಮಖಾನಕ್ಷತ್ರಕ್ಕೆ ಸರಿಯಾಗಿ ಗಗನದೆಡೆಯೊಳಿದ್ದರು. ಆಗಳಿನ ಕಾಲಕ್ಕೆ ಗುಣಿಸಿದೊಡೆ ಕಲಿ ಬಂದು ಸಾವಿರದ ಇನ್ನೂಱು ವರುಷವಾದುದು. ಆವ ಸಮಯದಲ್ಲಿ (ವಸುದೇವಕುಲದಲ್ಲಿ ಅವತರಿಸಿದ ಭಗವದಂಶವಾದ ಶ್ರೀ

---

ಪಾ.— 1. ಕೃತಯುಗ ಧರ್ಮ—ಕ. ಮಾ.  2. ಮಧ್ಯದೊಳಾವ—ಕ. ಮಾ.

ಕೃಷ್ಣನು ವೈಕುಂಠಕ್ಕೆ ಬಿಜಯಂಗೈದನೋ, ಆಗ ಕಲಿಪ್ರವೇಶವಾಯಿತೆಂದು ತಿಳಿದು ಆ ಕೃಷ್ಣಸ್ವಾಮಿಯೆನ್ನವರಂ ಪಾದಪದ್ಮಂಗಳಿಂ ಈ ಭೂಮಿಯುಂ ಸೋಕಿಸುತ್ತಿರ್ದನೋ ಅನ್ನೆವರಂ ಕಲಿಯು ಪೆರ್ಚುಗೆಯಿಲ್ಲದೆ ಇರ್ದುದು. ಆವ ಸಮಯದಲ್ಲಿ ಸನಾತನನಾದ ನಾರಾಯಣಾಂಶವಾದ ಶ್ರೀಕೃಷ್ಣನು ಭೂಭಾರವನಿಳುಹಿ ಸಹೋದರನಾದ ಬಲಭದ್ರನಂ ಕೂಡಿ ವೈಕುಂಠಕ್ಕೆ ಬಿಜಯಂಗೈದನೋ; ಆವ ಸಮಯದಲ್ಲಿ ಯುಧಿಷ್ಠಿರಮಹಾರಾಜನು ಭೂವ್ಯೋಮದಿಕ್ಕುಗಳೊಳು ಸಂಭವಿಸಿ ತೋರ್ಪ ಉತ್ಪಾತಂಗಳಂ ಕಂಡೂ ಕೃಷ್ಣಾವತಾರದ ಸಂಪೂರ್ತಿಯನರಿದು ಮೊಮ್ಮ ಪರೀಕ್ಷಿದ್ರಾಜಂಗೆ ಪಟ್ಟವಂ ಕಟ್ಟಿ ತನ್ನ ಒಡಹುಟ್ಟಿದವರು ಸಹವಾಗಿ ಮಹಾಪ್ರಸ್ಥಾನವನ್ನು ಕೈಕೊಂಡು ವಿಪಿನವನ್ನೈದಿದನೋ, ಆ ಸಮಯದಲ್ಲಿ ಸಪ್ತರ್ಷಿಗಳು ಪೂರ್ವಾಷಾಢಾನಕ್ಷತ್ರವಿರ್ಪ ತಾಣಕ್ಕೆ ಸಮಯದ ಉತ್ತರದಿಕ್ಕಿನೊಳ್ ಕೂಡಿದರು. ಆ ಕಾಲದಲ್ಲಿ ನಂದನೆಂಬ ದೊರೆಯು (¹ಮೊದಲಾಗಿ¹) ಕಲಿಯು ಅಭಿವೃದ್ಧಿಯಾಯ್ತು. ಆವ ಸಮಯದಲ್ಲಿ ಕೃಷ್ಣಾವತಾರ ಸಂಪೂರ್ತಿಯಾಗಿ ವೈಕುಂಠಯಾತ್ರೆಯಾದುದೋ ಅದಾರಭ್ಯವಾಗಿ ಕಲಿ ಬಂದು ಭೂಮಂಡಲವನ್ನು ತೀವಿದುದು. ಕೇಳು ಮೈತ್ರೇಯ, (ಆವ ದಿನದಲ್ಲಿ ಆವ ಕ್ಷಣದಲ್ಲಿ ಕೃಷ್ಣಸ್ವಾಮಿಯು ವೈಕುಂಠಕ್ಕೆ ದಯಮಾಡಿದನೋ ಆ ದಿನದಲ್ಲಿ ಅದೇ ಕ್ಷಣದಲ್ಲಿ ಕಲಿಯುಗವು ಪ್ರವಿಷ್ಟವಾಯಿತು. ಆ ಕಲಿಯುಗದ ಸಂಖ್ಯೆಯನು ಹೇಳುವೆನು. ಕೇಳು ಮೈತ್ರೇಯ.) ಮನುಷ್ಯಮಾನದಲ್ಲಿ ಮೂರುಲಕ್ಷ ಅರುವತ್ತು ಸಾಸಿರವರ್ಷವಾದರೆ ಕಲಿಯುಗವು ಪೂರ್ಣವೆನಿಸುವುದು; ದೇವತೆಗಳ ಮಾನದಲ್ಲಿ ಸಾಸಿರದ ಇನ್ನೂರು ವತ್ಸರವಪ್ಪುದು.² ಈ ಪ್ರಮಾಣವುಳ್ಳ ಕಲಿಯುಗವು ಸಮಾಪ್ತಿಯಾದ ಬಳಿಕ ಕೃತಯುಗವು ಪುನಃ ಉದ್ಭವಿಸುವುದು. ಯುಗಯುಗಂಗಳಲ್ಲಿಯೂ ಮಹಾತ್ಮರಾದ ಬ್ರಾಹ್ಮಣರು ಕ್ಷತ್ರಿಯರು ವೈಶ್ಯರು ಶೂದ್ರರು ಸಹಸ್ರ ಸಹಸ್ರ ಸಂಖ್ಯಾತರಾಗಿ ಉದ್ಭವಿಸಿ ಕಾಲಧರ್ಮವನ್ನೈದುವರು. (ಅವರ ಕುಲಂಗಳನೇಕಂಗಳಾಗಿ ಪ್ರತಿಕುಲದಲ್ಲಿ ಹೆಸರುಗಳೇಳಿಸ

---

ಪಾ—1. ಆರಭ್ಯವಾಗಿ—ಕ. ಮಾ.

ಟೀಕು—2. ಇಲ್ಲಿ ಯುಗಸಂಧ್ಯಾಕಾಲವಿವರ್ಜಿತವಾಗಿ ಸಂಖ್ಯೆಯು ಹೇಳಲ್ಪಟ್ಟಿತು; ಪರೀಕ್ಷಿತ್ತಿನ ಕಾಲದಲ್ಲಿಯಾದರೂ ಸಂಧ್ಯಾಕಾಲಸಹಿತವಾಗಿ ಹೇಳಲ್ಪಟ್ಟಿತು.

ಲಕ್ಷ್ಯವಾಗಿ ಹೇಳಿದುದನೆ ಪುನಃಪುನಃ ಹೇಳಬೇಕಾಗಿರ್ಪುದರಿಂದ, ಅವುಗಳನು) ವಿಸ್ತರಿಸಿ ಹೇಳಲಿಲ್ಲ.

ಕೇಳು ಮೈತ್ರೇಯ, ಇಕ್ಷ್ವಾಕುವಂಶದಲ್ಲಿ ಹುಟ್ಟಿದ ಪುರುವೆಂಬವನು ಪೌರವವಂಶದೊಳೊಗೆದ ದೇವಾಪಿಯೆಂಬವನು ಈ ವರ್ತಮಾನ ಕಾಲದಲ್ಲಿ ಮಹಾಯೋಗಬಲಿಷ್ಠರಾಗಿ ಕಲಾಪ[1]ಗ್ರಾಮವೆನಿಸಿಕೊಂಬ ಗಂಡಕೀನದಿಯ ಸಾಲಗ್ರಾಮಕ್ಷೇತ್ರದೊಳಿಂಬುಗೊಂಡಿರ್ಪರು.[1] ಇವರಿರ್ವರುಂ ಮುಂದೆ ಬರ್ಪ ಕೃತಯುಗದಲ್ಲಿ ಸೋಮವಂಶ ಸೂರ್ಯವಂಶ ಪರಂಪರೆಗೆ ಆದಿಭೂತರಾಗಿ ಕ್ಷಾತ್ರಧರ್ಮಪ್ರವರ್ತಕರಾಗಿ ಲೋಕದೊಳ್ ನೆಗಳ್ತೆವಡೆವರು. ಈ ಕ್ರಮಪ್ರಯೋಗದಿಂದ ಮನುವಂಶಪರಂಪರೆಯೊಳುದ್ಭವಿಸಿದ ದೊರೆಗಳು ಕೃತತ್ರೇತಾದ್ವಾಪರಯುಗಂಗಳಲ್ಲಿ ಭೂಮಿಯನು ನೀತಿದಪ್ಪದೆ ಆಳ್ವರು.[2] ಈ ವರ್ತಮಾನ (ಕಲಿ) ಕಾಲದೊಳ್ ದೇವಾಪಿಯುಂ ಪುರುವೆಂಬನನುಂ ಇಲ್ಲಿ ಎಂತಿರ್ಪವರೋ ಅಂತು ಕ್ಷಾತ್ರವಂಶಪರಂಪರೆಗೆ ಬೀಜಭೂತರಾಗಿ ಮತ್ತಂ ಕೆಲಬರ್ ದೊರೆಗಳಲ್ಲಿ ಭೂಮಿಯೊಳಿರ್ಪರು. ಕೇಳು ಮೈತ್ರೇಯ, ಈ ರೀತಿಯಲ್ಲಿ ಪುಣ್ಯಶ್ಲೋಕರಾದ ಸೂರ್ಯವಂಶಸೋಮವಂಶಪರಂಪರೆಯ ರಾಯರ ಚರಿತವನು ನಿನಗೆ ಹೇಳಿದೆನು. ಈ ರಾಯರ ಜಾತಿವರ್ಗಂಗಳನು ಅವರ ವಂಶಕ್ರಮಗಳನು ವಿಸ್ತರಿಸಿ ಪೇಳ್ವೆನೆಂದೊಡೆ ಶತಸಾಹಸ್ರ ವರ್ಷವಾದರೂ ಸಾಲದು ; [3]ಅದು ಕಾರಣದಿಂದ ನೆಗಳ್ತೆಗೆ ಬಂದರಸುಗಳ ಮಾತ್ರವೇ ವಿಸ್ತರಿಸಿದೆನು. ಇನ್ನುಳಿದವರನೆಲ್ಲ ಸಂಕ್ಷೇಪವಾಗಿ ಪೇಳುವೆನು."

ಕೇಳು ಮೈತ್ರೇಯ, ಈ ಪೂರ್ವೋಕ್ತರಾದ ರಾಯರೂ (ಇನ್ನೂ ಕೆಲಬರು ಅರಸುಗಳು ಈ ಹೇಯವಾದ ಕಳೇಬರದಲ್ಲಿ ಮೋಹಾಂಧಕಾರವುಳ್ಳವರಾಗಿ ಈ ಭೂಮಂಡಲವೆಲ್ಲವು ಎನ್ನದು ತನ್ನದು ಎಂದು

---

ಟೀಕು—1. ಈ ಭಾಗವು ಸಂಸ್ಕೃತಮಾತೃಕೆಯಲ್ಲಿ ಇಲ್ಲ—ಕಲಾಪಗ್ರಾಮದಲ್ಲಿ ಇರುವಂಥವರು ಎಂದು ಅಷ್ಟುಮಾತ್ರವಿದೆ.

2. ಕಲಿಯುಗದಲ್ಲಿ ಕ್ಷತ್ರಿಯರು ಅಲ್ಪರಾದ್ದರಿಂದಲೂ, ಕಲಿಯುಗಾಂತದಲ್ಲಿ ನಿರ್ನಾಮವಾಗುವರಾದ್ದರಿಂದಲೂ ಮೂರು ಯುಗಗಳಲ್ಲಿ ಭೂಮಿಯನ್ನು ಅನುಭವಿಸುವರೆಂದು ಹೇಳಲ್ಪಟ್ಟಿತು.

ರಾ—3. ಸಂಸ್ಕೃತ ಮಾತೃಕೆಯಲ್ಲಿಲ್ಲ.

[1]ಮಮತ್ವವನೆಸಗುತ್ತ[1], ಈ ಭೂಮಿಯು ನನಗೆ ಹೇಗೆ, ನನ್ನ ಮಗನಿಗೆ ಹೇಗೆ, ಮತ್ತು ನನ್ನ ವಂಶೀಯರಿಗೆ ಹೇಗೆ ಸ್ಥಿರವು ಎಂಬ ಚಿಂತೆಯಿಂದ ಪೀಡಿತರಾಗಿ ನಾಶವನೈದುವರು. ಈ ರಾಯರಿಗೆ ಪೂರ್ವದೊಳಗಿದ್ದವರು, ಇವರಿಗೆ ಇವರಿಗೆ ಅಪರದೊಳುದ್ಭವಿಸುವರು, ಇನ್ನು ಮುಂದೆ ಸಂಜಾತರಪ್ಪ ದೊರೆಗಳು ತಮ್ಮ ತಮ್ಮ ವಿಜಯೋದ್ಯೋಗದ ಯಾತ್ರೆಯೊಳತಿವ್ಯಗ್ರಚಿತ್ತರಾಗಿರ್ಪುದಂ ನೋಡಿ ಭೂಮಿದೇವಿಯು ಶರತ್ಕಾಲದಲ್ಲಿ [2]ವಿಕಸಿತವಾಗುವ ಪುಷ್ಪಗಳೆಂಬ ನಗೆಯ ನೆವದಿಂದಿಂತು ತನ್ನೊಳ್ ತಾನೆ ನುಡಿವಳು[2] :—

ಕೇಳು ಮೈತ್ರೇಯ, ಆ ಪೃಥಿವೀಗೀತವಾದ ಶ್ಲೋಕಂಗಳನು ಪೂರ್ವದೊಳಸಿತನೆಂಬ ಋಷಿಯು ಧರ್ಮಧ್ವಜನೆಂಬ ಹೆಸರುಳ್ಳ ಜನಕರಾಯಂಗೆ ವಾಚಿಸಿದನು ; ಅದೆಂತೆನೆ :—

ಶ್ಲೋ|| ಕಥಮೇಷ ನರೇಂದ್ರಾಣಾಂ ಮೋಹೋ ಬುದ್ಧಿಮತಾಮಪಿ ।
ಯೇನ ಫೇನಸಧರ್ಮಾಣೋಽಪ್ಯತಿವಿಶ್ವಸ್ತಚೇತಸಃ ||೧||
ಪೂರ್ವಮಾತ್ಮಜಯಂ ಕೃತ್ವಾ ಜೇತುಮಿಚ್ಛಂತಿ ಮಂತ್ರಿಣಃ ।
ತತೋಭೃತ್ಯಾಂಶ್ಚ ಪೌರಾಂಶ್ಚ ಜಿಗೀಷಂತೇ ತಥಾ ರಿಪೂನ್ ||೨||
ಕ್ರಮೇಣಾನೇನ ಜೇಷ್ಯಾಮೋ ವಯಂ ಪೃಥ್ವೀಂ ಸಸಾಗರಾಂ ।
ಇತ್ಯಾಸಕ್ತಧಿಯೋ ಮೃತ್ಯುಂ ನ ಪಶ್ಯಂತ್ಯವಿದೂರಗಂ ||೩||
ಸಮುದ್ರಾವರಣಂ ಯಾತಿ ಭೂಮಂಡಲಮಥೋವಶಂ ।
ಕಿಯದಾತ್ಮಜಯಸ್ಯೈತನ್ಮುಕ್ತಿರಾತ್ಮಜಯೇ ಫಲಂ ||೪||
ಉತ್ಸೃಜ್ಯ ಪೂರ್ವಜಾತಾ ಯಾಂ ನಾದಾಯ ಗತಃ ಪಿತಾ ।
ತಾಂ ಮಾಮತೀವ ಮೂಢತ್ವಾಜ್ಜೇತುಮಿಚ್ಛಂತಿ ಪಾರ್ಥಿವಾಃ ||೫||
ಮತ್ಕೃತೇ ಪಿತೃಪುತ್ರಾಣಾಂ ಭ್ರಾತೄಣಾಂ ಚಾಪಿ ವಿಗ್ರಹಃ ।
ಜಾಯತೇಽತ್ಯಂತಮೋಹೇನ ಮಮತ್ವಾದೃತಚೇತಸಾಂ ||೬||

ಪೃಥ್ವೀ ಮಮೇಯಂ ಸಕಲಾ ಮಮೈಷಾ ಮದನ್ವಯಸ್ಯಾಪಿ ಚ ಶಾಶ್ವತೀಯಂ
ಯೋ ಯೋ ಮೃತೇಽನ್ಯತ್ರ ಬಭೂವ ರಾಜಾ ಕುಬುದ್ಧಿರಾಸೀದಿತಿ ತಸ್ಯತಸ್ಯ ||೭||
ದೃಷ್ಟ್ವಾ ಮಮತ್ವಾದೃತಚಿತ್ತಮೇಕಂ ವಿಹಾಯ ಮಾಂ ಮೃತ್ಯುವಶಂ ವ್ರಜಂತಂ।
ತಸ್ಯಾನು ಯಸ್ತಸ್ಯ ಕಥಂ ಮಮತ್ವಂ ಹೃದ್ಯಾಸ್ಪದಂ ಮತ್ಪ್ರಭವಂ ಕರೋತಿ ||೮||
ಪೃಥ್ವೀ ಮಮೈಷಾ ಶು ಪರಿತ್ಯಜೈನಾಂ ವದಂತಿ ಯೇ ದೂತಮುಖೈ ಸ್ವಶತ್ರೂನ್।
ನರಾಧಿಪಾಸ್ತೇಷು ಮಮಾತಿಹಾಸಃ ಪುನಶ್ಚ ಮೂಢೇಷು ದಯಾಭ್ಯುಪೈತಿ ||೯||

ಪಾ— 1. ಕ್ರೋಧತ್ವವನೆಸಗುತ್ತ— ಕ. ಮಾ.
2. ನಗುತಿ ಹಳು—ಎಂದು ಸಂ. ಮಾ. ಪ್ರಕಾರ

ತಾತ್ಪರ್ಯ :—ಲೋಕದಲ್ಲಿ ರಾಜ್ಯವನಾಳುವಂಥ ಬುದ್ಧಿವಂತರಾದ ರಾಯರುಗಳಿಗೂ ಏನುಕಾರಣದಿಂದಿಂತು ಮೋಹವುಪ್ಪುದೋ! ಆವ ಮೋಹದಿಂದ (ಬುದ್ಬುದದಂತೆ ಕ್ಷಣಕಾಲದಲ್ಲಿ ನಾಶಹೊಂದುವ ತಮ್ಮ ಜೀವಮಾನದಲ್ಲಿ ಚಿರಕಾಲ ಬದುಕಿರುವರೆಂಬ) ಇಂಥ ಅತಿವಿಶ್ವಾಸವುಳ್ಳ ಮನಸ್ಸುಂಟಾಯಿತೋ![1] ತಮ್ಮನೆಣಿಸಿದೊಡೆ ಸ್ವಲ್ಪವಾಗಿ ನಿಂದಿತವಾಗಿರ್ಪ ಧರ್ಮಂಗಳಲಿ ತತ್ಪರರಾಗಿರ್ಪರು.[1] ಇಂತಪ್ಪ ದೊರೆಗಳು ಮೊಟ್ಟಮೊದಲು ತಮ್ಮ ಮನೋಜಯವನೆಸಗಿ, ಆ ಬಳಿಕ ಮಂತ್ರಿಗಳನ್ನು ತಮ್ಮ ಚಿತ್ತಾನುಸಾರಿಯಾಗಿ ವಶಂಗೈದು, ಆಮೇಲೆ ಭೃತ್ಯರಂ ಸ್ವಾಧೀನಂಗೈದು, ಅನಂತರದೊಳಖಿಲಪುರಜನಂಗಳಂ ಸ್ವವಶವನು ಮಾಡಿ, ಬಳಿಕ ಶತ್ರುಗಳನ್ನೆಲ್ಲಾ ನಿಗ್ರಹಿಸಿ—ಈ ಕ್ರಮದಿಂದ ಸಮುದ್ರಾಂತವಾದ ಭೂಮಂಡಲವನು ಜಯಿಸಬೇಕೆಂದು ಆಸಕ್ತಿಯುಳ್ಳವರಾಗಿ ಸನಿಯದೊಳ್ ಕಾದಿರ್ಪ ಮೃತ್ಯುವಂ ಕಾಣದೆ ತೊಳಲುತಿರ್ಪರು! [2]ಈರಾಯರೆಲ್ಲರೂ ಮನೋನಿಗ್ರಹವನು ಮಾಡಿಯೂ ಮುಕ್ತಿಯನು ಸಂಪಾದಿಸುವಂಥ ಯತ್ನವ ಬಿಟ್ಟು ಬರಿದೆ ಮನೋವ್ಯಾಕುಲವುಳ್ಳವರಾಗಿ ಭೂಮಿಯನೆಲ್ಲಾ ಜಯಿಸುವೆವೆಂದು ಕೊಬ್ಬಿರ್ಪರಲ್ಲಾ![2] ಎನ್ನಲ್ಲಿ ಮೋಹವನೆಸಗುವ ಹೃದಯದಿಂದ ಪೂರ್ವದೊಳಾಳಿದ ಮಹಾರಾಯರುಗಳು (ನನ್ನನ್ನು ಒಡಗೊಂಡು ಹೋಗಬೇಕೆಂದೆಣಿಸಿದ್ದರೂ) ನನ್ನನು ಒಡಗೊಂಡು ಹೋಗದೆ ಕೆಲವು ದಿನವಿದ್ದು ಕಾಲಧರ್ಮವನ್ನೈದಿದರು! ಹಾಗೆಯೇ ಅವರ ತಂದೆಗಳು ನನ್ನನು ಬಿಟ್ಟು ಹೋದರು. ಈ ರೀತಿಯೊಳೆಲ್ಲರಿಗೂ ಸ್ಥಿರಮಲ್ಲದಿರ್ಪೆನ್ನನು ಮೂಢಬುದ್ಧಿಗಳಾದವರು ಜಯಿಸಿ ವಶಂಗೆಯ್ಯಬೇಕೆಂದು ಕಟ್ಟಾಸೆವಡೆದಿರ್ಪರು! ಇನ್ನೂ ಆಳಬೇಕೆಂಬ ದುರಾಶೆಯಿಂದ ಅತ್ಯಂತ ಮೋಹದಿಂದ ಮಮತ್ವವಿಡಿದಿರ್ಪ ಮನಸ್ಸಿನಿಂದ ಪಿತೃಭ್ರಾತೃಪುತ್ರರ ಮೇಲೆ ವಿರೋಧವುಳ್ಳವರಾಗಿ, ಈಸಕಲ ಭೂಮಿಯು ತನ್ನದು, ತನಗೇ ಸಲುವುದು, ತನಗೇ ಸ್ಥಿರವಾಗಿರ್ಪುದು ಎಂದು ಬಹ

---

ಪಾ—1. ಸಂಸ್ಕೃತಮಾತೃಕೆಯಲ್ಲಿಲ್ಲ,

ಟೀ—2. ಈ ರಾಯರಿಗೆ ಸಮುದ್ರಾಂತವಾದ ಭೂಮಂಡಲವಾದರೋ ಸ್ವಾಧೀನವಾಗುವುದು. ಮನೋನಿಗ್ರಹಕ್ಕೆ ಈ ಫಲವು ಎಷ್ಟರದು? ಮನೋನಿಗ್ರಹಕ್ಕೆ ಮುಕ್ತಿಯೇ ಫಲವು—ಎಂದು ಸಂಸ್ಕೃತದ ಮಾತೃಕೆಯ ಪ್ರಕಾರ ಅರ್ಥವಾಗುತ್ತದೆ.

ಯ ಬಯಲಾಸೆಯಿಂದ ಕ್ಲೇಶಬಡುತಿರ್ಪರು ! ಆವಆವ ದೇಶದೊಳಾವ ರಾಯನಾಳುತಿರ್ಪನೋ ಆ ರಾಯನು ಮಡಿದು ಕಾಲಾಂತರಕ್ಕೆ ಪೆಱತೊಂದೆಡೆಯೊಳುದ್ಭವಿಸಿ ಅರಸನಾಗುವನಲ್ಲದೆ ಇದ್ದ ಬಳಿಯೊಳ್ ಇರನು. ಆದರೂ) ಇಂತಪ್ಪುದೊಂದು ಕುಬುದ್ಧಿಯು ರಾಯರಿಗೆಲ್ಲಾ ಸಮನಿಸುತಿರ್ಪುದು ! ಈ ರೀತಿಯಲ್ಲಿ ಮಮತ್ವಾಭಿಮಾನಚಿತ್ತನಾಗಿ ಮೃತ್ಯುವಶನೈದುವಂಥ ಪೂರ್ವದೊರೆಯಂ ನೋಡಿ ಪೆಱತೊರ್ವಂಗೆ ಹೃದ್ಯಾಸ್ಪದವಾದ ಮಮತ್ವವೆಂತು ಪುಟ್ಟುವುದೊ ? ಇಂತನಿತ್ಯವಾದ ಬಾಳ್ಕೆಯಂ ನಚ್ಚಿಕೊಂಡು ಕ್ಲೇಶದಿಂದ ದೊರೆಗಳು ತಮಗೆ ಶತ್ರುವಾಗಿ(ರುವ) ಪರರನು ಕುಱಿತು—ಈ ಭೂಮಿಯೆನ್ನದು, ಈ ಧರಣಿಯನೆನಗೆ ಬಿಡು ಹೋಗೆಂದು ಭೃತ್ಯರ ಮುಖದಿಂ ಹೇಳಿಸುವರು ! 'ಮತ್ತವನಿಯೆಂತು ತಮ್ಮದು ; ಎಮ್ಮದು ಭೂಮಿ' ಎಂದು ಧೂರ್ತರಾದವರು ದುರ್ಮಮತೆಗಳಂ ಬಿಡರು. (ಇಂಥ ರಾಯರುಗಳಲ್ಲಿರುವ ಮಮತ್ವಬುದ್ಧಿಯನು ಕಂಡು ನನಗೆ ಪರಿಹಾಸವೂ ಅವರ ಮೌಢ್ಯವನು ನೋಡಿ ದಯೆಯೂ ಹುಟ್ಟುತ್ತವೆ.)

ಕೇಳು ಮೈತ್ರೇಯ ! ಈ ಪೃಥ್ವೀಗೀತ ಶ್ಲೋಕಾರ್ಥವು ಲೋಕದಲ್ಲಿ ನೆಗಳ್ತೆವಡೆದಿರ್ಪುದು. (ಈ ಪೃಥ್ವೀಗೀತವಾದ ಶ್ಲೋಕಗಳ ಅರ್ಥವು ಆರ ಹೃದಯದಲ್ಲಿ ನಿಲ್ಲುವುದೋ ಅಂಥವರಲ್ಲಿ ಸೂರ್ಯಕಿರಣದಲ್ಲಿ ಹಿಮದಂತೆ, ಮಮತ್ವಬುದ್ಧಿಯು ವಿಲಯ ಹೊಂದುವುದು.) ಈ ರೀತಿಯಲ್ಲಿ (ಹೇಳಿದ) ಮನುವಂಶವಿಸ್ತಾರವನು ಆವ ಮನುಷ್ಯನು ಜಿತೇಂದ್ರಿಯನಾಗಿ ಚಿತ್ತೈಕಾಗ್ರತೆಯಿಂದ ಲಾಲಿಸಿ ಕೇಳ್ವನೋ ಆತನಿಗೆ ಸ್ವರ್ಗವುಂಟು. ಈರೀತಿಯಲ್ಲಿ ವಂಶವಿಸ್ತಾರವನು ನಿನಗೆ ನಾನು ವಿರಚಿಸಿದುದಱಿಂದ ನಿನಗೆಲ್ಲ ತಿಳಿದಿರ್ಪುದು. [1]ಈಪೇಳ್ದ ಮನುವಂಶದ ದೊರೆಗಳೆಲ್ಲರುಂ ಲೋಕಸ್ಥಿತಿಕರ್ತೃವಾದ ಮಹಾವಿಷ್ಣುವಿನಂಶಸಂಭವರೆನಿಸಿಕೊಂಡು ಧರ್ಮದೊಡಗೂಡಿ ಭೂಮಿಯನಾಳ್ದರು.[1] ಇಂತಪ್ಪ ಪುಣ್ಯಶ್ಲೋಕರಾದ ಮನುವಂಶದ ಮಹಾರಾಯರ ವಂಶವಿಸ್ತಾರವನು ಜಿತೇಂದ್ರಿಯನಾಗಿ ಚಿತ್ತೈಕಾಗ್ರತೆಯಿಂದ ಆವ ಮನುಷ್ಯನು ಆಲಿಸುತಿರ್ಪನೋ ಅವನು ಸಕಲಪಾಪವಿನಿರ್ಮುಕ್ತನಾಗಿ ನಿರ್ಮಲಾಂತಃಕರಣನಾಗಿ ಧನಧಾನ್ಯಸಮೃದ್ಧಿಯುಳ್ಳ ಸಂಪದವನು ಪಡೆವನು. ಮತ್ತಂ

ಚಂದ್ರಸೂರ್ಯವಂಶದೊಳುದಿಸಿದಂಥ ಮಹಾಬಲರಾದ ಮಹಾವೀರ್ಯರಾದ ಅನಂತಧನಕನಕವಸ್ತುವಾಹನಾದಿ ಸಂಪದವನಾಕ್ರಿತವರಾದ ವಕ್ತೃಶ್ರೋತೃ ಜನನಿಬಿಡಪಾಪ ಪರಿಹರಣಚರಿತರಾದ ಇಕ್ಷ್ವಾಕು ಜಹ್ನು ಮಾಂಧಾತೃ ಸಗರ ಅವಿಕ್ಷಿತ ಭೃಗು ಯಯಾತಿ ನಹುಷ ಮೊದಲಾದ ಮಹಾರಾಯರ ಪುಣ್ಯಕಥೆಯನು ಅವರ ನಿಷ್ಠೆಯನು ಚೆನ್ನಾಗಿ ಏಕಮನಸ್ಕನಾಗಿ ಕೇಳದ ಹೇಳದ ಮನುಜಂಗೆ ಅನಿತ್ಯವಾದ ಪುತ್ರದಾರಾದಿಗಳಲ್ಲಿಯೂ ಗೃಹಕ್ಷೇತ್ರ ದ್ರವ್ಯಾದಿ ವಸ್ತುಗಳಲ್ಲಿಯೂ ಮಮತೆಯಿಲ್ಲದ ಸುಬುದ್ಧಿ ಸಮನಿಸುವುದು. ಮತ್ತಂ ಶಶಿಸೂರ್ಯವಂಶದರಸುಗಳು ತಾವುತಾವು ರಾಜ್ಯವನಾಳ್ವ ಸಮಯ ದಲ್ಲಿ ಅನೇಕವರ್ಷಪರ್ಯಂತರವು ದೃಢಮನಸ್ಕರಾಗಿ ಊರ್ಧ್ವಬಾಹುಗಳಾಗಿ ಇಹಪರಸಾಧನವಾದ ಮಹಾತಪಸ್ಸನ್ನೆಸಗಿ ಅಶ್ವಮೇಧಾಂತವಾದ ಸಕಲ ಯಜ್ಞಗಳಿಂದ ಪರಮಾತ್ಮನಾರಾಧನೆಗೈದುದಂ ಪೇಳ್ವ ಕೇಳ್ವ ಮನುಜರು ಸುಪುಣ್ಯಫಲಪ್ರದಂಗಳಾದ ಕಥೆಗಳುಳ್ಳವರಾಗಿ ಭೂಮಿಯನು ನಿರ್ಮಮತೆ ಯಿಂದ ಪರಿಪಾಲಿಸುವರು.

ಕೇಳು ಮೈತ್ರೇಯ ! ಪೂರ್ವದೊಳ್ ಪೃಥುವೆಂಬ ಮಹಾರಾಯನು ಅವ್ಯಾಹತಮನವುಳ್ಳವನಾಗಿ ಸಕಲಲೋಕಂಗಳಂ ಸೇನೆಸಹಿತವಾಗಿ ಸಂಚ ರಿಸಿ, ಸಮಸ್ತಾರಿಚಕ್ರವನು ಸಂಹರಿಸಿ, ಮಹಾಕೀರ್ತಿಪ್ರತಾಪಶಾಲಿಯಾಗಿ, ಶ್ರೀ ವಿಷ್ಣುವಿನಂಶಸಂಜಾತನಾಗಿ ಭೂಮಿದೇವಿಯನೆ ಮಗಳಾಗಿ ಭಾವಿಸಿ, ರಾಜ್ಯವಂ ಪರಿಪಾಲಿಸಿ, ಕಡೆಯಲ್ಲಿ [1]ಬಿರುಗಾಳಿಯಿಂದ ಬಯಲಾದ ಬೂರು ಗದ ಪಳ್ಳಿಯಂತೆ[1] ಮೃತ್ಯುವೆಂಬ ಚಂಡಮಾರುತನಿಂದ ಹರಣಂಬೋಗಿ ಪೊಂದಿದನು. ಕಾರ್ತವೀರ್ಯಾರ್ಜುನನೆಂಬ ಚಕ್ರವರ್ತಿಯು ಸಪ್ತದ್ವೀಪಗಳ ನಾಕ್ರಮಿಸಿ, ಸಕಲವಿರೋಧಿಸಂಕುಲವನು ಮಥಿಸಿ, ಪುಣ್ಯಶೀಲನಾಗಿ ನಿಶ್ಚ ಲಿತನಾಗಿ, ಸಂಕಲ್ಪವಿಕಲ್ಪಂಗಳಿಗೆ ತಾನೇ ಕಾರಣನಾಗಿ, ಮನುಷ್ಯಾನಂದದಿಂದ ನಿಖಿಲಭೋಗಂಗಳನನುಭವಿಸಿ, ಕಡೆಯೊಳ್ ಕಾಲಧರ್ಮವನೆಯ್ದಿ ಕಥೆಗಳ ಲ್ಲಿಯೇ ಪೇಳಲ್ಪಟ್ಟವನಾದನು. ಮತ್ತು ಆ ಲೋಕೈಕವೀರನಾದ ರಾವಣ ನಿಂದ ಪರಿಗ್ರಹಿಸಲಶಕ್ಯವಾದ ರಘುಕುಲದರಸುಗಳೈಶ್ವರ್ಯವೂ ಸಂಹಾರ

---

ಪಾ—1. ಬೂರುಗದ ಹತ್ತಿಯು ಬೆಂಕಿಯಲ್ಲಿ ಬಿದ್ದಂತೆ— ಎಂದು ಸಂಸ್ಕೃತ ಮಾತೃಕೆ.

ಕರ್ತೃವಾದ ಆತನ [1]ಭ್ರೂಭಂಗಪಾತದಿಂದ[1] ಭಸ್ಮಪ್ರಾಯವಾಗಿ ಉಡುಗಿದುದು. ಸೂರ್ಯನ ಕಿರಣಗಳು ವ್ಯಾಪಿಸುವಷ್ಟು ಭೂಮಂಡಲವನು ಆಳಿದಂಥ ಮಾಂಧಾತೃಮಹಾರಾಜನು ಕಥಾಶರೀರವನ್ನೇ ಪಡೆದನು. ಇಂತಪ್ಪ ಕಥೆಗಳಂ ಕೇಳಿದಂಥವನು ಮಂದಮತಿಯಾದರೂ ಆವ ವಿಷಯದಲ್ಲಿಯೂ ಮಮತ್ವವನು ಮಾಡಾನು? ಮತ್ತಂ ಭಗೀರಥನೇ ಮೊದಲಾದ ಮಹಾರಾಜರೂ (ಕಕುತ್ಸ್ಥನೂ, ರಾವಣನೂ) ಸಗರಚಕ್ರವರ್ತಿಯೂ, ರಾಮಲಕ್ಷ್ಮಣರೂ, ಯುಧಿಷ್ಠಿರಾದಿಯಾದ ರಾಯರೂ ಭೂಮಿಯನು (ಆಳಿ) ಬಿಟ್ಟುಹೋದರೆಂಬುದು ಸತ್ಯವು. ಅದು ಸತ್ಯವೋ ಮಿಥ್ಯೆಯೋ ನೀನೇ ಹೇಳು ; ನಮಗೆ ತಿಳಿಯದು.

ಕೇಳು ಮೈತ್ರೇಯ, ಪೂರ್ವಕಾಲದೊಳಾಳಿ ಹೋದ ದೊರೆಗಳ ಚರಿತವನು ವರ್ತಮಾನಕಾಲದ ಭೂಪರ ವೃತ್ತಾಂತವನು ಭವಿಷ್ಯತ್ಕಾಲದರಸುಗಳ ಕಥೆಯನು ನಿನಗೆ ಹೇಳಿದೆನು. ಇವರೂ, ಇನ್ನು ಬೇರೆ ಇದ್ದ ದೊರೆಗಳೂ ಮಹಾಪ್ರತಾಪಶಾಲಿಗಳಾಗಿ ಲೋಕಪ್ರಸಿದ್ಧರಾಗಿ ರಾಜ್ಯವನು ಪರಿಪಾಲಿಸಿ ಪುಣ್ಯಚರಿತರಾದ ಸೂರ್ಯಸೋಮವಂಶದ ರಾಯರೂ—ಇವರುಗಳ ಕಥೆಯಂ ಕೇಳಿ ಪಂಡಿತನಾದ ಮನುಜನು ಅನಿತ್ಯವಾದ ಬಾಳ್ಕೆಯಲಿ ಮಮತ್ವವನೆಸಗಲಾಗದು. ಕ್ಷೇತ್ರಪುತ್ರದಾರಾದಿಗಳೂ ತನ್ನ ಶರೀರದೊಡನೆ ಬೆರದಿದ್ದರೂ ಹೋಪುದಲ್ಲವೆ? (ಹೀಗಿರುವುದರಿಂದ) ಆವ ಪುರುಷನೂ ಆವ ವಸ್ತುಗಳಲ್ಲಿಯೂ ಮಮತೆಯನೆಸಗದೆ ಯಥೇಚ್ಛಾಲಾಭಸಂತುಷ್ಟನಾಗಿ ಇರಬೇಕು.

ಎಂಬೀ ವಂಶವಿಸ್ತಾರ ವೃತ್ತಾಂತವಂ ಶ್ರೀ ಪರಾಶರರು ಮೈತ್ರೇಯಂಗೆ ನಿರೂಪಿಸಿದರೆಂಬ ಬಳಿಗೆ ಶ್ರೀ ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಇಪ್ಪತ್ತುನಾಲ್ಕನೆಯ ಅಧ್ಯಾಯಂ ಸಮಾಪ್ತಂ.

ಇದು ಶಿವಕಮಲಭವ ದಿವಿಜಧವಮುಖ ಸುರನಿವಹವಿಮಲಹೃದಯಸದನ ನಿರುಪಾಧಿಕಚಿಜ್ಜ್ಯೋತಿಃಪ್ರಭಾಯಮಾನ ನಾರಾಯಣಪದಸಾರಸಮಕರಂದ ನಿತ್ಯಾಭಿಷಿಕ್ತ ರಾಜಾಧಿರಾಜ ರಾಜಪರಮೇಶ್ವರಾಪ್ರತಿಮಪ್ರೌಢ

ಪಾ—1. ಭ್ರೂಭಾಗವಾಯುವಿನಿಂದ—ಕ. ಮಾ.

ಪ್ರತಾಪ ಬಿರುದೆಂತೆಂಬರಗಂಡ ಸತ್ಯಪರಾಕ್ರಮ ಯಾದವಕುಲಮಣಿ ವೀರ ಶ್ರೀ ನರಪತಿ ಚಿಕ್ಕದೇವ ಮಹಾರಾಜರಾಜಿತ ಕರುಣಾಕಟಾಕ್ಷರುಚಿಸಾಂದ್ರ ಚಂದ್ರಿಕಾಲೋಲ ಚಕೋರ ಶ್ರೀ ಚಿಕುಪಾಧ್ಯಾಯ ವಿರಚಿತಮಪ್ಪ ಮೈತ್ರೇಯಪರಾಶರಸಂವಾದರೂಪಮಾದ ವಿಷ್ಣುಪುರಾಣ ಪ್ರಬಂಧದೊಳ್ ಚತುರ್ಥಾಂಶದಲ್ಲಿ—ವೈವಸ್ವತಮನುವಂಶವಿವರಣಂ, ಇಕ್ಷ್ವಾಕುವಂಶಜಪುರಂಜಯೋಪಾಖ್ಯಾನಂ, ಮಾಂಧಾತೃಸೌಭರಿಚರಿತಾದಿವರ್ಣನಂ, ಕಲ್ಮಾಷಪಾದವೃತ್ತಾಂತಂ, ನಿಮಿಗೆ ವಿದೇಹತ್ವಪ್ರಾಪ್ತಿ, ಚಂದ್ರವಂಶೋದ್ಭವ ರಾಜವಂಶಾನುವರ್ಣನಂ, ಪುರೂರವವಂಶೋತ್ಪತ್ತಿಪ್ರಸಂಗಂ, ನಹುಷಕ್ಷತ್ರವೃದ್ಧಾದಿವಂಶವರ್ಣನಂ, ಯಯಾತಿಚರಿತಂ, ಯದುವಂಶಪ್ರಶಂಸೆ, ಜ್ಯಾಮಘವಂಶಾನುವರ್ಣನಂ, ಭಜನಭಜಮಾನಾದಿ ವಂಶವರ್ಣನಂ, ಸ್ಯಮಂತಕೋಪಾಖ್ಯಾನಂ, ಅನಮಿತ್ರವಂಶಾನುವರ್ಣನಂ, ಶಿಶುಪಾಲವಧೆ, ಕೃಷ್ಣಸಂತತಿವಿಸ್ತಾರವೃತ್ತಾಂತಂ, ದುರ್ವಸುವಂಶಾನುವರ್ಣನಂ, ದ್ರುಹ್ಯುವಂಶಕಥನಂ, ಅನುವಂಶಾನುವರ್ಣನಂ, ಪೂರುವಂಶಾನುವರ್ಣನದಲ್ಲಿ ಭರತಚರಿತ್ರಂ, ಶಂತನುವಂಶಪ್ರಸಂಗಂ, ಕಲಿಯುಗದಲ್ಲಿ ಭವಿಷ್ಯದ್ರಾಜವಂಶವರ್ಣನಂ, ಕಲಿಯುಗದಲ್ಲಿ ಪ್ರವೃತ್ತವಾಗುವ ಧರ್ಮವಿಪರ್ಯಾಸಪ್ರಸಂಗಂ, ಸಕಲವಸ್ತುನಿರ್ಮಮತ್ವಾದಿ ವರ್ಣನಂಗಳು ನಿರೂಪಿತವಾಗಿ—ಇಂತು ಶ್ರೀ ವಿಷ್ಣುಪುರಾಣದೊಳ್ ಚತುರ್ಥಾಂಶಂ ಸಮಾಪ್ತಂ.

# ಶೋಧನಪತ್ರ

ಈ ಕೆಳಗಣ ಸಂಖ್ಯೆಗಳಲ್ಲಿ ಮೊದಲನೆಯ ಸಂಖ್ಯೆ ಪುಟವನ್ನೂ ಎರಡನೆಯ ಸಂಖ್ಯೆ ಆ ಪುಟದಲ್ಲಿನ ಪಙ್ಕ್ತಿಯನ್ನೂ ತೋರಿಸುವುವು—

| | | | | | |
|---|---|---|---|---|---|
| ೧— | ೪ | ಎಂಬುವ | ೪೩— | ೧೦ | ಉನ್ಮತ್ತನಾಗಿ |
| ೪— | ೮ | ಸರ್ವೇ | ೫೨— | ೧೫ | ನಿಚ್ಛೈಸಿದವನಾದನು |
| ೧೦— | ೨೫ | ರೂಪಮನ್ವಿತಾನಿ | ೫೩— | ೨೬ | ತಸ್ಮಾತ್ತೃಷ್ಣಾಂ |
| ೧೨— | ೧೦ | ಮಾಡೀತು | ೬೧— | ೧೭ | ಕಣ್ಣುಳ್ಳ |
| „ — | ೧೩ | ಮಾನವ | ೬೩— | ೧೪ | ಕೃಷ್ಣನು |
| ೧೫— | ೬ | ನೇಮಿಸುತ್ತು | ೬೫— | ೧೪ | ಅನಂತರ |
| „ — | ೧೩ | ಬ್ರಹ್ಮರ್ಷಿ | ೬೮— | ೨೬ | ದಾರಿವಿಡಿದು |
| ೨೪— | ೨೬ | ತಾಳಜಂಘಾ | ೭೩— | ೫ | ಯಾದವರಿಗೆ |
| ೩೨— | ೨ | ಖಟ್ವಾಂಗೇನ | ೭೮— | ೧೭ | ಜಾನಕೀನ್ಯಸ್ತಮನ |
| „ — | ೨೧ | ಪರಿಪಾಲನೆ | ೮೮— | ೨೨ | ಆ ಅಣುಹ |
| ೩೩— | ೭ | ಮುನಿವರರಿಂದಲೂ | ೯೫— | ೧೫ | ಕೃಷ್ಣದ್ವೈಪಾಯನನು |
| ೩೬— | ೧ | ಸ್ವೀಕಾರಾರ್ಥವಾಗಿ | | | |

ಮೇಲೆ ತೋರಿಸಿರುವ ರೀತಿಯಲ್ಲಿ ತಿದ್ದಿಕೊಳ್ಳಬೇಕು.